ಸಂವಾದ

ಜೂನ್ ೨೦೦೪ ರೂ. ೨೦/-

ಚಳವಳಿ ಮತ್ತು ಮಾರುಕಟ್ಟೆ ರಾಜಕಾರಣ

ಎನ್‌ಡಿಎ ನೆರಳಲ್ಲಿ ನಲುಗಿದ ಭಾರತ

ಧರ್ಮಕ್ಕೆ ಆಹಾರ ಅಪಥ್ಯವೇ ?

ಪ್ರಗತಿಯ ಹಣೆ ಬರಹ!

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೮

ಜೂನ್ ೨೦೦೪

ಸಂಪಾದಕ:

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

EDITOR :

INDUDHARA HONNAPURA

ಒಳಪುಟಗಳಲ್ಲಿ...

- ಪತ್ರಗಳು ೩
- ಮೇರಾ ಭಾರತ್ ಮಹಾನ್ ೪
- ಅಂತರಂಗ ೫
- ಚಳವಳಿ ಮತ್ತು ಮಾರುಕಟ್ಟೆ ರಾಜಕಾರಣ ೬
  - ಎನ್.ಕೆ. ಹನುಮಂತಯ್ಯ
- ಪೌರತ್ವದ ವ್ಯಾಖ್ಯಾನ: ಸೋನಿಯಾ ಎರಡನೇ ದರ್ಜೆ ಪ್ರಜೆಯೇ? ೮
  - ಪಿ.ಎಂ.ಎನ್. ಮೂರ್ತಿ
- ಎನ್‌ಡಿಎ ನೆರಳಲ್ಲಿ ನಲುಗಿದ ಭಾರತ ೧೦
  - ನಾ. ದಿವಾಕರ
- ಧರೆ ಹತ್ತಿ ಉರಿದರೆ! ೧೪
  - ಪ್ರೊ|| ಶಿವರಾಮಯ್ಯ
- ಪ್ರಗತಿಯ ಹುಸಿ ಬಸಿರು ೧೬
  - ಡಿ. ಡೊಮಿನಿಕ್
- ಧರ್ಮಕ್ಕೆ ಆಹಾರ ಅಪಥ್ಯವೇ? ೨೨
  - ಡಾ|| ಬಂಜಗೆರೆ ಜಯಪ್ರಕಾಶ್
- ಅಪೂರ್ಣ ಕ್ರಾಂತಿಯ ಹೊಸಹೆಜ್ಜೆ ೨೩
  - ಪ್ರೊ|| ಕೆ. ರಾಮದಾಸ್
- ಬೌದ್ಧಧರ್ಮವೂ ಮಾಂಸಾಹಾರವೂ ೨೪
  - ವೈ.ಬಿ. ನಂದನ
- ಪತ್ರಿಕೋದ್ಯಮ: ನಕಲಿ ವೃತ್ತಿ, ಅಸಲಿ ಉದ್ಯಮ ೨೬
  - ಡಾ|| ಬಿ.ಪಿ. ಮಹೇಶ್ ಚಂದ್ರಗುರು, ಡಾ|| ಸಿ.ಕೆ. ಪುಟ್ಟರಾಜು

- ದಲಿತ್ ಡೈರಿ
  ದಲಿತ ರಾಜಕಾರಣದ ಮಾನದಂಡ ೨೮
  - ಚಂದ್ರಭಾನ್ ಪ್ರಸಾದ್
- ಝುನ್ ಝುಲಕ್ ೩೧
  - ಕೆ.ವಿ. ಸುಬ್ಬಣ್ಣ
- ಸ್ತ್ರೀ ಕಥನ: ವಿಭಿನ್ನ ಸ್ತ್ರೀ ವಾದಗಳು ೩೨
  - ಡಾ|| ಶೈಲಜ ಹಿರೇಮಠ
- ಹೊಸ ಪುಸ್ತಕ ೩೭
- ಜಾತಿ ಮತ್ತು ಹಿಂದೂಧರ್ಮ ೩೮
  - ಗೇಲ್ ಓಮ್‌ವೆಡ್ತ್
- ದಲಿತ ಚಳವಳಿ: ಅಗತ್ಯ ಮತ್ತು ಔಚಿತ್ಯ ೪೦
  - ಅರವಿಂದ ಚೊಕ್ಕಾಡಿ
- ವಿವೇಕಾನಂದರ ವಿಚಾರಗಳು ೪೨

ಕವನಗಳು: ಪದಗಳು ಮಾತಾಗುವುದಿಲ್ಲ - ೯ | ಸೋಜಿಗವೆಂದರೆ - ೧೩ | ಈಗಲಾದರೂ ಹುಡುಕು - ೨೭ | ಎರಡು ಕವನಗಳು - ೩೬

ಮುಖಪುಟ ಕಲೆ: ಸೈಬೀರಿಯಾದಲ್ಲಿ ಸಿಕ್ಕ ಪುರಾತನ ಬಂಗಾರದ ಜಿಂಕೆ, ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

‘ಸಂವಾದ’ ಕುರಿತು ಗುಂಪು ಚರ್ಚೆ

ಪ್ರಿಯ ಶ್ರೀ ಇಂದೂಧರ ಹೊನ್ನಾಪುರ,

ಸಂವಾದದ ಪ್ರಕಟಣೆಗಳನ್ನು ನೋಡಿದೆ. ಇಷ್ಟವಾಯಿತು. ಎಡಚಿಂತನೆಯ ಇಂಥ ಪ್ರಕಟಣೆಗಳು ಕನ್ನಡಕ್ಕೆ ಅಗತ್ಯವಿದೆ. ಪತ್ರಿಕೆಯು ಹಳ್ಳಿಹಳ್ಳಿಯ ಗ್ರಂಥಾಲಯಗಳಿಗೆ ತಲುಪಬೇಕು. ಆಗ ಮಾತ್ರ ಮಾಡಿದ ಕೆಲಸವು ಸಾರ್ಥಕತೆಯತ್ತ ನಡೆಯುವುದು.

ಇಂದಿನ ಯುವಜನತೆ ಕೋಮುವಾದಿಗಳಾಗದೆ ಸೌಹಾರ್ದದತ್ತ ಸಾಗಬೇಕಾಗಿರುವುದು ನಮ್ಮ ದೇಶದ ಭವಿಷ್ಯವನ್ನು ಉಳಿಸಬಹುದು. ಇಲ್ಲದಿದ್ದರೆ ರಕ್ತದಿಂದ ನೆಂದ ಈ ನೆಲ ರಕ್ತದಲ್ಲೇ ಮೀಯಬೇಕಾಗುವುದು.

ಚುನಾವಣಾ ಹಿಂಸಾಚಾರವೂ ಅತಿಯಾಗುತ್ತಿದೆ. ಕಾರಣ ಈಗೀಗ ಚುನಾವಣೆಗಳು ಕೋಮು ದೃಷ್ಟಿಯಿಂದಲೇ ನಡೆಯುತ್ತಿದೆ. ಗುಜರಾತ್ ಪ್ರಕರಣವು ಎಲ್ಲಾ ರಾಜ್ಯಗಳಿಗೂ ಹಬ್ಬುತ್ತಿದೆ. ಹಣ, ಅಧಿಕಾರ ಮಾತ್ರ ಗುರಿಯಾದಾಗ ಇಂಥ ಅಪಾಯಗಳು ಇದ್ದೇ ಇವೆ. ಸಂವಾದ ರೀತಿಯ ಪತ್ರಿಕೆ, ಕೋಮುಭಾವನೆಯ ವಿರುದ್ಧವಾಗಿ ಜಾಗೃತಿ ಮೂಡಿಸಬಲ್ಲುದು.

ಯುವಕ, ಯುವತಿ ಮಂಡಳಿಗಳು ಗ್ರಾಮೀಣ ಮಟ್ಟದಲ್ಲಿ ಗುಂಪು ಚರ್ಚೆ ಇಟ್ಟುಕೊಳ್ಳುವಂತೆ ನಿಮಗೆ ಗೊತ್ತಿರುವ ಸ್ನೇಹಿತರಿಗೆ ಸೂಚಿಸಿರಿ. ಇದೊಂದು ಪರಿಣಾಮಕಾರೀ ಬೆಳವಣಿಗೆಯಾಗುವುದು.

ನಾವು ‘ರಚನಾ’ದಿಂದ ಸಾಗರ ತಾಲ್ಲೂಕಿನಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳುವ ಸನ್ನಾಹದಲ್ಲಿದ್ದೇವೆ. ನಮ್ಮ ಸಭೆಗಳಲ್ಲಿ ಸಂವಾದ ಪ್ರತಿಗಳನ್ನು ಮಾರಾಟ ಮಾಡಲು ಸಾಧ್ಯವೇ ? – ಯೋಚಿಸುತ್ತೇವೆ.

ಮಣ್ಣಿನ ಬಣ್ಣದಿಂದ ಚಿತ್ರಗಳು, ಶುಭಾಶಯ ಪತ್ರಗಳನ್ನು ಮಾಡುತ್ತಿದ್ದೇವೆ. ದಯವಿಟ್ಟು ಪ್ರೋತ್ಸಾಹಿಸಿರಿ.

ಬಂದಗದ್ದೆ ರಾಧಾಕೃಷ್ಣ
ಸಾಗರ

‘ಜಾತೀಕರಣದಿಂದ - ಜಾಗತೀಕರಣದವರೆಗೆ’

‘ಸಂವಾದ’ದ ಸ್ನೇಹಿತರೇ,

ರಹಮತ್ ಅವರು ಪ್ರೊ॥ನಂಜುಂಡಸ್ವಾಮಿ ಅವರೊಂದಿಗೆ ನಡೆಸಿಕೊಟ್ಟ ಸಂದರ್ಶನ ನಿಜವಾಗಿಯೂ ಅರ್ಥಪೂರ್ಣ. ಜೊತೆಗೇ ಅಲ್ಲೇ ಇದ್ದ ಎಂ.ಜಯಶಂಕರ್ ಅವರ ಪದ್ಯದ ಅರಿವು ಒಂದಕ್ಕೊಂದು ಕೂಡಿ ಏನೆಲ್ಲ ಅರ್ಥ ತುಂಬಿದವು.

‘ಕ್ರಿಕೆಟ್, ಕೋಲಾ, ದೇವಾಲಯ’ – ಎಂ.ವೆಂಕಟಸ್ವಾಮಿಯವರು ಲೇಖನದಲ್ಲಿ ಬಹಳ ದೊಡ್ಡ ಸಮಸ್ಯೆಯನ್ನೇ ಚರ್ಚಿಸಿದ್ದಾರೆ. ಇವುಗಳಿಂದ ಯುವಜನತೆಯನ್ನು ಹೇಗೆ ರಕ್ಷಿಸುವುದು. ‘ರಕ್ಷಿಸು’ – ಬಹಳ ದೊಡ್ಡಪದ ಎಂದು ನನ್ನ ಮಕ್ಕಳು ನಗುತ್ತಾರೆ. ನಿತ್ಯ ಯುವ ಪೀಳಿಗೆಯ ಜೊತೆ ಒಡಾಡುವ ನನಗೆ ಜಾಗತೀಕರಣದ ಗದ್ದಲದಲ್ಲಿ ಈ ಹುಡುಗರು ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾರಲ್ಲ ಎಂದು ಸಂಕಟವಾಗುತ್ತಿದೆ. ಏನು ಮಾಡುವುದು? – ತಿಳಿಯದಾಗಿದೆ.

ಅಂತಹ ಒಂದು ಸಂದರ್ಭದಲ್ಲಿ ನಾವೊಂದಿಷ್ಟು ಜನ ಹೆಣ್ಣುಮಕ್ಕಳು ಬೆಳಗಾವಿಯಲ್ಲಿ ಚರ್ಚೆ ಮಾಡಿದಾಗ ನಾನು ವ್ಯಕ್ತಪಡಿಸಿದ ಕೆಲ ವಿಚಾರಗಳನ್ನು ಸಂವಾದದ ಎದುರು ಇಡಬೇಕಿನಿಸುತ್ತದೆ. ನೀವೇನಂತೀರಿ ಹೇಳಿ ?

ಶ್ರೀಮತಿ ಗಂಗಾ ಸ್ವಾಮಿ,
ಬೆಳಗಾವಿ

(ಖಂಡಿತವಾಗಿಯೂ ನಿಮ್ಮ ವಿಚಾರಗಳನ್ನು ‘ಸಂವಾದ’ ಸ್ವಾಗತಿಸುತ್ತದೆ. -ಸಂ.)

ಮಾನವರೆಲ್ಲರೂ ಸರಿಸಮಾನರು

ಸನ್ಮಾನ್ಯರೇ,

ತಮ್ಮ ಮಾಸಿಕ ಪತ್ರಿಕೆ ‘ಸಂವಾದ’ ಬರೇ ದಲಿತರ ಕುರಿತಾದ ಪ್ರಶ್ನೆಗಳಿಗೆ ಮಾತ್ರ ಮೀಸಲಾಗಿರುವ ಮಾಧ್ಯಮವಲ್ಲ ಎಂಬುದು ನನ್ನ ಅನಿಸಿಕೆ. ಹೀಗಾಗಬಾರದು ಎಂಬುದು ನನ್ನ ಇಚ್ಛೆ. ನಾನು ೩೫ ವರ್ಷಗಳ ಕಾಲ ಮಂಗಳೂರಿನ ಪುರಸಭೆಯಲ್ಲಿ ಕೆಲಸ ಮಾಡುತ್ತಾ ಅದೇ ಕೆಳಗಿನ ನೌಕರರ ಟ್ರೇಡ್ ಯೂನಿಯನ್‌ನ ಅಧ್ಯಕ್ಷನಾಗಿದ್ದೆ. ಆದುದರಿಂದ ಈ ದಲಿತರ ಕಷ್ಟ ಸಂಕಷ್ಟಗಳನ್ನು ನಾನು ಚೆನ್ನಾಗಿ ಬಲ್ಲೆ.

ನನ್ನ ತಂದೆ ತಾಯಂದಿರು ಬ್ರಾಹ್ಮಣರು. ಆದರೆ ಬ್ರಾಹ್ಮಣದಲ್ಲಿ ನನಗೆ ವಿಶ್ವಾಸವಿಲ್ಲ. ನನ್ನ ಮಟ್ಟಿಗೆ ಮಾನವರೆಲ್ಲರೂ ಸರಿ ಸಮಾನರು. ದಲಿತರ ಸುಧಾರಣೆಗೆ ವರ್ಗ ಸಮರವೇ ಸರಿಯಾದ ದಾರಿ ಎಂಬುದು ನನ್ನ ಮನವರಿಕೆ. ದಲಿತರಂತೆಯೇ ಕಷ್ಟ ಸಂಕಷ್ಟಗಳಿಗೆ ಒಳಗಾದ ಇತರ ವಿಭಾಗ ಜನರೊಡನೆ ಸೇರಿ ಅವರೆಲ್ಲರೂ ಈ ಶೋಷಕರ ವಿರುದ್ಧ ಹೋರಾಡಿದರೆ ಮಾತ್ರ ಸುಧಾರಣೆ ತರಲು ಸಾಧ್ಯವಾದೀತು ಎಂಬುದು ನನ್ನ ಖಚಿತ ಅಭಿಪ್ರಾಯ.

ಫ್ಯಾಸಿಸ್ಟ್ ತತ್ವಕ್ಕೆ ಕೋಮುವಾದವನ್ನು ಮಿಶ್ರಮಾಡಿ ಜನಸಾಮಾನ್ಯರನ್ನು ಶೋಷಣೆ ಮಾಡುವ ಒಂದು ರಾಜಕೀಯ ಹುನ್ನಾರ, ಸಂಘ ಪರಿವಾರದ ಹೆಸರಿನಲ್ಲಿ ನಡೆಯುತ್ತಿದೆ.

ಅನೇಕರು ಸಂಘ ಪರಿವಾರದ ಈ ಸಿದ್ಧಾಂತಕ್ಕೆ ಬಲಿಯಾಗುತ್ತಿದ್ದಾರೆ. ಜನಸಾಮಾನ್ಯರಿಗೆ ಈ ತತ್ವವನ್ನು, ಅದರ ತಿರುಳನ್ನು ಮನವರಿಕೆ ಮಾಡಿಕೊಡುವುದು ಇಂದಿನ ಪ್ರಜಾಪ್ರಭುತ್ವದ ಜವಾಬ್ದಾರಿ. ಹಾಗೆಯೇ ಜಾತ್ಯಾತೀತ ನಂಬಿಕೆಯುಳ್ಳ ವ್ಯಕ್ತಿಗಳ ಪ್ರಮುಖ ಕರ್ತವ್ಯ ಎಂಬುದು ನನ್ನ ಖಚಿತವಾದ ಭಾವನೆ.

ಪಿ.ಎಂ.ಎನ್.ಮೂರ್ತಿ, ಮಂಗಳೂರು

ವೈಚಾರಿಕ ಪ್ರಖರತೆಯ ‘ಸಂವಾದ’

ಮಾನ್ಯ ಇಂದೂಧರ ಹೊನ್ನಾಪುರ ಅವರಿಗೆ ವಂದನೆಗಳು,

ತಾವು ಕಳುಹಿಸುತ್ತಿರುವ ‘ಸಂವಾದ’ ತಲುಪುತ್ತಿದೆ. ತಮ್ಮ ಸೌಜನ್ಯಕ್ಕೆ ಕೃತಜ್ಞನು.

ಕೋಮುವಾದ ಹಾಗೂ ಏಕ ಸಂಸ್ಕೃತಿವಾದದ ಹುನ್ನಾರಗಳು ವಿಜೃಂಭಿಸುತ್ತಿರುವ ಈ ಹೊತ್ತು, ದಮನಿತ ದನಿಗೆ ಧ್ವನಿಯಾಗಿ, ವೈಚಾರಿಕ ಪ್ರಖರತೆಯೊಂದಿಗೆ ಸಂವಾದಕ್ಕಿಳಿದಿರುವುದು ಸಂತಸದ ಸಂಗತಿ.

ಹೊಸ ಪೀಳಿಗೆಯ ನಮಗೆಲ್ಲಾ ಸ್ಪಷ್ಟ ಹಾಗೂ ಖಚಿತ ವಿಚಾರವಾದದ ನೆರಳು ಬೇಕಿರುವ ಈ ಹೊತ್ತು ಸಂವಾದದ ‘ಭೇಟಿ’ ತಂಪು ನೀಡುತ್ತಿದೆ.

ಸಂವಾದದೊಂದಿಗೆ ನಿರಂತರ ಸ್ಪಂದಿಸುವ ಆಶಯಗಳೊಡನೆ,

ಆನಂದ್ ಋಗ್ವೇದಿ, ದಾವಣಗೆರೆ



ಪತ್ರಗಳು

ಮನೆ - ಮನಗಳಲ್ಲಿ ‘ಸಂವಾದ’

ಓಽಽ ‘ಸಂವಾದ’ವೇ
ಏನಿದ್ದರೂ ನಿನ್ನ ವಾದ
ಕುಗ್ರಾಮಗಳಲ್ಲಿ ಹುದುಗಿದ್ದ
ನಿರಕ್ಷರ ಕುಕ್ಷಿ, ಮುಗ್ಧ
ಮನಸ್ಸುಗಳಲ್ಲಿ ಬೀಜಾಂಕುರಿಸಿ
ಮೊಳಕೆಯೊಡೆದು ಚಿಗುರಿ,
ಹೂ-ಕಾಯಾಗಿ ಹಣ್ಣಾಗಿ
ಎಲ್ಲರಂಗಳದ ಮರವಾಗಿ
ನಿಲ್ಲುನೆರಳಾಗಿ ಎಲ್ಲರಿಗೂ..,
ಜಾತಿಭೂತವ ಬಿಡಿಸಿ
ನೀತಿಯ ನುಡಿಯ ಕಲಿಸುವ
ಸಹೃದಯವ ಬೆಸೆಯುತ
ಬೆಳೆಯುತ ‘ಸಂವಾದ’ವಾಗಿ
ಉಳಿ ನೀ ಎಲ್ಲರ ಮನೆ - ಮನ
ಗಳಲ್ಲಿ ಅನು ದಿನವು.

ಕುಪೇಂದ್ರ ಎಸ್. ವಠಾರ್
ಗುಲಬರ್ಗಾ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ. ೨೪೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ರಾಜಕಾರಣಿ ಜನ್ಮದಿನಕ್ಕೆ ೨೫ ಬಲಿ

ಲಖನೌ, ಏ. ೧೨- ಪ್ರಧಾನಿ ವಾಜಪೇಯಿ ಅವರ ಚುನಾವಣಾ ಏಜೆಂಟ್ ಹಾಗೂ ಉತ್ತರ ಪ್ರದೇಶ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಲಾಲ್‌ಜಿ ಟಂಡನ್ ಅವರ ೭೦ನೇ ಹುಟ್ಟುಹಬ್ಬದ ಪ್ರಯುಕ್ತ ಲಖನೌದಲ್ಲಿ ನಡೆದ ಬೃಹತ್ ಸಾರ್ವಜನಿಕ ಕಾರ್ಯಕ್ರಮದಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ ೨೨ ಮಹಿಳೆಯರು ಹಾಗೂ ೩ ಮಕ್ಕಳು ಬಲಿಯಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

ಕಾರ್ಯಕ್ರಮಕ್ಕೆ ಜನಸಾಗರ ಸೇರಿಸುವ ಸಲುವಾಗಿ ಬಡ ಮಹಿಳೆಯರಿಗೆ ಸೀರೆ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದಕ್ಕಾಗಿ ನಾಗರಿಕ ಸೇವಾ ಸಮಿತಿಯು ಹಲವಾರು ವಾಹನಗಳಲ್ಲಿ ದೂರ ದೂರದ ಕೊಳಚೆ ಪ್ರದೇಶಗಳಿಂದ ಬಡ ಮಹಿಳೆಯರನ್ನು ಕರೆತಂದಿತ್ತು. ಸಾವಿರಾರು ಮಹಿಳೆಯರು ತಮ್ಮ ಮಕ್ಕಳನ್ನೂ ಜೊತೆಯಲ್ಲಿ ಕರೆತಂದಿದ್ದರು. ಈ ವಾಹನಗಳನ್ನು 'ಟಂಡನ್‌ರ ಜನ್ಮದಿನದ ಅಂಗವಾಗಿ ಬಡ ಮಹಿಳೆಯರಿಗೆ ವಸ್ತ್ರ ವಿತರಣೆ' ಎಂಬ ಬ್ಯಾನರುಗಳಿಂದ ಅಲಂಕರಿಸಲಾಗಿತ್ತು.

ಟಂಡನ್ ಅವರು ಸುಮಾರು ಒಂದು ಡಜನ್ ಮಹಿಳೆಯರಿಗೆ ಸೀರೆ ವಿತರಿಸಿದ ನಂತರ ಭೋಜನಕ್ಕಾಗಿ ಸನಿಹದ ರೆಸ್ಟಾರೆಂಟ್ ಒಂದಕ್ಕೆ ತೆರಳಿದರು.

೪೫ ನಿಮಿಷ ನೂಕುನುಗ್ಗಲು: ಅನಂತರ ಸೀರೆಯ ವಿತರಣಾ ಕಾರ್ಯಕ್ರಮ ಆರಂಭವಾಯಿತು. ಸೀರೆಯ ವಿತರಣೆಗಾಗಿ ಎರಡು ಕೌಂಟರುಗಳನ್ನು ತೆರೆಯಲಾಗಿತ್ತು. ಈ ಕೌಂಟರುಗಳ ಮುಂದೆ ಮಹಿಳೆಯರ ದಟ್ಟಣೆ ಅಧಿಕವಾದಾಗ ವಿತರಕರು ಸೀರೆಯ ಬಂಡಲುಗಳನ್ನು ಜನತೆಯತ್ತ ತೂರಿದರು. ಈ ಸಂದರ್ಭದಲ್ಲಿ ಸುಮಾರು ೪೫ ನಿಮಿಷಗಳ ಕಾಲ ಭಾರೀ ನೂಕು ನುಗ್ಗಲು ಉಂಟಾಗಿ ಕಾಲ್ತುಳಿತಕ್ಕೆ ಸಿಕ್ಕು ೨೨ ಮಹಿಳೆಯರು ಮತ್ತು ೩ ಮಕ್ಕಳು ಮೃತರಾದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಆರು ತಿಂಗಳ ಹಸುಳೆಯ ಸಮೇತ ಮಹಿಳೆ ಜನರ ಕಾಲಡಿ ಸಿಕ್ಕಿ ಅಸುನೀಗಿದಳು. ತಕ್ಷಣವೇ ಅಲ್ಲಿದ್ದ ಕಾರ್ಯಕರ್ತರು ಸತ್ತವರನ್ನು ಮತ್ತು ಗಾಯಗೊಂಡವರನ್ನು ಎಳೆದು ಎಳೆದು ಅಲ್ಲೇ ನಿಂತಿದ್ದ ವಾಹನಗಳಿಗೆ ಪಶುಗಳನ್ನು ತುಂಬುವಂತೆ ತುಂಬಿದರು. ಕಾರ್ಯಕ್ರಮದಲ್ಲಿ ಕುಡಿವ ನೀರಿನ ವ್ಯವಸ್ಥೆಯೂ ಇರಲಿಲ್ಲ ಎಂದು ಅಂಗಡಿ ಮಾಲೀಕರೊಬ್ಬರು ದೂರಿದರು.

ಆಸ್ಪತ್ರೆಗೆ ಬರುವ ಮೊದಲೇ ಕೆಲವು ಮಹಿಳೆಯರು ಮೃತರಾಗಿದ್ದು ಇನ್ನು ಕೆಲವರು ದಾರಿಯಲ್ಲೇ ಕೊನೆಯುಸಿರು ಎಳೆದಿದ್ದರು. ಹೀಗೆ ಬಂದ ಅಪಾರ ಸಂಖ್ಯೆಯ ಗಾಯಾಳುಗಳಿಗೆ ಹಾಗೂ ಗಂಭೀರ ಪರಿಸ್ಥಿತಿಯಲ್ಲಿರುವವರಿಗೆ ಚಿಕಿತ್ಸೆ ನೀಡಲು ನಮ್ಮ ಬಳಿ ಸಾಕಷ್ಟು ಅನುಕೂಲತೆಗಳು ಇರಲಿಲ್ಲ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

(ಕನ್ನಡ ಪ್ರಭ)



ಸುಳ್ಳು ಜಾತಿ ಪತ್ರ : ಪ್ರಕರಣ ದಾಖಲು

ನವದೆಹಲಿ, ಮೇ ೬ (ಪಿಟಿಐ)- ತಾವು ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ನೀಡಿ ಕೇಂದ್ರದ ವಿವಿಧ ಇಲಾಖೆಗಳಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ೨೨ ಅಧಿಕಾರಿಗಳ ವಿರುದ್ಧ ಸಿಬಿಐ ಆರು ಪ್ರಕರಣವನ್ನು ದಾಖಲಿಸಿದೆ.

ಈ ಬಗ್ಗೆ ಸಲ್ಲಿಸಲಾಗಿದ್ದ ಅರ್ಜಿಯನ್ನು ಪರಿಶೀಲಿಸಿದ ನಂತರ ದೆಹಲಿಯ ಹೈಕೋರ್ಟ್ ಈ ಪ್ರಕರಣಗಳನ್ನು ದಾಖಲಿಸುವಂತೆ ಆದೇಶಿಸಿತ್ತು. ರಾಷ್ಟ್ರೀಯ ಪತ್ರಾಗಾರದ ಸೂಪರಿಂಟೆಂಡೆಂಡ್ ಚಂದ್ರೇಶ್ವರ ಪ್ರಸಾದ್ ಈ ಅರ್ಜಿಯನ್ನು ಸಲ್ಲಿಸಿದ್ದರು ಎಂದು ಸಿಬಿಐನ ವಕ್ತಾರರು ತಿಳಿಸಿದ್ದಾರೆ.

(ಪ್ರಜಾವಾಣಿ)

ಬೋಚಬಾಳ ಗ್ರಾಮದಲ್ಲಿ ದಲಿತರಿಗೆ ಬಹಿಷ್ಕಾರ

ರಾಮದುರ್ಗ, ಮೇ ೫- ದಲಿತ ಯುವಕನೊಬ್ಬ ಕುಡಿದ ಅಮಲಿನಲ್ಲಿ ಸವರ್ಣೀಯ ಮಹಿಳೆಯರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಪ್ರಕರಣದ ಹಿನ್ನೆಲೆಯಲ್ಲಿ ತಾಲೂಕಿನ ಬೋಚಬಾಳ ಗ್ರಾಮದಲ್ಲಿ ಸವರ್ಣೀಯರು ದಲಿತ ಕುಟುಂಬಗಳಿಗೆ ಜೀವ ಬೆದರಿಕೆ ಹಾಕಿ ಸಾಮೂಹಿಕ ಬಹಿಷ್ಕಾರ ಹಾಕಿರುವ ಘಟನೆ ನಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಸವರ್ಣೀಯರು ಹಾಕಿದ ಬೆದರಿಕೆಯಿಂದ ಗ್ರಾಮದ ಎಂಟು ದಲಿತ ಕುಟುಂಬಗಳ ಎಲ್ಲಾ ಸದಸ್ಯರು ಊರು ಬಿಟ್ಟು ಹೋಗಿದ್ದು, ಕಾಲೋನಿ ಪೂರ್ಣ ಬಿಕೋ ಎನ್ನುತ್ತಿದೆ.

ಕಳೆದ ಸೋಮವಾರ ಗ್ರಾಮದ ವಿಠ್ಠಲ ದೇವರ ಜಾತ್ರೆಯಲ್ಲಿ ಸವರ್ಣೀಯರ ಹೆಣ್ಣುಮಕ್ಕಳ ಹೆಸರು ಹಿಡಿದು ನಿಂದಿಸಿರುವುದಕ್ಕೆ ಕೋಪಗೊಂಡ ಸವರ್ಣೀಯರು ಅಲ್ಲಿನ ಎಂಟು ಕುಟುಂಬಗಳ ಮನೆಗಳ ಮೇಲೆ ರಾತ್ರಿ ಕಲ್ಲು ತೂರಾಟ ನಡೆಸಿದ್ದಾರೆ. ಅಲ್ಲದೇ ಕೈಗೆ ಸಿಕ್ಕವರನ್ನು ಥಳಿಸಿದ್ದಾರೆ ಎಂದು ಇಲ್ಲಿಗೆ ಬಂದಿರುವ ವರದಿ ತಿಳಿಸಿದೆ.

ಪ್ರಾಣ ಬೆದರಿಕೆಯಿಂದ ಎಂಟೂ ದಲಿತ ಕುಟುಂಬಗಳ ಎಲ್ಲಾ ಸದಸ್ಯರು ತಮ್ಮ ಮನೆಮಠ ತೊರೆದು ಹತ್ತಿರದ ಸಂಬಂಧಿಗಳಲ್ಲಿ ಆಶ್ರಯ ಪಡೆದಿದ್ದಾರೆ. ಬಹಿಷ್ಕಾರಗೊಂಡಿರುವ ಎಂಟೂ ಕುಟುಂಬಗಳಿಗೆ ಹಿಟ್ಟಿನ ಗಿರಣಿ, ಅಂಗಡಿಗಳಿಗೆ, ಕುಡಿಯುವ ನೀರಿಗೆ ಊರಿಗೆ ಬಾರದಂತೆ ಕಟ್ಟಪ್ಪಣೆ ಹಾಕಲಾಗಿದೆ. ಕುಡಿದು ನಿಂದಿಸಿದ ದಲಿತ ಯುವಕನ ಕಣ್ಣು ಕೀಳುವ, ಇಲ್ಲವೇ ಪ್ರಾಣ ತೆಗೆಯುವ ಬೆದರಿಕೆ ಹಾಕಲಾಗಿದೆ ಎಂದು ದಲಿತ ಮುಖಂಡರು ಆರೋಪಿಸಿದ್ದಾರೆ.

(ಪ್ರಜಾವಾಣಿ)

೧೨ನೇ ವಿಧಾನಸಭೆಗೆ ಅಪರಾಧ ಹಿನ್ನೆಲೆಯ ೫೫ ಜನಪ್ರತಿನಿಧಿಗಳು

ಬೆಂಗಳೂರು, ಮೇ ೧೪- ಕರ್ನಾಟಕದ ೧೨ನೇ ವಿಧಾನಸಭೆಗೆ ಒಟ್ಟು ೫೫ ಮಂದಿ ಅಪರಾಧ ಹಿನ್ನೆಲೆಯುಳ್ಳ ಜನಪ್ರತಿನಿಧಿಗಳು ಕಾಲಿಡಲಿದ್ದಾರೆ! ವಿಧಾನಸಭೆಯ ಸದಸ್ಯರ ೧/೪ ರಷ್ಟು ಸ್ಥಾನವನ್ನು 'ಕಳಂಕಿತ' ಶಾಸಕರೇ ಭರ್ತಿ ಮಾಡಲಿದ್ದಾರೆ.

ಅಪರಾಧ ಹಿನ್ನೆಲೆಯುಳ್ಳ ಪೈಕಿ ಬಿಜೆಪಿಯು ೨೪, ಜನತಾದಳ(ಎಸ್)ನ ೧೮, ಕಾಂಗ್ರೆಸ್ಸಿನ ೯ ಮತ್ತು ಇತರ ಪಕ್ಷಗಳ ೪ ಮಂದಿ -ಅಂದರೆ, ಒಟ್ಟು ೫೫ ಮಂದಿ ಚುನಾವಣೆಯಲ್ಲಿ ವಿಜಯಿಗಳಾಗಿದ್ದಾರೆ.

ಈ ೫೫ ಮಂದಿ ಜನಪ್ರತಿನಿಧಿಗಳಲ್ಲಿ ಹೆಚ್ಚಿನವರ ವಿರುದ್ಧ ಭಾರತೀಯ ದಂಡ ಸಂಹಿತೆ ೧೪೩,೧೪೪ ಮತ್ತು ೧೪೭ (ಗಲಭೆ) ಅಥವಾ ೧೪೮ (ಮಾರಕ ಆಯುಧಗಳೊಂದಿಗೆ ಗಲಭೆಯಲ್ಲಿ ಪಾಲ್ಗೊಳ್ಳುವುದು) ಪ್ರಕರಣ ದಾಖಲಿಸಲಾಗಿದೆ. ಇನ್ನು ಕೆಲವರು ಕೊಲೆ ಬೆದರಿಕೆ, ಪ್ರಾಣಭೀತಿ ಮತ್ತು ಬೆದರಿಕೆ ಒಡ್ಡಿದ್ದಾರೆ ಎಂಬ ಆರೋಪವನ್ನು ಎದುರಿಸುತ್ತಿದ್ದಾರೆ.

ಅಪರಾಧ ಹಿನ್ನೆಲೆಯುಳ್ಳ ೨೧೧ ಮಂದಿ ಅಭ್ಯರ್ಥಿಗಳು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

(ಪ್ರಜಾವಾಣಿ)

ಕೊಪ್ಪಳದ ಐತಿಹಾಸಿಕ ಹುಲಿಗೆಮ್ಮ ಜಾತ್ರೆಯಲ್ಲಿ ಬೆತ್ತಲೆ ಸೇವೆ

ಕೊಪ್ಪಳ, ಮೇ ೧೪- ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಹುಲಿಗೆಮ್ಮ ಜಾತ್ರೆ ಸಂದರ್ಭದಲ್ಲಿ ಬೇವಿನ ತೊಪ್ಪಲು ಕಟ್ಟಿಕೊಂಡು ಬೆತ್ತಲೆಸೇವೆ, ವ್ಯಾಪಕ ಪ್ರಾಣಿ ಬಲಿ, ದೇವದಾಸಿ ಮುಂತಾದ ಅನಿಷ್ಟ ಪದ್ಧತಿಗಳು ನಡೆದಿರುವುದು ವರದಿಯಾಗಿದೆ.

ಪ್ರತಿ ವರ್ಷ ನಡೆಯುವ ಜಾತ್ರೆ ಇದಾಗಿದ್ದು, ಆಂಧ್ರ ಪ್ರದೇಶ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಸಹಸ್ರಾರು ಮಂದಿ ಇಲ್ಲಿ ಸೇರುತ್ತಾರೆ. ವಿಶೇಷವಾಗಿ ಗ್ರಾಮೀಣ ಜನರು ಹರಕೆ ತೀರಿಸಿಕೊಳ್ಳಲು ಜಾತ್ರೆ ಸಂದರ್ಭದಲ್ಲಿ ಇಲ್ಲಿಗೆ ಆಗಮಿಸಿ ಹರಕೆ ತೀರಿಸಿ ವಾಪಾಸ್ಸಾಗುತ್ತಾರೆ.

(ಪ್ರಜಾವಾಣಿ)

ಕೋಣಗಳ ಬಲಿ

ಜಗಳೂರು, ಏ. ೨೮- ಜಿಲ್ಲಾಡಳಿತ ಮತ್ತು ಪೊಲೀಸ್ ವೈಫಲ್ಯದ ನಡುವೆಯೇ ಜಗಳೂರು ಪಟ್ಟಣದಲ್ಲಿ ಮಾರಿಕಾಂಬಾ ಜಾತ್ರೆಯ ಪ್ರಯುಕ್ತ ಎರಡು ಕೋಣಗಳ ಬಲಿ ಕೊಡಲಾಗಿದೆ. ಪ್ರಾಣಿಬಲಿ ಕಾನೂನು ಬಾಹಿರವಾಗಿದ್ದರೂ, ಕೋಣವನ್ನು ಗುಪ್ತವಾಗಿ ಬಲಿ ಕೊಟ್ಟು ಕಾನೂನನ್ನು ಗಾಳಿಗೆ ತೂರಲಾಯಿತು. (ಪ್ರಜಾವಾಣಿ)

ಸಂಪಾದಕೀಯ



ಅಂತರಂಗ

ಸಂಯಮ, ವಿವೇಕ ಮುನ್ನಡೆಸಲಿ...

ಚುನಾವಣೆಗಳು ಮುಗಿದಿವೆ. ಮತದಾರರು ಎಂದಿನಂತೆ ಆಳುವ ಪ್ರಭುಗಳಿಗೆ ಸರಿಯಾದ ಎಚ್ಚರಿಕೆಯನ್ನೂ ನೀಡಿದ್ದಾರೆ. ಎಲ್ಲ ಬಗೆಯ ಬಣ್ಣದ ಮಾತುಗಳನ್ನು ತಿರಸ್ಕರಿಸಿದ್ದಾರೆ. ಕೇವಲ ಹಣ, ಹೆಂಡ, ಜಾತಿ ಮತ್ತು ಧರ್ಮದ ಅಮಲುಗಳಷ್ಟೇ ಚುನಾವಣೆಯಲ್ಲಿ ಕೆಲಸ ಮಾಡುತ್ತವೆ ಎಂಬುದು ಮತ್ತೆ ಸುಳ್ಳಾಗಿದೆ. ಮತಾಂಧ ರಾಜಕಾರಣದ ಅಮಲನ್ನು ಕೆಲವೇ ಗಂಟೆಗಳಲ್ಲಿ ಮತಯಂತ್ರಗಳು ಬುಡಮೇಲು ಮಾಡಿದ್ದು ಎಂಥ ಸೋಜಿಗ !

ದೇವರು-ಧರ್ಮದ ಹೆಸರಿನಲ್ಲಿ ಭಾರತವನ್ನು ನಿರಂತರ ಹಿಡಿತದಲ್ಲಿ ಟ್ಟುಕೊಳ್ಳಲು ಬಯಸಿದ ಬಿಜೆಪಿ ನೇತೃತ್ವದ ಎನ್.ಡಿ.ಎ. ಮರ್ಮಾಘಾತಕ್ಕೆ ಒಳಗಾದಂತೆ ಕುಸಿದು ಬಿದ್ದಿದೆ. ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ರಾಜ್ಯಾಂಗವನ್ನು ಅಪ್ರಸುತ್ತಗೊಳಿಸಲು ನಿರಂತರ ಪ್ರಯತ್ನಿಸುತ್ತಿದ್ದ ಜನದ್ರೋಹಿಗಳ ಮುಖವಾಡವನ್ನು ಮತದಾರರು ಆ ಮೂಲಕ ಕಳಚಿ ಎಸೆದಿದ್ದಾರೆ. ವಿಶ್ವ ಹಿಂದೂ ಪರಿಷತ್, ಭಜರಂಗದಳ ಮೊದಲಾದ ದೇಶದ್ರೋಹಿ ಸಂಘಟನೆಗಳು ತುಟಿಪಿಟಿಕ್ ಅನ್ನದೆ ಅವಿತುಕೊಂಡಿವೆ. ತೊಗಾಡಿಯಾ, ಸಿಂಘಾಲ್, ಮೋದಿಯಂಥವರು ಬೀದಿಯಲ್ಲಿ ಮುಖ ತೋರಿಸಲಾರದೆ ಮೂಲೆ ಸೇರಿದ್ದಾರೆ.

ಭಾರತದ ಗೌರವ ಇರುವುದು ಇದರಲ್ಲೇ ಅನಿಸುತ್ತದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಪ್ರತಿಷ್ಠೆಯನ್ನು ಅಲ್ಲಿನ ಸಾಮಾನ್ಯ ಮತದಾರರಷ್ಟೇ ಕಾಪಾಡುತ್ತಿದ್ದಾರೆ. ಎಡಪಕ್ಷಗಳನ್ನು ಹೊರತುಪಡಿಸಿ ಬಹುತೇಕ ಎಲ್ಲ ಪಕ್ಷಗಳು, ಎಲ್ಲ ರಾಜಕಾರಣಿಗಳೂ ಅವಕಾಶವಾದಿ ಗೋಸುಂಬೆಗಳಂತೆ ವರ್ತಿಸತೊಡಗಿದ್ದು ಬಹುಶಃ ಮತದಾರರನ್ನೂ ತೀವ್ರವಾಗಿ ಕಾಡಿಸಿರಬೇಕು. ಜನರ ಅಗತ್ಯಗಳಿಗೆ ಸ್ಪಂದಿಸದ ಬೊಗಳೆ ದಾಸರನ್ನು ಅವರು ಮನ್ನಿಸುವುದಿಲ್ಲ ಎಂಬುದು ಈಗ ಸಾಬೀತಾಗಿದೆ. ವಾಜಪೇಯಿಯಾಗಲಿ, ಚಂದ್ರಬಾಬು ನಾಯ್ಡು ಆಗಲಿ, ಎಸ್.ಎಂ.ಕೃಷ್ಣ ಆಗಲಿ ಜನರ ನಿಜಸ್ಪಂದನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆಂಬುದಕ್ಕೆ ಚುನಾವಣೆಗಳು ಪ್ರತ್ಯಕ್ಷ ಸಾಕ್ಷಿಯೊದಗಿಸಿವೆ.

ದುರಂತವೆಂದರೆ, ಜನರಿಂದ ತಿರಸ್ಕರಿಸಲ್ಪಟ್ಟ ಈ ಪುಢಾರಿಗಳು ನಂತರವೂ ತಮ್ಮ ಲಜ್ಜೆಗೆಟ್ಟ ನಡತೆಗಳಲ್ಲಿ ಹಿಂದೆ ಬಿದ್ದಿಲ್ಲ ಎನ್ನುವುದು ಆಶ್ಚರ್ಯ ಹುಟ್ಟಿಸುತ್ತದೆ. ಕರ್ನಾಟಕದಲ್ಲಿ ತಿರಸ್ಕರಿಸಲ್ಪಟ್ಟ ಕಾಂಗ್ರೆಸ್, ಮತ್ತೆ ತಾನೇ ಅಧಿಕಾರಕ್ಕೆ ಮರಳಲು ಹುನ್ನಾರ ನಡೆಸುತ್ತಿದ್ದರೆ, ಪೂರ್ಣ ಬಹುಮತ ಹೊಂದಿರುವ ಸೋನಿಯಾಗಾಂಧಿ ಪ್ರಧಾನಿಯಾಗದಂತೆ ಬಿಜೆಪಿ ಕೇಂದ್ರದಲ್ಲಿ ಕುತಂತ್ರ ಮಾಡುತ್ತಿದೆ. ಮಹಾ ಸಜ್ಜನನ ಮುಖವಾಡ ಧರಿಸಿರುವ ಧೂರ್ತ ವಾಜಪೇಯಿ ತನ್ನ ಕಪಿಸೈನ್ಯದ ಮೂಲಕ ಸೋನಿಯಾ ವಿರುದ್ಧ ನಡೆಸುತ್ತಿರುವ ಪಿತೂರಿ ಅತ್ಯಂತ ನಾಚಿಕೆಗೇಡಿನದಾಗಿದೆ. ಮತಿಭ್ರಮಣೆಗೊಳಗಾದವರಂತೆ ವರ್ತಿಸುತ್ತಿರುವ ಸುಷ್ಮಾ, ಉಮಾಭಾರತಿ ಮೊದಲಾದವರನ್ನು ಕನಿಷ್ಠ ಅಪಮಾನದಿಂದ ಪಾರುಮಾಡುವ ಎಚ್ಚರಿಕೆಯನ್ನೂ ಸಹ ಈ ವಾಜಪೇಯಿ ವಹಿಸದಿರುವುದು ಎಂಥ ವಿಪರ್ಯಾಸ!

ಅಧಿಕಾರವೇ ತನ್ನ ಮುಂದೆ ಮಂಡಿಯೂರಿ ಕುಳಿತು ಯಾಚಿಸುತ್ತಿರುವಾಗ 'ವಿದೇಶಿ ಮಹಿಳೆ' ಸೋನಿಯಾಗಾಂಧಿ ತೋರಿದ ಔದಾರ್ಯ, ಸಮಯ ಪ್ರಜ್ಞೆ, ಸಂಯಮ, ತಾಳ್ಮೆ ಹಾಗೂ ಅಧಿಕಾರದ ಬಗೆಗಿನ ನಿರ್ಮೋಹ ಇಡೀ ದೇಶದ ಘನತೆಯನ್ನು ಜಾಗತಿಕ ಮಟ್ಟದಲ್ಲಿ ಪ್ರಜ್ವಲಿಸುವಂತೆ ಮಾಡಿದೆ. ಆಕೆಯ ವಿರುದ್ಧ ಅರಚಾಡುತ್ತಿದ್ದ ಪೂಜಾರಿ-ಪೂಜಾರಿಣಿಯರೆಲ್ಲ ಕ್ಷುದ್ರ ಜಂತುಗಳಂತೆ ಬಿಲ ಸೇರತೊಡಗಿದ್ದಾರೆ! ರಾಜ್ಯಾಂಗದತ್ತವಾಗಿ ಪ್ರಧಾನಿಯಾಗುವ ಎಲ್ಲ ಅವಕಾಶಗಳಿದ್ದೂ, ಪ್ರಧಾನಿ ಹುದ್ದೆಯೇ ತನ್ನ ಮುಂದೆ ಕೇಳುವವರಿಲ್ಲದೆ ನಿಂತಿದ್ದರೂ ಅದನ್ನು ತಿರಸ್ಕರಿಸಲು ಕಡಿಮೆ ಧೈರ್ಯ ಬೇಕೆ ? ಇತಿಹಾಸದಲ್ಲಿ ಮಹಾತ್ಮಗಾಂಧಿ ಬಿಟ್ಟರೆ ಬೇರಾರೂ ಇಂಥ ಧೈರ್ಯ ತೋರಿರಲಿಲ್ಲ! ನಿಜವಾಗಿಯೂ ಈಗ ಭಾರತ ಪ್ರಕಾಶಿಸುತ್ತಿದೆ !!

ಸೋನಿಯಾ ಕೃಪೆಯಿಂದ ಯಾರೇ ಪ್ರಧಾನಿಯಾದರೂ, ಅವರ ಜವಾಬ್ದಾರಿ ಕಡಿಮೆಯಾಗುವುದಿಲ್ಲ. ವಾಜಪೇಯಿ ಅವಧಿಯಲ್ಲಿ ದೇಶದಲ್ಲಿ ನಡೆದ ಸಾಂಸ್ಕೃತಿಕ ದಬ್ಬಾಳಿಕೆಯ ಎಲ್ಲ ಅವಶೇಷಗಳನ್ನು ಒಂದೊಂದಾಗಿ ಅಳಿಸಿಹಾಕುವ ಕೆಲಸ ಮೊದಲು ಆಗಬೇಕಾಗಿದೆ. ಪುರೋಹಿತಶಾಹಿಯ ಹುನ್ನಾರಗಳನ್ನೆಲ್ಲ ಒಂದೊಂದಾಗಿ ಬಿಡಿಸಿ ಹೊರಗೆಸೆಯಬೇಕಾದ ದೊಡ್ಡ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಬೇಕಿದೆ. ಶಿಕ್ಷಣ ಹಾಗೂ ಸಾಂಸ್ಕೃತಿಕ ರಂಗದ ಮೇಲಾದ ಈ ದೌರ್ಜನ್ಯದಿಂದ ಸಮಾಜವನ್ನು ಪಾರುಮಾಡುವ ಹೊಣೆಯೂ ನೂತನ ಸರ್ಕಾರದ ಮೇಲಿದೆ. ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುವುದಾಗಿ ಘೋಷಿಸಿರುವ ಎಡ ಹಾಗೂ ಸಮಾಜವಾದಿ ಪಕ್ಷಗಳು ಅತಿ ಎಚ್ಚರಿಕೆಯಿಂದ ಈ ಕೆಲಸಗಳನ್ನು ಮಾಡಿಸಬೇಕಾಗಿದೆ.

ಭಾರತದ ಪ್ರಗತಿ ಇರುವುದು ಕೇವಲ ಷೇರುಪೇಟೆ ಸೂಚ್ಯಂಕದಲ್ಲಲ್ಲ, ಮಾಹಿತಿ ತಂತ್ರಜ್ಞಾನದ ಜಾಲದಲ್ಲಿ ಅಲ್ಲ, ಅಣುಬಾಂಬ್ ಮತ್ತು ಮಿಲಿಟರಿ ಶಕ್ತಿಯ ಪ್ರದರ್ಶನದಲ್ಲೂ ಅಲ್ಲ, ಅನ್ಯ ಧರ್ಮೀಯರನ್ನು ಭಯದ ವಾತಾವರಣದಲ್ಲಿ ದೂಡಿ, ಅವರ ಮೇಲೆ ದಬ್ಬಾಳಿಕೆ ನಡೆಸುವುದರಲ್ಲಲ್ಲ, ಶ್ರೇಷ್ಠ-ಕನಿಷ್ಠದ ಅನಿಷ್ಟ ಅಳತೆಗೋಲಿನಲ್ಲೂ ಅಲ್ಲ. ದೇಶದ ಕಡುಬಡವನ ಕಣ್ಣಿನ ಆಶಾಕಿರಣದಲ್ಲಿ ಪ್ರಗತಿಯನ್ನು ಕಂಡುಕೊಳ್ಳಬೇಕಾಗಿದೆ. ರೈತನ-ಕೃಷಿ ಕಾರ್ಮಿಕನ ಗುಳಿಬಿದ್ದ ಮುಖದಲ್ಲಿ ಅರಳುವ ನಗೆಯಲ್ಲಿ ಪ್ರಗತಿಯನ್ನು ಕಾಣಬೇಕಾಗಿದೆ. ಅಲಕ್ಷಿತ ದೀನ-ದುರ್ಬಲರ ಸಶಕ್ತತೆಯಲ್ಲಿ 'ಹಿತಾನುಭವ' ಅನುಭವಿಸಬೇಕಾಗಿದೆ. ಹೊಸ ಸರ್ಕಾರ ಬದಲಾದ ದೃಷ್ಟಿಕೋನದಲ್ಲಿ ಭಾರತದ ಪ್ರಗತಿಯನ್ನು ಗುರುತಿಸಬೇಕಾಗಿದೆ.

ಮೈತ್ರಿಕೂಟ ಸರ್ಕಾರಗಳು ಬಹಳ ಕಾಲ ಉಳಿಯಲಾರವು ಎಂಬುದು ಸಾಮಾನ್ಯ ನಂಬಿಕೆ. ಆದರೆ ಬಿಜೆಪಿ ಅದನ್ನು ಸುಳ್ಳು ಮಾಡಿತು. ಹಿಂದೆ ಪಿ.ವಿ.ನರಸಿಂಹರಾವ್ ಕೂಡ ಐದು ವರ್ಷ ಪೂರೈಸಿದ್ದರು. ಬಿಜೆಪಿಯ ವಾಜಪೇಯಿ ಹಾಗೂ ಕಾಂಗ್ರೆಸ್‌ನ ನರಸಿಂಹರಾವ್ ನಡುವಿನ ಈ ಸಾಮ್ಯತೆಯನ್ನು ಉಳಿದವರು ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯತೆ ಈಗ ಒದಗಿಬಂದಿದೆ. ಈ ವಿಚಾರದಲ್ಲಿ ನಮ್ಮ ಎಡ ಹಾಗೂ ಸಮಾಜವಾದಿ ಪಕ್ಷಗಳ ಜವಾಬ್ದಾರಿ ದೊಡ್ಡದು. ಹಿಂದಿನ ಮೊರಾರ್ಜಿ ಸರ್ಕಾರದಿಂದ ಹಿಡಿದು ದೇವೇಗೌಡರ ಸರ್ಕಾರದವರೆಗೆ ಕ್ಷುಲ್ಲಕ ಕಾರಣಕ್ಕಾಗಿ ಸರ್ಕಾರಗಳನ್ನು ಉರುಳಿಸುವ ಚಾಳಿ ಕೆಲವು ಮುಖಂಡರಲ್ಲಿದೆ. ಮತೀಯ ಶಕ್ತಿಗಳು ತಮ್ಮ ಗುರಿ ಸಾಧನೆಗಾಗಿ ಹಲವಾರು ಹೊಂದಾಣಿಕೆಗಳನ್ನು ಮಾಡಿಕೊಳ್ಳುವಾಗ ದೇಶದ ಪ್ರಗತಿಗಾಗಿ ಪ್ರಜಾಸತಾತ್ತಕ ಶಕ್ತಿಗಳು ಸಣ್ಣ ಪುಟ್ಟ ಹೊಂದಾಣಿಕೆ ಮಾಡಿಕೊಳ್ಳಲು ವಿಫಲವಾಗುವುದು ಜನವಿರೋಧಿ ಕ್ರಮವಾಗುತ್ತದೆ. ಇಂಥ ಸಂದರ್ಭದಲ್ಲಿ ವಿವೇಕ, ಸಂಯಮ ಮತ್ತು ಮುನ್ನೋಟ ಮಾತ್ರ ಪಾರು ಮಾಡಬಲ್ಲವು. ಸಣ್ಣ ಪುಟ್ಟ ವಿಚಾರಗಳಿಗೆಲ್ಲ ಕಿತ್ತಾಡಿ ಸರ್ಕಾರವನ್ನೇ ಬೀಳಿಸಿ 'ಭಗ್ನಾನಂದ' ಹೊಂದುವ ಮನಸ್ಥಿತಿಯಿಂದ ಎಲ್ಲರೂ ಹೊರಬರಬೇಕು. ಮತಾಂಧ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಸಿಕ್ಕಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.

ಈ ಎಚ್ಚರ ತಪ್ಪಿದರೆ ಇತಿಹಾಸ ಎಂದೆಂದೂ ನಮ್ಮನ್ನು ಕ್ಷಮಿಸಲಾರದು !

ಇಂದೂಧರ ಹೊನ್ನಾಪುರ

ಚಿಂತನೆ

ಚಳವಳಿ ಮತ್ತು ಮಾರುಕಟ್ಟೆ ರಾಜಕಾರಣ

ಮಾರುಕಟ್ಟೆ ರಾಜಕಾರಣ ಕೃತಕ ಸೌಂದರ್ಯವನ್ನು ಉತ್ಪಾದಿಸಿ ತನ್ನ ಜಾಹೀರಾತು ಭಾಷೆಯ ಮೂಲಕ ಎಲ್ಲ ಕಡೆ ಮಾರತೊಡಗಿದೆ. ಜನರ ಚಳವಳಿ ಪ್ರಜ್ಞೆಯನ್ನು ಧ್ವಂಸಗೊಳಿಸಿ ಅಲ್ಲೆಲ್ಲ ತನ್ನ ಮಳಿಗೆಗಳನ್ನು ತೆರೆಯುವಲ್ಲಿ ಮಾರುಕಟ್ಟೆ ರಾಜಕಾರಣ ಯಶಸ್ವಿಯಾಗಿದೆ. ಯಾರಿಗೂ ಸ್ವತಂತ್ರವಾದ ಕನಸನ್ನು ಕಾಣದಂತೆ ಮಾಡಿರುವ ಈ ರಾಜಕಾರಣ, ತಾನು ಉತ್ಪಾದಿಸಿದ ಕನಸಿಗಾಗಿ ಚಡಪಡಿಸುವ ಚಟವನ್ನು ಎಲ್ಲರಿಗೂ ರೂಢಿ ಮಾಡಿದೆ. ಇಂಥ ಚಟಕ್ಕೆ ಬಲಿಯಾದ ಜನ ಗುಲಾಮರಾಗಿಬಿಟ್ಟಿದ್ದಾರೆ. ಹೀಗಿರುವಾಗ ನಮ್ಮ ಮಧ್ಯೆ ಜನಸೃಷ್ಟಿಯ ಕಾಲದ ವಿಕಾಸವೊಂದು ಪತನವಾದಂತಾಗಿದೆ.

○ ಎನ್.ಕೆ. ಹನುಮಂತಯ್ಯ

ಮನುಷ್ಯನೊಳಗಿನ ಕಲೆ ಮತ್ತು ಸ್ವಾತಂತ್ರ್ಯದ ಅಭಿವ್ಯಕ್ತಿಯೇ ಚಳವಳಿ. ಇಂಥ ಚಳವಳಿಯೇ ಮಾನವೀಯತೆ. ಈ ಬಗೆಯ ಚಳವಳಿ ಗುಣ ಹೊಂದಿರುವ ಮಾನವ ಸೃಷ್ಟಿಸುವ ವಿಶಿಷ್ಟ ಅನುಭವವೇ ಕಾಲ. ಒಡಲ ನೂಲಿನಿಂದ ಜೇಡ ಬಲೆಯನ್ನು ನೇಯುವಂತೆ ವ್ಯಕ್ತಿತ್ವ ತನ್ನ ಅಗಾಧ ಅನುಭವದಿಂದ ಕಾಲವನ್ನು ನೇಯುತ್ತದೆ. ಬಹುಜನ ನಿರ್ಮಿತ ಕಾಲವೇ ಸಂಸ್ಕೃತಿಯಾಗಿ, ನಾಗರಿಕತೆಯಾಗಿ ವಿಕಾಸಗೊಳ್ಳುತ್ತದೆ.

ಇಂದು ನಮ್ಮ ಸುತ್ತಲಿನ ಜನ ಕಾಲವನ್ನು ಸೃಷ್ಟಿಸುವ ಸೃಜನಶೀಲ ಲೈಂಗಿಕತೆಯನ್ನು ನೀಗಿಕೊಂಡಿದ್ದಾರೆ. ಪಾಳು ಮನೆಗಳ ಹಾಗೆ, ಸಾವಿಗೆ ಕಾಯುತ್ತಾ ಇರುವಂತೆ ಬದುಕುತ್ತಿದ್ದಾರೆ. ತಮ್ಮೊಳಗಿನ ಸೃಷ್ಟಿಕಾಮ ಭಸ್ಮವಾಗಿರುವ ಅರಿವೂ ಇಲ್ಲದೆ ತಟಸ್ಥರಾಗಿದ್ದಾರೆ. ಇದಕ್ಕೆಲ್ಲಾ ಮಾರುಕಟ್ಟೆ ರಾಜಕಾರಣವೇ ಪ್ರಮುಖ ಕಾರಣವಾಗಿದೆ.

ಮಾರುಕಟ್ಟೆ ರಾಜಕಾರಣ ಕೃತಕ ಸೌಂದರ್ಯವನ್ನು ಉತ್ಪಾದಿಸಿ ತನ್ನ ಜಾಹೀರಾತು ಭಾಷೆಯ ಮೂಲಕ ಎಲ್ಲ ಕಡೆ ಮಾರತೊಡಗಿದೆ. ಅಂದರೆ ಇಂದು ಅನುಭವ ಅಥವಾ ಕಾಲ ಸೃಷ್ಟಿಯಾಗುತ್ತಿರುವುದು ಈ ಮಾರುಕಟ್ಟೆ ರಾಜಕಾರಣದಿಂದಲೇ ಹೊರತು ಪ್ರತಿ ಜೀವದಿಂದಲ್ಲ. ಜನರ ಚಳವಳಿ ಪ್ರಜ್ಞೆಯನ್ನು ಧ್ವಂಸಗೊಳಿಸಿ ಅಲ್ಲೆಲ್ಲ ತನ್ನ ಮಳಿಗೆಗಳನ್ನು ತೆರೆಯುವಲ್ಲಿ ಮಾರುಕಟ್ಟೆ ರಾಜಕಾರಣ ಯಶಸ್ವಿಯಾಗಿದೆ. ಯಾರಿಗೂ ಸ್ವತಂತ್ರವಾದ ಕನಸನ್ನು ಕಾಣದಂತೆ ಮಾಡಿರುವ ಈ ರಾಜಕಾರಣ, ತಾನು ಉತ್ಪಾದಿಸಿದ ಕನಸಿಗಾಗಿ ಚಡಪಡಿಸುವ ಚಟವನ್ನು ಎಲ್ಲರಿಗೂ ರೂಢಿ ಮಾಡಿದೆ. ಇಂಥ ಚಟಕ್ಕೆ ಬಲಿಯಾದ ಜನ ಗುಲಾಮರಾಗಿ ಬಿಟ್ಟಿದ್ದಾರೆ. ಹೀಗಿರುವಾಗ ನಮ್ಮ ಮಧ್ಯೆ ಜನಸೃಷ್ಟಿಯ ಕಾಲದ ವಿಕಾಸವೊಂದು ಪತನವಾದಂತಾಗಿದೆ.

ಜನರೊಳಗಿನ ಚಳವಳಿ ನಿಧನದ ಸ್ಥಿತಿಯನ್ನು ಬಸವಣ್ಣನವರ ಈ ವಚನದ ಮೂಲಕ ಅರ್ಥ ಮಾಡಿಕೊಳ್ಳಬಹುದು.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲುಹುಟ್ಟಿ ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ॥

ವ್ಯಕ್ತಿ ಮತ್ತು ಅವನು ವಾಸಿಸುವ ವ್ಯವಸ್ಥೆಯ ಅವನತಿಯನ್ನು ಮೇಲಿನ ವಚನದಲ್ಲಿ ಕಾಣಬಹುದು. 'ಮನೆಯೊಡೆಯ' ಎಂಬುದು ಒಂದು ಮಹಾನ್ ಎಚ್ಚರ. ಇಂಥ ಎಚ್ಚರವೇ ನಿರ್ನಾಮವಾದರೆ ಬೆಳವಣಿಗೆ ಅಸಾಧ್ಯ. ಒಂದು ಹದ್ದು ಸತ್ತ ಪ್ರಾಣಿಯ ಚರ್ಮವನ್ನು ಬಗೆಯುವುದಕ್ಕೆ ಪ್ರಯೋಗಿಸುವ ಧೈರ್ಯ ಮತ್ತು ಅಧಿಕಾರವನ್ನು ಜೀವಂತ ಪ್ರಾಣಿಯ ಮೇಲೆ ಪ್ರಯೋಗಿಸಲು ಸಾಧ್ಯವಿಲ್ಲ. ಏಕೆಂದರೆ ಜೀವಂತಿಕೆ ಎನ್ನುವುದೇ ಒಂದು ಎಚ್ಚರ. ಒಂದು ಪ್ರತಿರೋಧ. ಇದೇ ನಿಜವಾದ ಚಳವಳಿ. ಎಚ್ಚರ ಸತ್ತವನು ದಾಸ್ಯಕ್ಕೆ ಒಳಗಾಗುತ್ತಾನೆ. ಇಂಥ ದಾಸ್ಯದಲ್ಲಿ ಬಿದ್ದವರಿಗೆ 'ವಿಷಯ', 'ಹುಸಿ'ಗಳೇ ಖುಷಿಗಳಾಗುತ್ತವೆ. ದೇಹದ ರೋಗವನ್ನು ಎದುರಿಸಲು ರೋಗ ನಿರೋಧಕ ಶಕ್ತಿ ಎಷ್ಟು ಅವಶ್ಯಕವೋ ಹಾಗೆ, ಸಮಾಜದ ರೋಗದ ವಿರುದ್ಧ ನಿಲ್ಲಲು ಚಳವಳಿ ಮುಖ್ಯ.

ಭಾರತದಂಥ ಜಾತಿ ಸೆರೆಮನೆಯ ದೇಶದಲ್ಲಿ ಎಚ್ಚರ ದೊರಕಿದವರೆಲ್ಲ ಚಳವಳಿಗಳಾಗಿ ಸ್ಫೋಟಿಸಿದ್ದಾರೆ. ಸೆರೆಮನೆಗಳ ಕ್ರೌರ್ಯವನ್ನು ಅರಿಯುವ ಸೂಕ್ಷ್ಮತೆಯಿದ್ದಾಗ ಮಾತ್ರ ಅದರಿಂದ ಬಿಡುಗಡೆಯಾಗುವ ಚಳವಳಿ ಮೂಡುತ್ತದೆ. ಆದರೆ ಇಂದು ಮಾರುಕಟ್ಟೆ ರಾಜಕಾರಣ ಭಾರತದ ಸಾಮಾಜಿಕ ಸೆರೆಮನೆಗಳನ್ನು ತನ್ನ ಉತ್ಪಾದನೆಗಳಿಂದ ಶೃಂಗರಿಸಿದೆ. ಇದೊಂದು ರೀತಿ ಹೆಣದ ಶೃಂಗಾರವೆಂಬುದನ್ನು ಅರಿಯದ ಅಸಂಖ್ಯಾತರು, ಸೆರೆಮನೆಯನ್ನೇ ಅರಮನೆಯೆಂದು ಭಾವಿಸಿದ್ದಾರೆ.

ಮಾರುಕಟ್ಟೆ ರಾಜಕಾರಣದ ಉತ್ಪಾದನೆಗಳಿಂದ ತಮ್ಮನ್ನು ಅಲಂಕರಿಸಿಕೊಂಡು ತಾವೇ ಅರಸರೆಂದು ಬೀಗುತ್ತಿದ್ದಾರೆ. ಇಂಥ ಜನರನ್ನು ಅಮಲಿಗೇರಿಸಿರುವ ಕೃತಕ ಸೌಂದರ್ಯವನ್ನು ಭಗ್ನಗೊಳಿಸುವಂಥ ಪರ್ಯಾಯ ಸೌಂದರ್ಯವನ್ನು ಹೇಗೆ ಪ್ರಯೋಗಿಸುವುದು? ಅಂಥ ಪರ್ಯಾಯಗಳ ಪ್ರಭಾವ ಎಷ್ಟರಮಟ್ಟಿಗಿದೆ? ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ. ಇಲ್ಲವಾದರೆ ಸಾಮಾಜಿಕ ಚಟುವಟಿಕೆಗಳೆಲ್ಲ ಸಿನಿಮೀಯವಾಗಿ ಸೋಲುತ್ತವೆ.

ಈಗಾಗಲೇ ಪ್ರಸ್ತಾಪಿಸಿದಂತೆ ಮಾರುಕಟ್ಟೆ ರಾಜಕಾರಣದ ಬಹುದೊಡ್ಡ ಅಸ್ತ್ರವೆಂದರೆ, ಜಾಹೀರಾತು ಭಾಷೆ. ಈ ಭಾಷೆಗೆ ಜನರ ಚಳವಳಿ ಶಕ್ತಿಯನ್ನು ತನ್ನ ವಶೀಕರಣದ ಮೂಲಕ ನಾಶಮಾಡುವ ತಂತ್ರ ಗೊತ್ತಿದೆ. ಅಲ್ಲದೆ ಚಳವಳಿ ಉಗಮದ ನೆಲೆಗಳಲ್ಲಿ ತನ್ನ ಮಳಿಗೆಗಳನ್ನು ಪ್ರಾರಂಭಿಸುವ ಚಾಣಾಕ್ಷತೆ ಪಡೆದಿದೆ. ಆದ್ದರಿಂದಲೇ ಈ ರಾಜಕಾರಣ ಜನಕೇಂದ್ರಿತ ಹಾಗೂ ಜನಪ್ರಿಯ ನೆಲೆಗಳನ್ನು ಪ್ರವೇಶಿಸಿ ಶೀಘ್ರವಾಗಿ ತನ್ನ ವ್ಯಾಪಾರದ ಸಾಮ್ರಾಜ್ಯವನ್ನು ವಿಸ್ತರಿಸತೊಡಗಿದೆ. ಹೀಗಿರುವುದರಿಂದ ಸಮಾಜದೊಳಗಿರುವ ಅಸ್ಪೃಶ್ಯತೆ, ಸ್ತ್ರೀ ಅಸಹ್ಯತೆ, ಅಸಮಾನತೆ, ಹಸಿವು, ಅವಮಾನ, ಅಜ್ಞಾನ ಇತ್ಯಾದಿ ಸಮಸ್ಯೆಗಳನ್ನು ಕುರಿತ ಚಿಂತನೆ ಅಪ್ರಸ್ತುತವೋ ಅಥವಾ ಈ ಸಮಸ್ಯೆಗಳೆಲ್ಲ ಅನಿವಾರ್ಯವೋ ಎನ್ನಿಸುತ್ತಿದೆ. ಇಂಥ ಸಾಮಾಜಿಕ ಕೇಡುಗಳ ಬಗೆಗಿನ ಚರ್ಚೆ ಫ್ಯಾಶನ್ ಆಗಿಬಿಡುವ ದುರಂತವೂ ಇಂದು ಸೃಷ್ಟಿಯಾಗಿದೆ.

ಮಾರುಕಟ್ಟೆ ರಾಜಕಾರಣ ಹೊಸ ರೀತಿಯ 'ಜ್ಞಾನ'ವನ್ನು ಶಿಕ್ಷಣವನ್ನಾಗಿಸಿದೆ. ಇಂದು ಪ್ರಾದೇಶಿಕ ಭಾಷೆಯ ಹೊಣೆಗಾರಿಕೆ ಬಡವರ ಶಿಕ್ಷಣದಲ್ಲಿದ್ದರೆ, ಅಂತರರಾಷ್ಟ್ರೀಯ ಭಾಷಾ ಯಜಮಾನಿಕೆ ಶ್ರೀಮಂತರ ಸ್ವತ್ತಾಗಿದೆ. ಶಿಕ್ಷಣದಲ್ಲಿ ಇಂದು ಉದ್ಭವಿಸಿರುವ 'ಜ್ಞಾನ'ದ ಪರಿಕಲ್ಪನೆ ಹಣಗಳಿಸುವ ಕೌಶಲ್ಯದ ಮಟ್ಟಕ್ಕೆ ಇಳಿದಿದೆ. ಬಲಿಷ್ಠರು ಇಂಥ ಜ್ಞಾನವನ್ನು ಪಡೆಯಲು ಶಕ್ತರಾಗುತ್ತಿದ್ದಾರೆ. ದುರ್ಬಲರು ಜ್ಞಾನದ ಹೆಸರಲ್ಲಿ ಯಥಾಸ್ಥಿತಿಯಲ್ಲಿ ನರಳುವಂತಾಗಿದ್ದಾರೆ. ಹಾಗಂಥ ದುರ್ಬಲರಿಗೂ ಇಂಥ ಮಾರುಕಟ್ಟೆ 'ಜ್ಞಾನ' ಲಭ್ಯವಾಗಬೇಕು ಎಂಬುದು ನನ್ನ ತರ್ಕವಲ್ಲ. ಇಂಥ ಮಾರುಕಟ್ಟೆ 'ಜ್ಞಾನ'ದ ಸಾಮಾಜಿಕ ಅಪಾಯದ ಬಗ್ಗೆ ನನಗೆ ಆತಂಕವಿದೆ. ಆದರೆ ನಮ್ಮ ಸುತ್ತ ಇರುವ ವಾಸ್ತವ ಎಂದರೆ ಇಂಥ ಶಿಕ್ಷಣವೇ ಆಗಿದೆ. ಈ ಬಗೆಯ ಜ್ಞಾನವನ್ನು ನುಂಗುತ್ತಿರುವವರಿಗೆ ಚಳವಳಿಯ ಅವಶ್ಯಕತೆಯಿಲ್ಲವಾಗಿದೆ. ಒಟ್ಟಾರೆಯಾಗಿ ಮಾರುಕಟ್ಟೆ ರಾಜಕಾರಣದ ಚಟಕ್ಕೆ ಬಲಿಯಾಗಿ ಬಡವರೂ, ಶ್ರೀಮಂತರೂ ಒಟ್ಟಿಗೇ ನೇಣುಗಂಭದಲ್ಲಿದ್ದಾರೆ.

ಮಾರುಕಟ್ಟೆ ರಾಜಕಾರಣದ ಪ್ರಧಾನ ಸೌಂದರ್ಯವೆಂದರೆ, ಲಾಭ ಮತ್ತು ಯಜಮಾನಿಕೆ. ಈ ಸೌಂದರ್ಯ ಇಂದು ಎಲ್ಲರನ್ನೂ ಬಾಧಿಸುತ್ತಿದೆ. ಏಕೆಂದರೆ ಮೂರ್ತವಾಗಿಯೋ, ಅಮೂರ್ತವಾಗಿಯೋ ಪ್ರತಿಯೊಬ್ಬರೂ ಇಂಥ ರಾಜಕಾರಣದ ಸದಸ್ಯರಾಗಿದ್ದಾರೆ. ಆದ್ದರಿಂದಲೇ ಸಾರ್ವಜನಿಕ ಸಂಬಂಧಿ ಸಂಘಟನೆಗಳು ಮತ್ತು ಚಳವಳಿಗಳು ಹಲವು ಗುಂಪುಗಳಾಗಿ ಸೀಳಿಕೊಂಡಿವೆ. ಹೀಗೆ ಸೀಳಿಕೊಳ್ಳುವ ಮೂಲಕ ಮಾರುಕಟ್ಟೆ ರಾಜಕಾರಣದ ಪಿತೂರಿಗೆ ಬಲಿಯಾಗಿವೆ. ಎಲ್ಲ ಸಂಘಟನೆ ಹಾಗೂ ಚಳವಳಿಗಳ ಕಾಳಜಿ ಮಾನವೀಯವಾಗಿದ್ದರೂ ವಿಭಜನೆಗೊಳ್ಳಲು ಕಾರಣವೇನು? ವಿವಿಧ ರಾಜಕೀಯ ಪಕ್ಷಗಳಂತೆ ಇವೂ ಕೂಡ ಬಹುಪಡೆಗಳಾಗುವ ಅವಶ್ಯಕತೆ ಇದೆಯೇ? ದಲಿತ ಸಂಘದಲ್ಲಿ ಬಿರುಕು, ರೈತ ಸಂಘದಲ್ಲಿ ಬಿರುಕು, ದಲಿತ ಜನಾಂಗದಲ್ಲಿ ಬಿರುಕು... ಹೀಗೆ ಬಿರುಕಿನ ವೇಗ ತೀವ್ರಗೊಳ್ಳಲು ಕಾರಣವೇನು? ಇದಕ್ಕೆಲ್ಲ ಉತ್ತರ ಸ್ಪಷ್ಟವಾಗಿದೆ; ಮಾರುಕಟ್ಟೆ ರಾಜಕಾರಣದ ಲಾಭ ಮತ್ತು ಯಜಮಾನಿಕೆಯ ಸೌಂದರ್ಯ ಇಂದು ಎಲ್ಲರನ್ನೂ ಎಲ್ಲವನ್ನೂ ಮರುಳುಗೊಳಿಸಿದೆ. ಇಂಥ

ಸಂದರ್ಭದಲ್ಲಿ ಮಾರುಕಟ್ಟೆ ರಾಜಕಾರಣದ ಸರ್ಪದ ಬಾಯಿಗೆ ಸಿಕ್ಕ 'ಚಳವಳಿ'ಯನ್ನ ರಕ್ಷಿಸುವುದಾದರೂ ಹೇಗೆ?

ಚಳವಳಿ ಬಗೆಗಿನ ಆದರ್ಶ ಅಥವಾ ಭಾವುಕ ಪ್ರಯತ್ನಗಳಿಂದ ವಾಸ್ತವದ ಬಿಕ್ಕಟ್ಟನ್ನು ಪರಿಹರಿಸುವುದು ಕಷ್ಟ ಏಕೆಂದರೆ ಇಂದು ನಮ್ಮ ಮುಂದಿರುವ ಸಮಾಜ ಅಥವಾ ಜನ ಸಂಪೂರ್ಣವಾಗಿ ಚಳವಳಿ ವಿರೋಧಿ ಜೀವನವನ್ನೇ ತಮ್ಮ ಧರ್ಮವನ್ನಾಗಿಸಿಕೊಂಡಿದ್ದಾರೆ. ಮಾರುಕಟ್ಟೆ ರಾಜಕಾರಣದ ಮೈತ್ರಿಯಲ್ಲಿ ಆನಂದವಾಗಿದ್ದಾರೆ. ಇಂಥ ಜನರ ಬಗ್ಗೆ ಕಾಳಜಿ ವಹಿಸುವುದರಿಂದ ಚಳವಳಿ ಸಾಧ್ಯವೇ? ಜನ ಅಥವಾ ಸಮಾಜವೆಂಬುದನ್ನು ಅಖಂಡವಾಗಿ, ಪೂರ್ವಾಗ್ರಹದಿಂದ ನಂಬಿ ಚಳವಳಿ ರೂಪಿಸುವುದರಿಂದ ಪ್ರಯೋಜನವಿಲ್ಲ, ಆದ್ದರಿಂದ ಅಖಂಡತೆಯ ಹೊರಗೆ ಬಂದು ಚಳವಳಿಯ ಭಾಷೆಯನ್ನು ಕಟ್ಟಿಕೊಳ್ಳುವ ಅನಿವಾರ್ಯತೆಯಿದೆ. ನಿಷ್ಠುರವಾಗಿ ಜನ ಮತ್ತು ಸಮಾಜದ ಸ್ವರೂಪವನ್ನು ಕಂಡುಕೊಳ್ಳುವ ಕೆಲಸ ಆಗಬೇಕಿದೆ. ಒಟ್ಟಾರೆಯಾಗಿ ಶತ್ರು ನೆಲೆಯನ್ನು ಮುಲಾಜಿಲ್ಲದೆ ಗುರುತಿಸಬಲ್ಲ 'ನ್ಯಾಯತನ' ಚಳವಳಿಗೆ ಬೇಕು. ನಿಜವಾದ ಜನ ಹಾಗೂ ಸಮಾಜವನ್ನು ಗುರುತಿಸುವ ಕೆಲಸ ಶುರುವಾಗಬೇಕು.

ಇಂದು ಒಬ್ಬ ಆಧುನಿಕ ಕಾಲದಲ್ಲಿ ಜೀವಿಸುತ್ತಿರುವವನು ಪುರಾಣಕಾಲದ ಸೆಳೆತಗಳಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಿದ್ದಾನೆ. ಆದ್ದರಿಂದಲೇ ಇಂಥವರಿಗೆ ಸಮಕಾಲೀನತೆಗಿಂತ, ರಾಮನ ಕಾಲವೇ ಪ್ರಮುಖವಾಗಿಬಿಡುತ್ತದೆ. ವರ್ತಮಾನಕ್ಕೆ ಸ್ಪಂದಿಸುವುದಕ್ಕಿಂತ ಅಮಾನವೀಯ ಭೂತದ ಆಶ್ರಯವೇ ಹಿತಕರವೆನ್ನಿಸಿಬಿಡುತ್ತಿದೆ. ಮಾರುಕಟ್ಟೆ ರಾಜಕಾರಣ ಉಂಟು ಮಾಡಿರುವ ಕೇಡು ಈ ಬಗೆಯದೇ. ಇಂದು ಹಳ್ಳಿಯ ಕಲ್ಲುಮುಳ್ಳಿನಲ್ಲಿ ನಡೆದ ವೃದ್ಧನೊಬ್ಬ ತನ್ನ ಪಾದಕ್ಕೆ ಚುಚ್ಚಿಕೊಂಡ ಮುಳ್ಳನ್ನು ಬಗೆದುಕೊಳ್ಳುತ್ತ ಭಾರತದ ಹೆದ್ದಾರಿಗಳ ಸೊಬಗನ್ನು ನೆನೆದು ಸಂಭ್ರಮಿಸುತ್ತಿದ್ದಾನೆ. ಮಾಹಿತಿ ಮಾಧ್ಯಮದೆದುರು ಕೂತು ಜಗತ್ತಿನ ಆಗುಹೋಗನ್ನು ಅರಿಯುತ್ತಾ ತನ್ನ ಪ್ರಾದೇಶಿಕ ಸವಾಲುಗಳನ್ನು ಮರೆಯುತ್ತಿದ್ದಾನೆ. ತಾನು ಹುಟ್ಟಿ ಬೆಳೆದ ಪ್ರಾದೇಶಿಕತೆಯ ಜಾತಿ, ಭೂತ, ವರ್ತಮಾನ, ಭವಿಷ್ಯ, ಪುರಾಣ, ಚರಿತ್ರೆಗಳ ಹಿಂಸೆಯ ಬಗ್ಗೆ ವಿಸ್ಮೃತನಾಗುತ್ತಿದ್ದಾನೆ. ಇದರಿಂದ ಈ ದೇಶದ ಶೋಷಿತರಿಗೆ ಭೀಕರ ಅಪಾಯವುಂಟಾಗುತ್ತಿದೆ. ತನ್ನ ಅನುಭವಕ್ಕೆ ಬಾರದ ಪ್ರಗತಿಗಳೆಲ್ಲ ಭ್ರಮೆ ಎಂಬ ಅರಿವು ಯಾರಿಗೂ ಆಗುತ್ತಿಲ್ಲ. ಮಾರುಕಟ್ಟೆ ರಾಜಕಾರಣದ ಅಭಿವೃದ್ಧಿ ಮಾದರಿಗಳೆಲ್ಲ ವ್ಯಾಪಾರದ ವಿಸ್ತರಣೆಯೇ ಹೊರತು ಸಾಮಾಜಿಕ ವಿಕಾಸದ ಕ್ರಮವಲ್ಲ ಎಂಬುದು ಅರ್ಥವಾಗಬೇಕಿದೆ. ಆದರೆ ಇದು ಅಷ್ಟು ಸರಳವಾಗಿಲ್ಲ. ಏಕೆಂದರೆ ಜನ ಮತ್ತು ಮಾರುಕಟ್ಟೆ ರಾಜಕಾರಣಗಳ ನಡುವೆ ವ್ಯತ್ಯಾಸವೇ ಇಲ್ಲವಾಗಿದೆ.

ನಾವು ಹುಟ್ಟಿ ಬೆಳೆದ ಹಳ್ಳಿಗಳು ಇಂದು ಒಣಗುತ್ತಿವೆ. ಜಾತಿಪದ್ಧತಿ, ಬಡತನ, ಭಯ, ಅನ್ಯಾಯಗಳು, ನವೀನ ವೇಷದಲ್ಲಿ ಭದ್ರಗೊಳ್ಳುತ್ತಿವೆ. ಆರ್ಥಿಕ ಮೂಲಗಳು ಹಿಂಗುತ್ತಿವೆ. ಸಾಂಸ್ಕೃತಿಕತೆಗಿಂತ ವ್ಯಾಪಾರೀಕತೆ ತೀವ್ರವಾಗುತ್ತಿದೆ. ಆಮೆಯೊಂದನ್ನು ನೀರಿನಿಂದ ಹೊರಗೆ ಎಸೆದರೆ ಅದು ಹೇಗೆ ವೇಗವಾಗಿ ನೀರಿಗೆ ಧಾವಿಸಿ ಬದುಕನ್ನು ಹುಡುಕುತ್ತದೋ, ಹಾಗೆ ಜನ ಇಂದು ಜಾತಿ, ಧರ್ಮ, ಹಣ, ಅಧಿಕಾರದ ಸುರಕ್ಷತೆಯ ಆಸರೆಗೆ ಜಾರುತ್ತಿದ್ದಾರೆ. ಹೀಗಿರುವಾಗ 'ಭಾರತ ಪ್ರಕಾಶಿಸುತ್ತಿದೆ' ಎಂಬ ಘೋಷಣೆಗಳ ಅರ್ಥವೇನು? ಇಂಥ ಪರಿಸ್ಥಿತಿಯಲ್ಲಿ ಯಾವ ಬಗೆಯ ಚಳವಳಿಯನ್ನು ನಿರ್ಮಿಸಬೇಕಾಗಿದೆ? ಈ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಕಂಡುಕೊಂಡಾಗ ಮಾತ್ರ ಚಳವಳಿಗೆ ಸಾರ್ಥಕತೆ ಬರುತ್ತದೆ. ಇಲ್ಲವಾದರೆ ನಮ್ಮ ಸಾಮಾಜಿಕ ಚಟುವಟಿಕೆಗಳೆಲ್ಲ ಮನರಂಜನೆಗಳಾಗಿ ವ್ಯರ್ಥವಾಗುತ್ತವೆ.

ಮಾರುಕಟ್ಟೆ ರಾಜಕಾರಣ ಉತ್ಪಾದಿಸಿರುವ ಕೃತಕ ಕಾಲದಲ್ಲಿ ನಮ್ಮ ನಡುವೆ ಈಗಾಗಲೇ ಸಾಮಾಜಿಕ ಕ್ರಾಂತಿಗೆ ಕಾರಣರಾದವರನ್ನು ಪ್ರತಿಮೆಗಳನ್ನಾಗಿಸಿಕೊಳ್ಳುವುದೂ ಕಷ್ಟವೆನಿಸುತ್ತಿದೆ. ಅಕಸ್ಮಾತ್ತಾಗಿ ಅಂಥ ಚಳವಳಿ ಚೇತನಗಳನ್ನು ಮಾರ್ಗದರ್ಶಕ ಶಕ್ತಿಗಳನ್ನಾಗಿ ಮಾಡಿಕೊಂಡರೆ ಅಂಥವರಿಗೆ ಈ ಕಾಲದ ಜೊತೆ ಪ್ರಬಲ ಮುಖಾಮುಖಿಯನ್ನು ನಡೆಸಲು ಆಗದಂಥಾ ಸ್ಥಿತಿ ನಿರ್ಮಾಣವಾಗಿದೆ. ಅಥವಾ ನಿಷ್ಕ್ರಿಯ ಆದರ್ಶದಲ್ಲೇ ನಿಂತುಬಿಡುವ ಮಿತಿಯೂ ಇದೆ. ಆದ್ದರಿಂದ ಹೊಸ ತಲೆಮಾರಿನದ್ದೇ ಆದಂತಹ ಚಳವಳಿ ಮಾರ್ಗವೊಂದು ಬೇಕಾಗಿದೆ. ಅಂಥ ಚಳವಳಿ ಮಾದರಿ ಈಗ ಪರಂಪರೆಯ ಸಖ್ಯದಿಂದಲಾದರೂ ಭಿನ್ನರೀತಿಯಲ್ಲಿ ಹುಟ್ಟಬೇಕಾಗಿದೆ. ಈ ದೃಷ್ಟಿಯಿಂದ ಸಮಕಾಲೀನತೆಯನ್ನು ಎದುರಿಸಬಲ್ಲ ಶಕ್ತಿಯಿರುವ ಚಳವಳಿ ಇಲ್ಲವೆಂದೇ ನನ್ನ ಭಾವನೆ.

ಚಳವಳಿಯನ್ನು ಹಲವಾರು ಮಂದಿ ತಮ್ಮ ಜೀವನೋಪಾಯದ ಮಾರ್ಗವನ್ನಾಗಿಸಿಕೊಂಡಿರುವುದೂ ಉಂಟು. ಚಳವಳಿಯ ಹೆಸರಲ್ಲಿ ತಮ್ಮ ಹೆಂಡತಿ ಮಕ್ಕಳಿಗೆ ಊಟ, ಬಟ್ಟೆ ತನಗೆ ಹೆಂಡ-ಬಾಡುಗಳನ್ನು ಸಂಪಾದಿಸುವ ಸ್ಥಿತಿಗೆ ಚಳವಳಿಗಾರ ಇಳಿಯಬಾರದು. ಹೀಗೆ ಆದಾಗ ಚಳವಳಿಯ ಕೊಲೆಗಾರರಾಗುವರೇ ಹೊರತು ಚಳವಳಿಗಾರರಲ್ಲ. ಕೆಲವು ಜನ ಇಂಥ ಚಳವಳಿಯನ್ನೇ ಸಮಾಜಕ್ಕೆ ಕಾಣಿಸಿ ಚಳವಳಿಯ ಬಗ್ಗೆ ನಂಬಿಕೆಯನ್ನೇ ಕೊಂದಿದ್ದಾರೆ. ಮಣ್ಣು ಹೊತ್ತಾದರೂ, ಕಡಲೆಕಾಯಿ ಮಾರಿಯಾದರೂ ತನ್ನ ಖಾಸಗೀ ಬದುಕನ್ನು ನಡೆಸುತ್ತೇನೆಯೇ ಹೊರತು ಚಳವಳಿಯ ಹೆಸರಲ್ಲಿ ಸುಲಭ ಜೀವನ ನಡೆಸಲಾರೆ ಎಂಬ ನಿಷ್ಠುರರು ಹಾಗೂ ಪ್ರಾಮಾಣಿಕರು ಮಾತ್ರ ಚಳವಳಿಯನ್ನು ಉಳಿಸಬಲ್ಲರು. ಅಂಥವರಿಂದ ಈ ಕಾಲಕ್ಕೆ ಬೇಕಾದ ಪ್ರಖರ ಚಳವಳಿ ರೂಪುಗೊಳ್ಳುವ ಅವಶ್ಯಕತೆಯಿದೆ.

ಚಳವಳಿಗಾರರು ಆಳುವ ಪಕ್ಷವೊಂದರ ದೌರ್ಜನ್ಯ, ಅನ್ಯಾಯ, ಭ್ರಷ್ಟಾಚಾರಗಳ ವಿರುದ್ಧ ಪ್ರತಿಭಟನೆಗೆ ಇಳಿಯುವಾಗ ಚಳವಳಿ ಭಾಷೆಯನ್ನು ಅಳವಡಿಸಿಕೊಳ್ಳಬೇಕು. ಅದು ಬಿಟ್ಟು ವಿರೋಧ ಪಕ್ಷಗಳ ಹಾಗೆ ರಾಜಕೀಯ ಭಾಷೆಯಿಂದ ಚಳವಳಿಗಿಳಿದರೆ ಚಳವಳಿಗೇ ಕೇಡು ಎಂಬುದನ್ನು ಇಂದಿನ ಸಂದರ್ಭದಲ್ಲಿ ಬಹಳ ಎಚ್ಚರಿಕೆಯಿಂದ ಅರಿಯಬೇಕು. ಹಾಗಾಗಿ ಚಳವಳಿಗಾರರು ಮತ್ತು ಚಳವಳಿ ಇವೆರಡೂ ನೆಲೆಗಳು ಇಂದು ಹೊಸ ಮೌಲ್ಯಗಳಿಂದ ಸಮಾಜಕ್ಕಿಳಿಯಬೇಕಿದೆ. ಈಗಾಗಲೇ ಅಪಮೌಲ್ಯಗೊಂಡ ಚಳವಳಿಗಾರರನ್ನು ಚಳವಳಿ ಮಾದರಿಗಳನ್ನು ದೂರ ಇಡಬೇಕಿದೆ. ಇಲ್ಲವಾದರೆ ಒಂದು ಅಂತರಂಗವಿಲ್ಲದ ಅಮಾನವೀಯ ವ್ಯವಸ್ಥೆಯನ್ನು ಹೊಸ ತಲೆಮಾರಿನ ಮೇಲೆ ಹೇರಿದ ಅಪರಾಧಕ್ಕೆ ಎಲ್ಲರೂ ಗುರಿಯಾಗಬೇಕಾಗುತ್ತದೆ.

ಹಿಂದೆಂದಿಗಿಂತಲೂ ಇಂದು ಚಳವಳಿಯ ತುರ್ತಿದೆ. ನಿದ್ದೆಯಲ್ಲೂ ಇಬ್ಬನಿಯ ಸದ್ದಿಗೆ ಕಣ್ತೆರೆಯಬಲ್ಲ ಎಚ್ಚರವೇ ಚಳವಳಿ. ಇಂಥ ಎಚ್ಚರವನ್ನು ಸಂಘಟಿಸುವ ಕೆಲಸವೇ ಈ ಕಾಲಕ್ಕೆ ಅಗತ್ಯವಾದ ಚಳವಳಿಯ ಮಾರ್ಗ. ಅಂಥ ಚಳವಳಿಯ ನಿರ್ಮಾಣಕ್ಕೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ತಕ್ಷಣವೇ ತೊಡಗಬೇಕಿದೆ. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಇನ್ನು ಮುಂದೆ ಪ್ರತಿ ತಿಂಗಳ ೨೭ರಂದು ಅಂಚೆಗೆ ಹಾಕಲಾಗುತ್ತದೆ. (ಈ ಹಿಂದೆ ಪ್ರತಿ ತಿಂಗಳ ೧೫ರಂದು ಹಾಕಲಾಗುತ್ತಿತ್ತು.) ಅಂದರೆ ಜೂನ್ ತಿಂಗಳ ಸಂಚಿಕೆ ಮೇ ೨೭ರಂದು ಅಂಚೆಗೆ ಹೋಗುತ್ತದೆ. ಹಾಗಾಗಿ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿಯೇ 'ಸಂವಾದ' ತಮಗೆ ತಲುಪುತ್ತದೆ.

ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ. ನಿಮ್ಮ ದೂರಿನ ಆಧಾರದ ಮೇಲೆ ಇಲ್ಲಿನ ಅಂಚೆ ಕಛೇರಿಯಲ್ಲಿ ನಾವು ವಿಚಾರಿಸಿ ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

ಸಾಮಾನ್ಯವಾಗಿ ಎಲ್ಲ ಚಂದಾದಾರರಿಗೂ ಸಕಾಲದಲ್ಲಿ ಪತ್ರಿಕೆ ಸಿಗುತ್ತಿದೆಯಾದರೂ ಕೆಲವರಿಗೆ ಕಾರಣಾಂತರದಿಂದ ಪತ್ರಿಕೆ ಕೈ ಸೇರುತ್ತಿಲ್ಲ. ಈ ಅನಾನುಕೂಲಕ್ಕೆ 'ಸಂವಾದ' ಬಳಗ ವಿಷಾದಿಸುತ್ತದೆ. ಚಂದಾದಾರರು ಪತ್ರಿಕೆ ಸಿಗದಿದ್ದಾಗ ಕೂಡಲೇ ಮೇಲೆ ನಾವು ಸೂಚಿಸಿರುವಂತೆ ಅಂಚೆ ಕಛೇರಿಗೆ ದೂರು ನೀಡುವ ಮೂಲಕ ಹಾಗೂ ಆ ಮಾಹಿತಿಯನ್ನು ನಮಗೆ ತಿಳಿಸುವ ಮೂಲಕ ಸಹಕರಿಸಬೇಕೆಂದು ವಿನಂತಿಸುತ್ತೇವೆ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕ

ಪೌರತ್ವದ ವ್ಯಾಖ್ಯಾನ :

ಸೋನಿಯಾ ಎರಡನೇ ದರ್ಜೆ ಪ್ರಜೆಯೇ?

ಸಂಘ ಪರಿವಾರದವರು, ಹಾಗೆಯೇ ಅವರ ಹಿಂಬಾಲಕಿಯಾಗಿ ಇತ್ತೀಚೆಗೆ ಪರಿವರ್ತಿಸಿಕೊಂಡ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತ ಅವರೂ ಸೋನಿಯಾಗಾಂಧಿಯವರನ್ನು ಎಡೆಬಿಡದೆ ನಿಂದನಾತ್ಮಕವಾಗಿ ಸಂಬೋಧಿಸುತ್ತಲೇ ಇರುತ್ತಾರೆ, ಅಷ್ಟೇ ಅಲ್ಲ ಅವರು ನಮ್ಮ ರಾಷ್ಟ್ರದ ಪ್ರಧಾನಿಯಾಗಲು ಅರ್ಹರಲ್ಲ, ಮುಂದಿನ ಚುನಾವಣೆಯನ್ನು ತಾವು ಗೆಲುವು ಸಾಧಿಸಿ ಕೇಂದ್ರ ಸರ್ಕಾರವು ತಮ್ಮ ಕೈವಶವಾದರೆ ವಿದೇಶಿ ವ್ಯಕ್ತಿಗಳು ಭಾರತದ ಪ್ರಧಾನಿಯಾಗದಂತೆ ಒಂದು ಕಾಯಿದೆಯನ್ನೇ ಸೃಷ್ಟಿಸುತ್ತೇವೆ ಎಂದು ಕೂಡಾ ಹೇಳುತ್ತಿದ್ದಾರೆ. ಮೊದಲಿಗೆ ಸಂಘ ಪರಿವಾರದ ಅಡ್ವಾಣಿ ಮತ್ತು ವೆಂಕಯ್ಯನಾಯ್ಡು ಅವರು ಈ ಘೋಷಣೆಯನ್ನು ಕೂಗುತ್ತಿದ್ದರು. ಇತ್ತೀಚೆಗೆ ಪ್ರಧಾನಿ ವಾಜಪೇಯಿಯವರೂ ಇದೇ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಚುನಾವಣಾ ಪ್ರಚಾರದಲ್ಲಿ ವ್ಯಕ್ತಿ ನಿಂದನೆಗೆ ಎಡೆ ಇಲ್ಲ ಎನ್ನುತ್ತಿದ್ದ ಪ್ರಧಾನಿ, ಮುಂದೆಯೂ ಪ್ರಧಾನಿಯಾಗಿರಲು ಅದೇ ದಾರಿಯಲ್ಲಿ ತನ್ನ ಪಥಚಲನೆಯನ್ನು ನಡೆಸುತ್ತಿದ್ದಾರೆ.

ಈ ವ್ಯಕ್ತಿಗಳು ಹುಟ್ಟು ಹಾಕಿದ ಈ ಪ್ರಶ್ನೆ ನಮ್ಮ ಸಂವಿಧಾನದಲ್ಲಿ ನಿರ್ಧರಿಸಿರುವ ಪೌರತ್ವದ ವ್ಯಾಖ್ಯಾನಕ್ಕೆ ಸಂಬಂಧಪಟ್ಟದ್ದು. ಈ ಸಂವಿಧಾನ ವಿಧಿಗಳು (೫ರಿಂದ ೮ರ ತನಕ) ಭಾರತದ ಓರ್ವ ಪ್ರಜೆ ಸ್ವಾಭಾವಿಕವಾಗಿ ಹುಟ್ಟಿನಿಂದಲೇ ಪೌರತ್ವವನ್ನು ಹೇಗೆ ಪಡೆಯುತ್ತಾನೆ. ಉಳಿದವರು ಈ ಹಕ್ಕನ್ನು ಹೇಗೆ ದೊರಕಿಸಿಕೊಳ್ಳಬಹುದು ಎಂಬುದನ್ನು ಪ್ರತಿಷ್ಟಿಸಿವೆ.

ವ್ಯಕ್ತಿಯು ತನ್ನ ಜನ್ಮದಿಂದಲೇ ಭಾರತದ ಪೌರತ್ವವನ್ನು ಪಡೆಯಲು ಇರುವ ಅವಕಾಶಗಳು

೧. ಭಾರತದಲ್ಲೇ ಜನ್ಮತಾಳಿ ಭಾರತದಲ್ಲೇ ವಾಸವಾಗಿರುವುದು

೨. ಹೆತ್ತವರ ಪೈಕಿ ಯಾರಾದರೂ ಓರ್ವರು ಭಾರತದಲ್ಲಿ ವಾಸವಾಗಿದ್ದು ಭಾರತದಲ್ಲೇ ವಾಸವಾಗಿರುವ ಆತನ ಪುತ್ರ ಮತ್ತು ಪುತ್ರಿಯರು

೩. ಯಾವ ವ್ಯಕ್ತಿಯೇ ಆಗಲಿ ಆತನ ಹೆತ್ತವರು ವಿದೇಶದಲ್ಲಿ ಜನ್ಮವೆತ್ತಿದ್ದರೂ ಈ ಸಂವಿಧಾನವು ಆಚರಣೆಗೆ ಬಂದ ವೇಳೆಯಲ್ಲಿ ಆತನು ಭಾರತದ ಕಾಯಂ ನಿವಾಸಿ ಆಗಿದ್ದರೆ

೪. ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ಜಾರಿಗೊಳಿಸಿದ 'ಗವರ್ನಮೆಂಟ್ ಇಂಡಿಯಾ ಆಕ್ಟ್' ಪ್ರಕಾರ ವ್ಯಕ್ತಿಯು ಭಾರತದ ಪ್ರಜೆಯಾಗಿದ್ದರೆ ಮತ್ತು ಆ ಸಮಯದಲ್ಲಿ ವ್ಯಕ್ತಿಯೋರ್ವ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದಿದ್ದರೆ

ಮಣಿಕಂಠನ್/ಇಂಡಿಯಾ ಟುಡೇ

೫. ಈ ವಿಭಜನೆಯ ಕಾಲದಲ್ಲಿ ಓರ್ವ ವ್ಯಕ್ತಿಯು ಮೊದಲು ಪಾಕಿಸ್ತಾನಕ್ಕೆ ವಲಸೆ ಹೋಗಿ ನಂತರ ಭಾರತಕ್ಕೆ ಹಿಂತಿರುಗಲು ಇಚ್ಛಿಸಿ, ಈ ಕುರಿತು ನೇಮಿಸಲ್ಪಟ್ಟ ಅಧಿಕಾರಿಯಿಂದ ವಿಧಿವತ್ತಾಗಿ ಅನುಮತಿಯನ್ನು ಪಡೆದಿದ್ದರೆ

೬. ವ್ಯಕ್ತಿಯ ತಂದೆ ತಾಯಂದಿರು, ಅಜ್ಜ ಅಜ್ಜಿಯಂದಿರು ಭಾರತದಲ್ಲಿ ಜನ್ಮವೆತ್ತಿದ್ದರೆ, ಆ ವ್ಯಕ್ತಿ ವಿದೇಶದಲ್ಲೇ ವಾಸವಾಗಿದ್ದರೆ, ತಾನು ಮುಂದಕ್ಕೆ ಭಾರತದ ಪ್ರಜೆಯಾಗಲು ಇಚ್ಛಿಸುತ್ತೇನೆ ಎಂದು ಆತನು ಪ್ರತ್ಯೇಕ ರಾಷ್ಟ್ರದಲ್ಲಿ ವಾಸವಾಗಿರುವ ಭಾರತದ ರಾಯಭಾರಿಯಿಂದ ಪರವಾನಗಿ ಪಡೆದು ಅದನ್ನು ಭಾರತದಲ್ಲಿ ಸಂಬಂಧ ಪಟ್ಟ ಅಧಿಕಾರಿಗೆ ರವಾನಿಸಿದ್ದರೆ

ಭಾರತದ ಪ್ರಜೆಗಳಾಗದೆ ಇದ್ದವರು ಇಲ್ಲಿಯ ಪೌರತ್ವವನ್ನು ಪಡೆಯಲು ೧೯೫೫ರಲ್ಲಿ ಒಂದು ಕಾಯಿದೆಯನ್ನು ಸೃಷಿಸಿತು. ಈ ಪ್ರಕಾರ

೧. ೧೯೫೦ರ ನಂತರ ಭಾರತದಲ್ಲಿ ಜನಿಸಿದ ವ್ಯಕ್ತಿ

೨. ವ್ಯಕ್ತಿಯ ತಂದೆ ತಾಯಂದಿರು ಭಾರತದ ಪ್ರಜೆಗಳಾಗಿದ್ದು ಆತನು ಜನ್ಮತಾಳಿದ್ದು ವಿದೇಶದಲ್ಲಿ ಆಗಿದ್ದರೂ

೩. ವಿದೇಶೀ ಮಹಿಳೆಯು ಭಾರತದ ಪೌರತ್ವವನ್ನು ಪಡೆದ ವ್ಯಕ್ತಿಯನ್ನು ವಿವಾಹವಾಗಿದ್ದರೆ ಮತ್ತು ಅವಳು ೬ ತಿಂಗಳು ಕಾಲ ನಿರಂತರವಾಗಿ ಭಾರತದಲ್ಲೇ ವಾಸವಾಗಿದ್ದರೆ

೪. ಓರ್ವ ವಿದೇಶೀಯ ವ್ಯಕ್ತಿ ಅನೇಕ ವರ್ಷಗಳ ಕಾಲ ಭಾರತದಲ್ಲೇ ವಾಸಿಸುತ್ತಿದ್ದು ತಾನು ಮುಂದಕ್ಕೂ ಭಾರತದಲ್ಲಿಯೇ ವಾಸಿಸುತ್ತೇನೆ ಎಂದು ದೃಢ ಪತ್ರ ನೀಡಿದ್ದರೆ

ಈ ಮೇಲಿನ ವ್ಯಕ್ತಿಗಳು ತಮಗೆ ಭಾರತದ ಪೌರತ್ವವನ್ನು ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮೊದಲಿಗೆ ಒಂದು ಮನವಿಯನ್ನು ಸಲ್ಲಿಸಿ ಆತನಿಂದ ಅದಕ್ಕೆ ಪರವಾನಗಿ ಪಡೆಯತಕ್ಕದ್ದು.

೫. ನಮ್ಮ ರಾಷ್ಟ್ರದೊಂದಿಗೆ ಇತರ ರಾಷ್ಟ್ರಗಳು ಮಿಲನಗೊಂಡರೆ ಈ ಮಿಲನಗೊಂಡ ರಾಷ್ಟ್ರದ ಜನರು ಭಾರತದ ಪೌರತ್ವವನ್ನು ಪಡೆಯಲು ಅರ್ಹರು.

ಭಾರತದ ಪೌರತ್ವ ಎಂದರೆ ಅದು ಏಕಪೌರತ್ವ. ಆತನು ಇತರ ರಾಷ್ಟ್ರಗಳ ಪೌರತ್ವವನ್ನು ಪಡೆದಿರಕೂಡದು. ಅಮೇರಿಕ, ಸ್ವಿಝರ್‌ಲೆಂಡ್ ಇವೇ ಮೊದಲಾದ ದೇಶಗಳಲ್ಲಿ ದ್ವಿಪೌರತ್ವ ಪಡೆಯಲು ಅಲ್ಲಿನ ಸಂವಿಧಾನಗಳು ಅವಕಾಶಗಳನ್ನು ನೀಡಿವೆ.

ಭಾರತದ ಪೌರತ್ವವನ್ನು ಪಡೆದ ವ್ಯಕ್ತಿಗಳು ಮಾತ್ರ ಭಾರತದ ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಪಾಲ, ಸುಪ್ರೀಂ ಹಾಗೂ ಹೈಕೋರ್ಟುಗಳ ನ್ಯಾಯಾಧೀಶರುಗಳು, ಹಾಗೆಯೇ ಸರಕಾರದ ಪರವಾಗಿ ವಾದಿಸಲಿರುವ ವಕೀಲರುಗಳು ಆಯಾ ಹುದ್ದೆಗಳಿಗೆ ಅರ್ಹರಾಗುತ್ತಾರೆ.

ಭಾರತದ ಪೌರತ್ವವನ್ನು ಪಡೆದ ವ್ಯಕ್ತಿ ಯಾರೇ ಆಗಲಿ, ಆತನಿಗೆ ಚುನಾವಣೆಯಲ್ಲಿ ಭಾಗವಹಿಸಲು, ಅಭ್ಯರ್ಥಿಯಾಗಲು ಸಂವಿಧಾನದ ೮೪ ಮತ್ತು ೩೨೬ನೇ ವಿಧಿಗಳು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿವೆ. ನಮ್ಮ ಸಂವಿಧಾನದ ಪ್ರಕಾರ, ಜನ್ಮಸಿದ್ಧವಾಗಿ ಭಾರತದ ಪೌರತ್ವವನ್ನು ಪಡೆದ ವ್ಯಕ್ತಿಯ ಹಕ್ಕು ಬಾಧ್ಯತೆಗಳಿಗೂ ಹಾಗೂ ಅಧಿಕಾರ ಹೊಂದಿದ ಅಧಿಕಾರಿಯಿಂದ ಅನುಮತಿ ಪಡೆದು ಪೌರತ್ವವನ್ನು ಗಳಿಸಿಕೊಂಡ ವ್ಯಕ್ತಿಗಳ ಹಕ್ಕು ಬಾಧ್ಯತೆಗಳಿಗೂ ಏನೂ ವ್ಯತ್ಯಾಸವಿಲ್ಲ. ಅವರೆಲ್ಲರೂ ಸರಿಸಮಾನರು. ಪೌರತ್ವದ ಹಕ್ಕುಗಳು ಮೂಲಭೂತವಾದವುಗಳು. ಈ ಹಕ್ಕುಗಳನ್ನು ಪಡೆದ ವ್ಯಕ್ತಿ ಸಂವಿಧಾನದ ೧೪ನೇ ವಿಧಿಯ ಪ್ರಕಾರ ಪಾರ್ಲಿಮೆಂಟಿನ, ಹಾಗೂ ವಿಧಿ ೩೨೬ರ ಪ್ರಕಾರ ರಾಜ್ಯದ ಶಾಸನಸಭೆಗಳ ಸದಸ್ಯರಾಗಲು ಅರ್ಹರಾಗುತ್ತಾರೆ. ಸೋನಿಯಾ ಗಾಂಧಿ

ವ್ಯಾಖ್ಯಾನ

ಭಾರತದ ಪೌರತ್ವವನ್ನು ಪಡೆದ ವ್ಯಕ್ತಿ ಯಾರೇ ಆಗಲಿ, ಚುನಾವಣೆಯಲ್ಲಿ ಭಾಗವಹಿಸಲು, ಅಭ್ಯರ್ಥಿಯಾಗಲು ಸಂವಿಧಾನದ ೮೪ ಮತ್ತು ೩೨೬ನೇ ವಿಧಿಗಳು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿವೆ. ಭಾರತದ ಪೌರತ್ವವನ್ನು ಪಡೆದ ವ್ಯಕ್ತಿಗೆ ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಲ್ಪಟ್ಟ ಎಲ್ಲಾ ಮೂಲಭೂತ ಹಕ್ಕುಗಳು ಲಭ್ಯವಾಗುತ್ತವೆ. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವುದು, ಗೆಲ್ಲುವುದು, ಗೆದ್ದು ಬಂದರೆ ಆತನ ಪಕ್ಷದ ತೀರ್ಮಾನಕ್ಕೆ ಒಳಪಟ್ಟು ರಾಷ್ಟ್ರದ ಯಾವ ಹುದ್ದೆಗಾದರೂ ಆಯ್ಕೆಯಾಗಬಹುದು.

○ ಪಿ.ಎಂ.ಎನ್.ಮೂರ್ತಿ

ಯವರು ತನ್ನ ಮನವಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿ ಭಾರತದ ಪೌರತ್ವವನ್ನು ಪಡೆದುಕೊಂಡಿದ್ದಾರೆ. ಅವರು ಕಾನೂನಿನನ್ವಯವಾಗಿ ಭಾರತೀಯ ಪ್ರಜೆಯಾಗಿದ್ದಾರೆ. ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ ವ್ಯಕ್ತಿಯು 'ಮೊದಲು ವಿದೇಶೀಯಾಗಿದ್ದು ನಂತರ ಭಾರತದ ಪೌರತ್ವವನ್ನು ಪಡೆದಿದ್ದರೂ' ಅವರ ಸ್ಥಾನಮಾನಗಳು ಪೌರತ್ವವನ್ನು ಪಡೆದ ಇತರ ವ್ಯಕ್ತಿಗಳ ಸ್ಥಾನಮಾನಗಳಿಗೆ ಸರಿಸಮಾನವಾಗಿದ್ದರೂ ಅವರು ಭಾರತದ ಉನ್ನತ ಸ್ಥಾನವನ್ನು ಹೊಂದುವ ಅವಕಾಶವಿರಬಾರದು. ಆದುದರಿಂದ ಸೋನಿಯಾಗಾಂಧಿ ಪ್ರಧಾನಿಯ ಸ್ಥಾನಕ್ಕೆ ಅರ್ಹರಲ್ಲ ಎಂದು ಸಂಘ ಪರಿವಾರದವರೂ ಹೇಳುತ್ತಲೇ ಇದ್ದಾರೆ. ಅವರ ಈ ವಾದಕ್ಕೆ ಸಂವಿಧಾನದಲ್ಲಿ ಸಮರ್ಥನೆ ಇಲ್ಲ. ಹಾಗಾದುದರಿಂದ ತಾವು ಪುನಃ ಅಧಿಕಾರದ ಗದ್ದುಗೆ ಏರಿದ ಕೂಡಲೇ ತಮ್ಮ ವಾದಕ್ಕೆ ಅನುಕೂಲವಾಗುವಂತೆ ಒಂದು ಕಾಯಿದೆಯನ್ನು ಸೃಷ್ಟಿಸುತ್ತೇವೆ ಎಂದು ಹೇಳುತ್ತಿದ್ದಾರೆ.

ಭಾರತದ ಪೌರತ್ವವನ್ನು ಪಡೆದ ವ್ಯಕ್ತಿಗೆ, ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಲ್ಪಟ್ಟ ಎಲ್ಲಾ ಮೂಲಭೂತ ಹಕ್ಕುಗಳು ಲಭ್ಯವಾಗುತ್ತವೆ. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವುದು, ಗೆಲ್ಲುವುದು, ಗೆದ್ದು ಬಂದರೆ ಆತನ ಪಕ್ಷದ ತೀರ್ಮಾನಕ್ಕೆ ಒಳಪಟ್ಟು ರಾಷ್ಟ್ರದ ಯಾವ ಹುದ್ದೆಗಳಿಗೂ ಆರಿಸಲ್ಪಡಲು ಯಾವ ಅಭ್ಯಂತರವೂ ಇಲ್ಲ. ಹೀಗಾದುದರಿಂದ ಸೋನಿಯಾಗಾಂಧಿಯವರನ್ನು ಪ್ರಧಾನಮಂತ್ರಿಯಾಗದಂತೆ ನಾವು ಕಾಯಿದೆಯನ್ನು ತರುತ್ತೇವೆ ಎನ್ನುವಲ್ಲಿ, ಈ ಕುರಿತು ನಮ್ಮ ಸಂವಿಧಾನದಲ್ಲಿ ತಿದ್ದುಪಡಿಯಾಗಬೇಕಾಗಿದೆ ಎಂಬುದನ್ನು ಅವರು ಗ್ರಹಿಸಿಕೊಳ್ಳಲಿ.

ನಮ್ಮ ಸಂವಿಧಾನದ ಯಾವ ವಿಧಿಗಾದರೂ ತಿದ್ದುಪಡಿ ತರುವ ಅಧಿಕಾರ ಭಾರತದ ಪಾರ್ಲಿಮೆಂಟಿಗೆ ಇದೆ ಎಂದು ಗೋಲಕ್‌ನಾದ್ ಮೊಕದ್ದಮೆಯ ತೀರ್ಪಿನಲ್ಲಿ ಸುಪ್ರೀಂ ಕೋರ್ಟು ನಿರ್ಧರಿಸಿತ್ತು. ಆದರೆ ನಂತರ ಕೇಶವಾನಂದ ಭಾರತಿಯವರ ದಾವೆಯಲ್ಲಿ ಸಂವಿಧಾನದ ಮೂಲ ಉದ್ದೇಶಗಳನ್ನು ಹೊರತುಪಡಿಸಿ ಉಳಿದ ಭಾಗಗಳನ್ನು ತಿದ್ದುವ ಅಧಿಕಾರ ಪಾರ್ಲಿಮೆಂಟಿಗೆ ಇದೆ ಎಂದು ಇದೇ ಸುಪ್ರೀಂ ಕೋರ್ಟು ಹೇಳಿದೆ. ಈ ತೀರ್ಪು ಈ ತನಕ ಊರ್ಜಿತದಲ್ಲಿದೆ.

ಸಂವಿಧಾನದ ವಿಧಿಗಳನ್ನು ಬದಲಾಯಿಸಲು ಈ ಸಂವಿಧಾನದ ೩೬೮ರ ವಿಧಿಯಲ್ಲಿ ನಿರ್ದೇಶಿಸಲ್ಪಟ್ಟ ಕ್ರಮಗಳನ್ನು ಅನುಸರಿಸಬೇಕು. ಆ ವೇಳೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ೨/೩ರಷ್ಟು ಮಂದಿ ಈ ತಿದ್ದುಪಡಿಗೆ ಪೂರಕವಾಗಿ ತಮ್ಮ ಮತಗಳನ್ನು ಚಲಾಯಿಸಬೇಕು. ಹಾಗೆಯೇ ರಾಜ್ಯಗಳ ಶಾಸನ ಸಭೆಗಳಲ್ಲಿ ಶೇ.೫೦ರಷ್ಟು ಸದಸ್ಯರು ಈ ತಿದ್ದುಪಡಿಗೆ ತನ್ನ ಅನುಮೋದನೆಯನ್ನು ಪ್ರಕಟಿಸುವ, ಗೊತ್ತುವಳಿಯನ್ನು ಶಾಸನ ಸಭೆಗಳ ಅಧಿವೇಶನಗಳಲ್ಲಿ ಸ್ವೀಕರಿಸಬೇಕು.

ಹೀಗಿರುವಾಗ ಇಂತಹ ತಿದ್ದುಪಡಿಯನ್ನು ಸಂವಿಧಾನಕ್ಕೆ ಅಳವಡಿಸಲು ಅಷ್ಟೊಂದು ಸುಲಭವಲ್ಲ. ಅಂತಹ ಕಾಯಿದೆಯು ಮೂಲಭೂತ ಹಕ್ಕುಗಳಿಗೆ ಮಾತ್ರವಲ್ಲ ಸಂವಿಧಾನದ ಮೂಲ ಉದ್ದೇಶಗಳಿಗೂ ವಿರೋಧವಾಗಿದೆ.

ಸಂಘ ಪರಿವಾರದ ಮೂಲ ತತ್ವ ವರ್ಣಾಶ್ರಮ ಧರ್ಮವನ್ನು ಆಧರಿಸಿದೆ. ಆ ಪ್ರಕಾರ ಮೇಲ್ಜಾತಿಯವರಿಗೆ ಮಾತ್ರ ದೇಶವನ್ನು ಆಳುವ ಹಕ್ಕು, ಈ ವರ್ಗಗಳ ಸೇವೆ ಮಾಡುವುದು ಉಳಿದ ಕೆಳಗಿನ ವರ್ಗದವರ ಕರ್ತವ್ಯ ಹಾಗೂ ಜವಾಬ್ದಾರಿ. ದಲಿತರೇ ಸಂಘ ಪರಿವಾರದವರಿಗೆ ಮಹಾ ವಿರೋಧಿಗಳು. ಮೊಗಲ್ ದೊರೆಗಳಿಗೆ ದಲಿತರು ಸಹಾಯ ಮಾಡಿದ್ದರು ಎಂಬ ಆರೋಪವನ್ನು ಅವರು ದಲಿತರ ಮೇಲೆ ಹೊರಿಸಿದ್ದಾರೆ. ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಈ ಸಂತವಾದಿಗಳು ಬ್ರಿಟಿಷರಿಗೆ ಸಹಾಯಕರಾಗಿದ್ದರು ಎಂದು ಸಾವರ್‌ಕರರ ಲೇಖನಗಳಿಂದ ಅರ್ಥವಾಗುತ್ತದೆ. ಆ ಕಾಲದಲ್ಲಿ ಜೀವಿಸಿದ್ದ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ಅವರ ರಾಷ್ಟ್ರ ದ್ರೋಹದ ನೀತಿಯು ಇಂದಿಗೂ ಅಭಿವ್ಯಕ್ತವಾಗಿ ನಿಂತಿದೆ.

ದಲಿತರು ತಮ್ಮ ವರ್ಣ ಧರ್ಮದಿಂದ ಹೊರಗುಳಿದವರು. ಆದುದರಿಂದ ಅವರಿಗೆ ಈಗ ಲಭ್ಯವಾಗಿರುವ ಪೌರತ್ವ ಮತ್ತು ಅದರಿಂದ ಉದ್ಭವವಾಗುವ ಇತರ ಹಕ್ಕುಗಳನ್ನು ಮೊಟಕು ಮಾಡಿ ಅವರು ರಾಷ್ಟ್ರದ ಉನ್ನತ ಹುದ್ದೆಗಳಿಗೆ ಅರ್ಹರಲ್ಲ ಎಂದು ಸಾಧಿಸಲು ಸೋನಿಯಾರ ವಿರುದ್ಧ ತರಲಿಚ್ಛಿಸಿದ ಇಂತಹ ಕಾಯಿದೆ ಉದಾಹರಣೆಯಾಗಿದ್ದೀತು. ಅವರ ಪಥಚಲನೆಯಲ್ಲಿ ಅವರು ಇಡುವ ಒಂದೊಂದು ಹೆಜ್ಜೆಯು ಇದಕ್ಕೆ ಸ್ಪಷ್ಟವಾದ ದಿಕ್ಸೂಚಿಯಾಗಿದೆ. ದಲಿತರು ಅವರಿಗೆ ಬೇಕಾದದ್ದು ಅವರ ದುಷ್ಟ ಚಿಂತನೆಯನ್ನು ಜಾರಿಗೊಳಿಸಲು ಮಾತ್ರ. ಗುಜರಾತಿನಲ್ಲಿ, ಹರಿಯಾಣದಲ್ಲಿ, ಒರಿಸ್ಸಾದಲ್ಲಿ ಇದನ್ನು ಕಣ್ಣಾರೆ ಕಾಣಲಾಗಿದೆ. ಅವರ 'ವಿಝನ್' ಪ್ರಣಾಳಿಕೆಯಲ್ಲಿ ರಾಷ್ಟ್ರದಲ್ಲಿ ೨೨ ಕೋಟಿ ದಲಿತ ಜನಾಂಗದ ನಿಕೃಷ್ಟತೆಯ ಕುರಿತು ಅಂತೆಯೇ ಅದರ ಕಲ್ಯಾಣದ ಕುರಿತು ಯಾವ ಖಚಿತವಾದ ನೀತಿ ನಿರೂಪಣೆಗಳು ಕಂಡುಬಾರದಿರುವುದೇ ಇದಕ್ಕೆ ಜ್ವಲಂತ ಸಾಕ್ಷಿ. ಗುಜರಾತಿನ ಮುಖ್ಯಮಂತ್ರಿ ಮೋದಿ, ಹಾಗೆಯೇ ಸಂಘ ಪರಿವಾರದ ಇತರ ಕೆಲವು ಮುಖಂಡರು ಸೋನಿಯಾ ಗಾಂಧಿಯವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಅವಹೇಳನ ಮಾಡುವುದನ್ನು ನೋಡಿದರೆ ಈ ವ್ಯಕ್ತಿಗಳಲ್ಲಿ ಮಾನವತೆ ಇರಲು ಸಾಧ್ಯವೇ ಎಂಬುದು ಒಂದು ಗಂಭೀರವಾದ ಪ್ರಶ್ನೆಯಾಗಿದೆ.

ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಮುಂಚೂಣಿಯಲ್ಲಿ ನಿಂತು ಹೋರಾಡಿದ ರಾಜಕೀಯ ಪಕ್ಷವೆಂದರೆ ರಾಷ್ಟ್ರೀಯ ಕಾಂಗ್ರೆಸ್. ಅದರ ಸ್ಥಾಪಕರಲ್ಲಿ ಹ್ಯೂಂ ಮತ್ತು ಅನಿಬೆಸಂಟರು ಪ್ರಮುಖರು. ಇವರೀರ್ವರೂ ವಿದೇಶೀಯರು. ಹಾಗೆಯೇ ಬ್ರಿಟನ್ನಿನಲ್ಲಿ ಭಾರತಕ್ಕೆ ಸ್ವಾತಂತ್ರ್ಯ ನೀಡುವಂತೆ ಬ್ರಿಟನ್‌ನಲ್ಲಿ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡವನ್ನು ತರಲು ಪ್ರಯತ್ನಪಟ್ಟವರಲ್ಲಿ ಬ್ರಾಡ್ಲಿ, ಎ.ವಿ.ಹರ್ಬಟ್, ರಜನಿ ಪಾಂದಕ್, ಎಚ್.ಜಿ.ವೆಲ್ಸ ಇವರುಗಳು ಮುಖ್ಯಸ್ಥರು. ಈ ನಿಟ್ಟಿನಲ್ಲಿ ಎಡ್‌ಮಂಡ್ ಬರ್ಕರನ್ನೂ ಈ ಸಾಲಿಗೆ ಸೇರಿಸಿಕೊಳ್ಳಬಹುದು. ಸಂಘ ಪರಿವಾರವು ತನ್ನ ದುಷ್ಟ ಮನೋಭಾವ ವ್ಯಕ್ತಪಡಿಸುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಮಹಾನುಭಾವರ ಹೆಸರುಗಳನ್ನು ನೆನಪಿಸುವುದು ಕೂಡಾ ಪ್ರಸುತ್ತವಾಗಿದೆ. ಹಾಗೆಯೇ ಸಂಘ ಪರಿವಾರದ ಅತಿರೇಕದ ಸಂಕುಚಿತತೆಗೆ ಇದೊಂದು ಸಮಂಜಸ ಉತ್ತರವೂ ಆಗಿದೆ. □

ಪದಗಳು ಮಾತಾಗುವುದಿಲ್ಲ

ಮೊದಲಿನಂತೆ ಪದಗಳು ಮಾತಾಗುವುದೇ ಇಲ್ಲ
ಗೂಡಲ್ಲಿ ಬಚ್ಚಿಟ್ಟ ಹಕ್ಕಿ
ಕಾಳ್ಗಿಚ್ಚಿಗೆ ಹೆದರಿ ಹಾರುವುದಿಲ್ಲ
ಮೌನವೆಂಬ ಕಾಡಲ್ಲಿ ಮಾತು ಮಿಣುಕುತ್ತದೆ
ಬೆಂಕಿ ಹುಳದ ಹಾಗೆ

ನಡು ಬೇಸಿಗೆ ಟಾರು
ರಸ್ತೆಯ ಮೇಲೆ ಮೋಟಾರು ಗಾಡಿಗಳ
ಸ್ಮಶಾನ ಮೆರವಣಿಗೆ
ದಿನ ರಾತ್ರಿಗಳೆಂಬ ಗಡಿಯಾರದ ಮುಳ್ಳು



ಹೈಬ್ರೀಡ್ ಹಾಯ್ -ಬಾಯ್‌ಗಳ
ಭರಾಟೆಯಲ್ಲಿ ಮೆದುಳೆಂಬ ಮನಸ್ಸು
ಲೆಕ್ಕಾಚಾರಗಳ ನಿರಂತರ ಲ್ಯಾಪ್ ಟಾಪ್

ಕಳೆದುಹೋದ ಪ್ರೀತಿ, ಬೇಕೆನ್ನುವ
ಸಂಜೆ ನೆನಪುಗಳು ದಿನಚರಿಯ
ಡೈರಿಯಲ್ಲಿ ಮಗ್ಗುಲಾಗಿವೆ.

ನಕ್ಷತ್ರಗಳ ಚಿತ್ತಾರ
ನಾಳೆಯ ನಿರೀಕ್ಷೆಗೆ ಉತ್ತರ ?
ಕರ್ತವ್ಯಗಳ ಕಟ್ಟಳೆಗೆ ಗೋಣು
ಬಾಗುತ್ತದೆ. ಬಿಟ್ಟರೂ ಬಿಡೆನೆಂಬ
ಬದುಕು, ಜಟಕಾ ಬಂಡಿ ಗ್ರೀಸಿಲ್ಲದೆ ಕರೆ ಕರೆ
ಮಾಡುತ್ತ ಸಾಗುತ್ತದೆ ದಿನದಿಂದ ದಿನಕ್ಕೆ

○ ಸುಜಾತ ಕುಮಟಾ

ಪ್ರಚಲಿತ

೧೯೯೪-೯೫ರಲ್ಲಿ ಶೇ. ೯.೧ರಷ್ಟು, ೯೫-೯೬ರಲ್ಲಿ ಶೇ. ೧೩ರಷ್ಟಿದ್ದ ಕೈಗಾರಿಕಾ ಅಭಿವೃದ್ಧಿ ೨೦೦೩-೦೪ರಲ್ಲಿ ಶೇ.೬.೩ರಷ್ಟಾಗಿದೆ. ಇದರೊಂದಿಗೆ ದೇಶದಲ್ಲಿ ಬಂಡವಾಳ ಹೂಡಿಕೆಯೂ ಗಣನೀಯವಾಗಿ ಕಡಿಮೆಯಾಗಿದೆ. ೯೫-೯೬ರಲ್ಲಿ ಶೇ.೨೭.೩ರಷ್ಟು ಬಂಡವಾಳ ರೂಪುಗೊಂಡಿದ್ದರೆ ತದನಂತರದಲ್ಲಿ ಈ ಸಂಖ್ಯೆ ಹೆಚ್ಚಾಗಿಯೇ ಇಲ್ಲ. ಸಂಪರ್ಕ ಮಾಧ್ಯಮ ಮತ್ತು ವಾಜಪೇಯಿಯವರ ಮೆಚ್ಚಿನ ಕ್ಷೇತ್ರವಾದ ಹೈವೇ ಪ್ರಾಜೆಕ್ಟ್‌ಗಳಲ್ಲಿ ಸಾಕಷ್ಟು ಬಂಡವಾಳ ಹೂಡಿಕೆಯಾಗಿದ್ದರೂ, ಅದರ ಪರಿಣಾಮವಾಗಿ ಇತರ ಕ್ಷೇತ್ರಗಳಲ್ಲಿ ಬಂಡವಾಳ ಅಭಿವೃದ್ಧಿಯಾಗಿಲ್ಲ.

○ ನಾ. ದಿವಾಕರ

ಎನ್‌ಡಿಎ ನೆರಳಲ್ಲಿ ನಲುಗಿದ ಭಾರತ !

೨೦೦೪ರ ೧೪ನೆಯ ಲೋಕಸಭಾ ಚುನಾವಣೆಯ ಕಾವೇರುತ್ತಿದ್ದಂತೆಯೇ ವಿಭಿನ್ನ ರಾಜಕೀಯ ಪಕ್ಷಗಳ ಹೊಲಸು ರಾಜಕಾರಣವೂ ಜನರ ಮುಂದೆ ಅನಾವರಣಗೊಳ್ಳತೊಡಗಿತ್ತು. ಬಹುಶಃ ಕಳೆದ ೫೦ ವರ್ಷಗಳ ಚುನಾವಣಾ ರಾಜಕೀಯದಲ್ಲಿ ಈ ಬಾರಿ ನಡೆದಿರುವಷ್ಟು ಪಕ್ಷಾಂತರಗಳು ಎಂದೂ ನಡೆದಿರಲಿಕ್ಕಿಲ್ಲ. ಭಾರತದ ರಾಜಕಾರಣದಲ್ಲಿ ಪಕ್ಷಗಳು ಎಷ್ಟೇ ಜನವಿರೋಧಿ ನೀತಿಗಳನ್ನು ಅನುಸರಿಸಿದರೂ ಎಲ್ಲೋ ಒಂದು ಕಡೆ ಎಲ್ಲಾ ಪಕ್ಷಗಳೂ ಸಹ ಒಂದು ನಿರ್ದಿಷ್ಟ ಸಿದ್ಧಾಂತವನ್ನು ಅನುಸರಿಸುತ್ತಿದ್ದವು. ಬಹುತೇಕ ವೇಳೆ ರಾಜಕೀಯ ಪಕ್ಷಗಳು ಮತ್ತು ನಾಯಕರು ತಮ್ಮ ಸಿದ್ಧಾಂತಗಳಿಂದ ದೂರ ಸರಿದಿದ್ದರೂ, ಮೇಲ್ನೋಟದ ಮಟ್ಟಿಗಾದರೂ ಸಿದ್ಧಾಂತದ ಬಗ್ಗೆ ಗಂಭೀರವಾಗಿರುತ್ತಿದ್ದುದುಂಟು. ಆದರೆ ಇತ್ತೀಚಿನ ರಾಜಕಾರಣದಲ್ಲಿ ಸಿದ್ಧಾಂತ ಎಂಬ ಅಂಶದ ಸುಳಿವೇ ದೊರೆಯದಂತಾಗಿದೆ.

ಎಡ ಪಕ್ಷಗಳನ್ನು ಹೊರತುಪಡಿಸಿ ಎಲ್ಲಾ ಪಕ್ಷಗಳೂ ಜಾಗತೀಕರಣದ ಬಗ್ಗೆ ಒಂದೇ ನಿಲುವು ತಾಳುತ್ತವೆ. ಜಾಗತೀಕರಣದ - ವಿಶ್ವ ವ್ಯಾಪಾರ ಸಂಸ್ಥೆಯನ್ನು ವಿರೋಧಿಸುವ ಧ್ವನಿ ಯಾವ ಪಕ್ಷದ ಪ್ರಣಾಳಿಕೆಯಲ್ಲೂ ಕಂಡುಬರುವುದಿಲ್ಲ. ಈ ಒಂದು ಸಿದ್ಧಾಂತದಲ್ಲಿ ಮಾತ್ರ ಈ ಎಲ್ಲಾ ಪಕ್ಷಗಳೂ ಒಂದೇ ನಿಲುವು ತಾಳುತ್ತವೆ. ಉಳಿದಂತೆ ಕೇವಲ ಅಧಿಕಾರ ಗಳಿಸುವುದೊಂದೇ ಪಕ್ಷಗಳ ಪ್ರಮುಖ ಉದ್ದೇಶವಾಗಿದೆ. ಕಳೆದ ಚುನಾವಣೆಗಳಲ್ಲಿ ಭಾಜಪದೊಂದಿಗೆ ಕೈಗೂಡಿಸಿದ್ದ ಕಾಂಗ್ರೆಸ್ ವಿರೋಧಿ ಡಿಎಂಕೆ, ಪಿಎಂಕೆ ಪಕ್ಷಗಳು ಇಂದು ಕಾಂಗ್ರೆಸ್‌ನ ತೆಕ್ಕೆಯಲ್ಲಿವೆ. ಶರದ್ ಪವಾರ್‌ರವರ ಎನ್‌ಸಿಪಿ ಪುನಃ ಕಾಂಗ್ರೆಸ್‌ನ ಬಾಲ ಹಿಡಿದಿದ್ದರೆ, ಸುಖರಾಂರವರು ಕಾಂಗ್ರೆಸ್‌ಗೇ ಮರಳಿದ್ದಾರೆ. ಭಾಜಪದ ಸಾಂಪ್ರದಾಯಿಕತೆ ಜಾತ್ಯಾತೀತ ಜನತಾದಳ ಸೇರಿರುವ ಪ್ರಸಾದ್‌ರವರು ಸೆಕ್ಯುಲರ್ ವ್ಯಕ್ತಿಯಂತೆ ಮೆರೆಯುತ್ತಿದ್ದಾರೆ. ಇನ್ನು ರಾಷ್ಟ್ರೀಯ ಮಟ್ಟದಲ್ಲಿ ನೋಡಿದರೆ ೫೦ರ ದಶಕದಲ್ಲಿ ಎಡ ಚಿಂತಕರಿಗೆ ನಾಯಕತ್ವ ನೀಡಿ ಇಪಿಟಿಎಂದ ಪ್ರಾರಂಭಕ್ಕೆ ಕಾರಣರಾದ ಶ್ರೇಷ್ಠ ಅಸ್ಸಾಮಿ ಗಾಯಕ ಭೂಪೇನ್ ಹಝಾರಿಕಾರಂಥವರೂ ಭಾಜಪ ಸೇರುವ ಮೂಲಕ ಪುರೋಗಾಮಿ ಚಿಂತಕರಲ್ಲಿ ಅಚ್ಚರಿ ಮೂಡಿಸಿದ್ದಾರೆ.

ಒಂದೆಡೆ ಈ ಪಕ್ಷಾಂತರ, ಸಿದ್ಧಾಂತ ತ್ಯಾಗಗಳಿಂದ ರಾಜಕಾರಣ ಕಲುಷಿತಗೊಂಡಿದ್ದರೆ, ಇನ್ನೊಂದೆಡೆ ಸಿನಿಮಾ ತಾರೆಯರು ಹಿಂಡು ಹಿಂಡಾಗಿ ನೇರವಾಗಿ ರಾಜಕೀಯಕ್ಕೆ ಪ್ರವೇಶಿಸುತ್ತಿರುವುದು ವಿಷಾದಕರ ಅಂಶವಾಗಿದೆ. ಈ ಮುನ್ನವೂ ಅನೇಕ ಚುನಾವಣೆಗಳಲ್ಲಿ ಸಿನಿಮಾ ತಾರೆಯರು ರಾಜಕೀಯ ಪಕ್ಷಗಳಿಗೆ ಬೆಂಬಲ ಸೂಚಿಸಿದ್ದುಂಟು. ಎಂಜಿಆರ್, ಎನ್‌ಟಿಆರ್, ಜಯಲಲಿತಾ, ಸುನಿಲ್‌ದತ್, ರಾಜಬಬ್ಬರ್, ಶತ್ರುಘ್ನ ಸಿನ್ಹಾ, ವಿನೋದ್ ಖನ್ನಾ ಮುಂತಾದವರು ಸ್ವ ಇಚ್ಛೆಯಿಂದ ರಾಜಕೀಯ ಪ್ರವೇಶಿಸಿ, ತಮ್ಮದೇ ಆದ ಸಿದ್ಧಾಂತವನ್ನು ಅನುಸರಿಸಿ ರಾಜಕಾರಣ ನಡೆಸಿದ್ದುಂಟು. ಆದರೆ ಈ ಬಾರಿ ಭಾಜಪ ಬಾಲಿವುಡ್ ನಟ ನಟಿಯರನ್ನು ನೇರವಾಗಿ ಹಣದ ಆಮಿಷ ತೋರಿಸಿ ಪ್ರಚಾರಕ್ಕಿಳಿಸಿರುವುದು, ದೇಶದ ರಾಜಕೀಯವನ್ನು ಇನ್ನಷ್ಟು ಹದಗೆಡಿಸಿದೆ.

ಕೇವಲ ಪ್ರಚಾರಕ್ಕಾಗಿ ಹೇಮಮಾಲಿನಿಗೆ ೨ ಕೋಟಿ ರೂ. ನೀಡಿರುವುದಾಗಿ ವರದಿಯಾಗಿದೆ. ಭಾಜಪಕ್ಕೆ ಸೇರ್ಪಡೆಯಾಗಿರುವ ಅನೇಕ ಮಾಡೆಲ್‌ಗಳಿಗೆ ಅವರ ದೈನಿಕ ವರಮಾನದ ಎರಡರಷ್ಟು ಹಣ ನೀಡಿರುವುದೂ ವರದಿಯಾಗಿದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷವೂ ಸಹ ಭಾಜಪಕ್ಕೆ ಸರಿಸಾಟಿಯಾಗಿದೆ. ರಾಜಕೀಯದ ಗಂಧವೇ ಇಲ್ಲದ ಗೋವಿಂದನಂತಹ ನಟನನ್ನು ಚುನಾವಣಾ ಕಣಕ್ಕಿಳಿಸಿದೆ. ಈ ವಿದ್ಯಮಾನದ ಹಿಂದಿನ ವಿವರಗಳ ಸತ್ಯಾಸತ್ಯತೆಗಳು ಏನೇ ಇರಲಿ, ಬಾಲಿವುಡ್ ತಾರೆಯರ ಪ್ರವೇಶದಿಂದ ಭಾಜಪದ ಭಾರತ ಪ್ರಕಾಶಿಸುತ್ತಿರುವುದಂತೂ ನಿಜ.

ಕೋಮುವಾದದ ವಿರುದ್ಧ ಸಿಡಿದೇಳುತ್ತಿದ್ದ ಸಂಗ್ಮಾ, ಬಂಗಾರಪ್ಪ ಮುಂತಾದ ರಾಜಕೀಯ ಮುತ್ಸದ್ದಿಗಳು ಈಗ ಭಾಜಪವನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದಾರೆ.

ಕರ್ನಾಟಕದ ರಾಜಕಾರಣದಲ್ಲಿ ಪಕ್ಷಾಂತರ ಪಿತಾಮಹ ಎಂದೇ ಹೇಳಬಹುದಾದ ಬಂಗಾರಪ್ಪ ಪುನಃ ಕಾಂಗ್ರೆಸ್ ತೊರೆದು ತಮ್ಮ ಸಮಾಜವಾದೀ ತತ್ವಗಳಿಗೆ ತಿಲಾಂಜಲಿ ನೀಡಿ, ಫರ್ನಾಂಡಿಸ್‌ರವರಂತೆ ಚೆಡ್ಡಿ ತೊಟ್ಟಿರುವುದು ವಿಷಾದನೀಯ. ಇನ್ನೊಂದೆಡೆ ಅಯೋಧ್ಯೆ ಚಳವಳಿಯಿಂದಲೂ ಭಾಜಪದ ಕೋಮುವಾದಿ ರಾಜಕಾರಣವನ್ನು ನಿರಂತರವಾಗಿ ಬೆಂಬಲಿಸುತ್ತಲೇ ಬಂದಿದ್ದ ಆಯನೂರು ಮಂಜುನಾಥ, ವಿಜಯ ಸಂಕೇಶ್ವರ ಮುಂತಾದವರು ಈಗ ಮತ ನಿರಪೇಕ್ಷತೆ ಬಗ್ಗೆ ಕಾಳಜಿ ತೋರಲಾರಂಭಿಸಿದ್ದಾರೆ. ಕರ್ನಾಟಕದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿರುವ ಬೊಮ್ಮಾಯಿ ಮತ್ತವರ ಗೆಳೆಯರ ಪಕ್ಷ ಈಗ ಸಂಯುಕ್ತ ಜನತಾದಳದ ಹೆಸರಿನಲ್ಲಿ ಭಾಜಪದ ಬೆನ್ನೇರಿದ್ದಾರೆ.

ಮೈಸೂರು, ಚಾಮರಾಜನಗರಗಳಲ್ಲಿ ದಲಿತ ನಾಯಕರೆಂದೇ ಹೆಸರಾಗಿರುವ ಶ್ರೀನಿವಾಸ ಪ್ರಸಾದ್‌ರವರು ಸಮತಾ ಪಕ್ಷದಲ್ಲಿದ್ದು ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿರುವವರೆಗೂ ಭಾಜಪದ ಕೋಮುವಾದ ಜಾತಿವಾದದ ಬಗ್ಗೆ ಚಕಾರವೆತ್ತಿರಲಿಲ್ಲ. ಈಗ

ವಾಜಪೇಯಿಯ ವರ್ಚಸ್ಸಿನಿಂದಲೇ ೩೦೦ಕ್ಕೂ ಹೆಚ್ಚು ಸ್ಥಾನ ಗಳಿಸುವ ಆಕಾಂಕ್ಷೆ ಹೊಂದಿದ್ದ ವೆಂಕಯ್ಯನಾಯ್ಡುರವರ ಪಕ್ಷಕ್ಕೆ ತಾರಾ ವರ್ಚಸ್ಸು ಅಗತ್ಯವಾಗಿತ್ತು ಎನಿಸುತ್ತದೆ. ಭಾಜಪದ ಜಾಗತೀಕರಣ ನೀತಿ, ಭಾರತ ಪ್ರಕಾಶಿಸುತ್ತಿದೆ ಪ್ರಚಾರ, ಫೀಲ್ ಗುಡ್ ಫ್ಯಾಕ್ಟರ್‌ಗಳಂತೆ, ಈ ತಾರಾಮಣಿಗಳೂ ಜನರಲ್ಲಿ ಭ್ರಮೆ ಹುಟ್ಟಿಸಬಲ್ಲರು, ಜನರನ್ನು ಮರುಳು ಮಾಡಬಲ್ಲರು, ಅಮಾಯಕರ ಮತ ಗಳಿಸಬಲ್ಲರು.

ಆದರೆ ಈ ವಿದ್ಯಮಾನಗಳಿಂದ ದೇಶದ ರಾಜಕೀಯ ಭವಿಷ್ಯ ಖಂಡಿತವಾಗಿಯೂ ಹಾಳಾಗುತ್ತದೆ. ಸಿದ್ಧಾಂತಗಳನ್ನು ಗಾಳಿಗೆ ತೂರಿರುವ ಭಾಜಪ ಕಾಂಗ್ರೆಸ್ ಪಕ್ಷಗಳು ತಮ್ಮ ಈ ಕೃತ್ಯದಿಂದ ದೇಶದ ರಾಜಕಾರಣಕ್ಕೆ ಮಸಿ ಬಳಿಯುತ್ತಿವೆ. ಭಾರತೀಯ ಸಂಸ್ಕೃತಿಯ ಬಗ್ಗೆ ಬೊಬ್ಬೆ ಹೊಡೆಯುವ ಭಾಜಪ ಭಾರತೀಯ ಸಂಸ್ಕೃತಿಯನ್ನು ಹರಾಜು ಹಾಕಿರುವ ಮಾಡೆಲ್‌ಗಳ ಹಿಂದೆ ಬಿದ್ದಿದ್ದು ಹಾಸ್ಯಾಸ್ಪದ ಎನಿಸುತ್ತದೆ. ಇಷ್ಟೆಲ್ಲಾ ಹೊಲಸುಗಳ ನಡುವೆ ಕೇಂದ್ರ ಎನ್‌ಡಿಎ ಸರ್ಕಾರ ಭಾರತ ಪ್ರಕಾಶಿಸುತ್ತಿದೆ ಎಂದು ಪ್ರಚಾರ ಮಾಡುತ್ತಿದೆ.

ಭಾರತ ಎಲ್ಲಿ ಪ್ರಕಾಶಿಸುತ್ತಿದೆ, ಯಾರಿಗಾಗಿ ಪ್ರಕಾಶಿಸುತ್ತಿದೆ ಎಂಬುದು ಜನತೆಯ ಮುಂದಿನ ಸವಾಲಾಗಿದೆ. ತಮ್ಮ ಈ ಪ್ರಚಾರದ ಭರಾಟೆಯಲ್ಲಿ ಭಾಜಪ ಎನ್‌ಡಿಎ ಪಕ್ಷಗಳು ಸಾಮಾನ್ಯ ಜನತೆ ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನು ಗೌಣವಾಗಿಸಿವೆ. ಭಾಜಪಕ್ಕೆ ಸೋನಿಯಾರ ವಿದೇಶೀ ಮೂಲವೇ ಪ್ರಮುಖ ವಿಷಯವಾಗಿದೆ. ತನ್ನ ಐದು ವರ್ಷದ ಆಡಳಿತಾವಧಿಯಲ್ಲಿ ಎನ್‌ಡಿಎ ಸರ್ಕಾರ ಭಾರತದ ಸಾಮಾಜಿಕ ಪರಿಸ್ಥಿತಿಯನ್ನು ಒಂದು ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ದಿದ್ದು ನಾಗರಿಕ ಸಮಾಜವನ್ನೇ ವಿಷಮಯವಾಗಿಸಿದೆ. ಹೀಗಿದ್ದರೂ ಭಾರತ ಪ್ರಕಾಶಿಸುತ್ತಿದೆ ಎಂದು ಬೊಬ್ಬೆಹೊಡೆಯಲಾಗುತ್ತಿದೆ.

ಭಾಜಪದ ಪ್ರಚಾರ ತಂತ್ರದಲ್ಲಿ ಮಾತ್ರ ಭಾರತ ಪ್ರಕಾಶಿಸುತ್ತಿದೆ, ಬಡತನದ ಸಂಖ್ಯೆಯಲ್ಲಿ ಇಳಿಮುಖವಾಗಿದೆ, ಷೇರು ಮಾರುಕಟ್ಟೆ ೬೦೦೦ ಅಂಶಗಳನ್ನು ದಾಟಿ ಮುನ್ನಡೆಯುತ್ತಿದೆ, ಭಾರತ ವಿಶ್ವದಲ್ಲೇ ಅತ್ಯಂತ ಪ್ರಭಾವಶಾಲಿ ಆರ್ಥಿಕ ಶಕ್ತಿಯಾಗಿ ರೂಪುಗೊಳ್ಳುತ್ತಿದೆ, ನಮ್ಮ ವಿದೇಶೀ ವಿನಿಮಯ ಸಂಗ್ರಹ ೧೦೦ಬಿಲಿಯನ್ ಡಾಲರ್‌ಗಳನ್ನು ಮೀರಿದೆ. ಈ ಎಲ್ಲಾ ಅಂಶಗಳೂ ಭಾಜಪದ ಪ್ರಚಾರದಲ್ಲಿ ಕಾಣಸಿಕೊಳ್ಳುತ್ತವೆ. ಇದಕ್ಕೆ ಪೂರಕವಾಗಿ ಆಳುವ ಪಕ್ಷಗಳ ಬಾಲಂಗೋಚಿಯಂತೆ ಪ್ರಸಾರ-ಮುದ್ರಣ ಮಾಧ್ಯಮಗಳು ಇದೇ ಅಂಕಿಅಂಶಗಳನ್ನು ಪ್ರತಿಬಿಂಬಿಸುತ್ತಿವೆ. ತನ್ನ ಈ ಪ್ರಚಾರಕ್ಕಾಗಿ ಕೇಂದ್ರ ಸರ್ಕಾರ ೪೦೦ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ಇಷ್ಟೆಲ್ಲಾ ಖರ್ಚು ಮಾಡಿ ಪಾಲಿಶ್ ಮಾಡಿದ ಮೇಲೆ ಭಾರತ ಪ್ರಕಾಶಿಸಲೇ ಬೇಕಲ್ಲವೇ ?

ಒಂದು ರೀತಿಯಲ್ಲಿ ಮಾಧ್ಯಮಗಳು ಪ್ರತಿಬಿಂಬಿಸುವಂತೆ ಭಾರತ ಪ್ರಕಾಶಿಸುತ್ತಿರುವುದು ನಿಜವೇ. ಭಾರತದ ಜನಸಂಖ್ಯೆಯ ಶೇ.೧೦ರಷ್ಟು ಜನತೆಗೆ ಭಾರತ ಉಜ್ವಲವಾಗಿ ಪ್ರಕಾಶಿಸುತ್ತಿದೆ. ನಮ್ಮ ಪ್ರಸಾರ ಮಾಧ್ಯಮಗಳು ಈ ಶೇ.೧೦ ಜನರನ್ನೇ ಪ್ರತಿನಿಧಿಸುತ್ತವೆ. ಏಕೆಂದರೆ ಅನೇಕ ಸಂಘಟನೆಗಳು, ಪತ್ರಕರ್ತರು ಶ್ರಮವಹಿಸಿ, ರೈತರ ಆತ್ಮಹತ್ಯೆಗಳ ಬಗ್ಗೆ, ಬರಗಾಲದ ಬಗ್ಗೆ ನಡೆಸಿದ ಅಧ್ಯಯನಗಳು ಮುದ್ರಣ ಕಾಣಲೇ ಇಲ್ಲ. ಆದರೆ ಮುಂಬೈನಲ್ಲಿ ಜರುಗಿದ ಒಂದು ವಾರದ ಲಕ್ಮೆ ಇಂಡಿಯಾ ಫ್ಯಾಷನ್ ವೀಕನ್ನು ಎಲ್ಲಾ ಮಾಧ್ಯಮಗಳೂ ವಿಜೃಂಭಣೆಯಿಂದ ಬಿತ್ತರಿಸಿದವು. ಗ್ರಾಮೀಣ ಬಿಕ್ಕಟ್ಟಿನ ವರದಿಗೆ ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಸ್ಥಳಾವಕಾಶ ದೊರೆಯದಿದ್ದರೂ ಲಕ್ಮೆ ಫ್ಯಾಷನ್‌ಗೆ ಒಂದೇ ವಾರದಲ್ಲಿ ನಾಲ್ಕು ಲಕ್ಷ ಪದಗಳಿಗೆ ಸ್ಥಾನ ದೊರೆತಿತ್ತು, ಟಿವಿಗಳಲ್ಲಿ ೧೦೦೦ ಗಂಟೆಗಳ ಪ್ರಸಾರ ನೀಡಲಾಗಿತ್ತು. ೧೦೦೦೦ ಫಿಲ್ಮ್ ರೋಲ್‌ಗಳು ಖರ್ಚಾಗಿದ್ದವು. (ಅಂಕಿ ಅಂಶ ಪಿ.ಸಾಯಿನಾಥ್ ಫ್ರಂಟ್‌ಲೈನ್ ೧೨.೩.೦೪)

ಈ ವಿದ್ಯಮಾನಗಳು ಮುಖ್ಯವಾದಾಗ ಭಾರತ ಪ್ರಕಾಶಿಸದೆ ಇರುತ್ತದೆಯೇ? ಇರಲಿ, ಷೇರು ಮಾರುಕಟ್ಟೆಯ ಸೂಚ್ಯಂಕ ೬೦೦೦ ದಾಟಿದೆ ಎಂದಾಕ್ಷಣ ನಮ್ಮ ದೇಶ ಸಂಪೂರ್ಣ ಸುಭಿಕ್ಷವಾಗಿದೆ ಎಂದರ್ಥವಲ್ಲ. ಈ ಅಂಶವು ಬಂಡವಾಳ ಹೂಡುವವರಿಗೆ ಪ್ರೋತ್ಸಾಹದಾಯಕವಾಗಿರಬಹುದು. ಆದರೆ ಭಾರತೀಯ ಗೃಹ ಸಮೀಕ್ಷೆಯ ಪ್ರಕಾರ ಶೇ.೬೫ರಷ್ಟು ಗ್ರಾಮೀಣ ಭಾರತದಲ್ಲಿ ಶೇ.೧೦ರಷ್ಟು ಜನ ಬ್ಯಾಂಕಿನಲ್ಲಿ ಖಾತೆ ಹೊಂದಿರುವುದಿಲ್ಲ. ಮತ್ತು ಲಕ್ಷಾಂತರ ರೈತರು ಸಾಲದ ಹೊರೆ ತಾಳಲಾರದೆ ಅಸುನೀಗುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ೩೦೦೦ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಸ್ತುತ ಪ್ರಕಾಶಿಸುತ್ತಿರುವ

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಾಲ್‌ಸೆಂಟರ್‌ಗಳಲ್ಲಿ ೨ ಲಕ್ಷದಷ್ಟು ಉದ್ಯೋಗ ಸೃಷ್ಟಿಯಾಗಿದ್ದರೂ ಕೃಷಿ ಕ್ಷೇತ್ರದಲ್ಲಿ ಲಕ್ಷಾಂತರ ಜನ ರೈತರು ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿನ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿರುವುದು ಕಹಿಯಾದ ಸತ್ಯವಾಗಿದೆ. ಈ ಕಹಿ ಸತ್ಯವನ್ನು ಸರ್ಕಾರ ಮರೆಮಾಚಲು ಯತ್ನಿಸುತ್ತಿದೆ. ದೇಶದ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳನ್ನು ಇದೇ ರೀತಿಯ ದೋಷಪೂರಿತ ದೃಷ್ಟಿಕೋನ ದಿಂದಲೇ ನೋಡುತ್ತಿರುವುದು ಸರ್ಕಾರದ ಅಂಕಿ ಅಂಶಗಳಿಂದಲೇ ಸ್ಪಷ್ಟವಾಗುತ್ತಿದೆ.

ಭಾರತದಲ್ಲಿ ಬಡತನ, ದಾರಿದ್ರ್ಯತೆ ಎಷ್ಟಿದೆಯೆಂದರೆ ಊಹಿಸಲಸಾಧ್ಯ. ಆದರೆ ಆಳುವ ವರ್ಗಗಳು ಇವೆಲ್ಲವನ್ನೂ ಮರೆಮಾಚುತ್ತಿವೆ. ಕೇವಲ ಸುಳ್ಳು ಅಂಕಿ ಅಂಶಗಳನ್ನು ನೀಡಿ ಸರ್ಕಾರ ಸತ್ಯವನ್ನು ಮರೆಮಾಚುತ್ತಿದೆ.

ಮುಂಬೈನ ಧಾರವಿ ಎಂಬ ಸ್ಲಂನಲ್ಲಿ ಹತ್ತು ಲಕ್ಷ ಜನರಿದ್ದಾರೆ. ಆದರೆ ಇಲ್ಲಿರುವವರಲ್ಲಿ ಕೇವಲ ಶೇ.೧೦ ಜನ ಮಾತ್ರ ದಾರಿದ್ರ್ಯ ರೇಖೆಯ ಕೆಳಗಿದ್ದಾರೆ ಎಂದು ಸರ್ಕಾರ ಹೇಳುತ್ತದೆ. ಈ ರೀತಿಯ ನಾಟಕ ಆಡುವುದರಲ್ಲಿ ನಮ್ಮ ಸರ್ಕಾರಗಳು ನಿಸ್ಸೀಮವಾಗಿವೆ. ಉದಾಹರಣೆಗೆ ೧೯೯೫-೯೬ರಲ್ಲಿ ಕೋಪನ್‌ಹ್ಯಾಗನ್‌ನಲ್ಲಿ ನಡೆದ ವಿಶ್ವಸಾಮಾಜಿಕ ಅಭಿವೃದ್ಧಿಯ ಸಮ್ಮೇಳನದಲ್ಲಿ ಭಾರತ ಸರ್ಕಾರದ ಪ್ರತಿನಿಧಿಯು, ಭಾರತದಲ್ಲಿ ಶೇ. ೩೯.೯೦ರಷ್ಟು ಜನ ದಾರಿದ್ರ್ಯ ರೇಖೆಗಿಂತಲೂ ಕೆಳಗೆ ಜೀವಿಸುತ್ತಿದ್ದಾರೆ ಎಂದು ಹೇಳಿಕೆ ನೀಡಿದ್ದರು. ಆದರೆ ತದ ನಂತರ ನಡೆದ ಚುನಾವಣೆಗಳಲ್ಲಿ ನರಸಿಂಹರಾವ್ ಸರ್ಕಾರವು ಈ ಸಂಖ್ಯೆಯನ್ನು ಶೇ.೧೯ ಎಂದು ಪ್ರಚಾರ ಮಾಡಿತ್ತು. ೯೬ರ ಚುನಾವಣೆಯ ನಂತರ ಮಧುದಂಡವತೆ ಯೋಜನಾ ಆಯೋಗದ ಅಧ್ಯಕ್ಷರಾಗಿದ್ದಾಗ ಈ ತಪ್ಪನ್ನು ಸರಿಪಡಿಸಿದ್ದರು. ಶೇಕಡಾವಾರು ನಾಟಕಗಳೇ ಭಾರತೀಯ ಜನತೆಯನ್ನು ಐದು ದಶಕಗಳಿಂದಲೂ ಮರುಳು ಮಾಡುತ್ತಾ ಬಂದಿವೆ.

ಇದೇ ರೀತಿ ಜನರನ್ನು ಭ್ರಮೆಗೊಳಪಡಿಸುವ ಇನ್ನೊಂದು ಕ್ಷೇತ್ರವೆಂದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರ. ಈ ಕ್ಷೇತ್ರವು ಊಹೆಗೆ ನಿಲುಕದಷ್ಟು ಬೆಳೆದಿದ್ದರೂ ಕಳೆದ ಒಂದು ದಶಕದಲ್ಲಿ ಇನ್ನೂ ಹೆಚ್ಚು ಶೀಘ್ರವಾಗಿ ಬೆಳೆದ ಕ್ಷೇತ್ರವೆಂದರೆ ಅಸಮಾನತೆ ಎಂದು ಹೇಳಬಹುದು. ಮಾಹಿತಿ ತಂತ್ರಜ್ಞಾನ, ಸಂಪರ್ಕ ಕ್ಷೇತ್ರ, ಜವಳಿ ಮತ್ತು ವಾಹನ ಕ್ಷೇತ್ರಗಳಲ್ಲಿ ಎಷ್ಟರ ಮಟ್ಟಿಗೆ ಬೆಳವಣಿಗೆಯಾಗಿದೆ ಎಂದರೆ, ಅಸಮಾನತೆಯಿಂದ ಬಳಲಿ ಜೀವ ಕಳೆದುಕೊಳ್ಳುತ್ತಿರುವವರ ಬಗ್ಗೆ ಕಾಳಜಿಯೇ ಇಲ್ಲವಾಗಿದೆ. ಆತ್ಮಹತ್ಯೆಯ ಪ್ರಕರಣಗಳನ್ನು ಮಾನಸಿಕ ವಿಕಲತೆ ಎಂದು ಪರಿಗಣಿಸುವಷ್ಟು ಮಟ್ಟಿಗೆ ದೇಶ ಪ್ರಜ್ಞಾಹೀನವಾಗಿದೆ.

ಭಾರತ ಪ್ರಕಾಶಿಸುತ್ತಿರುವ ಈ ವರ್ಷದಲ್ಲೆ ದೇಶವು ಅತೀವ ಬರಗಾಲ ಎದುರಿಸುತ್ತಿದೆ. ಬೆಳೆ ನಷ್ಟ ತಾಳಲಾರದೆ ಸಾಲದ ಹೊರೆಯಿಂದ ಬಳಲಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರು ಒಂದೆಡೆಯಾದರೆ, ಇನ್ನೊಂದೆಡೆ ಲಕ್ಷಾಂತರ ಮಂದಿ ನೌಕರಿಯನ್ನರಸಿ ರಾಜ್ಯದಿಂದ ರಾಜ್ಯಕ್ಕೆ ವಲಸೆ ಹೋಗಲಾರಂಭಿಸಿದ್ದಾರೆ. ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿಗಾಗಿ ಹಾಹಾಕಾರ ಎದ್ದಿದೆ. ಇವೆಲ್ಲವನ್ನೂ ಜನರಿಂದ ಮರೆಮಾಚಲು ಸರ್ಕಾರ, ಭಾರತ ಪ್ರಕಾಶಿಸುತ್ತಿದೆ ಎಂಬ ತಂತ್ರವನ್ನು ಅಳವಡಿಸಿದೆ. ೮೯ರಲ್ಲಿ ರಾಜೀವ್‌ಗಾಂಧಿಯವರು ಇದೇ ರೀತಿ 'ಮೇರಾ ಭಾರತ್ ಮಹಾನ್' ಎಂಬ ಪ್ರಚಾರ ಮಾಡಿ ಸೋತು ಸುಣ್ಣವಾಗಿದ್ದರು. ತಮ್ಮ ಪ್ರಚಾರವನ್ನು ಪ್ರಖರಗೊಳಿಸಲು ಸರ್ಕಾರ ಕೇವಲ ಒಂದು ವರ್ಷದ ಅಥವಾ ಒಂದು ಕಾಲಾವಧಿಯ ಸಾಧನೆಯನ್ನೇ ಸಂಪೂರ್ಣ ಸಾಧನೆ ಎಂಬಂತೆ ಪ್ರತಿಬಿಂಬಿಸುತ್ತಿದೆ.

ಒಂದೆಡೆ ವಿದೇಶೀ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದು ಇನ್ನೊಂದೆಡೆ ಶೇರು ಮಾರುಕಟ್ಟೆಯನ್ನು ಚುರುಕುಗೊಳಿಸುವುದು, ಈ ಪ್ರಚಾರದ ಹಿಂದಿನ ಉದ್ದೇಶವಾಗಿದೆ. ಆದರೆ ಅಗತ್ಯ ವಸ್ತುಗಳ ಉತ್ಪಾದನೆಯಲ್ಲಿ ಉಂಟಾಗಿರುವ ಹಿನ್ನಡೆಯನ್ನು ಸರ್ಕಾರ ಸಂಪೂರ್ಣ ಕಡೆಗಣಿಸಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕಾಲ್‌ಸೆಂಟರ್‌ಗಳಲ್ಲಿ ೨ ಲಕ್ಷದಷ್ಟು ಉದ್ಯೋಗ ಸೃಷ್ಟಿಯಾಗಿದ್ದರೂ ಕೃಷಿ ಕ್ಷೇತ್ರದಲ್ಲಿ ಲಕ್ಷಾಂತರ ಜನ ರೈತರು ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿನ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿರುವುದು ಕಹಿಯಾದ ಸತ್ಯವಾಗಿದೆ. ಈ ಕಹಿ ಸತ್ಯವನ್ನು ಸರ್ಕಾರ ಮರೆಮಾಚಲು ಯತ್ನಿಸುತ್ತಿದೆ. ದೇಶದ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳನ್ನು ಇದೇ ರೀತಿಯ ದೋಷಪೂರಿತ ದೃಷ್ಟಿಕೋನದಿಂದಲೇ ನೋಡುತ್ತಿರುವುದು ಸರ್ಕಾರದ ಅಂಕಿ ಅಂಶಗಳಿಂದಲೇ ಸ್ಪಷ್ಟವಾಗುತ್ತಿದೆ.

ಉದಾಹರಣೆಗೆ ೯೪-೯೫ರಲ್ಲಿ ಶೇ. ೯.೧ರಷ್ಟು ೯೫-೯೬ರಲ್ಲಿ ಶೇ. ೧೩ರಷ್ಟಿದ್ದ ಕೈಗಾರಿಕಾ ಅಭಿವೃದ್ಧಿ ೨೦೦೩-೦೪ರಲ್ಲಿ ಶೇ.೬.೩ರಷ್ಟಾಗಿದೆ. ಇದರೊಂದಿಗೆ ದೇಶದಲ್ಲಿ ಬಂಡವಾಳ ಹೂಡಿಕೆಯೂ ಗಣನೀಯವಾಗಿ ಕಡಿಮೆ

ಯಾಗಿದೆ. ೯೫-೯೬ರಲ್ಲಿ ಶೇ.೨೬.೩ರಷ್ಟು ಬಂಡವಾಳ ರೂಪುಗೊಂಡಿದ್ದರೆ ತದನಂತರದಲ್ಲಿ ಈ ಸಂಖ್ಯೆ ಹೆಚ್ಚಾಗಿಯೇ ಇಲ್ಲ. ಸಂಪರ್ಕ ಮಾಧ್ಯಮ ಮತ್ತು ವಾಜಪೇಯಿಯವರ ಮೆಚ್ಚಿನ ಕ್ಷೇತ್ರವಾದ ಹೈವೇ ಪ್ರಾಜೆಕ್ಟ್‌ಗಳಲ್ಲಿ ಸಾಕಷ್ಟು ಬಂಡವಾಳ ಹೂಡಿಕೆಯಾಗಿದ್ದರೂ, ಆದರ ಪರಿಣಾಮವಾಗಿ ಇತರ ಕ್ಷೇತ್ರಗಳಲ್ಲಿ ಬಂಡವಾಳ ಅಭಿವೃದ್ಧಿಯಾಗಿಲ್ಲ.

ಇದರ ಪ್ರತಿಕೂಲ ಪರಿಣಾಮವಾಗಿ ಉದ್ಯೋಗ ಸೃಷ್ಟಿಯೂ ಕುಂಠಿತಗೊಂಡಿದೆ. ಯೋಜನಾ ಆಯೋಗದ ಅಂಕಿ ಅಂಶಗಳ ಪ್ರಕಾರ ವರ್ಷಕ್ಕೆ ೮೪ಲಕ್ಷ ಉದ್ಯೋಗ ಸೃಷ್ಟಿಯಾಗುವುದಾದರೂ ನಿಜವಾದ ಅರ್ಥದಲ್ಲಿ ಸಾಮಾನ್ಯ ಜನತೆಗಾಗಿ ಯಾವುದೇ ಉದ್ಯೋಗ ದೊರೆಯುವುದಿಲ್ಲ. ನ್ಯಾಷನಲ್ ಸ್ಯಾಂಪಲ್ ಸರ್ವೆಯವರು ನಡೆಸಿರುವ ಸಮೀಕ್ಷೆ ಯಲ್ಲಿ ಅನೇಕ ತಪ್ಪುಗಳಿವೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಈ ಸಮೀಕ್ಷೆ ಮಾಡುವಾಗ ೧.೧.೨೦೦೦ದಿಂದ ೧.೧೦.೨೦೦೨ರವರೆಗಿನ ೩೩ ತಿಂಗಳಿನ ಅವಧಿಯನ್ನು ಪರಿಗಣಿಸಲಾಗುತ್ತದೆ. ಈ ಅಲ್ಪಾವಧಿಯಲ್ಲಿ ಉತ್ತಮ ಮಳೆಯಾಗಿ, ಕೃಷಿ ಉದ್ಯೋಗ ಹೆಚ್ಚಾಗಿದ್ದರೆ ಉದ್ಯೋಗ ಸೃಷ್ಟಿ ಹೆಚ್ಚಾಗಿದೆ ಎಂದು ಪ್ರತಿಪಾದಿಸಲಾಗುತ್ತದೆ.

ಆದಾಗ್ಯೂ ಈ ಉದ್ಯೋಗ ಸೃಷ್ಟಿ ಶೇ.೪೦ರಷ್ಟು ಪಟ್ಟಣಗಳಲ್ಲೇ ಕಂಡು ಬರುತ್ತದೆ. ಪಟ್ಟಣಗಳಲ್ಲಿ ಶ್ರಮಿಕರ ಸಂಖ್ಯೆ ಶೇ.೨೩ರಷ್ಟು ಮಾತ್ರ ಇರುತ್ತದೆ. ಕಳೆದ ಹಲವು ವರ್ಷಗಳಲ್ಲಿ ಮಹಿಳೆಯರ ಉದ್ಯೋಗದ ಸಂಖ್ಯೆ ವರ್ಷಕ್ಕೆ ೫ ಲಕ್ಷದಷ್ಟು ಕಡಿಮೆಯಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಉದ್ಯೋಗ ವರ್ಷಕ್ಕೆ ೧೦ ಲಕ್ಷದಷ್ಟು ಇಳಿದಿದೆ. ೧೫ ರಿಂದ ೩೪ ವರ್ಷ ವಯಸ್ಸಿನ ಮಹಿಳಾ ಉದ್ಯೋಗಿಗಳ ಸಂಖ್ಯೆ ವರ್ಷಕ್ಕೆ ೧೬ಲಕ್ಷದಷ್ಟು ಕಡಿಮೆಯಾಗಿದೆ. ಇನ್ನು ಒಟ್ಟಾರೆ ಹೇಳುವುದಾದರೆ ೧೫ ರಿಂದ ೩೪ ವರ್ಷದ ಜನರು ಶೇ.೨೫ರಷ್ಟು ಮಾತ್ರ ಉದ್ಯೋಗ ಪಡೆದಿದ್ದಾರೆ. ೬೦ ವರ್ಷಕ್ಕೆ ಮೇಲ್ಪಟ್ಟವರ ಸಂಖ್ಯೆ ಶೇ.೧೬ರಷ್ಟಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಗಳಿಸಿರುವ ದೇಶವು ತನ್ನ ಕಾರ್ಮಿಕರನ್ನು ಬೀದಿಪಾಲು ಮಾಡಿದೆ. ೨೦೦೨-೦೩ರಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ೧೧,೬೦೦ ಕೋಟಿ ರೂ.ಗಳ ಆದಾಯ ಗಳಿಸಿದೆ. ಪರಿಣಾಮವಾಗಿ ವಿದೇಶೀ ಬಂಡವಾಳ ಹೂಡಿಕೆ ೧೦೦ ಮಿಲಿಯನ್ ಡಾಲರ್‌ಗಳನ್ನು ಮೀರಿದೆ. ಕರ್ನಾಟಕದಲ್ಲೆ ಈ ಕ್ಷೇತ್ರದಲ್ಲಿ ೧,೮೪,೦೦೦ ಉದ್ಯೋಗ ಸೃಷ್ಟಿಯಾಗಿದೆ. ಈ ಉದ್ಯೋಗಗಳೆಲ್ಲವೂ ನಗರ ಕೇಂದ್ರಿತವಾಗಿದ್ದು ಅಭದ್ರತೆಯಿಂದ ಕೂಡಿದೆ. ಒಂದೆಡೆ ಈ ಅಲ್ಪ ಮಾತ್ರ ಹೆಚ್ಚಳವಾಗಿದ್ದರೆ ಇನ್ನೊಂದೆಡೆ ಸಾರ್ವಜನಿಕ ಉದ್ದಿಮೆಗಳ ಹರಾಜಿನಿಂದ ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಬೆಂಗಳೂರಿನಲ್ಲಿ ಎನ್‌ಜಿಇಎಫ್ ನಂತಹ ಲಾಭದಾಯಕ ಉದ್ದಿಮೆಯನ್ನು ಮುಚ್ಚುವ ಮೂಲಕ ಸಾವಿರಾರು ನೌಕರರು ನೌಕರಿ ಕಳೆದುಕೊಂಡಿದ್ದಾರೆ.

೧೯೯೧ರಿಂದೀಚೆಗೆ ಕರ್ನಾಟಕದಲ್ಲೇ ೩ಲಕ್ಷ ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಇನ್ನೊಂದೆಡೆ ವಿದೇಶೀ ಕಂಪೆನಿಗಳ ಪೈಪೋಟಿ ಎದುರಿಸಲಾಗದೆ ರೇಷ್ಮೆ ಕೃಷಿ, ಜವಳಿ ಉದ್ದಿಮೆಗಳಲ್ಲಿ ಲಕ್ಷಾಂತರ ಜನರು ಶೋಚನೀಯ ಸ್ಥಿತಿ ತಲುಪಿದ್ದಾರೆ. ಕರ್ನಾಟಕದ ಕೋಲಾರ ಚಿನ್ನದ ಗಣಿಯಲ್ಲಿ ೪೦೦೦ ಕಾರ್ಮಿಕರು ೩ ವರ್ಷದಿಂದ ಸಂಬಳ ಪಡೆಯದೆ ಬಳಲುತ್ತಿದ್ದು ಎರಡು ಲಕ್ಷ ಜನ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಮಹಾರಾಷ್ಟ್ರದಲ್ಲಿ ೪೦ ಲಕ್ಷಕ್ಕೂ ಹೆಚ್ಚು ಜನ ಜವಳಿ ಕಾರ್ಮಿಕರು ಸರಿಯಾದ ವೇತನವಿಲ್ಲದೆ ಬಳಲುತ್ತಿದ್ದಾರೆ, ಸಾವಿರಾರು ಜನ ಪ್ರತಿದಿನ ನೌಕರಿಗಾಗಿ ಮುಂಬೈಗೆ ವಲಸೆ ಹೋಗಲಾರಂಭಿಸಿದ್ದಾರೆ.

ಕೈಗಾರಿಕಾ ಕ್ಷೇತ್ರದಲ್ಲಿ ಈ ಬವಣೆಯಾದರೆ ಗ್ರಾಮೀಣ ಕೃಷಿ ಕ್ಷೇತ್ರದಲ್ಲಿ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ಎನ್‌ಡಿಎ ಸರ್ಕಾರದ ಐದು ವರ್ಷಗಳ ಆಡಳಿತಾವಧಿಯ ಪ್ರಮುಖ ಕೊಡುಗೆ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ಹಸಿವಿನ ಪ್ರಮಾಣ ಕಳೆದ ೫೦ ವರ್ಷಗಳಲ್ಲಿ ಎಂದೂ ಕಂಡಿರದಷ್ಟು ಆಗಿರುವುದು, ಕಳೆದ ಮೂರು ವರ್ಷಗಳಲ್ಲಿನ ಆಹಾರ ಉತ್ಪಾದನೆ ನೋಡಿದರೆ ರೈತರ ಆತ್ಮಹತ್ಯೆಗಳು ಹಸಿವಿನ ಸಾವುಗಳು ಅಚ್ಚರಿ ತರುವುದಿಲ್ಲ. ಆಹಾರ ಧಾನ್ಯಗಳ ಪರ್ ಕ್ಯಾಪಿಟಾ ಉತ್ಪಾದನೆ ಹಾಗೂ ಲಭ್ಯತೆ ೭ಕಿಲೋ ಗ್ರಾಂನಷ್ಟು ಕಡಿಮೆಯಾಗಿದೆ. ಈ ಪ್ರಕ್ರಿಯೆಗೆ ಗ್ರಾಮೀಣ ಪ್ರದೇಶದ ಜನರಲ್ಲಿನ ಕೊಳ್ಳುವಶಕ್ತಿ ಕಡಿಮೆಯಾಗಿರುವುದೇ ಮುಖ್ಯ ಕಾರಣವಾಗಿದೆ. ಇದೇ ವೇಳೆ ಸರ್ಕಾರದ ಉಗ್ರಾಣಗಳಲ್ಲಿ ಶೇಖರಿಸಿರುವ ಆಹಾರ ಧಾನ್ಯಗಳ ಮೊತ್ತ ೨೦೦೨ರಲ್ಲಿ ಶೇ.೬೩.೧ಮಿಲಿಯನ್ ಟನ್‌ಗಳಾಗಿತ್ತು. ಇದು ಅಗತ್ಯತೆಗಿಂತಲೂ ೪೦ ದಶಲಕ್ಷ ಟನ್ ಹೆಚ್ಚಾಗಿದೆ. ಇಷ್ಟು ಸಾಲದೆಂಬಂತೆ ಎನ್‌ಡಿಎ ಸರ್ಕಾರವು ೨೦೦೨ ಜೂನ್‌ನಿಂದ ೨೦೦೩ರ ಜೂನ್ ಅವಧಿಯಲ್ಲಿ ೧೨.೪ದಶಲಕ್ಷ ಟನ್ ಆಹಾರ ಧಾನ್ಯಗಳನ್ನು ರಫ್ತು ಮಾಡಿದೆ. ತದ ನಂತರ ತಿಂಗಳಿಗೆ ಒಂದು ದಶಲಕ್ಷ ಟನ್‌ನಂತೆ ರಫ್ತು ಮಾಡಿದೆ. ೨೦೦೩ರ ನವೆಂಬರ್ ವೇಳೆಗೆ ರಫ್ತಿನ ಪ್ರಮಾಣ ೧೬ ದಶಲಕ್ಷ ಟನ್‌ಗಳಷ್ಟಾಗಿತ್ತು.

ಸ್ವತಂತ್ರ ಭಾರತದಲ್ಲಿ ಎಂದೂ ಯಾವ ಸರ್ಕಾರವೂ ಈ ಪ್ರಮಾಣದಲ್ಲಿ ಆಹಾರಧಾನ್ಯ ರಫ್ತು ಮಾಡಿರಲಿಲ್ಲ. ಅಷ್ಟೇ ಅಲ್ಲದೆ ಇಲ್ಲಿ ಜನರು ಒಂದು ಕೆಜಿ ಅಕ್ಕಿಗೆ ೬.೪೦ರೂ.ಗಳನ್ನು ನೀಡಿದರೆ ಸರ್ಕಾರ ೫.೪೦ರ ದರದಲ್ಲಿ ರಫ್ತು ಮಾಡಿದೆ. ಲಕ್ಷಾಂತರ ಜನರು ಆಹಾರ ಇಲ್ಲದೆ ಹಸಿವಿನಿಂದ ಸಾಯುತ್ತಿರುವ ಸಮಯದಲ್ಲಿ ವಿದೇಶೀ ವಿನಿಮಯ ಗಳಿಸುವ ದೃಷ್ಟಿಯಿಂದ ಎನ್‌ಡಿಎ ಸರ್ಕಾರ ಈ ಘೋರ ಅಪರಾಧವೆಸಗಿದೆ. ಇದನ್ನೇ ದೊಡ್ಡ ಸಾಧನೆ ಎಂಬಂತೆ ಜಾಹೀರಾತುಗಳನ್ನೂ ನೀಡಿದೆ.

ಕೃಷಿ ಕ್ಷೇತ್ರದಲ್ಲೂ ರೈತರು ಎನ್‌ಡಿಎ ಸರ್ಕಾರದ ನೀತಿಗಳಿಂದ ಆಹಾರ ನಷ್ಟ ಅನುಭವಿಸಿದ್ದಾರೆ. ಪಂಜಾಬ್ ಕ್ಷೇತ್ರದ ಶ್ರೀಮಂತ ರೈತರುಗಳೇ ತಮ್ಮ ಸಾಮಾಜಿಕ ವೆಚ್ಚಗಳಿಗಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಒದಗಿದೆ. ಒಂದು ಅಧ್ಯಯನದ ಪ್ರಕಾರ ಪಂಜಾಬ್ ರೈತರುಗಳು ಒಟ್ಟಾರೆ ೫೬೦೦ಕೋಟಿ ರೂ.ಗಳಷ್ಟು ಸಾಲದ ಹೊರೆ ಹೊತ್ತಿದ್ದಾರೆ. ಅಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಯುವಕರು ದುಶ್ಚಟಗಳಿಗೆ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಈ ಪರಿಸ್ಥಿತಿ ಎಲ್ಲಾ ರಾಜ್ಯಗಳಲ್ಲೂ ಕಂಡುಬರುತ್ತದೆ. ಆನ್‌ಲೈನ್ ಲಾಟರಿ ಯಿಂದ ಸಾವಿರಾರು ಯುವಕರು ತಪ್ಪು ಹಾದಿ ಹಿಡಿದು ನಾಶ ವಾಗಿದ್ದಾರೆ. ಕರ್ನಾಟಕದಲ್ಲೂ ರೈತರ ಪಾಡು ಹೇಳತೀರ ದಾಗಿದೆ. ಒಂದು ಸಮಯದಲ್ಲಿ ಶ್ರೀಮಂತಿಕೆಯಿಂದ ಬೀಗುತ್ತಿದ್ದ ಕೊಡಗಿನ ಕಾಫಿ ಬೆಳೆಗಾರರು, ಮಂಡ್ಯದ ಕಬ್ಬು ಬೆಳೆ ಗಾರರು ಕೋಲಾರದ ರೇಷ್ಮೆ ಬೆಳೆಗಾರರು, ಹಾಸನದ ತೆಂಗು ಬೆಳೆಗಾರರು ಇಂದು ಬೀದಿಪಾಲಾಗುವ ಸ್ಥಿತಿ ತಲುಪಿದ್ದಾರೆ. ಖಾಸಗಿ ಲೇವಾದೇವಿಯವರ ಸಾಲದಿಂದ ಬೇಸತ್ತು ೪೦೦ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎನ್‌ಡಿಎ ಸರ್ಕಾರದ ಹೊಸ ಆರ್ಥಿಕ ನೀತಿಗಳ ಫಲವಾಗಿ ಸಾರ್ವಜನಿಕ ಬ್ಯಾಂಕುಗಳಲ್ಲೂ ರೈತರಿಗೆ ಕೃಷಿ ಸಾಲ ಸರಿಯಾದ ಪ್ರಮಾಣದಲ್ಲಿ ದೊರೆಯುತ್ತಿಲ್ಲ.

ಇಷ್ಟೆಲ್ಲಾ ನ್ಯೂನತೆಗಳಿದ್ದರೂ ಸರ್ಕಾರವು ಆಹಾರ ಧಾನ್ಯದ ಉತ್ಪಾದನೆ ಹೆಚ್ಚಳ ಕಂಡಿದೆ ಎಂದು ಪ್ರಚಾರ ಮಾಡುತ್ತಿರುವುದು ಹಾಸ್ಯಾಸ್ಪದವೆನಿಸುತ್ತದೆ.

ಇದು ಪ್ರಕಾಶಿಸುತ್ತಿರುವ ಭಾರತದ ಸ್ಥೂಲ ಚಿತ್ರಣ ಎಂದು ಹೇಳಬಹುದು. ಒಂದೆಡೆ ಸಾವಿರಾರು ಶ್ರೀಮಂತರು ತಮ್ಮ ದೇಹದ ತೂಕ ಇಳಿಸಿಕೊಳ್ಳಲು ಶ್ರಮ ಪಡುತ್ತಿದ್ದಾರೆ. ಇನ್ನೊಂದೆಡೆ ಮಿಲಿಯಾಂತರ ನಿರ್ಗತಿಕರು ಒಪ್ಪತ್ತಿನ ಕೂಳು ಇಲ್ಲದೆ ಪರದಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿನ ಬಡತನ ಅನೇಕ ಮಹಿಳೆಯರನ್ನು ಯುವತಿಯರನ್ನು

೧೯೯೧ರಿಂದೀಚೆಗೆ ಕರ್ನಾಟಕದಲ್ಲೇ ೩ಲಕ್ಷ ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಇನ್ನೊಂದೆಡೆ ವಿದೇಶೀ ಕಂಪೆನಿಗಳ ಪೈಪೋಟಿ ಎದುರಿಸಲಾಗದೆ ರೇಷ್ಮೆ ಕೃಷಿ, ಜವಳಿ ಉದ್ದಿಮೆಗಳಲ್ಲಿ ಲಕ್ಷಾಂತರ ಜನರು ಶೋಚನೀಯ ಸ್ಥಿತಿ ತಲುಪಿದ್ದಾರೆ. ಕರ್ನಾಟಕದ ಕೋಲಾರ ಚಿನ್ನದ ಗಣಿಯಲ್ಲಿ ೪೦೦೦ ಕಾರ್ಮಿಕರು ೩ ವರ್ಷದಿಂದ ಸಂಬಳ ಪಡೆಯದೆ ಬಳಲುತ್ತಿದ್ದು, ಎರಡು ಲಕ್ಷ ಜನ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಮಹಾರಾಷ್ಟ್ರದಲ್ಲಿ ೪೦ ಲಕ್ಷಕ್ಕೂ ಹೆಚ್ಚು ಜನ ಜವಳಿ ಕಾರ್ಮಿಕರು ಸರಿಯಾದ ವೇತನವಿಲ್ಲದೆ ಬಳಲುತ್ತಿದ್ದಾರೆ, ಸಾವಿರಾರು ಜನ ಪ್ರತಿದಿನ ನೌಕರಿಗಾಗಿ ಮುಂಬೈಗೆ ವಲಸೆ ಹೋಗಲಾರಂಭಿಸಿದ್ದಾರೆ.

ವೇಶ್ಯಾವೃತ್ತಿಗೆ ಮಾರುತ್ತಿವೆ. ಒಂದೆಡೆ ಜನರು ಕುಡಿಯುವ ನೀರಿಗಾಗಿ ಹಗಲು ರಾತ್ರಿ ಪರದಾಡುತ್ತಿದ್ದರೆ ಇನ್ನೊಂದೆಡೆ ವಾಟರ್ ಪಾರ್ಕ್‌ಗಳಲ್ಲಿ, ಫ್ಯಾಂಟಸಿ ಪಾರ್ಕ್‌ಗಳಲ್ಲಿ ಲಕ್ಷಾಂತರ ಲೀಟರ್‌ಗಳಷ್ಟು ನೀರು ವ್ಯರ್ಥವಾಗುತ್ತಿದೆ. ಮುಂಬೈ ನಗರದಲ್ಲಿ ಕಳೆದ ವರ್ಷ ಸಾವಿರಾರು ಮಹಿಳೆಯರು ನೀರಿಗಾಗಿ ಸಾಲು ಸಾಲಾಗಿ ನಿಂತಿದ್ದುದು ಸಾಮಾನ್ಯ ದೃಶ್ಯವಾಗಿತ್ತು.

ಅದೇ ವೇಳೆ ೨೪ ವಾಟರ್ ಪಾರ್ಕ್‌ಗಳಲ್ಲಿ ದಿನಕ್ಕೆ ೫೦ ಬಿಲಿಯನ್ ಲೀಟರ್ ನೀರು ವ್ಯಯವಾಗುತ್ತಿತ್ತು. ರಾಜಸ್ಥಾನದಂತಹ ಮರುಭೂಮಿಯಲ್ಲೂ ಹೆಚ್ಚು ವಾಟರ್ ಪಾರ್ಕ್‌ಗಳು ಗಾಲ್ಫ್ ಕೋರ್ಟ್‌ಗಳು ತಲೆ ಎತ್ತುತ್ತಿವೆ. ಒಂದು ಗಾಲ್ಫ್ ಕೋರ್ಟ್ ಮಾಡಲು ಕನಿಷ್ಠ ದಿನಂಪ್ರತಿ ೨.೫ ದಶಲಕ್ಷ ಲೀಟರ್ ನೀರು ಬೇಕಾಗುತ್ತದೆ. ಈ ನೀರಿನಲ್ಲಿ ಒಂದು ರಾಜ್ಯದ ಒಂದು ಲಕ್ಷ ಗ್ರಾಮೀಣ ಜನತೆ ಇಡೀ ಬೇಸಿಗೆ ಕಳೆಯಬಹುದು. ಇದು ಪ್ರಕಾಶಿಸುತ್ತಿರುವ ಭಾರತದ ಇನ್ನೊಂದು ಮುಖ. ಜನತೆಗೆ ಕುಡಿಯಲು ನೀರು ಒದಗಿಸದಿದ್ದರೂ, ಪೆಪ್ಸಿ ಕೋಲಾಗಳಿಗೆ ಲೀಟರಿಗೆ ೨೫ ಪೈಸೆಯಂತೆ ನೀರನ್ನು ಮಾರಾಟ ಮಾಡಲಾಗುತ್ತದೆ. ಅದೇ ನೀರನ್ನು ಜನರಿಗೆ ಲೀಟರಿಗೆ ೧೨ ರೂಪಾಯಿಯಂತೆ ಮಾರಲಾಗುತ್ತದೆ. ಇದೂ ಪ್ರಕಾಶಿಸುತ್ತಿರುವ ಭಾರತದ ಇನ್ನೊಂದು ಅಂಶ.

ಒಟ್ಟಾರೆ ಹೇಳುವುದಾದರೆ ಎನ್‌ಡಿಎ ಸರ್ಕಾರವು ಹೇಳುವಂತೆ, ಪ್ರಚಾರ ಮಾಡುವಂತೆ ಭಾರತ ಪ್ರಕಾಶಿಸುತ್ತಿಲ್ಲ. ಇಂದು ವಿದೇಶಿ ವಿನಿಮಯವು ೧೦೦ ಬಿಲಿಯನ್ ಡಾಲರ್‌ಗಳಷ್ಟು ಆಗಿದ್ದರೆ ಅದರಿಂದ ಸರ್ಕಾರಕ್ಕೆ ತಲೆಬೇನೆ ಜಾಸ್ತಿ ಎಂದು ಹೇಳಬಹುದು. ಏಕೆಂದರೆ ಭಾರತೀಯ ರೂಪಾಯಿಯ ಮೌಲ್ಯ ಹೆಚ್ಚಾದರೆ ರಫ್ತು ಆದಾಯ ಕಡಿಮೆಯಾಗುತ್ತದೆ. ಇದನ್ನು ತಪ್ಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯವನ್ನು ಕೊಂಡುಕೊಳ್ಳುತ್ತದೆ. ಈಗ ಅಮೇರಿಕಾ ಭಾರತೀಯ ರೂಪಾಯಿಯನ್ನು ಪುನರ್ ಮೌಲ್ಯ ಮಾಡಲು ಒತ್ತಾಯಿಸುತ್ತಿದೆ. ಅಷ್ಟೇ ಅಲ್ಲದೆ ಈ ವಿದೇಶೀ ವಿನಿಮಯ ಯಾವುದೇ ಕ್ಷಣದಲ್ಲಿ ಪರಾರಿಯಾಗುವ ಸಾಧ್ಯತೆ ಹೆಚ್ಚಾಗಿದೆ. ಭಾರತ ಪ್ರಕಾಶಿಸುತ್ತಿಲ್ಲ ಎಂದು ತಿಳಿದ ಕೂಡಲೇ ವಿದೇಶೀ ಬಂಡವಾಳ ಹೂಡಿಕೆದಾರರು ಮತ್ತು ಭಾಜಪ ಸರ್ಕಾರ ಪೂಜಿಸುವ ಅನಿವಾಸಿ ಭಾರತೀಯರು ತಮ್ಮ ಹಣವನ್ನು ಬೇರೆ ದೇಶಗಳಿಗೆ ರವಾನಿಸುತ್ತಾರೆ. ಆಗ ಪುನಃ ಭಾರತ ಸರ್ಕಾರ ೧೯೯೧ರಲ್ಲಿ ಆದಂತೆ ಭಿಕ್ಷೆ ಬೇಡಬೇಕಾಗುತ್ತದೆ. ಈ ಎಲ್ಲಾ ಸೂಕ್ಷ್ಮ ಅಂಶಗಳನ್ನು ಸರ್ಕಾರವು ಜನರಿಂದ ಮರೆ ಮಾಚುತ್ತಿದೆ.

ಕೃಷಿ, ಆರ್ಥಿಕತೆ, ಗ್ರಾಮೀಣಾಭಿವೃದ್ಧಿ, ಆಹಾರ ಧಾನ್ಯ ಉತ್ಪಾದನೆ, ಉದ್ಯೋಗ, ಕೈಗಾರಿಕೆ ಎಲ್ಲಾ ಕ್ಷೇತ್ರಗಳನ್ನು ಹಾಳುಗೆಡವಿರುವ ಎನ್‌ಡಿಎ ಸರ್ಕಾರ ಭಾರತೀಯ ಸಮಾಜದ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಸನ್ನದ್ಧವಾಗಿದೆ. ದೇಶದಲ್ಲಿನ ಅಲ್ಪಸಂಖ್ಯಾತರು, ದಲಿತರು, ಆದಿವಾಸಿಗಳು, ನಿರಂತರವಾದ ಅನಿಶ್ಚಿತತೆಯಲ್ಲಿ ಬಾಳುವಂತಹ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಗುಜರಾತ್‌ನ ಹತ್ಯಾಕಾಂಡದ ನಂತರದಲ್ಲಿ ಸಂಘ ಪರಿವಾರವು ವಾಜಪೇಯಿ ಸರ್ಕಾರದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದೆ. ಗುಜರಾತ್ ಹತ್ಯಾಕಾಂಡವನ್ನು ಒಂದು ಪ್ರಯೋಗವಾಗಿ ಪರಿಗಣಿಸಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಭಾಜಪ ಎಲ್ಲಾ ರಾಜ್ಯಗಳಲ್ಲಿ ತನ್ನ ಕೋಮುವಾದಿ ಬಾಹುಗಳನ್ನು ಚಾಚಲಾರಂಭಿಸಿದೆ.

ಸೋಜಿಗವೆಂದರೆ...

ಸೋಜಿಗವೆಂದರೆ ಇದು
ಎತ್ತರೆತ್ತರ ಗೋಡೆ ಕಟ್ಟಿಕೊಂಡವರು ಸುತ್ತ
ಅಲ್ಲಲ್ಲಿ ಕಿಟಕಿ. ಬಾಗಿಲು ಕೊರೆದಿಟ್ಟದ್ದು
ಆ ಗೋಡೆಗಳಿಗೆ ನಮೂನೆವಾರು
ಬಣ್ಣ ಬಳಿದುಕೊಂಡದ್ದು
ಕಿಟಕಿ-ಬಾಗಿಲುಗಳಲ್ಲಿ ಕೆತ್ತನೆ
ಕುಸುರಿ ಮೂಡಿಸಿದ್ದು
ಗೋಡೆ-ಗೋಡೆಗಳಲ್ಲಿ ವರ್ಣವರ್ಣದ
ಚಿತ್ರಪಟಗಳ ತೂಗಿದ್ದು



ಸೋಜಿಗವೆಂದರೆ ಇದು
ಬಯಲಲ್ಲಿ ನಿಂದವರು
ಈ ಗೋಡೆಗಳ ಎತ್ತರ ಅಳೆದದ್ದು
ಆಳ ಬಗೆದದ್ದು
ಬಣ್ಣಗಳ ಗುಟ್ಟು ಅರಿತದ್ದು
ಕುಸುರಿ ಕೆಲಸದ ಟೊಳ್ಳು ಕಂಡದ್ದು.

ಸೋಜಿಗವೆಂದರೆ ಇದು
ಮುಖವಿಲ್ಲದ ಜನ
ಕೋಣೆಗೊಂದರಂತೆ ಪ್ರತಿಫಲಿಸುವ
ಕನ್ನಡಿ ಜೋಡಿಸಿದ್ದು
ಮತ್ತು
ಬಯಲ ಜನ ಅದೇ ಕನ್ನಡಿಯಲ್ಲಿ
ಮುಖವಿಲ್ಲದವರ ಮುಖವಾಡಗಳ
ಪತ್ತೆ ಹಚ್ಚಿದ್ದು.

○ ಪ್ರಮೀಳಾ ಚೊಕ್ಕಾಡಿ

ಆಧುನಿಕ ನೀರೋ ಎಂದು ಸರ್ವೋಚ್ಚ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿರುವ ನರೇಂದ್ರ ಮೋದಿಯವರಂತಹ ಫ್ಯಾಸಿಸ್ಟ್‌ಗಳನ್ನು ಹಾಡಿ ಹೊಗಳುವ ಉದಾರವಾದಿ ಮುಖವಾಡದ ವಾಜಪೇಯಿಯನ್ನು ಎಲ್ಲಾ ಮಾಧ್ಯಮಗಳೂ ಮಹಾನ್ ನೇತಾರರಂತೆ ಚಿತ್ರಿಸುತ್ತಿವೆ. ಪ್ರಧಾನಿ ಪಟ್ಟ ಪಡೆಯಲು ಎಲ್ಲಾ ಸಿದ್ಧಾಂತಗಳನ್ನೂ ಗಾಳಿಗೆ ತೂರುವ, ಇಂದಿಗೂ ಫ್ಯಾಸಿಸ್ಟ್ ಸಂಘ ಪರಿವಾರದಲ್ಲಿರುವ ಅಟಲ್ ಬಿಹಾರಿ ವಾಜಪೇಯಿಯವರನ್ನು ಮಹಾನ್ ಪ್ರಜಾತಂತ್ರವಾದಿ ಎಂದು ಚಿತ್ರಿಸುವ ಮೂಲಕ ಮಾಧ್ಯಮಗಳು ಜನತೆಗೆ ದ್ರೋಹ ಬಗೆಯುತ್ತಿವೆ. ಮತದಾರರಿಗೆ ಸೀರೆ ಹಂಚಿ ವೋಟುಗಳನ್ನು ಗಳಿಸುವ ತಂತ್ರವನ್ನು ವಾಜಪೇಯಿಯವರೂ ಅನುಸರಿಸುತ್ತಾರೆಂದು ಲಖನೌದ ಸೀರೆ ದುರಂತ ಸಾಬೀತು ಪಡಿಸಿದೆ.

ಇನ್ನೊಂದೆಡೆ ಆಧುನಿಕ ಗೋಲ್ವಾಲ್ಕರ್ ಆದ ಜಾರ್ಜ್ ಫರ್ನಾಂಡಿಸ್‌ರವರು ಎನ್‌ಡಿಎ ಪ್ರಣಾಳಿಕೆಯಲ್ಲೇ ಅಯೋಧ್ಯೆ, ಗೋಹತ್ಯಾ ನಿಷೇಧವನ್ನು ಸೇರಿಸುವ ಮೂಲಕ, ಸಂಘ ಪರಿವಾರದವರನ್ನು ನಾಚಿಕೊಳ್ಳುವಂತೆ ಮಾಡಿದ್ದಾರೆ. ಭಾಜಪ ಆಗಲಿ, ಸಂಘ ಪರಿವಾರವಾಗಲೀ ಅಯೋಧ್ಯಾ ವಿವಾದಕ್ಕೆ ಯಾವ ರೀತಿಯ ಪರಿಹಾರ ಕಂಡುಕೊಳ್ಳಬಹುದೆಂದು ಹೇಳುವ ಅವಶ್ಯಕತೆ ಇಲ್ಲ. ಆದರೆ ಫರ್ನಾಂಡಿಸ್, ಶರದ್ ಯಾದವ್‌ರಂತಹ ಸಮಾಜವಾದಿಗಳಿಗೆ ಭಾಜಪದ ಕೋಮುವಾದಿ ದೃಷ್ಟಿಕೋನದಲ್ಲಿ ಹೆಚ್ಚು ಭರವಸೆ ಇದ್ದಂತೆ ತೋರುತ್ತದೆ. ಅರಿಫ್ ಮೊಹಮದ್ ಖಾನ್‌ನಂತಹ ಮುಸ್ಲಿಂ ನಾಯಕರು ಭಾಜಪ ಸೇರಿರುವುದು, ಬುಖಾರಿಯಂತಹ ಮೂಲಭೂತವಾದಿಗಳು ಭಾಜಪ ಕಾಂಗ್ರೆಸ್‌ಗಿಂತಲೂ ಮೇಲು ಎಂದು ಹೇಳಿರುವುದು ಮುಸ್ಲಿಂ ಸಮುದಾಯದಲ್ಲಿನ ಭೀತಿಯ ಸೂಚಕವಾಗಿದೆ.

ಗುಜರಾತ್ ಘಟನೆಗಳ ನಂತರದಲ್ಲಿ ಮುಸ್ಲಿಂ ಸಮುದಾಯದಲ್ಲಿ ಉಂಟಾಗಿರುವ ಪರಕೀಯತಾ ಭಾವನೆಯನ್ನು ಭಾಜಪ ತನ್ನ ಲಾಭಕ್ಕಾಗಿ ಉಪಯೋಗಿಸಿಕೊಳ್ಳಲು ಸಜ್ಜಾಗಿದೆ. ಹಾಗಾಗಿಯೇ ಅಡ್ವಾಣಿಯವರಂತಹ ಕಟ್ಟಾ ಸಂಪ್ರದಾಯವಾದಿಯೂ ಸಹ ಮುಸ್ಲಿಮರ ಪರವಾಗಿ, ಅವರ ಶಿಕ್ಷಣದ ಪರವಾಗಿ ಮಾತನಾಡುತ್ತಿದ್ದಾರೆ. ಆದರೆ ಕೆಲವು ರಾಜಕೀಯ ನಾಯಕರು ತಮ್ಮ ಸಾಮಾಜಿಕ ರಾಜಕೀಯ ಸ್ಥಾನಮಾನ ಉಳಿಸಿಕೊಳ್ಳಲು, ಭಾಜಪವನ್ನು ಬೆಂಬಲಿಸುವ ಮಾತ್ರಕ್ಕೆ ಇಡೀ ಮುಸ್ಲಿಂ ಸಮುದಾಯ ಬೆಂಬಲಿಸುವುದೆಂದು ಅರ್ಥವಲ್ಲ. ಭಾಜಪದ ಫ್ಯಾಸಿಸ್ಟ್ ಸ್ವರೂಪವನ್ನು ಈ ದೇಶದ ದುರ್ಬಲರೆಲ್ಲರೂ ಚೆನ್ನಾಗಿ ಅರಿತಿದ್ದಾರೆ.

ಭಾಜಪ-ಸಂಘ ಪರಿವಾರದವರಿಗೆ ಭಾರತ ಪ್ರಕಾಶಿಸುತ್ತಿರುವಂತೆ ಕಂಡಿರಬಹುದು. ಆದರೆ ಈ ದೇಶದ ಅಸಂಖ್ಯಾತ ದಲಿತರಿಗೆ ದುಡಿಯುವ ವರ್ಗಗಳಿಗೆ, ರೈತರಿಗೆ, ಕೃಷಿ ಕಾರ್ಮಿಕರಿಗೆ, ಮಹಿಳೆಯರಿಗೆ ಭವಿಷ್ಯ ಕರಾಳವಾಗಿಯೇ ಇದೆ. ಭಾಜಪದ ಬೆನ್ನೆಲುಬಾದ ಶ್ರೀಮಂತ-ಮಧ್ಯಮ ವರ್ಗದವರಿಗೆ ಭಾರತ ಪ್ರಕಾಶಿಸುತ್ತಿದೆ. ಬಹುಸಂಖ್ಯಾತ ಜನತೆಗೆ ಫ್ಯಾಸಿಸಂ ಭೂತ ಕಾಡುತ್ತಿದೆ. □

ಇರಾಕಿನ ಪ್ರಜೆಗಳಿಗೆ ತಮ್ಮ ಸಂಪದ್ಭರಿತ ತೈಲ ನಿಕ್ಷೇಪಗಳನ್ನು ಹಗಲು ದರೋಡೆ ಮಾಡುತ್ತಿರುವ ಸಾಮ್ರಾಜ್ಯಶಾಹಿಗಳ ಹುನ್ನಾರದ ಬಗ್ಗೆ ಈಗ ಅರ್ಥವಾಗುತ್ತಿದೆ. ಸಮೂಹ ವಿನಾಶ ಅಸ್ತ್ರಗಳ ತಪಾಸಣೆ, ಸರ್ವಾಧಿಕಾರಿ ಸದ್ದಾಂ ಹುಸೇನನನ್ನು ಕೆಳಗಿಳಿಸುವುದು, ಅಮೆರಿಕ ಮತ್ತು ಬ್ರಿಟನ್ನುಗಳಿಗೆ ಕೇವಲ ಒಂದು ನೆಪ. ಅವರಿಗೆ ಬೇಕಾಗಿದ್ದುದು ತೈಲದ ಮೇಲಿನ ಏಕಸ್ವಾಮ್ಯತೆ ಎಂಬ ಮಾತು ಈಗ ಅಲ್ಲಿನ ಮಕ್ಕಳಿಗೂ ಗೊತ್ತಾಗುತ್ತಿದೆ. ಅಮೆರಿಕ, ಬ್ರಿಟನ್, ಫ್ರೆಂಚ್, ಜರ್ಮನಿ, ರಷ್ಯಾ ಮುಂತಾದ ಅನೇಕ ರಾಷ್ಟ್ರಗಳ ಎಣ್ಣೆ ಕಂಪನಿಗಳು ಅಲ್ಲಿ ಬೀಡುಬಿಟ್ಟಿವೆ. ಲಾಭದ ದರವನ್ನು ಹೆಚ್ಚಿಸಿ ಕೊಂಡು ಡಾಲರ್ ಗಂಟು ಕಟ್ಟಿಕೊಳ್ಳುತ್ತಿವೆ. ಇತ್ತ ದಶಕಗಳ ಕಾಲ ದಿಗ್ಬಂಧನಕ್ಕೆ ಗುರಿಯಾದುದರಿಂದ ಇರಾಕಿನ ಪ್ರಜೆಗಳಿಗೆ ಅಗತ್ಯ ವಸ್ತುಗಳು, ಔಷಧೀಯ ಸಾಮಗ್ರಿಗಳು, ಶುದ್ಧ ನೀರು ದುರ್ಲಭ್ಯವಾಗಿ ಅವರು ಸಂಕಟಕ್ಕೀಡಾಗುತ್ತಿದ್ದಾರೆ. ಸದ್ದಾಮನ ಕಾಲದಲ್ಲಿಯೇ ಲಕ್ಷಾಂತರ ಹಸುಮಕ್ಕಳು, ಬಾಣಂತಿಯರು, ವೃದ್ಧರು ಸಾವಿಗೀಡಾಗಿದ್ದರು. ಸರ್ವಾಧಿಕಾರಿಯನ್ನು ತೊಲಗಿಸಿ ಎಂದು ಅಮೆರಿಕ ಮಿತ್ರಪಡೆಗಳನ್ನು ಅಂದು ಸ್ವಾಗತಿಸಿದ ಜನರೇ ಇಂದು 'ಇರಾಕನ್ನು ಬಿಟ್ಟು ತೊಲಗಿ' ಎಂದು ಮಾನವ ಬಾಂಬ್‌ಗಳಾಗಿ ಸಿಡಿಯುತ್ತಿದ್ದಾರೆ. ವಿದೇಶಿ ಸೈನಿಕರ ಹಾಗೂ ದೇಶೀ ಬಂಡುಕೋರರ ನಡುವಿನ ಅವಘಡಗಳಲ್ಲಿ ಸಿಲುಕಿದ ಅಮಾಯಕ ಇರಾಕಿ ಪ್ರಜೆಗಳ ಶವಗಳು ಪ್ರತಿನಿತ್ಯ ಮಾರ್ಕೆಟ್ಟು ಮಸೀದಿಗಳ ಬಳಿ ಉರುಳುತ್ತಿವೆ. ಕಳೆದ ವಾರದಲ್ಲಿ ೩೦೦ ಜನ ಸತ್ತಿದ್ದಾರೆ.

ಧರೆ ಹತ್ತಿ ಉರಿದರೆ !

ಸಾಮ್ರಾಜ್ಯಶಾಹಿಗಳ ಪರಿಭಾಷೆಯಲ್ಲಿ ಇಂಥ ದಂಗೆಗಳು ಭಯೋತ್ಪಾದನೆ ಎಂದು ಕರೆಸಿಕೊಳ್ಳುತ್ತವೆ. ಆದರೆ ಒಂದು ರಾಷ್ಟ್ರದ ಸಾರ್ವಭೌಮತೆಯ ದೃಷ್ಟಿಯಲ್ಲಿ ನೋಡಿದರೆ ಇದು ವಿದೇಶೀ ಶಕ್ತಿಗಳ ವಿರುದ್ಧ ತನ್ನ ಸ್ವಾತಂತ್ರ್ಯಕ್ಕಾಗಿ ನಡೆಯುವ ಹೋರಾಟವೆನಿಸಿಕೊಳ್ಳುತ್ತದೆ. ಇದನ್ನು ಒಂದು ನಿದರ್ಶನದ ಮೂಲಕ ಹೇಳುವುದಾದರೆ ೧೮೫೭ರಲ್ಲಿ ನಡೆದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಬ್ರಿಟಿಷ್ ಇತಿಹಾಸಕಾರರ ಕಣ್ಣಿಗೆ 'ಸಿಪಾಯಿ ದಂಗೆ'ಯಾಗಿ ಕಂಡಿತು. ಅಂತೂ ಬಲಾಢ್ಯ ಶಕ್ತಿಗಳ ಶೋಷಣೆಯ ವಿರುದ್ಧ ತಿರುಗಿ ಬಿದ್ದವರನ್ನು ಭಯೋತ್ಪಾದಕರು ಎಂದು ಹಣೆಪಟ್ಟಿ ನೀಡಿ ಬಗ್ಗು ಬಡಿಯಲಾಗುತ್ತದೆ. ಅಲ್ಲದೆ ಜಗತ್ತಿನ ಎದುರು ಅವರು ಅರಾಜಕತೆಯನ್ನು ಹತ್ತಿಕ್ಕುವ, ಪ್ರಜಾತಂತ್ರವನ್ನು ನೆಲೆಗೊಳಿಸುವ ಸಂಪನ್ನ ಮತಿಗಳಂತೆ ಮಾತನಾಡುತ್ತಾರೆ. ಇದಕ್ಕೆ ಇತ್ತೀಚಿನ ನಿದರ್ಶನಗಳು ಆಫ್ಘಾನಿಸ್ಥಾನ, ಇರಾಕ್, ಪ್ಯಾಲಿಸ್ಟೈನ್- ಈ ಸಾರ್ವಭೌಮತೆಯ ವಿರುದ್ಧ ಸಾಮ್ರಾಜ್ಯಶಾಹಿಗಳು ಪ್ರದರ್ಶಿಸಿದ ರಾಜಕೀಯ ನಾಟಕ. ಇವೆಲ್ಲ ಏಕಪಕ್ಷೀಯ ಯುದ್ಧ ಕಾರ್‍ಯಾಚರಣೆಯೇ. ಆಫ್ಘಾನಿಸ್ಥಾನದ ಕಥೆಯನ್ನು ಮುಗಿಸಲಾಗಿದೆ.

ಇನ್ನು ಪ್ಯಾಲಿಸ್ಟೈನ್ ದೇಶದ ಪರಿಸ್ಥಿತಿಯಂತೂ ತೀರ ಶೋಚನೀಯ. ಇಸ್ರೇಲ್ ಸೈನ್ಯ ಗಾಜಾಪಟ್ಟಿಯ ಮೇಲೆ ಮನಬಂದಂತೆ ವರ್ತಿಸುತ್ತಿದೆ ಮತ್ತು ಅದನ್ನು ಸುತ್ತುವರಿದು ನೆಲೆ ನಿಂತಿದೆ. ನೂರಾರು ಜನರನ್ನು ಹತ್ಯೆ ಮಾಡಿದ ಈ ಸೈನ್ಯವು ಒಂದು ಸಾರ್ವಭೌಮ ರಾಷ್ಟ್ರವನ್ನು ಹೇಗೆ ಪ್ರವೇಶಿಸಿತು? ಯಾರು ಅನುಮತಿ ಕೊಟ್ಟರು? ಅದರ ಬಗ್ಗೆ ಕೇಳುವ ದಾತಾರರೇ ಇಲ್ಲ. ಇಸ್ರೇಲ್ ಅಸ್ತಿತ್ವಕ್ಕೆ (೧೯೪೮) ಬಂದಾಗಿನಿಂದ ಅದು ಯಾವ ಅಂತರರಾಷ್ಟ್ರೀಯ ಕಾನೂನಿಗೂ ಬದ್ಧವಾಗಿಲ್ಲ. ಅದಕ್ಕೆ ಅಮೆರಿಕದ ಬೆಂಬಲವಿದೆ; ಬ್ರಿಟನ್ನಿನ ಬಲವಿದೆ. ಪ್ಯಾಲಿಸ್ಟೈನ್‌ನವರು ಆಗೊಂದು, ಈಗೊಂದು ಬಾಂಬ್ ಸಿಡಿಸುವುದರಲ್ಲಿ ಮಾತ್ರವೇ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. ಮೊನ್ನೆ ತಾನೆ ಹಮಾಸ್ ಎಂಬ ಧಾರ್ಮಿಕ ಸಂಘಟನೆಯ ಅಂಗವಿಕಲ ನಾಯಕ ಶೇಖ ಅಹ್ಮದ್ ಯಾಸಿನ್‌ನನ್ನು ಇಸ್ರೇಲ್ ಹತ್ಯೆ ಮಾಡಿದೆ. ಅದರ ಮುಂದಿನ ಗುರಿ ಯಾಸೇರ್ ಅರಾಫತ್ ಎಂದು ಘೋಷಿಸಿದೆ. 'ಇಸ್ರೇಲ್ ಅನ್ನು ಪ್ಯಾಲಿಸ್ಟೈನ್ ಪ್ರದೇಶದ ಆಕ್ರಮಣಕೋರ ರಾಷ್ಟ್ರವೆಂದು ಪರಿಗಣಿಸಬೇಕು; ಅದು ಕೇವಲ ಭಯೋತ್ಪಾದನೆಗೆ ತುತ್ತಾದ ಅಮಾಯಕ ರಾಷ್ಟ್ರವಲ್ಲ'-ಎಂಬ ಪಾಲಿಸ್ಟೈನ್ ನಿಯೋಗದ ನಿರ್ಣಯವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ವಿಟೋ ಚಲಾಯಿಸುವ ಮೂಲಕ ಅಮೆರಿಕ ಸೋಲಿಸಿದೆ. 'ಗುಡಾರದಲ್ಲಿ ಮೂತಿ

ವರ್ತಮಾನ

೧೯೫೦ರಲ್ಲಿ ಗ್ವಾಟಮಾಲದ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು.
೧೯೫೨ರಲ್ಲಿ ಇರಾನಿನ ಮೊಸದಿಕ್ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು.
೧೯೬೧ರಲ್ಲಿ ಕಾಂಗೋದ ಅಧ್ಯಕ್ಷ ಉಮುಂಬಾನ ಹತ್ಯೆಯಾಯಿತು.
೧೯೭೧ರಲ್ಲಿ ಚಿಲಿಯ ಚುನಾಯಿತ ಅಧ್ಯಕ್ಷ ಅಲೆಂಡೆಯನ್ನು ಕಗ್ಗೊಲೆ ಮಾಡಲಾಯಿತು.
೧೯೮೯ರಲ್ಲಿ ಪನಾಮ ಹಾಗೂ ಗ್ರಿನೇಡ್‌ಗಳ ಮೇಲೆ ಆಕ್ರಮಣ ಮಾಡಲಾಯಿತು.
೧೯೯೦ರಲ್ಲಿ ಇರಾಕಿನ ಮೇಲೆ ಆಕ್ರಮಣ ನಡೆಸಲಾಯಿತು.
೨೦೦೧ರಲಿ ಆಫ್ಘಾನಿಸ್ತಾನದ ಮೇಲೆ ಆಕ್ರಮಣ;
೨೦೦೩ರಲ್ಲಿ ಮತ್ತೆ ಇರಾಕ್ ಮೇಲೆ ಆಕ್ರಮಣ;
೨೦೦೪ರಲ್ಲಿ ಹೈಟಿ ಮೇಲೆ ಆಕ್ರಮಣ ಇತ್ಯಾದಿ.

○ ಪ್ರೊ॥ ಶಿವರಾಮಯ್ಯ

ತೂರಿಸಲು ಬಿಟ್ಟರೆ, ಒಂಟೆ ಗುಡಾರವನ್ನೆ ಎತ್ತಿ ಹಾಕಿತಂತೆ' ಹಾಗೆ ಇಸ್ರೇಲ್ ತನ್ನ ಸುತ್ತ ಆಯ್ಕೆಗೆ ಬಂದ, ಜಾತಿ ತನ್ನದೆ ಎಂದು ನೆಲಸುವ ಭಂಡತನವನ್ನು ತೋರಿಸುತ್ತದೆ ಹಿಟ್ಲರನ ನಾಝಿಸಂಗೆ ಏನೇನೂ ಕಡಿಮೆ ಇಲ್ಲದ ಜ್ಯಯೋನಿಸಂ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರುವಲ್ಲಿ ಅದು ಕಾತುರಗೊಂಡಿದೆ. ನೆರೆಯವರ ಭೂಮಿಯನ್ನು ಸದಾ ಆಕ್ರಮಿಸುತ್ತಲೇ ಇರಬೇಕೆಂಬ ಸೂತ್ರ ಜ್ಯಯೋನಿಸಂನದು. ಬೇರೆಯವರು ಇದೇ ಕೆಲಸವನ್ನು ಮಾಡಿದರೆ ಮಾನವಹಕ್ಕು ಉಲ್ಲಂಘನೆ. ಆದರೆ ಈ ನೀತಿ ಇಸ್ರೇಲ್‌ಗೆ ಅನ್ವಯಿಸುವುದಿಲ್ಲ. ಹಿಟ್ಲರ್‌ನಿಂದ, ಅದು ಹಿಂದೆ ಅನುಭವಿಸಿದ ಯಾತನಾಶಿಬಿರಗಳ ಸಾವು ನೋವಿನಿಂದ ಯಾವುದೇ ಪಾಠ ಕಲಿತಂತೆ ಕಾಣುವುದಿಲ್ಲ. ಸ್ಮೃತಿ ನಾಶಕ್ಕೆ ಒಳಗಾಗಿ ಪ್ಯಾಲಿಸ್ಟೈನರ ಮೇಲೆ ಆಕ್ರಮಣ ಮಾಡುವುದು ತನ್ನ ಹಕ್ಕು ಎಂದು ಭಾವಿಸಿದೆ. ಒಟ್ಟಾರೆ ಅಮೆರಿಕ, ಬ್ರಿಟನ್ ಮತ್ತು ಇಸ್ರೇಲ್ ಈ ಮೂರು ರಾಷ್ಟ್ರಗಳ ಏಕಮುಖ ಆಕ್ರಮಣಗಳಿಂದ ಮುಸ್ಲಿಂ ರಾಷ್ಟ್ರಗಳು ನಿರಂತರ ತೊಂದರೆಗೆ ಸಿಲುಕಿವೆ ಮತ್ತು ಪ್ರತಿರೋಧವಿಲ್ಲದೆ ಅಸಹಾಯಕವಾಗಿವೆ. ಹಾಗೆ ನೋಡಿದರೆ ಮೂರನೆ ಮಹಾಯುದ್ಧದ ಮುನ್ಸೂಚನೆಗಳು ಕಳೆದ ಶತಮಾನದ ಮಧ್ಯಭಾಗದಿಂದಲೇ ಕಂಡು ಬರುತ್ತಿವೆ. ಆ ರಕ್ತದ ಕಲೆಗಳು ಪ್ರಪಂಚದ ತುಂಬೆಲ್ಲ ಬಿದ್ದು ಹೋಗಿವೆ. ಎರಡನೇ ಮಹಾಯುದ್ಧದ ನಂತರ ನಾಗರಿಕತೆಯ ಮುಖವಾಡ ತೊಟ್ಟ ಸಾಮ್ರಾಜ್ಯಶಾಹಿ ವ್ಯವಸ್ಥೆಯು ಒಂದು ದಶಕ ಕಳೆಯುವ ಮೊದಲೇ ವಿಯೆಟ್ನಾಂ, ಕೊರಿಯಾ ಹಾಗೂ ಕಾಂಬೋಡಿಯಗಳ ಮೇಲೆ ಯುದ್ಧ ಸಾರಿತು. ಇದು ಯಾತಕ್ಕಾಗಿ ಎಂದರೆ ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯವಾಗಿ ಕಮ್ಯೂನಿಸ್ಟ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತಿದ್ದ ರಾಷ್ಟ್ರಗಳನ್ನು ಬಗ್ಗು ಬಡಿಯುವುದಕ್ಕಾಗಿ ಕಳೆದ ಅರ್ಧ ಶತಮಾನದಲ್ಲಿ ತನ್ನ ಮಾತು ಮೀರಿ ಸ್ವಾತಂತ್ರ್ಯ, ಸಮಾನತೆ, ಸಾರ್ವಭೌಮತೆಯನ್ನು ಮೆರೆಯುವ ಸರ್ಕಾರಗಳಲ್ಲಿ ಸುಮಾರು ೫೦ ದೇಶಗಳ ಮೇಲೆ ಸಿಐಎ ಪಿತೂರಿ ನಡೆಸಿದೆ ಮತ್ತು ೩೫ ದೇಶಗಳಲ್ಲಿ ಯಶಸ್ವಿಯಾಗಿದೆ.

೧೯೫೦ರಲ್ಲಿ ಅಮೆರಿಕದ ಫ್ರೂಟ್ ಕಂಪನಿಯೊಂದಕ್ಕೆ ತನ್ನಲ್ಲಿ ನೆಲೆ-ನೆಲವನ್ನು ನೀಡಲು ನಿರಾಕರಿಸಿದ ಕಾರಣಕ್ಕೆ ಗ್ವಾಟಮಾಲದ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು. ೧೯೫೨ರಲ್ಲಿ ಇರಾನಿನ ಮೊಸದಿಕ್ ಸರ್ಕಾರವು ಬ್ರಿಟಿಷ್ ತೈಲ ಕಂಪನಿಯ ಪರಮಾಧಿಕಾರವನ್ನು ನಿರಾಕರಿಸಿದ ಕಾರಣ ಅಮೆರಿಕಾ ಮಧ್ಯೆ ಪ್ರವೇಶಿಸಿ ಅದನ್ನು ಪದಚ್ಯುತಗೊಳಿಸಲಾಯಿತು. ೧೯೬೯ರಲ್ಲಿ ಕಾಂಗೋದ ಅಧ್ಯಕ್ಷ ಲುಮುಂಬಾನ ಹತ್ಯೆಯಾಯಿತು. ಕಾರಣ ಆ ದೇಶದ ವಜ್ರದ ಗಣಿಗಳ ಮೇಲಿನ ಅಮೆರಿಕದ ಹಸ್ತಕ್ಷೇಪವನ್ನು ಆತ ನಿರಾಕರಿಸಿದ್ದು. ೧೯೭೧ರಲ್ಲಿ ಚಿಲಿಯ ಚುನಾಯಿತ ಅಧ್ಯಕ್ಷ ಅಲೆಂಡೆಯನ್ನು ಕಗ್ಗೊಲೆ ಮಾಡಲಾಯಿತು. ಕಾರಣ ಚಿಲಿಯ ಜನತೆ ಕಮ್ಯೂನಿಸ್ಟ್ ಪರ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದ್ದರು. ೧೯೮೬ರಲ್ಲಿ ಪನಾಮ ಹಾಗೂ ಗ್ರಿನೇಡ್‌ಗಳ ಮೇಲೆ ಇದೇ ಕಾರಣಕ್ಕಾಗಿ ಆಕ್ರಮಣ ಮಾಡಲಾಯಿತು. ೧೯೯೦ರಲ್ಲಿ ಕುವೈತ್‌ನ ತೈಲ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವುದಕ್ಕಾಗಿ ಇರಾಕಿನ ಮೇಲೆ ಆಕ್ರಮಣ ನಡೆಸಲಾಯಿತು. ಇದೇ ಕಾರಣಕ್ಕಾಗಿ ೨೦೦೧ರಲಿ ಆಫ್ಘಾನಿಸ್ತಾನದ ಮೇಲೆ ಆಕ್ರಮಣ; ೨೦೦೩ರಲ್ಲಿ ಮತ್ತೆ ಇರಾಕ್ ಮೇಲೆ ಆಕ್ರಮಣ; ೨೦೦೪ರಲ್ಲಿ ಹೈಟಿ ಮೇಲೆ ಆಕ್ರಮಣ ಇತ್ಯಾದಿ.

ಈ ಮೇಲಿನ ಉದಾಹರಣೆಗಳು ಮೂರನೆ ಮಹಾಯುದ್ಧದ ಏಕಪಕ್ಷೀಯ ದುರ್ಘಟನೆಗಳಿಗೆ ಸಾಕ್ಷಿ ಹೇಳುತ್ತಿವೆ. ಇನ್ನು ಈ ಪಟ್ಟಿಯನ್ನು ಬೆಳೆಸುವುದು ಬೇಡ. ಒಟ್ಟಾರೆ ಲ್ಯಾಟಿನ್ ಅಮೆರಿಕದ ನೈಸರ್ಗಿಕ ಅರಣ್ಯ ಸಂಪತ್ತು, ಆಫ್ರಿಕಾದ ಅರಣ್ಯ ಹಾಗೂ ಖನಿಜ ಸಂಪತ್ತು, ಮಧ್ಯ ಏಷ್ಯಾದ ತೈಲ ಸಂಪತ್ತು ಏಷಿಯಾದ ನೈಸರ್ಗಿಕ ಸಂಪತ್ತು ಹಾಗೂ ಮಾರುಕಟ್ಟೆಯ ಲೂಟಿ ಮತ್ತು ಎಲ್ಲಕ್ಕಿಂತ ಅಧಿಕವಾಗಿ ಜಗತ್ತಿನ ದುಡಿಯುವ ವರ್ಗದ ಶ್ರಮಕ್ಕೆ ಕಡಿಮೆ ಕೂಲಿ ಮತ್ತು ಬಿಟ್ಟಿ ಬಳಕೆ-ಇವೆಲ್ಲವುಗಳ ಲೂಟಿಗೆ ಅಡ್ಡಿ ಆತಂಕ ಬಂದಾಗಲೆಲ್ಲಾ ನವ ಸಾಮ್ರಾಜ್ಯಶಾಹಿ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಯುದ್ಧ ಹೂಡಿದೆ. ಕ್ಯೂಬದಂತಹ ಪುಟ್ಟ ದ್ವೀಪದ ಸಾರ್ವಭೌಮತೆಯನ್ನು ಹೊರತು ಪಡಿಸಿದರೆ, ಉಳಿದೆಲ್ಲ ಕಡೆ 'ತನ್ನ ವಿಜಯ ಧ್ವಜವನ್ನು ಹಾರಿಸಿದೆ. ಕೆಲವು ದೇಶಗಳಲ್ಲಿ ನೇರ ಕೊಳ್ಳೆಗೆ ಇಳಿದರೆ, ಮತ್ತೆ ಕೆಲವು ದೇಶಗಳಲ್ಲಿ ದಲ್ಲಾಳಿ ಕೊಡುವ ಮೂಲಕ ಲೂಟಿಯನ್ನು ಮುಂದುವರಿಸಿದೆ.

ಆದರೆ ಈ ದಲ್ಲಾಳಿ ವ್ಯವಸ್ಥೆಯಲ್ಲಿ ಲಾಭದ ದರಗಳನ್ನು ಏರಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಈಗ ಉದ್ಭವಿಸಿದೆ. ಅದಕ್ಕಾಗಿ ೧೯೯೦ ರ ದಶಕದಿಂದ ಐ.ಎಂ.ಎಫ್ ಮತ್ತು ಡಬ್ಲ್ಯೂ.ಟಿ.ಒಗಳ ಮೂಲಕ ಬಡ ದೇಶಗಳ ಸಂಪನ್ಮೂಲಗಳನ್ನು ಪರೋಕ್ಷವಾಗಿ ದೋಚಲು ಕಾಯಿದೆಗಳನ್ನು ಸೃಷ್ಟಿ ಮಾಡಿಕೊಂಡಿದೆ. ಅದಿರಲಿ.

ಅಮೆರಿಕ ಮತ್ತು ಯೂರೋಪಿನ ಸಾಮ್ರಾಜ್ಯಶಾಹಿಗಳ ಯಾವತ್ತಿನ ಹಗಲು ದರೋಡೆಯನ್ನು ಕಂಡೂ ಕಂಡು ಉಳಿದ ರಾಷ್ಟ್ರಗಳು ಯಾಕೆ ಮೌನದಿಂದಿವೆ? ಪ್ರತಿಭಟಿಸಲು ಸಾಧ್ಯವಿಲ್ಲವೆ? ಮತ್ತು ಪ್ರತಿಭಟಿಸಿದರೆ ಪರಿಣಾಮ ಏನಾಗಬಹುದು? ಎಂಬ ಪ್ರಶ್ನೆಗಳನ್ನು ನಾವೀಗ ಪರಿಶೀಲಿಸಬೇಕಾಗುತ್ತದೆ. ಅದಕ್ಕಾಗಿ ಅರಬ್ ರಾಷ್ಟ್ರಗಳನ್ನು ನಿದರ್ಶನವಾಗಿ ತೆಗೆದುಕೊಳ್ಳೋಣ. ಈಗ ನಮ್ಮ ಸರಳ ಅನಿಸಿಕೆ ಏನೆಂದರೆ ತೈಲ ಸಂಪದ್ಭರಿತವಾದ ಈ ಮುಸ್ಲಿಂ ರಾಷ್ಟ್ರಗಳು ಯಾಕೆ ಬಂಡವಾಳಶಾಹಿಗಳ ಕಾಲೊತ್ತುತ್ತ ಕುಳಿತಿವೆ? ಇವು ಧ್ರುವೀಕರಣಗೊಳ್ಳುವುದಾದರೆ ಬಹುರಾಷ್ಟ್ರೀಯ ತೈಲ ಕಂಪೆನಿಗಳನ್ನು ಅಲ್ಲಿಂದ ತೆರವು ಮಾಡಿಸಲು ಅಥವಾ ರಾಷ್ಟ್ರೀಕರಣಗೊಳಿಸಲು ಏಕೆ ಸಾಧ್ಯವಾಗುವುದಿಲ್ಲ? ಇಂಥ ಪ್ರಶ್ನೆಗಳ ಆಳಕ್ಕೆ ನೋಡಿದರೆ ಆಳುವ ವರ್ಗವಾದ ಮುಸ್ಲಿಂ ದೊರೆಗಳೆಲ್ಲರೂ ಬಂಡವಾಳಶಾಹಿಗಳ ಸಮಸೋದರರೇ. ದೇಶದ ದೀನಾನಾಥರ ಗೊಡವೆ ಅವರಿಗೇಕೆ ಬೇಕು? ಅವರಿಗೆ ಅನುಕಂಪ ಸಾಕು! ಪ್ರಭು ವರ್ಗದಲ್ಲಿ ಹಣವಿದೆ, ಅಧಿಕಾರವಿದೆ, ಸಾಲದ್ದಕ್ಕೆ ಧಾರ್ಮಿಕವಾದಿಗಳ ಆಶೀರ್ವಾದವಿದೆ. ಅರಬ್ ರಾಷ್ಟ್ರಗಳಲ್ಲಿ ಯಾರಾದರೂ ಇದನ್ನೆಲ್ಲ ಪ್ರಶ್ನಿಸಿ ಪ್ರತಿಭಟಿಸಿದರೆ ಅಂಥವರು ದಿನ ಬೆಳಗಾಗುವುದರಲ್ಲಿ ಕಾಣೆಯಾಗುತ್ತಾರೆ. ಆದ್ದರಿಂದ ಪ್ರತಿಭಟನೆ, ಮುಷ್ಕರ, ದಂಗೆಗಳಿಗೆ ಅಲ್ಲಿ ಅವಕಾಶವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಆಫ್ಘಾನಿಸ್ತಾನದ ತಾಲಿಬಾನರಿಗೆ, ಇರಾಕಿನ ಸದ್ದಾಂ ಹುಸೇನನಿಗೆ ಒದಗಿದ ಗತಿ ಅವರ ಕಣ್ಣ ಮುಂದಿದೆ. ಅರಬ್ ದೊರೆಗಳಲ್ಲಿ ಶ್ರೀಮಂತಿಕೆ ಇರಬಹುದು. ಆದರೆ ಅವರಲ್ಲಿ ಸುಸಜ್ಜಿತ ಸೈನ್ಯವಾಗಲೀ ಅಣ್ವಸ್ತ್ರಗಳಾಗಲೀ, ಅದಕ್ಕೆ ಉಚಿತವಾದ ತರಬೇತಿ ತಂತ್ರಜ್ಞಾನವಾಗಲೀ ಇಲ್ಲ. ಜೊತೆಗೆ ಧಾರ್ಮಿಕ ತಳಹದಿಯ ಮೇಲೆ ರಾಷ್ಟ್ರಗಳು ಒಗ್ಗಟ್ಟಾಗುತ್ತವೆ ಎಂಬ ಮಾತೂ ಸುಳ್ಳು. ಹಾಗಿದ್ದ ಪಕ್ಷಕ್ಕೆ ಪೂರ್ವ ಪಾಕಿಸ್ತಾನ ಸಿಡಿದು ಬಾಂಗ್ಲಾ ದೇಶವಾಗುತ್ತಿರಲಿಲ್ಲ. ಇರಾನ್ ಹಾಗೂ ಇರಾಕ್ ನಡುವೆ ಯುದ್ಧ ಸಂಭವಿಸುತ್ತಿರಲಿಲ್ಲ. ಅದಿರಲಿ.

ಇದು ಅರ್ಥವಾಗದ ಸದ್ದಾಂಹುಸೇನ್, ಒಸಾಮ ಬಿನ್ ಲಾಡೆನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಸೆಣಸಲು ಹೋಗಿ ಹತಾಶರಾದರು. ಬಹುಶಃ ಮುಸ್ಲಿಂ ರಾಷ್ಟ್ರಗಳು ಧ್ರುವೀಕರಣಗೊಂಡು ತಮ್ಮ ಪರ ನಿಲ್ಲುತ್ತಾರೆಂದು ಭ್ರಮಿಸಿದ ಆ ಕಿಡಿಗೇಡಿಗಳು ನಿರಾಶೆಗೊಳ್ಳುವಂತಾಯಿತು; ಹಾಗೆಯೇ ತಾಲಿಬಾನರು ತಲೆ ಕೀಳಬೇಕಾಯಿತು. ಹಾಗೆಂದು ಇವರ ಪರ ನಿಲ್ಲಬೇಕಾಗಿತ್ತು ಎಂಬ ಮಾತಲ್ಲ. ಅವರೂ ಸಹ ಸಾಮ್ರಾಜ್ಯಶಾಹಿಗಳಷ್ಟೇ ಜನ ಕಂಟಕರು. ವಿಪರ್ಯಾಸವೆಂದರೆ ಏಕಪಕ್ಷೀಯವಾಗಿ ಅರಾಜಕತೆಯನ್ನು ಹತ್ತಿಕ್ಕುತ್ತೇವೆ; ಭಯೋತ್ಪಾದನೆ, ಕೋಮುವಾದಗಳನ್ನು ಮೂಲೋತ್ಪಾಟನೆ ಮಾಡುತ್ತೇವೆ; ಜನತಂತ್ರವನ್ನು ಸಂರಕ್ಷಿಸುತ್ತೇವೆ ಎಂದು ಸಂಪನ್ನರಂತೆ ಮಾತಾಡುವ ಬಂಡವಾಳಶಾಹಿ ವ್ಯವಸ್ಥೆ ಕೂಡ ಅಮಾನವೀಯವಾದದ್ದೇ.

ಆದ್ದರಿಂದ ಪರ್ಯಾಯ ವ್ಯವಸ್ಥೆಯನ್ನು ನಾವು ಕಂಡುಕೊಳ್ಳಬೇಕಿದೆ. ಸ್ವಾಭಿಮಾನ, ಸ್ವಾವಲಂಬನೆ, ಸ್ವಾತಂತ್ರ್ಯವನ್ನು ಗುರಿಯಾಗಿಟ್ಟುಕೊಂಡು ಜನತೆಯ ವಿಮೋಚನೆಗಾಗಿ ದುಡಿವ ವರ್ಗ ಚಳವಳಿಗಳನ್ನು ಕಟ್ಟಬೇಕಾಗಿದೆ. ಆ ಚಳವಳಿಯ ಕುರುಹುಗಳು ಅಲ್ಲಲ್ಲಿ ತೋರಿಬರುತ್ತಿವೆ. ಡಬ್ಲ್ಯೂ.ಟಿ.ಓ. ವಿಶ್ವಬ್ಯಾಂಕ್, ಐ.ಎಂ.ಎಫ್‌ಗಳ ವಿರುದ್ಧ ಅಲ್ಲಲ್ಲಿ ಪ್ರತಿರೋಧದ ದನಿ ಕೇಳಿಬರುತ್ತಿದೆ. ಈಚೆಗೆ ಮುಂಬೈಯಲ್ಲಿ (ಜನವರಿ ೨೦೦೪) ನಡೆದ ವಿಶ್ವ ಸಮಾಜ ವೇದಿಕೆ ಹಾಗೂ ಮುಂಬೈ ಪ್ರತಿರೋಧದಂತಹ ಸಮಾವೇಶಗಳು ಇಂಥ ಪ್ರತಿರೋಧದ ದನಿಯನ್ನು ವಿಶ್ವದ ಎಲ್ಲೆಡೆಗೆ ರವಾನಿಸುವುದಕ್ಕೆ ಸಮರ್ಥವಾಗಿವೆ. ಇದು ರಕ್ತರಹಿತ ಮೂರನೆ ವಿಶ್ವಯುದ್ಧಕ್ಕೆ ಮುನ್ಸೂಚನೆ ಎನ್ನಬಹುದೇ? □

ಜಾಗೃತಿ

ಜಾಗತೀಕರಣ ನಮ್ಮ ಮನೆ ಬಾಗಿಲಿಗೇ ಬಂದಿದೆ. 'ಪ್ರಗತಿಯ ಬಸಿರೆಂದು' ಬಲಿಷ್ಠ ರಾಷ್ಟ್ರಗಳು ಬಣ್ಣಿಸುತ್ತಿರುವ ಜಾಗತೀಕರಣದಿಂದ ಭಾರತದ ಅಲಕ್ಷಿತ ಜನಸಮುದಾಯ ತತ್ತರಿಸಿ ಹೋಗುತ್ತಿದ್ದು ಮುಂಬರುವ ದಿನಗಳು ಕರಾಳವಾಗಲಿವೆ ಎಂಬುದು ಭಾರತದಲ್ಲಿ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯಾಂದೋಲನ ಶೋಧಿಸಿ ಪ್ರಕಟಿಸಿರುವ ಮಾಹಿತಿಯಿಂದ ತಿಳಿದುಬಂದಿದೆ. ಜಾಗತೀಕರಣದ ಬಗೆಗಿನ ಎಲ್ಲಾ ಭರವಸೆಗಳು ಎಂಥ ಹಸಿ ಸುಳ್ಳು ಎಂಬುದು ಈ ಮಾಹಿತಿಯಿಂದ ತಿಳಿದುಬರುತ್ತದೆ. ಈ ಮಾಹಿತಿಯನ್ನಾಧರಿಸಿದ ಸಂಶೋಧನಾ ಲೇಖನಮಾಲೆ ಈ ಸಂಚಿಕೆಯಿಂದ ಆರಂಭ.

○ ಅನು: ಡಿ. ಡೊಮಿನಿಕ್



ಪ್ರಗತಿಯ ಹುಸಿ 'ಬಸಿರು'!

ಸಾಮಾನ್ಯ ಜನರಿಗೆ ಜಾಗತೀಕರಣವನ್ನು 'ಪ್ರಗತಿ'ಯ ಬಸಿರೆಂದು ಮತ್ತೆ ಮತ್ತೆ ಪ್ರಸಾರ ಮಾಡಲಾಗುತ್ತಿದೆ. ಸಂಪನ್ಮೂಲಗಳನ್ನು ಹಾಗೂ ರಾಜಕೀಯ ಅಧಿಕಾರವನ್ನು ಹೊಂದಿರುವ ಜನರು ಮತ್ತು ರಾಷ್ಟ್ರಗಳು ಇತರರು ಈ ಪ್ರಗತಿಯ ಮಾದರಿಯನ್ನು ಅನುಸರಿಸಲು ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿದ್ದಾರೆ. ಜಾಗತೀಕರಣವು ಆರ್ಥಿಕ ವ್ಯವಸ್ಥೆಯಾಗಿದೆ. ಇದು ಮಾನವತೆ, ನೈತಿಕತೆ ಅಥವಾ ಧರ್ಮದ ಜಾಗತೀಕರಣದ ಬಗ್ಗೆ ಮಾತನಾಡುವುದಿಲ್ಲ. ಇದರ ಬದಲಿಗೆ, ಇದು ಶ್ರೀಮಂತ ರಾಷ್ಟ್ರಗಳಿಗೆ ಮತ್ತು ಶ್ರೀಮಂತ ವರ್ಗಗಳಿಗೆ ಅವು ಈಗಾಗಲೇ ಹೊಂದಿರುವುದಕ್ಕಿಂತಲೂ ಹೆಚ್ಚಿನ ಪ್ರಯೋಜನಗಳು ಲಭಿಸುತ್ತದೆ ಮತ್ತು ಇತರರು ಕೂಡಾ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದರಿಂದ ಕೆಲವು ಪ್ರಯೋಜನಗಳನ್ನು ಪಡೆದುಕೊಳ್ಳಬಹುದು ಎಂದು ಅವರು ನಂಬಬೇಕೆಂದು ಬಯಸುತ್ತದೆ.

ಜಗತ್ತಿನ ಶ್ರೀಮಂತ ರಾಷ್ಟ್ರಗಳು ಮತ್ತು ಜನರು ಜಾಗತೀಕರಣದ ಪ್ರಕ್ರಿಯೆಯನ್ನು ಸ್ವಾಗತಿಸಿದ್ದಾರೆ. ಜಾತಿ, ಲಿಂಗ, ಅಲ್ಪಸಂಖ್ಯಾತ ಸ್ಥಾನಮಾನ ಮತ್ತು ಬಣ್ಣದ ಆಧಾರದ ಮೇರೆಗೆ ತಾರತಮ್ಯಕ್ಕೊಳಗಾದ ಬಡ ರಾಷ್ಟ್ರಗಳು ಮತ್ತು ಬಡಜನರು ಮಾತ್ರ ಜಾಗತೀಕರಣಕ್ಕೆ ಪ್ರತಿರೋಧ ವೊಡ್ಡುತ್ತಿದ್ದಾರೆ. ಅವರ ಹಿಂದಿನ ಅನುಭವ ಮತ್ತು ಚರಿತ್ರೆಯ ಕಾರಣದಿಂದ ಅವರು ಜಾಗತೀಕರಣಕ್ಕೆ ಪ್ರತಿರೋಧ ಒಡ್ಡುತ್ತಿದ್ದಾರೆ. ರಾಷ್ಟ್ರದ ಪ್ರಗತಿ ಸಂಪತ್ತು ಅಥವಾ ಅಧಿಕಾರವು ತನ್ನ ಎಲ್ಲ ನಾಗರಿಕರಿಗೆ ಯಾವತ್ತೂ ಸಮಾನವಾಗಿ ಹಂಚಿಕೆಯಾಗಿಲ್ಲ ಎಂಬುದು ಮತ್ತೆ ಮತ್ತೆ ಋಜುವಾತಾಗಿದೆ.

ಮೂರನೇ ವಿಶ್ವ ಸಾಮಾಜಿಕ ಸಮಾವೇಶದಲ್ಲಿ ಜಾಗತೀಕರಣದ ಮೇಲಿನ ಚರ್ಚೆಯು ಮತ್ತಷ್ಟು ವಿಸ್ತೃತವಾಗಿತ್ತು. ಸಮಾವೇಶವು ಭಾರತದಲ್ಲಿ ನಡೆದಿರುವುದರಿಂದ ಸಾಮಾನ್ಯವಾಗಿ ಚರ್ಚೆಯಲ್ಲಿ ಭಾರತೀಯ ಸಂದರ್ಭದೆಡೆಗೆ ಹೆಚ್ಚು ಗಮನವನ್ನು ಕೇಂದ್ರೀಕರಿಸಲಾಗಿತ್ತು. ಭಾರತವು ತನ್ನ ಸಂವಿಧಾನಕ್ಕಿಂತಲೂ ಹೆಚ್ಚಾಗಿ ಜಾತಿಯ ಮೂಲಕ ಆಳಲ್ಪಡುವ ರಾಷ್ಟ್ರವಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ.

ಜಾಗತೀಕರಣ ಎಂದರೇನು ?

ಜಾಗತೀಕರಣವನ್ನು ಈ ಕೆಳಗಿನಂತೆ ವಿವರಿಸಿಕೊಳ್ಳಲಾಗುತ್ತಿದೆ.

೧. ಮಾರುಕಟ್ಟೆಗಳು, ರಾಷ್ಟ್ರ-ಪ್ರಭುತ್ವಗಳು ಮತ್ತು ಮಾನವ ಆವಿಷ್ಕಾರದ ತಂತ್ರಜ್ಞಾನ ಹಾಗೂ ಅವುಗಳ ಪ್ರಗತಿಯೇ ಜಾಗತೀಕರಣ ಎನ್ನುವುದು ;

೨. ಸರ್ಕಾರಗಳನ್ನು ಮತ್ತು ಜನ ಸಮುದಾಯಗಳನ್ನು ಮಾರುಕಟ್ಟೆಯ ಶಕ್ತಿಗಳಿಗೆ ಆರ್ಥಿಕ ಉದಾರೀಕರಣದ ಸೈದ್ಧಾಂತಿಕ ನೆಲೆಯಲ್ಲಿ ಒಳಗೊಳ್ಳುವಂತೆ ಮಾಡುವುದು.

ಜಾಗತೀಕರಣವು ವಿವಿಧ ಬಗೆಗಳಲ್ಲಿ ಯಾವಾಗಲೂ ಅಸ್ತಿತ್ವದಲ್ಲಿತ್ತು; ಚಾರಿತ್ರಿಕವಾಗಿ ರಾಷ್ಟ್ರಗಳ ನಡುವೆ ವ್ಯಾಪಾರ, ಸೇವೆಗಳು, ಬಂಡವಾಳ ಹರಿಯುವಿಕೆ ಮತ್ತು ಶ್ರಮದ ಮೂಲಕ ಇತ್ತು. ಆದರೆ, ಕಳೆದ ೫೦ ವರ್ಷಗಳಲ್ಲಿ ಜಾಗತೀಕರಣವು ಜಗತ್ತಿನ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳನ್ನು ನಿಯಂತ್ರಿಸುವ ಒಂದು ಬೃಹತ್ ಶಕ್ತಿಯಾಗಿದೆ. ಜಾಗತೀಕರಣದ ಹೊಸ ಮಹತ್ವಪೂರ್ಣವಾದ ಅಂಶವೆಂದರೆ ಸರಕುಗಳ ಮುಕ್ತ ವ್ಯಾಪಾರ, ಬಂಡವಾಳ ಮತ್ತು ಸೇವೆಗಳಿಗೆ ಹೊಸ ನಿಯಮಗಳು ಮತ್ತು ವಿನಿಮಯಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವುದು ಮತ್ತು ಈ ಹೊಸ ಕಾರ್ಯತಂತ್ರವನ್ನು ಅಂತರರಾಷ್ಟ್ರೀಯ ಸಂಸ್ಥೆಗಳಾದ ವಿಶ್ವವ್ಯಾಪಾರ ಸಂಸ್ಥೆ (ಡಬ್ಲ್ಯೂಟಿಒ), ಅಂತರ ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ವಿಶ್ವಬ್ಯಾಂಕ್ (ಡಬ್ಲ್ಯೂಟಿ) ಮುಂತಾದವುಗಳ ಮೂಲಕ ಅನುಷ್ಠಾನಗೊಳಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು.

ಜಾಗತೀಕರಣದ ಈ ಹೊಸಬಗೆಯು ಏನನ್ನು ಸೂಚಿಸುತ್ತದೆ?

ಪ್ರಸ್ತುತ ಜಾಗತೀಕರಣ ಪ್ರಕ್ರಿಯೆಯು ಎರಡು ಬದಲಾವಣೆಗಳನ್ನು ಒಳಗೊಂಡಿದೆ :

೧. **ಅಂತರರಾಷ್ಟ್ರೀಯ ವ್ಯಾಪಾರದ ಉದಾರೀಕರಣ** : ಪ್ರತಿಯೊಂದು ದೇಶವೂ ವ್ಯಾಪಾರದ ಮೇಲಿನ ತನ್ನ ನಿರ್ಬಂಧಗಳನ್ನು ತೆಗೆದುಹಾಕತಕ್ಕದ್ದು ಮತ್ತು ಈ ಮೂಲಕ ದೇಶಗಳ ನಡುವೆ ಸರಕುಗಳ ಮತ್ತು ಸೇವೆಗಳ, ಬಂಡವಾಳ, ಮಾಹಿತಿ ಮತ್ತು ತಂತ್ರಜ್ಞಾನಗಳ ಮುಕ್ತ ಹರಿಯುವಿಕೆಗೆ ಅನುಮತಿಸಬೇಕು.

೨. **ಖಾಸಗೀಕರಣ** : ಮಾರುಕಟ್ಟೆ ಆಧಾರಿತ ಖಾಸಗಿ ಆರ್ಥಿಕತೆಯನ್ನು ಉತ್ತೇಜಿಸುವುದು. ಸರ್ಕಾರವು ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪ್ರಜಾಸತ್ತಾತ್ಮಕ ದೇಶದಲ್ಲಿ ಚುನಾಯಿತ ಪ್ರತಿನಿಧಿಗಳು ಆಡಳಿತದಲ್ಲಿ ಅಥವಾ ಆರ್ಥಿಕ ಮತ್ತು ಸಾಮಾಜಿಕ ನಿಯಂತ್ರಣದಲ್ಲಿ ಕನಿಷ್ಠ ಪಾತ್ರವನ್ನು ಮಾತ್ರ ವಹಿಸಬೇಕು.

ಜಾಗತೀಕರಣಕ್ಕೆ ಭಾರತವು ಹೇಗೆ ಪ್ರತಿಕ್ರಯಿಸಿದೆ ?

ಭಾರತವು ಇತರ ದೇಶಗಳೊಂದಿಗೆ ತನ್ನ ವ್ಯಾಪಾರ ಉದಾರೀಕರಣ ಮತ್ತು ತನ್ನ ಆರ್ಥಿಕತೆಯ ರಾಚನಿಕ ಮುಂತಾದ ಹೊಂದಾಣಿಕೆ ಅನೇಕ ಹೊಸ ಕ್ರಮಗಳೊಂದಿಗೆ ೧೯೯೧ರಲ್ಲಿ ಹೊಸ ಆರ್ಥಿಕ ನೀತಿಯನ್ನು ಆರಂಭಿಸಿದೆ. ಇದೊಂದು ಮುಂದುವರಿಯುತ್ತಿರುವ 'ಸುಧಾರಣಾ' ಪ್ರಕ್ರಿಯೆಯಾಗಿದೆ. ಅಂತರರಾಷ್ಟ್ರೀಯ ಒಕ್ಕೂಟದ ಮೇರೆಗೆ, ಭಾರತವು ಸುಮಾರು ೭೬೦ಸರಕುಗಳಿಗೆ ಮಾರುಕಟ್ಟೆ ಪ್ರವೇಶ ಮತ್ತು ಮುಕ್ತ ಸಾಗಾಣಿಕೆಗೆ ಅವಕಾಶ ಒದಗಿಸಿದೆ. ಅದೇ ರೀತಿಯಲ್ಲಿ ಬಂಡವಾಳ ಹೂಡಿಕೆ ಮತ್ತು ಹರಿಯುವಿಕೆಗೆ ಅವಕಾಶವನ್ನು ಕಲ್ಪಿಸಿದೆ. ಅಂತರ ರಾಷ್ಟ್ರೀಯ ಕಂಪೆನಿಗಳಿಗೆ ವಿಮೆ ಮತ್ತು ಅನೇಕ ಇತರ ಸೇವಾ ವಲಯಗಳಲ್ಲಿ ಅನುಮತಿಯನ್ನು ನೀಡಿದೆ.

ರಾಚನಿಕ ಹೊಂದಾಣಿಕೆ ಕಾರ್ಯಕ್ರಮ (ಎಸ್‌ಎಪಿ)ವನ್ನು ದೇಶೀಯ ಆರ್ಥಿಕತೆಯೊಳಗೆ ಆರಂಭಿಸಲಾಗಿದೆ. ಇದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ :

೧. ಸಾರ್ವಜನಿಕ ವಲಯ ಮತ್ತು ಸೇವೆಗಳ ಖಾಸಗೀಕರಣ
೨. ಆರ್ಥಿಕತೆಯಲ್ಲಿ ಖಾಸಗಿ ವಲಯ ಪಾಲ್ಗೊಳ್ಳುವಿಕೆಗೆ ಇರುವ ನಿರ್ಬಂಧಗಳನ್ನು ತೆಗೆದುಹಾಕುವುದು.
೩. ಅನೇಕ ಅಭಿವೃದ್ಧಿ ಮತ್ತು ಮೂಲ ಕಲ್ಯಾಣ ಕ್ಷೇತ್ರಗಳಿಂದ ಸರ್ಕಾರದ ವಾಪಾಸಾತಿ.
೪. ವೇತನ ಕಡಿತ ಮತ್ತು ಅನುದಾನಗಳಲ್ಲಿ ಕಡಿತ.

ಸರ್ಕಾರವು ಕೈಗಾರಿಕಾ ವಲಯಕ್ಕೂ ಸಹ ಬೃಹತ್ ಬದಲಾವಣೆಗಳನ್ನು ಮಾಡಿದೆ. ೧೯೫೬ರ ಕೈಗಾರಿಕಾ ನೀತಿ ಠರಾವಿನಲ್ಲಿ ಸರ್ಕಾರೀ ನಿಯಂತ್ರಣಕ್ಕೆ ೧೮ ವಲಯಗಳು ಮೀಸಲಾಗಿತ್ತು. ೧೯೯೧ರ ಕೈಗಾರಿಕಾ ನೀತಿಯಲ್ಲಿ ನಾಲ್ಕು ವಲಯಗಳು ಮಾತ್ರ ಮೀಸಲಾಗಿವೆ. ಬ್ಯಾಂಕಿಂಗ್, ವಿಮೆ ಮತ್ತು ಶಿಕ್ಷಣ ಮುಂತಾದ ಸೇವಾವಲಯಗಳು ಖಾಸಗಿ ವಲಯದ ಹೂಡಿಕೆಗೆ ಈಗ ಮುಕ್ತವಾಗಿವೆ. ಇದೇ ರೀತಿಯ ಬದಲಾವಣೆಗಳನ್ನು ಕೃಷಿ ಕ್ಷೇತ್ರದಲ್ಲೂ ತರಲಾಗುತ್ತಿದೆ.

ದಲಿತರ ಮೇಲೆ ಜಾಗತೀಕರಣದ ಪರಿಣಾಮ ಏನು?

ಜಾಗತೀಕರಣದ ಬಗ್ಗೆ ದಲಿತರ ಅನುಭವವೇನು? ಖಾಸಗೀಕರಣ ಮತ್ತು ಮಾರುಕಟ್ಟೆ ಆಧಾರಿತ ಆರ್ಥಿಕತೆಯನ್ನು ಆಧರಿಸಿದ ಹೊಸ ಆರ್ಥಿಕ ಜಗತ್ತಿನಲ್ಲಿ ದಲಿತರ ಭವಿಷ್ಯವೇನು? ಭಾರತೀಯ ಪ್ರಜೆಗಳೆಂದು ಕರೆಯಲಾಗಿರುವ ೧೬೦ ಮಿಲಿಯನ್ ಪರಿಶಿಷ್ಟ ಜಾತಿಗಳನ್ನೊಳಗೊಂಡಂತೆ ೧/೪ರಷ್ಟು ಭಾರತೀಯ ಜನ ಸಂಖ್ಯೆಯನ್ನೊಳಗೊಳ್ಳುತ್ತದೆ ಅಥವಾ ಇತರೆ ಧರ್ಮಗಳಿಗೆ ಮತಾಂತರಗೊಂಡ ದಲಿತರನ್ನೊಳಗೊಂಡಂತೆ ಒಟ್ಟು ೨೦೦ ಮಿಲಿಯನ್ ಜನರನ್ನು ದಲಿತರೆಂದು ಕರೆಯಲಾಗುತ್ತದೆ.

ದಲಿತರು ಭಾರತೀಯ ಸಮಾಜದಲ್ಲಿ ಅತೀ ಅಂಚಿಗೆ (ತಳಕ್ಕೆ) ತಳ್ಳಲ್ಪಟ್ಟ ವರ್ಗವಾಗಿದ್ದು ಇತರ ಭಾರತದ ಬಡವರೊಂದಿಗೆ ಅತೀ ಬಡತನವನ್ನು ಅನುಭವಿಸುವವರು. ಆದರೆ ಇದರ ಜೊತೆಗೆ ಹಾಗೂ ತುಂಬಾ ಮುಖ್ಯವಾದದ್ದೆಂದರೆ ಜಾತಿ, ಹುಟ್ಟು ಮತ್ತು ವೃತ್ತಿಯ ಕಾರಣಕ್ಕಾಗಿ ಮಾರುಕಟ್ಟೆಯಲ್ಲಿ ಮತ್ತು ಮಾರುಕಟ್ಟೆಯ ಹೊರಗೆ ಆರ್ಥಿಕ ಕ್ಷೇತ್ರಗಳಲ್ಲಿ ದಲಿತರು ಬಹಿಷ್ಕಾರ ಮತ್ತು ತೀವ್ರವಾದ ತಾರತಮ್ಯಕ್ಕೊಳಗಾದವರಾಗಿದ್ದಾರೆ.

ಇದುವರೆಗಿದ್ದ ನೀತಿ :

ದೇಶದ ಆರ್ಥಿಕ ಮತ್ತು ಸಾಮಾಜಿಕ ಕಾರ್ಯದಲ್ಲಿ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯನ್ನು ಹೊಂದಿದ್ದದ್ದು ೧೯೯೦ ರವರೆಗಿನ ಸರ್ಕಾರೀ ನೀತಿಗಳ ಮುಖ್ಯ ವೈಶಿಷ್ಟ್ಯವಾಗಿತ್ತು. ನೀತಿಗಳ ರೂಪುರೇಷೆಯು ಸರ್ಕಾರೀ ಪಾಲ್ಗೊಳ್ಳುವಿಕೆ, ಮಾರುಕಟ್ಟೆ ಮಧ್ಯಪ್ರವೇಶ, ಆರ್ಥಿಕ ಮತ್ತು ಸಾಮಾಜಿಕ ಯೋಜನೆಯನ್ನು ಒಳಗೊಂಡಿತ್ತು. ಮೀಸಲಾತಿ ಮುಂತಾದ ತಾರತಮ್ಯ ನಿವಾರಣಾ ಕ್ರಮಗಳನ್ನು ಮತ್ತು ಶಿಕ್ಷಣ, ಆರೋಗ್ಯ ಇತ್ಯಾದಿ ಮೂಲ ಸೇವೆಗಳನ್ನು ಒದಗಿಸುವಲ್ಲಿ ಸಾರ್ವಜನಿಕ ವಲಯವು ಪ್ರಮುಖ ಪಾತ್ರವನ್ನು ವಹಿಸಿತ್ತು.

ಸ್ವಾತಂತ್ರ್ಯ ನಂತರ ರಚನೆಯಾದ ಭಾರತದ ಸಂವಿಧಾನವು ಅಸ್ತಿತ್ವದಲ್ಲಿರುವ ಜಾತಿ ತಾರತಮ್ಯವನ್ನು ಮತ್ತು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಮಾನತೆ ಮತ್ತು ಎಲ್ಲರಿಗೂ ಸಮಾನ ಅವಕಾಶವನ್ನು ನೀಡಬೇಕಾದ ಅವಶ್ಯಕತೆಯನ್ನು ಗುರುತಿಸಿದೆ. ಈ ಸಂವಿಧಾನಾತ್ಮಕ ಮಾನ್ಯತೆಯನ್ನು ಈ ಮುಂದಿನ ವಿಶೇಷ ಕ್ರಮಗಳೆಂಬುದಾಗಿ ಪರಿಗಣಿಸಲಾಗಿದೆ.

ಭಾರತವು ಇತರ ದೇಶಗಳೊಂದಿಗೆ ತನ್ನ ವ್ಯಾಪಾರ ಉದಾರೀಕರಣ ಮತ್ತು ತನ್ನ ಆರ್ಥಿಕತೆಯ ರಾಚನಿಕ ಮುಂತಾದ ಹೊಂದಾಣಿಕೆ ಅನೇಕ ಹೊಸ ಕ್ರಮಗಳೊಂದಿಗೆ ೧೯೯೧ರಲ್ಲಿ ಹೊಸ ಆರ್ಥಿಕ ನೀತಿಯನ್ನು ಆರಂಭಿಸಿದೆ. ಇದೊಂದು ಮುಂದುವರಿಯುತ್ತಿರುವ 'ಸುಧಾರಣಾ' ಪ್ರಕ್ರಿಯೆಯಾಗಿದೆ. ಅಂತರರಾಷ್ಟ್ರೀಯ ಒಕ್ಕೂಟದ ಮೇರೆಗೆ, ಭಾರತವು ಸುಮಾರು ೭೩೦ಸರಕುಗಳಿಗೆ ಮಾರುಕಟ್ಟೆ ಪ್ರವೇಶ ಮತ್ತು ಮುಕ್ತ ಸಾಗಾಣಿಕೆಗೆ ಅವಕಾಶ ಒದಗಿಸಿದೆ. ಅದೇ ರೀತಿಯಲ್ಲಿ ಬಂಡವಾಳ ಹೂಡಿಕೆ ಮತ್ತು ಹರಿಯುವಿಕೆಗೆ ಅವಕಾಶವನ್ನು ಕಲ್ಪಿಸಿದೆ. ಅಂತರರಾಷ್ಟ್ರೀಯ ಕಂಪೆನಿಗಳಿಗೆ ವಿಮೆ ಮತ್ತು ಅನೇಕ ಇತರ ಸೇವಾ ವಲಯಗಳಲ್ಲಿ ಅನುಮತಿಯನ್ನು ನೀಡಿದೆ.

೧. ಆಡಳಿತದಲ್ಲಿ ಸಾರ್ವಜನಿಕ ವಲಯದ ಉದ್ಯೋಗ ಕ್ಷೇತ್ರದಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ದಲಿತರಿಗೆ ಪ್ರಮಾಣಾನುಸಾರ (ಜನಸಂಖ್ಯಾಧಾರಿತ) ಪ್ರಾತಿನಿಧ್ಯವನ್ನು ಖಚಿತಪಡಿಸುವುದಕ್ಕೆ ಧನಾತ್ಮಕ, ಕ್ರಿಯಾತ್ಮಕ ಕಾರ್ಯಕ್ರಮ (ಮೀಸಲಾತಿಗಳು).
೨. ಅಸ್ಪೃಶ್ಯತಾ ಅಪರಾಧ ಶಾಸನ, ನಾಗರಿಕ ಹಕ್ಕುಗಳ ರಕ್ಷಣಾ ಶಾಸನ ಮತ್ತು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧಕ) ಶಾಸನ ಮುಂತಾದ ತಾರತಮ್ಯ ನಿವಾರಣಾ ಮತ್ತು ಪ್ರತಿಬಂಧಕ ಕಾನೂನುಗಳು.
೩. ಭೂಸುಧಾರಣಾ ಶಾಸನ.
೪. ದಲಿತರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕರಣಕ್ಕಾಗಿ ವಿಶೇಷ ಕಲ್ಯಾಣ ಕ್ರಮಗಳು ಮತ್ತು ಕಾರ್ಯಕ್ರಮಗಳು.

ಈ ಎಲ್ಲಾ ಕ್ರಮಗಳ ಮೂಲಕ ನಿರ್ದಿಷ್ಟ ಮೂಲ ಆಸ್ತಿಗಳ ಖಾಸಗಿ ಒಡೆತನವನ್ನು ಮತ್ತು ಮಾನವ ಸಂಪನ್ಮೂಲ ಸಾಮರ್ಥ್ಯಗಳನ್ನು ಸುಧಾರಿಸಲು ಮತ್ತು ವಸತಿ, ಆರೋಗ್ಯ, ಕುಡಿಯುವ ನೀರು, ವಿದ್ಯುಚ್ಛಕ್ತಿ ಮುಂತಾದ ಸಾಮಾಜಿಕ ಮತ್ತು ಮೂಲ ಸೇವೆಗಳನ್ನು ದಲಿತರು ಪಡೆಯುವುದನ್ನು ಖಾತ್ರಿಪಡಿಸಲು ಗಮನವನ್ನು ಕೇಂದ್ರೀಕರಿಸಲಾಗಿದೆ. ಈ ಕ್ರಮಗಳಲ್ಲಿ ಹೆಚ್ಚಿನವು ಇನ್ನೂ ಅನುಷ್ಠಾನದ ಹಂತದಲ್ಲಿದೆ. ಯಾವುದೂ ಪೂರ್ಣವಾಗಿಲ್ಲ. ಧನಾತ್ಮಕ ಕಾರ್ಯನೀತಿಯ ಸರ್ಕಾರ ನಡೆಸುವ ಮತ್ತು ಸರ್ಕಾರೀ ಬೆಂಬಲಿತ ಕ್ಷೇತ್ರಗಳಿಗೆ ಮಾತ್ರ ಅನ್ವಯಿಸುತ್ತದೆ. ಇದು ಶೇ.೯೦ಕ್ಕಿಂತಲೂ ಹೆಚ್ಚು ದಲಿತ ಕೂಲಿಕಾರರು ತೊಡಗಿಸಿಕೊಂಡಿರುವ ಖಾಸಗಿ ವಲಯಕ್ಕೆ ಅನ್ವಯವಾಗುವುದಿಲ್ಲ.

ಈಗ ನೀತಿಯು ಬದಲಾವಣೆಯಾಗಿದೆ :

ಹೊಸ ಆರ್ಥಿಕ ನೀತಿಯು, ಆರ್ಥಿಕ ಮತ್ತು ಸಾಮಾಜಿಕ ಆಡಳಿತದಲ್ಲಿ, ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸರ್ಕಾರದ ಪಾತ್ರವನ್ನು ತೀವ್ರವಾಗಿ ಕಡಿಮೆ ಮಾಡುವುದನ್ನು ಸೂಚಿಸುವ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಪ್ರಾರಂಭಿಸಿದೆ. ದಲಿತರ ಮತ್ತು ಇತರ ಬಡವರ ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಗಾದ ವರ್ಗಗಳ ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಚಿಸಲಾದ ೧೯೮೦ರ ಕೆಲವು ನೀತಿಗಳನ್ನು ಪರಿಷ್ಕರಿಸಲಾಗಿದೆ. ಇದನ್ನು ಈ ಮುಂದಿನ ಬೆಳವಣಿಗೆಗಳಿಂದ ಕಂಡುಕೊಳ್ಳಬಹುದು.

೧. ಭೂ ಸುಧಾರಣಾ ಕ್ರಮಗಳನ್ನು ಈಗ ತಡೆಹಿಡಿಯಲಾಗಿದೆ.
೨. ಭೂ ಒಡೆತನಕೊಡ್ಡಿದ್ದ ಮಿತಿಯನ್ನು ಆಯ್ದ ಕಡೆ ಸಡಿಲಗೊಳಿಸಿರುವುದು.
೩. ಸಣ್ಣ ಗೇಣಿದಾರರಿಗೆ ಯಾವುದೇ ರಕ್ಷಣೆ ನೀಡದೆ, ಗೇಣಿಗೆ ನೀಡುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತಿರುವುದು.
೪. ವಿಶೇಷವಾಗಿ ತಾಂತ್ರಿಕ ಮತ್ತು ವೃತ್ತಿಶಿಕ್ಷಣವೂ ಸೇರಿದಂತೆ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶಿಸಲು ಖಾಸಗಿ ವ್ಯಕ್ತಿಗಳಿಗೆ ಅನುಮತಿಸಲಾಗುತ್ತಿದೆ. ಇದರಿಂದ ದಲಿತರು ಮುಂತಾದ ತಾರತಮ್ಯಕ್ಕೊಳಗಾದ ಗುಂಪುಗಳಿಗೆ ಧನಾತ್ಮಕ ಕಾರ್ಯವನ್ನು ಉಪಬಂಧಗಳನ್ನು ಒದಗಿಸದೆ ಇರುವುದರಿಂದ ಅಂಥ ಶಿಕ್ಷಣವು ದುಬಾರಿಯಾಗುತ್ತಿದೆ.
೫. ಬಡವರ ಪರ ಇಲ್ಲದಿರುವ ಖಾಸಗಿ ವಿಮಾ ಕಂಪೆನಿಗಳ ಪ್ರವೇಶಕ್ಕೆ ಉತ್ತೇಜನ ನೀಡಲಾಗುತ್ತಿದೆ.
೬. ಕೈಗಾರಿಕೆ, ಬ್ಯಾಂಕಿಂಗ್ ಮತ್ತು ವಿಮಾ ವಲಯಗಳನ್ನು ಖಾಸಗೀಕರಿಸಲಾಗುತ್ತಿದೆ. ಇದು ಮತ್ತೆ ಖಾಸಗಿ ವಲಯದವರನ್ನು ಯಾವುದೇ ಧನಾತ್ಮಕ ಕಾರ್ಯನೀತಿಗೆ ಬದ್ಧರಾಗಿಸುತ್ತಿಲ್ಲ.
೭. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (ಐಆರ್‌ಡಿಪಿ), ಉದ್ಯೋಗ ಖಾತರಿ ಯೋಜನೆಗಳು ಇತ್ಯಾದಿ ಅನೇಕ ಬಡತನ ನಿವಾರಣಾ ಯೋಜನೆಗಳಿಗೆ ವೆಚ್ಚ ಕಡಿತವನ್ನು ಆರಂಭಿಸಲಾಗಿದೆ.
೮. ಸಾಕಷ್ಟು ಸಾಮಾಜಿಕ ಭದ್ರತೆ ಮತ್ತು ಇತರ ರಕ್ಷಣಾ ಕ್ರಮಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆಯೇ ಕಾರ್ಮಿಕ ಸುಧಾರಣೆಗಳನ್ನು ಯೋಜಿಸಲಾಗುತ್ತಿದೆ.

ಹಿಂದಿನ ನೀತಿಗಳು ಮತ್ತು ಕಾರ್ಯಕ್ರಮಗಳು ಈಗ ಸಾಧ್ಯವಾದಷ್ಟು ವ್ಯತಿರಿಕ್ತವಾಗುತ್ತಿವೆ. ಮುಕ್ತಮಾರುಕಟ್ಟೆ ಆರ್ಥಿಕತೆಗೆ ಅನುಕೂಲ ಕಲ್ಪಿಸುವುದಕ್ಕೋಸ್ಕರ ಸರ್ಕಾರವು ತನ್ನ ಹಿಂದಿನ ನೀತಿಗಳಿಂದ ದೂರ ಸರಿಯುತ್ತಿದೆ.

ಖಾಸಗೀಕರಣ ಮತ್ತು ಮಾರುಕಟ್ಟೆ : ದಲಿತರಿಗೆ ಮತ್ತಷ್ಟು ಪ್ರತ್ಯೇಕತೆ ಮತ್ತು ತಾರತಮ್ಯತೆ :

ಪ್ರತ್ಯೇಕತೆಯ ಜೊತೆಗೆ ದಲಿತರು ಖರೀದಿ ಶಕ್ತಿಯ ಕೊರತೆಯಿಂದಾಗಿ ಮಾರುಕಟ್ಟೆಯಲ್ಲಿ ತೊಂದರೆಗೀಡಾಗುತ್ತಿದ್ದಾರೆ. ಇದು ಜಾತಿಯಾಧಾರಿತ ತಾರತಮ್ಯದಿಂದ ಉಂಟಾಗುತ್ತಿದೆ. ಖಾಸಗೀಕರಣ ಮತ್ತು ಆರ್ಥಿಕ ಆಡಳಿತದಿಂದ ಸರ್ಕಾರದ ವಾಪಾಸಾತಿಯ ಸಂದರ್ಭದಲ್ಲಿ ವಿವಿಧ ಮಾರುಕಟ್ಟೆ ಅನಿಯಂತ್ರಣ ಮತ್ತು ಶಿಕ್ಷಣ, ಆರೋಗ್ಯ, ಕೈಗಾರಿಕೆ ಮತ್ತು ಹಣಕಾಸು ವಲಯಗಳ ಬದಲಾವಣೆಗಳಿಂದ, ದಲಿತರು ಶ್ರಮ, ಮಾರುಕಟ್ಟೆ ಮತ್ತು ಬಂಡವಾಳ, ಭೂಮಿ, ಮಾಹಿತಿ ಮುಂತಾದ ಇತರ ಮಾರುಕಟ್ಟೆಗಳಲ್ಲಿ ಹೆಚ್ಚು

> **ದಲಿತರಲ್ಲಿನ ಬಡತನವು ಹೆಚ್ಚಾಗುತಿದೆ. ೨೦೦೦ದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯ ಜನರ ಪ್ರಮಾಣ ಶೇ. ೪೩ ಆಗಿತ್ತು. ಇದು ಶೇಕಡಾ ೨೩ ರಷ್ಟಿರುವ ಇತರ ಸಮುದಾಯಗಳಿಗೆ ಹೋಲಿಸಿದಾಗ ನಿಜವಾಗಿಯೂ ಹೆಚ್ಚಾಗಿದೆ. ನಿರ್ದಿಷ್ಟವಾಗಿ ದಲಿತ ಕೂಲಿ ಕಾರ್ಮಿಕರಲ್ಲಿ ಬಡತನವು ಜಾಸ್ತಿಯಾಗುತ್ತಿದೆ. ಅಂದರೆ ಶೇ. ೬೦ರಷ್ಟಿದೆ. ೧೯೮೩-೮೪ರಿಂದೀಚೆಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಇತರರಲ್ಲಿನ ಬಡತನದ ಅನುಪಾತವು ಕಡಿಮೆಯಾಗಿದೆ. ಆದಾಗ್ಯೂ ಪರಿಶಿಷ್ಟ ಜಾತಿಗಳಲ್ಲಿ ಬಡತನದ ಇಳಿಮುಖತೆಯು ೧೯೯೦ ರಲ್ಲಿ ತುಂಬಾ ಕಡಿಮೆಯಿತ್ತು. ಇದು, ಪರಿಶಿಷ್ಟ ಜಾತಿಗಳ ಬಡತನ ಇಳಿಮುಖತೆಯ ಅನುಪಾತವು ೧೯೯೦ರಲ್ಲಿ ಗಣನೀಯವಾಗಿ ಕಡಿಮೆಯಾಗಿದೆ.**

ತೊಂದರೆಗೀಡಾಗುತ್ತಿದ್ದಾರೆ. ಈಗಾಗಲೇ ಅವರು 'ಅನೌಪಚಾರಿಕ ಮಾರ್ಗಗಳ' ಮೂಲಕ ಖಾಸಗಿ ವಲಯದಲ್ಲಿ ಉನ್ನತ ಮಟ್ಟದ ನೇಮಕಾತಿ ಮಾಡಿಕೊಳ್ಳುವ ಕಾರಣದಿಂದಾಗಿ ಉದ್ಯೋಗ ಮಾರುಕಟ್ಟೆಯಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದಾರೆ. ಅವಕಾಶಗಳನ್ನು ಪಡೆದುಕೊಳ್ಳುವ ಸಾಮರ್ಥ್ಯದ ಕೊರತೆ ಹಾಗೂ ಅಧಿಕಾರ ರಹಿತತೆಯಿಂದಾಗಿ ದಲಿತರಿಗೆ ತೊಂದರೆಯಾಗುತ್ತಿದೆ.

'ಭೂಮಿಯ ಹಕ್ಕಿ'ಗೆ ಸಂಬಂಧಪಟ್ಟಂತೆ ದಲಿತರ ಮೇಲಾಗುವ ಜಾಗತೀಕರಣದ ಪರಿಣಾಮ :

೧. ದಲಿತರ ಪೈಕಿ ಭೂಮಿ ಇಲ್ಲದವರ ಸಂಖ್ಯೆ ಹೆಚ್ಚುತ್ತಿದೆ : ೧೯೯೧ರಲ್ಲಿ ಭೂ ರಹಿತರು ಮತ್ತು ಬಹುಮಟ್ಟಿಗೆ ಭೂರಹಿತ ಕುಟುಂಬಗಳ ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ ಕುಟುಂಬದ ಸಂಖ್ಯೆಯು ಸುಮಾರು ಶೇ. ೭೦ರಷ್ಟಾಗಿತ್ತು. ೧೯೯೯-೨೦೦೦ದಲ್ಲಿ ಇದು ಶೇ. ೭೫ಕ್ಕೆ ಏರಿಕೆಯಾಗಿದೆ. ಆದ್ದರಿಂದ, ಅನುಸೂಚಿತ ಜಾತಿಗಳ ಕುಟುಂಬದ ಮೂರನೇ ಒಂದರಷ್ಟು ಭೂರಹಿತವಾಗಿ ಅಥವಾ ಬಹುಮಟ್ಟಿಗೆ ಭೂರಹಿತವಾಗಿದ್ದು ಕೂಲಿ ಕೆಲಸವು ಅವರ ಪ್ರಮುಖ ವೃತ್ತಿಯಾಗಿದೆ.

೨. ದಲಿತರ ಪರವಾದ ಭೂಸುಧಾರಣೆಗಳು ಕೊನೆಗೊಳ್ಳುತ್ತಿದೆ :

ಪಾರಂಪರಿಕವಾಗಿ ಭೂಹೀನರಾದ ದಲಿತರಿಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭೂ ಸುಧಾರಣಾ ಕ್ರಮಗಳಾದ ಭೂಮಿತಿ ಮತ್ತು ದಲಿತರಿಗೆ ಭೂ ಒಡೆತನ ಕ್ರಮಗಳಿಂದಾಗಿ ಅಷ್ಟೋ, ಇಷ್ಟೋ ಭೂಮಿ ದೊರೆತಿತ್ತು. ಕೃಷಿ ಕ್ಷೇತ್ರದಲ್ಲಿ ಸಣ್ಣ ಹಿಡುವಳಿದಾರರಾದ ದಲಿತರು ಒಂದಷ್ಟು ಉತ್ಪಾದನೆಯಲ್ಲಿ ತೊಡಗುವವರಾದರು. ಆದರೆ ಜಾಗತೀಕರಣ ಮತ್ತು ರಚನಾತ್ಮಕ ಹೊಂದಾಣಿಕೆ ನೀತಿಯಡಿ ಸರ್ಕಾರದ ಪ್ರಸ್ತುತ ಕಾರ್ಯಕ್ರಮಗಳು ನಿಗಮೀಕರಣದ ಬೇಸಾಯದತ್ತ ಕೃಷಿ ಭೂಮಿಯ ಒಡೆತನವು ಪಲ್ಲಟಗೊಳ್ಳುತ್ತಿದೆ. ಇದರಿಂದಾಗಿ ಅಲ್ಲಲ್ಲಿ ಭೂಮಿತಿಗಳನ್ನು ನಿವಾರಿಸಿಕೊಳ್ಳುತ್ತ ಆಯ್ದ ಕೆಲವು ಕ್ಷೇತ್ರಗಳಲ್ಲಿ ಮಾತ್ರ ತೋಟಗಾರಿಕೆ ಮತ್ತು ಮೀನುಗಾರಿಕೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.

೩. ಖಾಸಗೀಕರಣವು ಭೂಮಿ ಹಂಚಿಕೆಯ ಪ್ರಕ್ರಿಯೆಯನ್ನು ಕಸಿದುಕೊಂಡಿದೆ :

ಕಳೆದ ಒಂದು ದಶಕದಿಂದೀಚೆಗೆ ಸರ್ಕಾರವು ಭೂಹಂಚಿಕೆಗೆ ತಡೆಯನ್ನು ಒಡ್ಡಿದೆ. ಪ್ರಸ್ತುತ ಇರುವಂತಹ ಭೂಹಿಡುವಳಿ ಹಕ್ಕುಗಳನ್ನು ಕಾಯಂಗೊಳಿಸುತ್ತಿಲ್ಲ. ಹೀಗಿರುವಾಗ ಭೂ ಮಾರುಕಟ್ಟೆಯಲ್ಲಿ ದಲಿತರಿಗೆ ಪ್ರಾಮುಖ್ಯತೆ ಇಲ್ಲವಾಗಿದೆ. ಈ ಭೂ ಮಾರುಕಟ್ಟೆ ಕ್ರಮಗಳನ್ನು ಕೈಗೊಳ್ಳುವಲ್ಲಿ ದಲಿತರು ತೀರ ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ. ಆಯ್ದ ಎಡೆಗಳಲ್ಲಿ ಭೂ ಮಿತಿಯನ್ನು ತೆಗೆಯುವುದರಿಂದಾಗಿ ಕೃಷಿ ಕ್ಷೇತ್ರವನ್ನು ನಿಗಮಗಳು/ಕಂಪೆನಿಗಳು ವಶಕ್ಕೆ ತೆಗೆದುಕೊಳ್ಳಲು ಪ್ರೋತ್ಸಾಹಿಸಿದಂತಾಗಿ ಅನೇಕ ಬಡದಲಿತರ ಬದುಕನ್ನು ಸರ್ವನಾಶ ಮಾಡಲಾಗುತ್ತದೆ.

ದಲಿತರಿಗೆ ಇರುವ ಔದ್ಯೋಗಿಕ ಅವಕಾಶಗಳ ಮೇಲೆ ಜಾಗತೀಕರಣದ ಪರಿಣಾಮ :

೧. ದಲಿತರಲ್ಲಿ ಹೆಚ್ಚಿನ ಸಂಖ್ಯೆಯ ಕೂಲಿಕಾರ್ಮಿಕರಿದ್ದಾರೆ. ಭೂಮಿ ಹೊಂದಲು ಸಾಧ್ಯವಾಗದ್ದರಿಂದ (ನಿರ್ದಿಷ್ಟ ಮೂಲ ಆಸ್ತಿ) ದಲಿತ ಕುಟುಂಬವು ಕೈ ಕಸುಬನ್ನು ಹೆಚ್ಚಾಗಿ ಅವಲಂಬಿಸುತ್ತಿದ್ದಾರೆ. ೨೦೦೦ದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಕೂಲಿ ಕೆಲಸಕ್ಕೆ ಅವಲಂಬಿತರಾದ ಕುಟುಂಬಗಳು ಗ್ರಾಮೀಣ ಮತ್ತು ನಗರ ಪರಿಶಿಷ್ಟ ಜಾತಿಗಳ ಕುಟುಂಬಗಳಲ್ಲಿ ಶೇ. ೬೫ ಆಗಿತ್ತು.

೨. ದಲಿತರು ಸ್ವ ಉದ್ಯೋಗದಿಂದ ಕೂಲಿಕೆಲಸದೆಡೆಗೆ ಚಲಿಸುತ್ತಿದ್ದಾರೆ :

ಸರ್ಕಾರದ ಉದಾರೀಕರಣ ನೀತಿಗೆ ಹೊಂದಿಕೊಂಡು, ೧೯೯೦ರಲ್ಲಿ ದಲಿತರ ಉದ್ಯೋಗದ ಗುಣಮಟ್ಟದಲ್ಲಿಯೂ ಇಳಿಮುಖತೆ ಕಂಡುಬಂದಿತು. ೧೯೯೦ರಲ್ಲಿ ಸ್ವಯಂ ಉದ್ಯೋಗಿ ಕೃಷಿಕರಾಗಿ ಕೃಷಿಯಲ್ಲಿ ನಿರತವಾಗಿರುವ ಕುಟುಂಬಗಳ ಶೇಕಡಾವಾರು ಪ್ರಮಾಣವು ಇಳಿಮುಖವಾದರೆ ಕೃಷಿ ಕಾರ್ಮಿಕ ಕುಟುಂಬಗಳ ಮತ್ತು ಕೃಷಿಯೇತರ ಸ್ವ ಉದ್ಯೋಗ ಚಟುವಟಿಕೆಗಳ ಸಂವಾದಿ ಏರಿಕೆಯೂ ಕಂಡುಬರುತ್ತಿದೆ.

೩. ನಗರ ದಲಿತರು ನಿಶ್ಚಿತ ಕೂಲಿಯಿಂದ ಅನಿಶ್ಚಿತ ಕೂಲಿಯೆಡೆಗೆ ಸಾಗುತ್ತಿದ್ದಾರೆ. ಪರಿಶಿಷ್ಟ ಜಾತಿಗಳ ಕೂಲಿಯ ಅನಿಶ್ಚಿತತೆಯ ಜೊತೆಗೆ ೧೯೯೦ರಿಂದ ನಗರ ಪ್ರದೇಶಗಳಲ್ಲಿ ಉದ್ಯೋಗದ ರೀತಿಯಲ್ಲಿಯೂ ಋಣಾತ್ಮಕ ಬದಲಾವಣೆಯನ್ನು ಗುರುತಿಸಬಹುದು. ಪರಿಶಿಷ್ಟ ಜಾತಿಯಲ್ಲಿ ನಿಯತವಾಗಿ ಮಜೂರಿ ಪಡೆಯುವವರ ಶೇಕಡಾವಾರು ಪ್ರಮಾಣವು ಇಳಿಮುಖಗೊಂಡಿದ್ದು ಇದು ಇತರ ವಲಯಗಳಲ್ಲಿರುವಂತೆ ವೇತನ ಪಡೆಯುವ ವಲಯದಲ್ಲಿರುವವರ ಜೊತೆಗೆ ಪಾಲ್ಗೊಳ್ಳುವುದಕ್ಕೆ ಅವರ ಅಸಮರ್ಥತೆಯನ್ನು ಸೂಚಿಸುತ್ತದೆ. ಸ್ವ-ಉದ್ಯೋಗ ಮತ್ತು ಅನಿಶ್ಚಿತ ದುಡಿಮೆಯೆಡೆಗೆ ದೊಡ್ಡ ಬದಲಾವಣೆ ನಡೆಯುತ್ತಿದೆ. ವಾಸ್ತವವಾಗಿ ಇದು, ಅನಿಶ್ಚಿತ ಕೂಲಿಕಾರ್ಮಿಕರ ಮತ್ತು ಸ್ವ ಉದ್ಯೋಗಿಗಳ ಪ್ರಮಾಣದಲ್ಲಿ ೧೯೮೦ರಲ್ಲಿ ಪ್ರವೃತ್ತಿಗೆ ವಿರುದ್ಧವಾಗಿದ್ದು, ಇದು ಗಣನೀಯವಾಗಿ ಇಳಿಮುಖವಾಗಿದೆ.

೪. ಖಾಸಗೀಕರಣದಿಂದ ನಗರ ದಲಿತರ ನಿರುದ್ಯೋಗವು ಹೆಚ್ಚಾಗಿದೆ:

ನಗರ ಪ್ರದೇಶದಲ್ಲಿ ನಿರುದ್ಯೋಗ ಪ್ರಮಾಣದ ಪ್ರವೃತ್ತಿಯನ್ನು ಎಲ್ಲ ಸ್ಥಾನಮಾನವನ್ನಾಧರಿಸಿ ೧೯೭೭ರಿಂದ ೧೯೯೩ರ ಅವಧಿಯಲ್ಲಿ ಗಮನಿಸಿದರೆ, ನಿರುದ್ಯೋಗ ಪ್ರಮಾಣವು ಒಂದೇ ಸಮನಾಗಿ ಕಡಿಮೆಯಾಗಿರುವುದು ಕಂಡುಬರುತ್ತದೆ. ೧೯೯೦ ರಿಂದೀಚೆಗೆ (೧೯೯೩-೧೯೯೯) ವಿಶೇಷವಾಗಿ ಗ್ರಾಮೀಣ ಪ್ರದೇಶಗಳೂ ಸೇರಿದಂತೆ ನಿರುದ್ಯೋಗ ಪ್ರಮಾಣದಲ್ಲಿ ಹೆಚ್ಚಳವಾಗಿದ್ದು ಸಂಪೂರ್ಣ ವಿರೋಧಾತ್ಮಕವಾಗಿದೆ. ಖಾಸಗೀಕರಣದ ಪರಿಣಾಮವಾಗಿ ಸಾರ್ವಜನಿಕ ವಲಯದಲ್ಲಿಯೂ ನಿಶ್ಚಿತ ಸಂಬಳದ ಉದ್ಯೋಗಗಳಲ್ಲಿಯೂ ಗಣನೀಯ ಕಡಿತವಾಗುತ್ತದೆ.

೫. ಖಾಸಗೀಕರಣವು ಹಿಂಬಾಗಿಲ ಮೂಲಕ ಮೀಸಲಾತಿ ರಹಿತತೆಯನ್ನು ಪೋಷಿಸುತ್ತದೆ :

ಸರ್ಕಾರದ ನವ- ಉದಾರೀಕರಣ ಆರ್ಥಿಕ ನೀತಿಯಿಂದಾಗಿ, ಅನೇಕ ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಲಾಗಿದೆ ಮತ್ತು ಭವಿಷ್ಯದಲ್ಲಿ, ಖಾಸಗಿ ಕ್ಷೇತ್ರವು ಅನೇಕ ವಲಯಗಳಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ದಲಿತೇತರರು ತಮ್ಮ ಹೆಚ್ಚಿನ ಮಾನವ ಸಂಪನ್ಮೂಲ ಅಭಿವೃದ್ಧಿಯಿಂದ ಹೊಸ ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಹೆಚ್ಚಿನ ಲಾಭ ಗಳಿಸುತ್ತಾರೆ. ಶಿಕ್ಷಣ ಮತ್ತು ಕೌಶಲ ಅವಕಾಶದಿಂದ ತಡೆಯುವ ಜಾತಿ ತಾರತಮ್ಯ ಮತ್ತು ಉದ್ಯೋಗ ತಾರತಮ್ಯದ ಕಾರಣದಿಂದ ಕಡಿಮೆ ಮಾನವ ಸಂಪನ್ಮೂಲಗಳನ್ನು ಹೊಂದಿರುವುದರಿಂದ ದಲಿತರಿಗೆ ಹಾಗೆ ಗಳಿಸಲು ಸಾಧ್ಯವಾಗುವುದಿಲ್ಲ.

೬. ಉದಾರೀಕರಣ ನೀತಿಯ ಭಾಗವಾಗಿ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳ ಖಾಸಗೀಕರಣವು ಸಾಲ ನೀಡುವ ಮತ್ತು ದಲಿತರಿಗೆ ಹಾಗೂ ಇತರ ಬಡವರಿಗೆ ಸಾಲ ನೀಡುವ ಆದ್ಯತೆಯಿಂದ ನಿಧಾನವಾಗಿ ದೂರ ಸರಿಯುತ್ತಿದೆ. ಗ್ರಾಮೀಣ ಭಾಗ ಮತ್ತು ಬಡವರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರಿಂದ ಉದ್ದೇಶಪೂರ್ವಕವಾಗಿ ೧೯೬೯ರಲ್ಲಿ ಬ್ಯಾಂಕಿಂಗ್ ಕ್ಷೇತ್ರವನ್ನು ರಾಷ್ಟ್ರೀಕರಣ ಮಾಡಲಾಯಿತು.

ಬೇರುಬಿಟ್ಟ ಶಾಶ್ವತ ಬಡತನ :

ದಲಿತರಲ್ಲಿನ ಬಡತನವು ಹೆಚ್ಚಾಗುತ್ತಿದೆ. ೨೦೦೦ದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯ ಜನರ ಪ್ರಮಾಣ ಶೇ. ೪೩ ಆಗಿತ್ತು. ಇದು ಶೇಕಡಾ ೨೩ ರಷ್ಟಿರುವ ಇತರ ಸಮುದಾಯಗಳಿಗೆ ಹೋಲಿಸಿದಾಗ ನಿಜವಾಗಿಯೂ ಹೆಚ್ಚಾಗಿದೆ. ನಿರ್ದಿಷ್ಟವಾಗಿ ದಲಿತ ಕೂಲಿ ಕಾರ್ಮಿಕರಲ್ಲಿ ಬಡತನವು ಜಾಸ್ತಿಯಾಗುತ್ತಿದೆ. ಅಂದರೆ ಶೇ. ೬೦ರಷ್ಟಿದೆ.

೧೯೮೩-೮೪ರಿಂದೀಚೆಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಇತರರಲ್ಲಿನ ಬಡತನದ ಅನುಪಾತವು ಕಡಿಮೆಯಾಗಿದೆ. ಆದಾಗ್ಯೂ ಪರಿಶಿಷ್ಟ ಜಾತಿಗಳಲ್ಲಿ ಬಡತನದ ಇಳಿಮುಖತೆಯು ೧೯೯೦ ರಲ್ಲಿ ತುಂಬಾ ಕಡಿಮೆಯಿತ್ತು. ಇದು, ಪರಿಶಿಷ್ಟ ಜಾತಿಗಳ ಬಡತನ ಇಳಿಮುಖತೆಯ ಅನುಪಾತವು ೧೯೯೦ರಲ್ಲಿ ಗಣನೀಯವಾಗಿ ಕಡಿಮೆಯಾಗಿದೆ.

ದಲಿತರಿಗೆ ದೊರೆಯುವ ಶೈಕ್ಷಣಿಕ ಅವಕಾಶಗಳು ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವುದರ ಮೇಲೆ ಜಾಗತೀಕರಣದ ಪರಿಣಾಮ : ದಲಿತರಿಗಿರುವ ಶೈಕ್ಷಣಿಕ ಅವಕಾಶಗಳು ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವುದರ ಮೇಲಾಗುವ ಜಾಗತೀಕರಣದ ಪರಿಣಾಮವನ್ನು ಈಗಾಗಲೇ ಈ ಕ್ಷೇತ್ರಗಳಲ್ಲಿರುವ ಪ್ರತ್ಯೇಕತೆಯ ವಿರುದ್ಧ ಅರ್ಥಮಾಡಿಕೊಳ್ಳಬೇಕಾಗಿದೆ. ದಲಿತರು ಮತ್ತು ಇತರರ ಮಧ್ಯೆಯಿರುವ ಸಾಕ್ಷರತೆ ಮತ್ತು ಶೈಕ್ಷಣಿಕ ಮಟ್ಟದ ಅಂತರವು ಎದ್ದು ಕಾಣುವಂತಿದ್ದು, ದಲಿತ ಮಕ್ಕಳು ಶಾಲೆಗಳಿಂದ ಹೊರಗುಳಿಯುವ, ಬಿಡುವ ಪ್ರಮಾಣ ಅಧಿಕವಾಗಿದೆ. ಶಾಲೆಗಳಲ್ಲಿ ಆಚರಣೆಯಲ್ಲಿರುವ ಜಾತಿ-ಲಿಂಗ ಭೇದಗಳು ಮತ್ತು ಶಿಕ್ಷಣದ ಗುಣಮಟ್ಟದಲ್ಲಿ ಕುಸಿತ... ಮುಂತಾದ ಸಮಸ್ಯೆಗಳು ದಲಿತರನ್ನು ಬಾಧಿಸುತ್ತಿವೆ.

ಅಲ್ಲದೆ ಆರೋಗ್ಯ ಮತ್ತು ಆರೋಗ್ಯ ಸೌಲಭ್ಯಗಳನ್ನು ಗಮನಕ್ಕೆ ತೆಗೆದುಕೊಂಡರೆ ಅಲ್ಲೂ ದಲಿತರು ಮತ್ತು ಇತರರ ಮಧ್ಯೆ ದೊಡ್ಡ ಅಂತರ ಕಂಡುಬರುತ್ತದೆ. ಪರಿಶಿಷ್ಟ ಜಾತಿಗಳಲ್ಲಿನ ಅಧಿಕ ಮರಣ ಮತ್ತು ಶಿಶು ಸಾವು ನೇರವಾಗಿ ಬಡತನ ಮತ್ತು ಶೈಕ್ಷಣಿಕ ಸ್ಥಾನಮಾನಗಳೊಂದಿಗೆ ತಳುಕು ಹಾಕಿಕೊಂಡಿದೆ. ಅಲ್ಲದೆ ಅವರಿಗೆ ದೊರೆಯುವ ಆರೋಗ್ಯ ಸೇವೆಗಳ ಲ್ಲಿರುವ ಭೇದವೂ ಕಾರಣವಾಗಿದೆ.

ಜಾಗತೀಕರಣದಡಿ ಭಾರತದಲ್ಲಿ ಜಾರಿಗೆ ಬಂದ ಆರ್ಥಿಕ ಸುಧಾರಣೆಗಳ ನೇರ ಪ್ರಭಾವ ವೆಂದರೆ ಸಾರ್ವಜನಿಕ ಆರೋಗ್ಯಕ್ಕಾಗಿ ಸರ್ಕಾರ ಖರ್ಚು ಮಾಡುತ್ತಿದ್ದ ಹಣದಲ್ಲಿ ಕಡಿತ ಮಾಡಿರುವು ದಲ್ಲದೆ, ಅಂತಹ ಖರ್ಚನ್ನು ಸಹ ಹಿಂತೆಗೆದುಕೊಳ್ಳಲಾಗು ತ್ತಿದೆ. ಇದು ಸಂವಿಧಾನಾತ್ಮಕ ಜವಾಬ್ದಾರಿಗಳಿಂದ ಸರ್ಕಾರ ತಪ್ಪಿಸಿಕೊಳ್ಳುತ್ತಿರುವುದನ್ನು ಸೂಚಿಸುತ್ತದೆ.

೧. ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣ : ಸರ್ಕಾರ ಶೈಕ್ಷಣಿಕ ರಂಗದಿಂದಲೇ ಕಾಲ್ತೆಗೆಯುತ್ತಿರುವುದು 'ದಲಿತರಿಗೆ ಶಿಕ್ಷಣ ಒದಗಿಸುವುದು ತನ್ನ ಕರ್ತವ್ಯ' ಎನ್ನುವು ದನ್ನು ಮರೆತುಬಿಟ್ಟಂತಾಗಿದೆ. ಇದರಿಂದಾಗಿ ಶಿಕ್ಷಣದ ಖಾಸಗೀಕರಣಕ್ಕೆ ಮತ್ತು ವ್ಯಾಪಾರೀಕರಣಕ್ಕೆ ಕುಮ್ಮಕ್ಕು ಕೊಟ್ಟಂತಾಗಿದೆ. ಶಿಕ್ಷಣದ ವ್ಯಾಪಾರೀಕರಣದಿಂದಾಗಿ, ಖಾಸಗೀ ಸಂಸ್ಥೆಗಳು ವಿಧಿಸುವ ದುಬಾರಿ ಹಣವನ್ನು ನೀಡ ಲಾಗದೆ ದಲಿತರು ಶಿಕ್ಷಣದಿಂದ ವಂಚಿತರಾಗುತ್ತಾರೆ.

೨. ಖಾಸಗೀಕರಣವು ದಲಿತರ ಮಧ್ಯೆ ಲಿಂಗ ತಾರತಮ್ಯ ವನ್ನು ಪೋಷಿಸುತ್ತದೆ:

ಶಿಕ್ಷಣ ದುಬಾರಿಯಾಗುತ್ತಿದ್ದಂತೆ, ದಲಿತ ಹುಡುಗರಿಗೆ ಮಾತ್ರ ಶಿಕ್ಷಣದ ಅವಕಾಶ ದೊರೆತು, ಈಗಾಗಲೇ ಕಡೆಗಣಿತವಾಗಿರುವ ದಲಿತ ಹೆಣ್ಣುಮಕ್ಕಳ ಸಾಕ್ಷರತೆ ಮತ್ತಷ್ಟು ಹದಗೆಡುತ್ತದೆ.

೩. ಜಾಗತೀಕರಣದ ಪರಿಣಾಮದಿಂದಾಗಿ ಅನಕ್ಷರತೆ, ಬಡತನ ಮತ್ತು ತಾರತಮ್ಯ ಅಧಿಕಗೊಂಡು, ದಲಿತರು ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಪಡೆಯಲು ಅಸಮರ್ಥರಾಗಿಬಿಡುತ್ತಾರೆ.

೪. ಖಾಸಗೀಕರಣವು ಅವಕಾಶಗಳ ಎಟುಕುವಿಕೆಯನ್ನು ಇಲ್ಲವಾಗಿಸುತ್ತದೆ. ಅನೇಕ ದಲಿತ ಗ್ರಾಮಗಳು ಸಾರ್ವಜನಿಕ ಅಥವಾ ಖಾಸಗೀ ಆರೋಗ್ಯ ಕೇಂದ್ರಗಳ ಸೌಲಭ್ಯಗಳನ್ನು ಪಡೆಯಲಾಗುತ್ತಿಲ್ಲ. ಏಕೆಂದರೆ ಆ ಗ್ರಾಮಗಳು ತುಂಬಾ ದೂರದಲ್ಲಿವೆ. ಅಲ್ಲದೆ ಅಸ್ಪೃಶ್ಯತೆಯಿಂದಾಗಿ ಈ ಕೇಂದ್ರಗಳಲ್ಲಿನ ಸಿಬ್ಬಂದಿ ದಲಿತರಿಗೆ ಮತ್ತು ಆ ಗ್ರಾಮಗಳಿಗೆ ಸೇವೆಗಳನ್ನು ಒದಗಿಸುವುದಿಲ್ಲ.

ಜಾಗತೀಕರಣದಿಂದಾಗಿ ದಲಿತ ಮಹಿಳೆಯರಿಗೇನಾಗುತ್ತಿದೆ?

ಮೊದಲೇ ದಲಿತ ಮಹಿಳೆಯರು ಜಾತಿ, ವರ್ಗ ಮತ್ತು ಲಿಂಗ ತಾರತಮ್ಯಕ್ಕೊಳಗಾಗಿದ್ದಾರೆ. ಈ ತಾರತಮ್ಯವನ್ನು ಜಾಗತೀಕರಣವು ಈ ಕೆಳಗಿನ ನಿರ್ದಿಷ್ಟ ಸಂಗತಿಗಳ ಮೂಲಕ ಮತ್ತಷ್ಟು ತೀವ್ರಗೊಳಿಸುತ್ತದೆ:

೧. ಅವರಲ್ಲಿ ಶೇ. ೭೧ರಷ್ಟು ಮಂದಿ ಕೃಷಿ ಕಾರ್ಮಿಕರಿದ್ದಾರೆ.
೨. ಅವರಲ್ಲಿ ಕೇವಲ ಶೇ. ೨೩ರಷ್ಟು ಮಾತ್ರ ಅಕ್ಷರಸ್ಥರಾಗಿದ್ದಾರೆ.
೩. ಅವರಲ್ಲಿ ಶೇ. ೬೪ರಷ್ಟು ಮಂದಿ ಶಾಲೆ ಬಿಡುತ್ತಾರೆ.
೪. ಮಹಿಳೆಯರ ದುಡಿಮೆಯಲ್ಲಿ ಅವರದ್ದೇ ಅಧಿಕ ಪಾಲು.
೫. ಅವರಲ್ಲಿ ಅನೇಕರಿಗೆ ಮನೆ ಎಂಬುದಿಲ್ಲ ಮತ್ತು ಆರೋಗ್ಯದ ವಾತಾವರಣ ಇರುವುದಿಲ್ಲ.
೬. ಮೇಲ್ಜಾತಿ ಗಂಡಸರಿಂದ ಅವರು ಲೈಂಗಿಕ ಕಿರುಕುಳ ಮತ್ತು ಹಲ್ಲೆಗೆ ಒಳಗಾಗುತ್ತಾರೆ.

ಸಾಮಾಜಿಕ ಸೇವೆಗಳ ಮೇಲೆ ಸರ್ಕಾರ ಖರ್ಚು ಮಾಡುವುದನ್ನು ಕಡಿತಗೊಳಿಸುವಂತೆ ಜಾಗತೀಕರಣವು ಪ್ರಚೋದಿಸುತ್ತದೆ. ಇದರ ನೇರ ಪರಿಣಾಮವೆಂದರೆ ದಲಿತ ಮಹಿಳೆಯರ ಆರೋಗ್ಯ, ಶಿಕ್ಷಣ, ಭದ್ರತೆ, ಅಭಿವೃದ್ಧಿ ಮತ್ತು ಅವರ ಬದುಕು ಸಂಕಷ್ಟಕ್ಕೆ ಸಿಲುಕುತ್ತದೆ. ಹಾಗೆಯೇ ಕಾರ್ಮಿಕ ನೀತಿಗಳಲ್ಲಿನ ಬದಲಾವಣೆಗಳು ದಲಿತ ಮಹಿಳೆಯರ ಶ್ರಮಶಕ್ತಿಯ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ.



ದಲಿತರು ಭಾರತೀಯ ಸಮಾಜದಲ್ಲಿ ಅತೀ ಅಂಚಿಗೆ (ತಳಕ್ಕೆ) ತಳ್ಳಲ್ಪಟ್ಟ ವರ್ಗವಾಗಿದ್ದು ಇತರ ಭಾರತದ ಬಡವ ರೊಂದಿಗೆ ಅತೀ ಬಡತನವನ್ನು ಅನುಭವಿಸುವವರು. ಆದರೆ ಇದರ ಜೊತೆಗೆ ಹಾಗೂ ತುಂಬಾ ಮುಖ್ಯವಾದದ್ದೆಂದರೆ ಜಾತಿ, ಹುಟ್ಟು ಮತ್ತು ವೃತ್ತಿಯ ಕಾರಣಕ್ಕಾಗಿ ಮಾರುಕಟ್ಟೆಯಲ್ಲಿ ಮತ್ತು ಮಾರುಕಟ್ಟೆಯ ಹೊರಗೆ ಆರ್ಥಿಕ ಕ್ಷೇತ್ರಗಳಲ್ಲಿ ದಲಿತರು ಬಹಿಷ್ಕಾರ ಮತ್ತು ತೀವ್ರವಾದ ತಾರತಮ್ಯಕ್ಕೊಳ ಗಾದವರಾಗಿದ್ದಾರೆ.

ದಲಿತರ ಮೇಲಿನ ದೌರ್ಜನ್ಯ :

ಸಾರ್ವಜನಿಕ ವಲಯಗಳಲ್ಲಿ ದಲಿತರು ನಿರಂತರವಾಗಿ ಅಸ್ಪೃಶ್ಯತೆ ಮತ್ತು ತಾರತಮ್ಯಕ್ಕೊಳಗಾಗುತ್ತಿದ್ದಾರೆ. ಕೆಳಗಿನ ಅಂಕಿ-ಅಂಶಗಳು ಇದನ್ನು ತೋರಿಸುತ್ತವೆ. ಕಳೆದ ೧೬ ವರ್ಷಗಳ ಅವಧಿಯಲ್ಲಿ ಅಂದರೆ ೧೯೮೧ರಿಂದ ೨೦೦೦ ದವರೆಗೆ ದೇಶದಲ್ಲಿ ಪರಿಶಿಷ್ಟ ಜಾತಿಗಳ ವಿರುದ್ಧ ದಾಖಲಾಗಿರುವ ಅಪರಾಧಗಳು ಮತ್ತು ದೌರ್ಜನ್ಯಗಳ ಒಟ್ಟು ಸಂಖ್ಯೆ ೩,೫೭,೯೪೫. ದಾಖಲಿಸದ ಘಟನೆಗಳನ್ನು ಇಲ್ಲಿ ಸೇರಿಸಿದ್ದಲ್ಲಿ ಈ ಸಂಖ್ಯೆ ಮತ್ತಷ್ಟು ಹೆಚ್ಚುತ್ತದೆ.

ಅಧಿಕ ದೌರ್ಜನ್ಯಗಳು ಆರ್ಥಿಕ ಸಂಗತಿಗಳ ಮೇಲೆಯೇ ಕೇಂದ್ರೀಕರಿಸಿದೆ. ಜಾಗತೀಕರಣ ದಿಂದಾಗಿ ದಲಿತರ ಆರ್ಥಿಕಾಭಿವೃದ್ಧಿಯ ಅವಕಾಶ ಗಳು ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಇಂಥ ಜಾತಿ ದೌರ್ಜನ್ಯಗಳು ಮತ್ತಷ್ಟು ಹೆಚ್ಚಿ ದಲಿತರಲ್ಲೆ ದಲಿತರಾದವರಿಗೆ ಮಾರಕವಾಗಲಿದೆ.

ಕವಲುದಾರಿಯಲ್ಲಿ ದಲಿತರು :

ಒಂದಷ್ಟು ಅನುಕೂಲಗಳನ್ನು ಹೊರತುಪಡಿಸಿ ನೋಡಿದ್ದಲ್ಲಿ, ಭೂ ಒಡೆತನ ಮತ್ತು ಸಾಕ್ಷರತೆ ಮುಂತಾದ ವಿಷಯ ಗಳಿಗೆ ಸಂಬಂಧಿಸಿದಂತೆ ಭಾರತೀಯ ಸಮಾಜದಲ್ಲಿ ದಲಿತರು ಮತ್ತು ಇತರೆ ಗುಂಪುಗಳ ಮಧ್ಯೆ ಅಂತರ ನಿರಂತರವಾಗಿ ಹೆಚ್ಚುತ್ತಿದೆ. ಮಾರುಕಟ್ಟೆ ಅಥವಾ ಇತರೆ ವ್ಯವಹಾರಗಳಲ್ಲಿ ತಾರತಮ್ಯ ತಾಂಡವವಾಡುತ್ತಿರುವುದನ್ನು ಹೊರತು ಪಡಿಸಿಯೂ ಸಹ ಶಿಕ್ಷಣ, ಆರೋಗ್ಯ, ಆಶ್ರಯ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ ಮುಂತಾದ ಸಾಮಾಜಿಕ ಸೇವೆ ಗಳಿಂದ ದಲಿತರನ್ನು ವಂಚಿಸುತ್ತಿರುವುದರಿಂದ ದಲಿತರಲ್ಲಿ ಉಲ್ಬಣಗೊಳ್ಳುತ್ತಿರುವ ಬಡತನಕ್ಕೆ ಅವುಗಳು ನೇರ ಸಾಂಘಿಕ ಕಾರಣಗಳಾಗುತ್ತವೆ. ಇದನ್ನು ಇತರೆ ಯಾವುದೇ ಸಮು ದಾಯದೊಟ್ಟಿಗೆ ತುಲನಾತ್ಮಕವಾಗಿ ನೋಡಿದರೆ ಗೊತ್ತಾಗುತ್ತದೆ.

ಅಲ್ಲದೆ, ಆಧುನಿಕ ಭಾರತದಲ್ಲಿ ನಿರಂತರವಾಗಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ದೌರ್ಜನ್ಯಗಳಿಂದಾಗಿಯೂ ದಲಿತರು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅಂದರೆ ದಲಿತರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಿಸುತ್ತಿರುವುದಕ್ಕೆ ಇದೇ ಸಾಕ್ಷಿಯಾಗು ತ್ತಿದೆ. ಗೌರವಯುತ ಜೀವನ ಮತ್ತು ಘನತೆಯ ಬದುಕು ದಲಿತರಿಗೆ ಸಾಧ್ಯವಾಗಬೇಕಾದರೆ ಇನ್ನೂ ದಶಕಗಳೇ ಉರುಳಬೇಕಾಗಿದೆಯೇನೋ !

ನಿಜ ಸಂಗತಿಯೆಂದರೆ ದಲಿತರು ಇಂದು, ಹಿಂದಿನ ೫೦ ವರ್ಷಗಳಿಗಿಂತ ಹೆಚ್ಚು ಸುಧಾರಿಸಿದ್ದಾರೆ. ಈ ಹಿಂದೆ ಅಸಾಧ್ಯವೆನಿಸಿದ್ದ ಭೂ ಒಡೆತನ ಮತ್ತು ಇತರೆ ಬಂಡವಾಳದ ಮೂಲಗಳು ಹಲವು ಮಂದಿ ದಲಿತ ಕುಟುಂಬಗಳಿಗೆ ದೊರೆತಿವೆ. ನಗರಗಳಲ್ಲಿ ಶೇ. ೩೮ರಷ್ಟು ಪರಿಶಿಷ್ಟ ಜಾತಿಗಳು ಮೀಸಲಾತಿಯಿಂದಾಗಿ ನೌಕರಿಯನ್ನು ಪಡೆದುಕೊಂಡಿವೆ. ಸಾಕ್ಷರತೆಯೂ ಸಹ ನಿಧಾನವಾಗಿಯಾದರೂ ಹೆಚ್ಚಾಗಿದೆ. ಇವುಗಳೆಲ್ಲವುಗಳ ಸಾಂಘಿಕ ಪ್ರಯತ್ನದಿಂದಾಗಿ ದಲಿತರಲ್ಲಿನ ಬಡತನವು ಸ್ವಲ್ಪಮಟ್ಟಿಗೆ ತಗ್ಗಿದೆ. ಹೀಗಿದ್ದರೂ, ಈ ಸಣ್ಣ ಗಳಿಕೆ ಸರ್ಕಾರ ಜಾರಿಗೊಳಿಸಿರುವ ತಾರತಮ್ಯ ವಿರೋಧಿ ಕಾನೂನು

ಮತ್ತು ಅನುಸರಿಸಿದ ಕಲ್ಯಾಣ ಕಾರ್ಯಕ್ರಮಗಳಿಂದಾಗಿ ಎಂದೇ ಹೇಳಬೇಕು. ಮತ್ತೊಂದು ಸಾಧಿತ ಸತ್ಯವೆಂದರೆ ಈ ಎಲ್ಲಾ ಸಾಧನೆಗಳು ಹೊಸ ಆರ್ಥಿಕ ನೀತಿಯಿಂದಾಗಿ ಕೊಚ್ಚಿ ಹೋಗುವ ಅಪಾಯ ಎದುರಾಗಿದೆ. ಇಂಥ ನಿರಾಶಾದಾಯಕ ವಿದ್ಯಮಾನದಲ್ಲಿ ದಲಿತರು ಜಾಗತೀಕರಣದ ಪ್ರಧಾನ ಪ್ರಕ್ರಿಯೆಗಳನ್ನು ಎದುರಿಸಬೇಕಾಗಿದೆ.

ಭೂ ಒಡೆತನದ ಹಕ್ಕಿನ ಮೇಲೆ ಜಾಗತೀಕರಣದ ಪರಿಣಾಮ:

'ನಿಮಗೆ ಭೂಮಿ ಇಲ್ಲ, ಏಕೆಂದರೆ ಬೇರೆಯವರು ಅದನ್ನು ಕಬಳಿಸಿದ್ದಾರೆ; ನಿಮಗೆ ಸ್ಥಾನಮಾನವಿಲ್ಲ ಏಕೆಂದರೆ ಬೇರೆಯವರು ಅದನ್ನು ಏಕಸ್ವಾಮ್ಯಕ್ಕೊಳಪಡಿಸಿದ್ದಾರೆ. ವಿಧಿಯನ್ನೆಂದೂ ನಂಬಬೇಡಿ. ನಿಮ್ಮ ಶಕ್ತಿಯಲ್ಲಿ ನಂಬಿಕೆಯಿಡಿ'.

ಡಾ|| ಬಿ.ಆರ್. ಅಂಬೇಡ್ಕರ್

ಜಾಗತೀಕರಣ ಮುನ್ಸೂಚನೆಗಳು ಮತ್ತು ಭಾರತದಲ್ಲಿನ ಭೂ ಕಾಯ್ದೆಗಳು :

ಕಳೆದ ೪೫ ವರ್ಷಗಳಲ್ಲಿ ಭಾರತಕ್ಕೆ ವಿಶ್ವಬ್ಯಾಂಕ್ ನೀಡಿರುವ ಸಾಲದ ಒಟ್ಟು ಮೊತ್ತ ೪೨ ಬಿಲಿಯನ್ ಡಾಲರ್‌ಗಳು. ಅಂದರೆ ಬ್ಯಾಂಕ್‌ನ ಒಟ್ಟೂ ಸಾಲ ನೀಡುವಿಕೆಯಲ್ಲಿ ಶೇ. ೧೫ರಷ್ಟು ಭಾರತವೊಂದಕ್ಕೆ ನೀಡಿದೆ. ಸಾಲ ನೀಡಿದ ಮೊದಲ ವರ್ಷಗಳಲ್ಲಿ ಬ್ಯಾಂಕು, ಅಮೇರಿಕಾದ ನೆರವು ನೀತಿಯೊಡಗೂಡಿ ಭಾರತದಲ್ಲಿನ ನೀತಿ ಬದಲಾವಣೆಗಳಲ್ಲಿ ತೊಡಗಿತ್ತು. ಆದರೆ, ೧೯೮೦ರ ನಂತರ ವಿಶ್ವ ಹಣಕಾಸು ನಿಧಿಯೊಂದಿಗೆ ಸೇರಿ ಭಾರತದ ನೀತಿಗಳನ್ನು ರೂಪಿಸುವಲ್ಲಿ ನೇರ ಮತ್ತು ಪ್ರತ್ಯಕ್ಷ ಪಾತ್ರವನ್ನು ವಹಿಸಿದೆ. ವಿಶ್ವಬ್ಯಾಂಕಿನ ಮುಖ್ಯ ತಾತ್ವಿಕ ಚೌಕಟ್ಟೆಂದರೆ : ದೇಶದ ಆಂತರಿಕ ಆರ್ಥಿಕ ಯೋಜನೆಗಳನ್ನು ಶಿಥಿಲಗೊಳಿಸುವುದು, ಮಾರುಕಟ್ಟೆಯ ಶಕ್ತಿಗಳು ಮುಕ್ತವಾಗಿ ಕ್ರಿಯಾಶೀಲವಾಗಿಸುವುದು, ಸಾರ್ವಜನಿಕ ರಂಗವನ್ನು ಒಕ್ಕಲೆಬ್ಬಿಸುವುದು ಮತ್ತು ದೇಶದಲ್ಲಿ ಮತ್ತು ಖಾಸಗೀ ರಂಗದ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು. (ದೇಶ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ)

ಆದ್ದರಿಂದ ವಿಶ್ವ ವಾಣಿಜ್ಯ ಬ್ಯಾಂಕ್ ಜಾಣ್ಮೆಯಿಂದ ಭಾರತೀಯ ಸರ್ಕಾರದ ಮೇಲೆ ನಿರಂತರವಾದ ಒತ್ತಡವನ್ನು ಹೇರುತ್ತಾ ಸರ್ಕಾರದ ನೀತಿಗಳನ್ನು ಬದಲಿಸುತ್ತಾ ೧೯೮೦ರ ದಶಕದಲ್ಲಿ ತಲೆದೋರಿದ ಆರ್ಥಿಕ ಮತ್ತು ಹಣಕಾಸಿನ ಬಿಕ್ಕಟ್ಟನ್ನು ನೆವ ಮಾಡಿಕೊಂಡು ತನ್ನ ತಾತ್ವಿಕತೆಯನ್ನು ಭಾರತೀಯ ಸರ್ಕಾರದ ಮೇಲೆ ಹೇರಿತು. ಇದರಿಂದಾಗಿಯೇ ೧೯೯೧ರಲ್ಲಿ ಭಾರತ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಆಧಾರಿತ ಹೊಸ ಆರ್ಥಿಕ ನೀತಿಯನ್ನು ಒಪ್ಪಿಕೊಳ್ಳುತ್ತದೆ.

ಇದೇ ಬ್ಯಾಂಕಿನ ಪ್ರಾಯೋಜಕತ್ವದಲ್ಲಿ ತಯಾರಿಸಿದ ಜಾಗತಿಕ ಅಭಿವೃದ್ಧಿ ವರದಿಯು ೧೯೮೬ರಲ್ಲೇ ಹೇಳಿದ್ದೇನೆಂದರೆ ಕೃಷಿ ಉತ್ಪನ್ನಗಳ ಎಲ್ಲಾ ಹಂತದ ಉತ್ಪತ್ತಿ ಸೇವನೆ ಮತ್ತು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸರ್ಕಾರ ಭಾಗಿದಾರಿಯಾಗಿರುವುದು ಹೆಚ್ಚಿನ ಅದಕ್ಷತೆಗೆ ಕಾರಣವಾಗಿದೆ; ಅಲ್ಲದೆ ಇಳುವರಿ ಮತ್ತು ಆದಾಯ ಕುಂಠಿತಗೊಂಡಿದೆ. ಹೀಗಿರುವಾಗಲೂ, ವಿಶ್ವಬ್ಯಾಂಕು ಭಾರತದಲ್ಲಿ ಕೃಷಿ ನೀತಿಯಲ್ಲಿ ತೀವ್ರಗತಿಯಲ್ಲಿ ಬದಲಾಗಲು ಸೂಚಿಸಿತು. ಅಂದರೆ ಈ ಕೆಳಗಿನ ನೀತಿಗಳನ್ನು ಅನುಸರಿಸಲು ಒತ್ತಾಯಿಸಿತು.

೧. ಭೂಮಿತಿ ಕಾಯ್ದೆಗಳನ್ನು ರದ್ದು ಮಾಡುವುದು.

೨. ಕೈಗಾರಿಕಾ ಉದ್ದೇಶಗಳಿಗೆ ಬೇಕಾಗಿರುವ ಭೂಮಿಯನ್ನು ತ್ವರಿತವಾಗಿ ಪಡೆದುಕೊಳ್ಳಲು ಅಡ್ಡಿಯಾಗಿರುವ ಭೂಮಿ ಬಳಕೆ, ವರ್ಗೀಕರಣ ನಿಯಮಗಳಿಗೆ ತಿದ್ದುಪಡಿ ತರುವುದು ಮತ್ತು ಅವುಗಳನ್ನು ಸಡಿಲಗೊಳಿಸುವುದು.

ಬದಲಾದ ಕೃಷಿ ನೀತಿಯಿಂದಾಗಿ ಪ್ರತಿವರ್ಷ ೨ ಮಿಲಿಯನ್ ಸಣ್ಣ ಮತ್ತು ಅತಿಸಣ್ಣ ರೈತರು ತೊಂದರೆಗೊಳಗಾಗಿ, ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ ಅಥವಾ ನಿರಾಶ್ರಿತರಾಗುತ್ತಿದ್ದಾರೆ. ಕಳೆದ ಕೆಲವು ದಶಕಗಳಲ್ಲಿ ಗ್ರಾಮೀಣ ಭಾರತದಲ್ಲಿ ಭೂ ರಹಿತ ಜನರ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ. ಅಂದರೆ ೧೯೫೧ರಲ್ಲಿ ಅವರ ಸಂಖ್ಯೆ ೨೭.೯ ಮಿಲಿಯನ್ ಇದ್ದದ್ದು ೧೯೯೦ರ ದಶಕದಲ್ಲಿ ೫೦.೦ ಮಿಲಿಯನ್‌ಗೆ ಏರಿದೆ. ಅವರಲ್ಲಿ ಶೇ. ೬೦ರಷ್ಟು ಜನ ದಲಿತರಾಗಿದ್ದಾರೆ. ಅವರಲ್ಲಿ ಅನೇಕರು ನಿರಾಶ್ರಿತರಾಗಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಗಳಲ್ಲಿ ದಿನಗೂಲಿಗಳಾಗಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ದುಡಿಯುತ್ತಿದ್ದು, ವಿಷಕಾರಕ ಅನಿಲ, ಬಿಸಿಲು ಮತ್ತು ಧೂಳಿಗೆ ಮೈಯೊಡ್ಡಿದ್ದಾರೆ. ಇವರ ದಿನಗೂಲಿ ದಿನಕ್ಕೆ ೪೫ ರೂ. ಮಾತ್ರ.

೩. ಹೂಡಿಕೆದಾರರಿಗೆ ಉತ್ಪಾದನೆಗೆ ಅನುಕೂಲವಾಗುವಂತೆ ಸರ್ಕಾರಿ ಜಮೀನನ್ನು ಒದಗಿಸುವುದು.

೪. ಕೈಗಾರಿಕ ಉದ್ಯಾನ/ಎಸ್ಟೇಟ್‌ಗಳು ಅಥವಾ ದೊಡ್ಡ ಕೈಗಾರಿಕಾ ಯೋಜನೆಗಳ ಸ್ಥಾಪನೆಗಾಗಿ ರಾಜ್ಯ ಸರ್ಕಾರಗಳು ಭೂ ಪರಿವರ್ತನೆಯನ್ನು ಅನುಮೋದಿಸುವುದು.

೫. ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿರುವ ಭೂ ಗುತ್ತಿಗೆ ಅಥವಾ ಭೂ ಮಾರಾಟ ದಾಖಲೆಗಳ ಘಟಕಗಳಿಗೆ ಸಂಬಂಧಿಸಿದಂತೆ ನೋಂದಣಿ ಶುಲ್ಕವನ್ನು ಮರು ಪರಿಶೀಲಿಸುವುದು.

ದಲಿತರು ಮತ್ತು ಭೂ ಒಡೆತನ :

ಮೇಲಿನ ಬದಲಾದ ಕೃಷಿ ನೀತಿಯಿಂದಾಗಿ ಪ್ರತಿವರ್ಷ ೨ ಮಿಲಿಯನ್ ಸಣ್ಣ ಮತ್ತು ಅತಿಸಣ್ಣ ರೈತರು ತೊಂದರೆಗೊಳಗಾಗಿ, ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ ಅಥವಾ ನಿರಾಶ್ರಿತರಾಗುತ್ತಿದ್ದಾರೆ. ಕಳೆದ ಕೆಲವು ದಶಕಗಳಲ್ಲಿ ಗ್ರಾಮೀಣ ಭಾರತದಲ್ಲಿ ಭೂ ರಹಿತ ಜನರ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ. ಅಂದರೆ ೧೯೫೧ರಲ್ಲಿ ಅವರ ಸಂಖ್ಯೆ ೨೭.೯ ಮಿಲಿಯನ್ ಇದ್ದದ್ದು ೧೯೯೦ರ ದಶಕದಲ್ಲಿ ೫೦.೦ ಮಿಲಿಯನ್‌ಗೆ ಏರಿದೆ. ಅವರಲ್ಲಿ ಶೇ. ೬೦ರಷ್ಟು ಜನ ದಲಿತರಾಗಿದ್ದಾರೆ. ಅವರಲ್ಲಿ ಅನೇಕರು ನಿರಾಶ್ರಿತರಾಗಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ಗಳಲ್ಲಿ ದಿನಗೂಲಿಗಳಾಗಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ದುಡಿಯುತ್ತಿದ್ದು, ವಿಷಕಾರಕ ಅನಿಲ, ಬಿಸಿಲು ಮತ್ತು ಧೂಳಿಗೆ ಮೈಯೊಡ್ಡಿದ್ದಾರೆ. ಇವರ ದಿನಗೂಲಿ ದಿನಕ್ಕೆ ೪೫ ರೂ. ಮಾತ್ರ.

ಅತಿ ಸಣ್ಣ ರೈತರ ನಿರ್ಗತಿಕ ಸ್ಥಿತಿಗೆ ಮತ್ತೊಂದು ಕಾರಣವೆಂದರೆ ಇಳುವರಿ ಭೂಮಿಯನ್ನು ಶ್ರೀಮಂತ ಕಂಪೆನಿಗಳು ಆಕ್ರಮಿಸಿದ್ದು ಅವರು ವಾಣಿಜ್ಯ ಬೆಳೆಗಳಾದ ಪುಷ್ಪ ಉದ್ಯಮ, ರಫ್ತಿಗಾಗಿ ಐಷಾರಾಮಿ ಸಿಗಡಿ ಉತ್ಪಾದನೆ ಮುಂತಾದುವುಗಳನ್ನು ಬೆಳೆಯುತ್ತಿರುವುದು. ಉದಾಹರಣೆಗೆ ಪಂಜಾಬಿನ ರೈತರು ಟಮೋಟೊ ಬೆಳೆಯುವಂತೆ ಪೆಪ್ಸಿ ಕಂಪೆನಿ ಪ್ರೇರೇಪಿಸಿ, ಕೊನೆಗೆ ಇಳುವರಿ ಬಂದಾಗ ಕೆ.ಜಿ.ಗೆ ೭೫ ಪೈಸೆಯಂತೆ ಖರೀದಿಸಿತು. ಆದರೆ ಆಗ ಮಾರುಕಟ್ಟೆಯಲ್ಲಿ ನಿಜವಾದ ಬೆಲೆ ಕೆ.ಜಿ.ಗೆ ೨ ರೂ. ಗಳಾಗಿತ್ತು.

ಅಲ್ಲದೆ ಸಣ್ಣ ಮತ್ತು ಮಧ್ಯಮ ದಲಿತ ರೈತರಿಗೆ ಮಾರುಕಟ್ಟೆಯಾಗಲಿ, ನೀರಾವರಿಯಾಗಲಿ ಮತ್ತು ಸಾರಿಗೆ ಸೌಲಭ್ಯಗಳಾಗಲೀ ಎಟುಕುತ್ತಿಲ್ಲ. ಅಲ್ಲದೆ ಬೆಳೆ ತೆಗೆಯಬೇಕಾದರೆ ಅಧಿಕ ಖರ್ಚು ಇರುವುದರಿಂದ ಅವರು ಭೂಮಿಯಿಂದ ಪ್ರತ್ಯೇಕಗೊಳ್ಳುತ್ತಿದ್ದಾರೆ. ೧೯೭೪-೭೫ ರಲ್ಲಿ ಗ್ರಾಮೀಣ ದಲಿತ ದಿನಗೂಲಿ ಕುಟುಂಬಗಳ ಭೂ ಒಡೆತನ ಶೇ. ೪೪.೩೮ ರಷ್ಟು ಇದ್ದದ್ದು ೧೯೯೩-೯೪ರ ವೇಳೆಗೆ ಅವರ ಸಂಖ್ಯೆ ಶೇ. ೩೫.೦೫ಕ್ಕೆ ಇಳಿಯಿತು. ಮತ್ತೊಂದೆಡೆ ಗ್ರಾಮೀಣ ಪ್ರದೇಶಗಳಲ್ಲಿ ಭೂ ರಹಿತ ದಲಿತ ದಿನಗೂಲಿಗಳ ಸಂಖ್ಯೆ ೧೯೭೪-೭೫ರಲ್ಲಿ ಶೇ. ೫೫.೬೫ ಇದ್ದದ್ದು ೧೯೯೩-೯೪ರಲ್ಲಿ ೬೪.೯೫ ರಷ್ಟು ಹೆಚ್ಚಾಯಿತು. ಇದಕ್ಕೆ ತದ್ವಿರುದ್ಧವಾದ ಅಂಕಿ-ಅಂಶಗಳನ್ನು ದಲಿತೇತತರ ಸಮುದಾಯಗಳಲ್ಲಿ ಕಾಣಬಹುದು. ಅಂದರೆ ಇದೇ ಕಾಲಘಟ್ಟದಲ್ಲಿ ದಲಿತರಲ್ಲದ ಸಮುದಾಯಗಳಲ್ಲಿ ಭೂಒಡೆತನ ಹೆಚ್ಚಾಯಿ ತಲ್ಲದೆ, ದಿನಗೂಲಿಗಳ ಸಂಖ್ಯೆಯೂ ಸಹ ಕಡಿಮೆ ಯಾಯಿತು. (ಕೋಷ್ಟಕಗಳನ್ನು ನೋಡಿ).

ಭೂಮಿಯ ಬಳಕೆಯ ತಂತ್ರ ಹೆಚ್ಚಾದಂತೆಲ್ಲ ಕಂಪೆನಿಗಳ ಬೇಸಾಯ ಪದ್ಧತಿ ಹೆಚ್ಚಾಗುತ್ತದೆ. ಅಂದರೆ ಹೆಚ್ಚುವರಿಯಾದ ಬೇಸಾಯ ಭೂಮಿ, ಸರ್ಕಾರಿ ಭೂಮಿ, ಕೃಷಿಯೇತರ ಭೂಮಿ ಹಾಗೂ ಕಡಿಮೆ ಕೃಷಿ ಮಾಡಿದ ಭೂಮಿ, ಗ್ರಾಮ ಅರಣ್ಯ ಭೂಮಿ ಹಾಗೂ ದೇವಸ್ಥಾನ ಭೂಮಿಯನ್ನು ಆಧರಿಸಿ ಕೃಷಿಯಾಧಾರಿತ ಉದ್ಯಮಗಳು ತಲೆಯೆತ್ತುತ್ತವೆ.

ದಲಿತರ ಮಧ್ಯೆ ಮತ್ತು ಇತರೆ ಅಂಚಿಗೆ ಸರಿಸಲಾಗುತ್ತಿರುವ ಸಮುದಾಯಗಳಲ್ಲಿ ಹೆಚ್ಚಾಗುತ್ತಿರುವ ಭೂ ಹೀನತೆಗೆ ಈ ಮೇಲಿನ ಕೃಷಿ ನೀತಿಯೇ ಕಾರಣವಾಗಿದ್ದು, ದಲಿತರಿಗಾಗಿ ಇರುವ ಸಂವಿಧಾನಾತ್ಮಕ ಸಂರಕ್ಷಣೆಗಳನ್ನು ಗಾಳಿಗೆ ತೂರಲಾಗಿದ್ದು ಅವರ ಸುಸ್ಥಿರ ಬದುಕು ಮತ್ತು ನ್ಯಾಯಯುತ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ.

ದಲಿತರು ಹಾಗೂ ಗೋಮಾಳ ಭೂ ಸಂಪನ್ಮೂಲಗಳು :

ಮಧ್ಯಪ್ರದೇಶದ ಸರ್ಕಾರ ಎಲ್ಲಾ ಹಳ್ಳಿಗಳಲ್ಲಿಯೂ ತನ್ನ ಶೇ. ೫ ರೆವಿನ್ಯೂ ಭೂಮಿಯನ್ನು ಗೋಮಾಳ ಜಮೀನೆಂದು

ಮೀಸಲಿರಿಸಿದೆ. ಆದರೆ ಸರ್ಕಾರ ಇದೇ ಭೂಮಿಯನ್ನು ಶೇ.೨ಕ್ಕೆ ಇಳಿಸಿತು. ಅಂದರೆ ಉಳಿದ ಶೇ. ೩ರಷ್ಟು ಜಾಗವನ್ನು ಒಂದು ಹಳ್ಳಿಯಲ್ಲಿ ೧೨ ವರ್ಷಗಳಿಗಿಂತಲೂ ಹೆಚ್ಚು ಬದುಕಿದ ದಲಿತರು ಮತ್ತು ಆದಿವಾಸಿ ಕುಟುಂಬಗಳಿಗೆ ಮರುವಿತರಣೆ ಮಾಡಿತು. ಎಲ್ಲಿ ಭೂಮಿ ಭೂರಹಿತರಿಗೆ ಸಾಕಾಗಲಿಲ್ಲವೋ ಅಲ್ಲಿ ಸರ್ಕಾರ ಹೆಚ್ಚುವರಿ ಭೂಮಿಯನ್ನು ಖರೀದಿಸಿ ಈ ಕುಟುಂಬಗಳಿಗೆ ಹಂಚಿತು.

ಈ ನಿಟ್ಟಿನಲ್ಲಿ ೩,೦೦,೦೦೦ ಹೆಕ್ಟರ್ ಭೂಮಿಯನ್ನು ೨,೩೮,೦೦೦ ಭೂರಹಿತ ಕುಟುಂಬಗಳಿಗೆ ವಿತರಿಸಲು ಗೊತ್ತುಪಡಿಸಲಾಯಿತು. ಈ ಭೂಮಿ ಸರ್ಕಾರದ್ದೇ ಆಗಿರುವುದರಿಂದ ಯಾರ ಭೂಮಿಗೂ ಸಹ ತೊಂದರೆಯೇನೂ ಇಲ್ಲ. ಆದರೆ ಗ್ರಾಮೀಣ ಪ್ರಬಲರು ಈ ಅಂಶವನ್ನು ಗಮನಿಸಲು ತಯಾರಿಲ್ಲ. ರಾಜ್ಯದಲ್ಲಿ ಕೇವಲ ಎರಡೇ ತಿಂಗಳಲ್ಲಿ ಇಂಥ ಭೂಮಿ ಹೊಂದಿದ ದಲಿತರನ್ನು ಓಡಿಸಲು ಭೂಒಡೆತನ ಹೊಂದಿದ ಪ್ರಬಲ ಜಾತಿಯವರು ಕಡಿಮೆಯೆಂದರೂ ೫೦ ಹಿಂಸಾತ್ಮಕ ಘಟನೆಗಳಿಗೆ ಕಾರಣರಾಗಿದ್ದಾರೆ.

ತುಂಬಾ ಮುಖ್ಯವಾದ ಪ್ರತಿರೋಧ ಬಂದದ್ದು ಬಿ.ಜೆ.ಪಿ.ಯವರಿಂದ. 'ಈ ಕ್ರಮವು ಸಮಾಜವನ್ನು ವಿಭಾಗಿಸುತ್ತದೆ. ದಲಿತರಿಗೆ ಬಹುಮಾನ ಕೊಡುವ ಉತ್ಸಾಹದಲ್ಲಿ ಸರ್ಕಾರವು ಹಳ್ಳಿಗಳಲ್ಲಿ ರಕ್ತದ ಕೋಡಿಗೆ ನಾಂದಿಯಾಗಿದೆ' ಎಂದು ಬಿಜೆಪಿಯ ರಾಜ್ಯ ಪ್ರಮುಖನಾದ ಬಾಬುಲಾಲ್ ಗೌವರ್ ಹೇಳುತ್ತಾನೆ. ಈ ಭೂ ಹಂಚಿಕೆಯ ಕ್ರಮವನ್ನು ನೇರವಾಗಿ ವಿರೋಧಿಸದ ಬಿಜೆಪಿಯು 'ಗೋ ರಕ್ಷಣಾ ಸಮಿತಿಗಳ ಮೂಲಕ ಹಳ್ಳಿಗಳಲ್ಲಿ ಗಲಭೆ ತರಲು ಪ್ರಯತ್ನಿಸುತ್ತಿದೆ. ಈ ಸಮಿತಿಗಳ ವಾದವೆಂದರೆ ಗೋಮಾಳ ಭೂಮಿ ಕಡಿಮೆಯಾಗಿ ದನಗಳು ಅನುತ್ಪಾದಕವಾಗಿ, ಕಟುಕರ ವಶ ಇಲ್ಲವೇ ಹಸಿವಿನಿಂದ ಸಾಯುತ್ತವೆಯಾದ್ದರಿಂದ ಈ ಕ್ರಮ 'ದನ ವಿರೋಧಿ' ಯಾಗಿ ಕೊನೆಗೆ 'ಹಿಂದೂ ವಿರೋಧಿ' ಯಾಗುತ್ತದೆಯಂತೆ.

ಇದೇ ಸಂದರ್ಭದಲ್ಲಿ ತಮಿಳುನಾಡಿನ ಪುದುಕೋಟೆ ಜಿಲ್ಲೆಯ ಪೆರುನ್‌ಗುಡಿ ಮತ್ತು ಪೂವಂಪಟ್ಟಿ ಹಳ್ಳಿಗಳಲ್ಲಿ ದಲಿತರು, ಸರ್ಕಾರ ನೂರು ಎಕ್ಕರೆ ಸಮುದಾಯ ಭೂಮಿಯನ್ನು ತೆಗೆದುಕೊಳ್ಳುವುದರ ವಿರುದ್ಧ ಪ್ರತಿಭಟನೆ ನಡೆಸುತ್ತಿತ್ತು. ಕಾರಣ ತಲೆಮಾರುಗಳಿಂದ ಈ ಭೂಮಿಯು ಅವರಿಗೆ ಜೀವನೋಪಾಯದ ಆಸರೆಯಾಗಿತ್ತು. ಇಲ್ಲಿರುವ ಸರ್ಕಾರದ ಉಪಾಯವೆಂದರೆ ೨ ಮಿಲಿಯನ್ ಹೆಕ್ಟರ್ ಬಂಜರು ಭೂಮಿಯನ್ನು (ಅದರಲ್ಲಿ ೩,೦೦,೦೦೦ ಹೆಕ್ಟರ್ ಭೂಮಿ ಸಮುದಾಯ ಭೂಮಿಯಾಗಿದ್ದು) ೩೦ ವರ್ಷಗಳ ಗುತ್ತಿಗೆಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡುವುದೇ ಆಗಿತ್ತು. ಇದು ವಾಣಿಜ್ಯ ಬೇಸಾಯ ನಿಗಮ, ಸಂಸ್ಕರಣ ಮತ್ತು ಮಾರುಕಟ್ಟೆಗಳಿಗೆ ಆಹ್ವಾನವೇ ಆಗುತ್ತದೆ. ಇದನ್ನು ತಡೆಯಲು ಶಕ್ತಿಹೀನರಾಗಿರುವ ದಲಿತರ, ಜೀವಕ್ಕೆ ಆಸರೆಯಾದ ಈ ಭೂಮಿಯನ್ನು ಕಂಪೆನಿಗಳು ಮತ್ತು ಭೂಒಡೆತನ ಹೊಂದಿರುವ ವ್ಯಕ್ತಿಗಳು ಕಬಳಿಸಲು ಹುನ್ನಾರ ಹೂಡುತ್ತಿದ್ದಾರೆ.

ವಿಶ್ವಬ್ಯಾಂಕು ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ಭೂಒಡೆತನ ಹಕ್ಕಿಗೆ ಕಂಟಕವಾಗಿದ್ದಾರೆ :

ವಿಶ್ವಬ್ಯಾಂಕು ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಯೋಜನೆಗಳೆಲ್ಲವೂ ಸಾಮಾಜಿಕ ಮತ್ತು ಪರಿಸರಾತ್ಮಕ ಸರ್ವ ನಾಶಕ್ಕೆ ಕಾರಣವಾಗಿವೆ. ಖಾಸಗೀ ಹಣ ಹೂಡಿಕೆಯ ಮೂಲಕ ದೊಡ್ಡ ಯೋಜನೆಗಳು ಸಂಪತ್ತಿನ ಮೂಲವಾಗಿರುವ ಸ್ವಾಭಾವಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿವೆ. ಇದು ಪರಿಸರ ನಾಶಕ್ಕೆ ಕಾರಣವಾಗಿದೆಯಲ್ಲದೆ ಮಿಲಿಯ ಗಟ್ಟಲೆ ಜನ ದಲಿತ-ಆದಿವಾಸಿಗಳ ಬದುಕನ್ನು ಸಹ ಕೊಲ್ಲುತ್ತಿದೆ. ಇಂಥ ಯೋಜನೆಗಳಲ್ಲಿ ನಿರಾಶ್ರಿತ ರಾದವರಿಗೆ ಪರಿಹಾರ ಮತ್ತು ಪುನರ್ವಸತಿ ಕೊಡುವುದಿರಲಿ, ಅವರ ಬಗ್ಗೆ ಖಚಿತವಾದ ಅಂಕಿ-ಅಂಶಗಳನ್ನು ಸಹ ಇಡುತ್ತಿಲ್ಲ. ಇದರ ಪರಿಣಾಮವೆಂದರೆ ಜನರ ಸಾಂಸ್ಕೃತಿಕ ಬದುಕಿನ ಕ್ರಮಗಳು ನಾಶವಾಗಿ, ಮಾನಸಿಕ ಆಘಾತ ಮತ್ತು ಶಾಶ್ವತ ನಿರಾಶ್ರಿತ ನೆಲೆಗೆ ಜನ ಸರಿಯುತ್ತಾರೆ.

ಭೂ ಒಡೆತನದಲ್ಲಿನ ಬದಲಾವಣೆಗಳು (ಶೇಕಡಾವಾರು)				
ಭೂ ಒಡೆತನ ಗಾತ್ರ ಹೆಕ್ಟೆರ್‌ಗಳಲ್ಲಿ	ಕೃಷಿ ಕೂಲಿಯಾಳುಗಳು		ಗ್ರಾಮೀಣ ಕೂಲಿಯಾಳುಗಳು	
	೧೯೭೪	೧೯೮೭-೮೮	೧೯೭೪	೧೯೯೩-೯೪
೦.೪೦	೬೭.೫೦	೨೮.೪೮	೬೬.೮೦	೬೮.೦೦
೦.೪೧ - ೧.೦೦	೨೫.೫೦	೦೯.೫೦	೨೫-೫೦	೨೧.೯೦
೧.೦೦	೦೭.೦೦	೦೪.೧೦	೦೭.೭೦	೧೦.೧೦

ಗ್ರಾಮೀಣ ಕಾರ್ಮಿಕ ಭೂ ಒಡೆತನ (ಶೇಕಡಾವಾರು)				
ಕುಟುಂಬಗಳು	೧೯೭೪-೭೫		೧೯೯೩-೯೪	
	ದಲಿತರು	ಇತರರು	ದಲಿತರು	ಇತರರು
ಭೂಮಿ ಇರುವವರು	೪೪.೩೮	೫೫.೯೭	೩೫.೦೫	೮೧.೧೯
ಭೂ ರಹಿತರು	೫೫.೬೫	೪೪.೦೨	೬೪.೯೫	೧೮.೮೧
ಒಟ್ಟು	೫೭.೪೧	೫೫.೬೯	೫೯.೪೮	೩೦.೧೫

(ಮೂಲ: ಗ್ರಾಮೀಣ ಕಾರ್ಮಿಕ ಪರಿಶೀಲನೆ; ಗ್ರಾಮೀಣ ಕಾರ್ಮಿಕ ಕುಟುಂಬಗಳ ಸಾಮಾನ್ಯ ಲಕ್ಷಣಗಳ ವರದಿ. (೧೯೭೪-೭೫, ೧೯೮೩-೮೪, ೧೯೮೭-೮೮, ೧೯೯೩-೯೪) ಕಾರ್ಮಿಕ ಬ್ಯೂರೋ, ಕಾರ್ಮಿಕ ಸಚಿವಾಲಯ, ಶಿಮ್ಲಾ)

ವಿಶ್ವಬ್ಯಾಂಕು ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಯೋಜನೆಗಳೆಲ್ಲವೂ ಸಾಮಾಜಿಕ ಮತ್ತು ಪರಿಸರಾತ್ಮಕ ಸರ್ವ ನಾಶಕ್ಕೆ ಕಾರಣವಾಗಿವೆ. ಖಾಸಗೀ ಹಣ ಹೂಡಿಕೆಯ ಮೂಲಕ ದೊಡ್ಡ ಯೋಜನೆಗಳು ಸಂಪತ್ತಿನ ಮೂಲವಾಗಿ ರುವ ಸ್ವಾಭಾವಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿವೆ. ಇದು ಪರಿಸರ ನಾಶಕ್ಕೆ ಕಾರಣವಾಗಿದೆಯಲ್ಲದೆ ಮಿಲಿಯ ಗಟ್ಟಲೆ ಜನ ದಲಿತ-ಆದಿವಾಸಿಗಳ ಬದುಕನ್ನು ಸಹ ಕೊಲ್ಲುತ್ತಿದೆ. ಇದರಿಂದಾಗಿ ಜನರ ಸಾಂಸ್ಕೃತಿಕ ಬದುಕಿನ ಕ್ರಮಗಳು ನಾಶವಾಗಿ, ಮಾನಸಿಕ ಆಘಾತ ಮತ್ತು ಶಾಶ್ವತ ನಿರಾಶ್ರಿತ ನೆಲೆಗೆ ಜನ ಸರಿಯುತ್ತಾರೆ.

೧. ಕೃಷಿ

ಈ ಕ್ಷೇತ್ರದಲ್ಲಿ ವಿಶ್ವಬ್ಯಾಂಕು ೧೦.೨ ಬಿಲಿಯನ್ ಡಾಲರ್ ಹೂಡಿದ್ದು, ತೀವ್ರವಾದ ಖಾಸಗೀಕರಣಕ್ಕೆ ಕಾರಣವಾಗಿದೆ. ರಾಸಾಯನಿಕ ಗೊಬ್ಬರಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಿದ್ದರಿಂದ ಅವುಗಳ ಬೆಲೆ ಶೇ. ೪೦ರಷ್ಟು ಹೆಚ್ಚಾಗಿದೆ. ಆಂತರಿಕವಾಗಿ ಅಕ್ಕಿ ಬೆಲೆಯು ಶೇ. ೫೦ರಷ್ಟು ಹೆಚ್ಚಾಗಿದೆ. ಕೃಷಿಯಲ್ಲಿನ ತಂತ್ರಜ್ಞಾನವು ಬಹುರಾಷ್ಟ್ರೀಯ ಕಂಪೆನಿಗಳ ಸ್ವಾಮ್ಯದಲ್ಲಿದ್ದು ಅವು ಎಂಥ ಬೆಳೆ ಬೆಳೆಯಬೇಕೆಂಬ ನಿರ್ಧಾರವನ್ನು ಹೇರುತ್ತವೆ ಮತ್ತು ಜನರ ಅಗತ್ಯಗಳನ್ನೆಂದೂ ಪರಿಗಣಿಸುವುದಿಲ್ಲ. ಹೆಚ್ಚುತ್ತಿರುವ ಬಡ್ಡಿದರಗಳೂ ಸಹ ಸಣ್ಣ ರೈತರಿಗೆ ಸಾಲ ಸಿಗದಂತೆ ಮಾಡುತ್ತವೆ. ಹೀಗೆ ಅಂಚಿಗೆ ಮಾರಲ್ಪಟ್ಟವರಲ್ಲಿ ಹೆಚ್ಚಿನವರು ದಲಿತರೇ ಆಗಿದ್ದಾರೆ.

೨. ವಿದ್ಯುಚ್ಛಕ್ತಿ ಯೋಜನೆಗಳು

ಮಧ್ಯಭಾರತದ ಸಂ.ಗ್ರೋಲಿ ಪ್ರದೇಶದಲ್ಲಿ ಒಂದು ದೊಡ್ಡ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡು, ಆ ಯೋಜನೆಯಡಿ ವಿದ್ಯುಚ್ಛಕ್ತಿ ರಾಸಾಯನಿಕ ಗೊಬ್ಬರ, ಗಣಿಗಾರಿಕೆ, ಕ್ರಿಮಿನಾಶಕಗಳು ಮತ್ತು ಅಲ್ಯೂಮಿನಿಯಂ ಕಾರ್ಖಾನೆಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿತು. ಈ ಗುರಿ ಸಾಧನೆಗಾಗಿ ಸುಮಾರು ಮೂರು ಲಕ್ಷ ಜನ ನಿರಾಶ್ರಿತ ರಾದರು. ಹೀಗೆ ಒಕ್ಕಲೆದ್ದ ಜನ ಕಳೆದ ೨೫ ವರ್ಷಗಳಲ್ಲಿ ಬಹುರೀತಿಯ ನಿರಾಶ್ರಿತ ಬದುಕನ್ನು ಹಲವಾರು ಬಾರಿ ವಿವಿಧ ಯೋಜನೆಗಳಡಿ ನರಳುವಂತಾಯಿತು. ಇದಲ್ಲದೇ ಸಾವಿರಾರು ಹೆಕ್ಟರ್ ಫಲವತ್ತಾದ ಭೂಮಿಯೂ ಸಹ ಬಂಜರು ಭೂಮಿಯಾಯಿತು. ಅಂದರೆ ಈ ಭೂಮಿಯನ್ನು ೬ ಮಿಲಿಯನ್ ಟನ್ ತ್ಯಾಜ್ಯ ಬೂದಿಯಿಂದ ಪ್ರತಿವರ್ಷ ತುಂಬಲಾಯಿತು. ಈ ಬೂದಿಯೂ ಆ ಪ್ರದೇಶದ ಥರ್ಮಲ್ ವಿದ್ಯುಚ್ಛಕ್ತಿ ಯೋಜನೆಗಳಿಂದ ಬಂದದ್ದು. ಈ ಸಂಗ್ರೋಲಿ ಪಟ್ಟಣವು ಇಡೀ ಜಗತ್ತಿನಲ್ಲಿ ತೀವ್ರವಾದ ವಾಯುಮಾಲಿನ್ಯದಿಂದ ತುಂಬಿಕೊಂಡಿದೆ. ಬೀನಾ ಗಣಿಗಾರಿಕೆ ಪ್ರದೇಶದಲ್ಲಿ ಶೇ. ೫೦ರಷ್ಟು ಜನ ವಿವಿಧ ಕಾಯಿಲೆಗಳಿಂದ ನರಳುತ್ತಿದ್ದಾರೆ.

೩. ಸಾಮಾಜಿಕ ಅರಣ್ಯ ಯೋಜನೆಗಳು

ವಿಶ್ವಬ್ಯಾಂಕ್ ಪ್ರಾಯೋಜಿತ ಭಾರತೀಯ ಅರಣ್ಯ ಯೋಜನೆಗಳು 'ಸಾಮಾಜಿಕ ಅರಣ್ಯ ಯೋಜನೆಗಳ ಹೆಸರಿನಲ್ಲಿ ಸಾಕಷ್ಟು ವಿವಾದವನ್ನು ಹುಟ್ಟು ಹಾಕಿತು. ಈ ಯೋಜನೆಗಳು ಸಾಮಾಜಿಕ ಅಂಶವನ್ನೇನೂ ಒಳಗೊಳ್ಳದೇ, ಕೊನೆಗೆ ಅರಣ್ಯವನ್ನು ಬೆಳೆಸದೇ ಹೋದವು. ಇತ್ತೀಚಿನ ವರ್ಷಗಳಲ್ಲಿ ಇಂತಹ ಏಳು ಸಾಮಾಜಿಕ ಅರಣ್ಯ ಯೋಜನೆಗಳನ್ನು ಭಾರತದಲ್ಲಿ ವಿಶ್ವಬ್ಯಾಂಕು ರೂ. ೩೪೫ ಮಿಲಿಯನ್ ಡಾಲರ್ ನೀಡುವ ಮೂಲಕ ಜಾರಿಯಾಗಿಸಿದೆ. ಅಂದರೆ ಅರಣ್ಯ ಹಾಳಾಗುವುದನ್ನು ತಪ್ಪಿಸಲೆಂದು ರೂಪಿಸಿದ ಈ ಯೋಜನೆಗಳು ಅಂತಿಮವಾಗಿ ನಗರ ಮತ್ತು ವಾಣಿಜ್ಯಾಸಕ್ತಿಗಳಿಗೋಸ್ಕರ ಬೇಗನೆ ಬೆಳೆಯುವ ಮರ ತಳಿಗಳನ್ನು ಬೆಳಸಿ, ತೋಗಟೆಯಿಂದ ಕಾಗದ ತಯಾರಿಕೆ, ರಯಾನ್ ಉತ್ಪಾದನೆ, ನಗರದ ಇಂಧನಕ್ಕಾಗಿಯಷ್ಟೇ ಅನುಕೂಲವಾದವು. ಈ ಉದ್ದೇಶಕ್ಕಾಗಿ ಖಾಸಗಿ ತೋಟಗಾರಿಕೆ, ಬಂಜರು ಭೂಮಿ ಮತ್ತು ಸಮುದಾಯ ಭೂಮಿಯನ್ನು ಪರಿವರ್ತಿಸಲಾಯಿತು. ಅನೇಕ ಪ್ರಕರಣಗಳಲ್ಲಿ ಗ್ರಾಮೀಣ ದಲಿತರು ಮತ್ತು ಆದಿವಾಸಿಗಳು ಉಪಯೋಗಿಸುವಂತಹ ಅರಣ್ಯ ಉಪ ಉತ್ಪನ್ನಗಳನ್ನು ತಪ್ಪಿಸಲಾಯಿತು.

(ಮುಂದುವರಿಯುವುದು...)

ಧರ್ಮಕ್ಕೆ ಆಹಾರ ಅಪಥ್ಯವೇ ?

ಶ್ರೀ ಮುರುಘರಾಜೇಂದ್ರ ಶರಣರು ಸ್ಥಾಪಿಸಿರುವ 'ಬಸವಧರ್ಮ'ದಲ್ಲಿ ಆಹಾರ ಪದ್ಧತಿಗಳ ಬಗ್ಗೆ ನಿರ್ಬಂಧ ಸೂಚಿಸದೇ ಇರುವುದು ಪ್ರಜ್ಞಾವಂತ ನಿಲುವಾಗಿದ್ದು ಇದನ್ನು ಸ್ವಾಗತಿಸಬೇಕಾಗಿದೆ.

ಭಾರತೀಯ ಸಮಾಜದಲ್ಲಿ ವಿವಿಧ ಬಗೆಯ ಸಾಂಸ್ಕೃತಿಕ ನಡಾವಳಿಗಳಿವೆ. ಅದಕ್ಕನುಸಾರವಾಗಿ ಆಹಾರ ಪದ್ಧತಿಯಲ್ಲಿ ವಿವಿಧ ಅಭ್ಯಾಸಗಳಿವೆ. ಹಳೆಯ ತಾರತಮ್ಯ ಆಧಾರಿತ ಧರ್ಮಗಳು ಅದರಲ್ಲೂ ವೈದಿಕಶಾಹಿಯ ಪರಂಪರೆಯ ಧರ್ಮಗಳು ಏಕ ಸಂಸ್ಕೃತಿಗಳಾಗಿದ್ದು ತಮ್ಮ ಏಕಪಕ್ಷೀಯ ನಿರ್ಣಯಗಳಿಗನುಸಾರವಾಗಿ ಆಹಾರಾಭ್ಯಾಸಗಳನ್ನೂ ಶ್ರೇಷ್ಠ ಹಾಗೂ ಕನಿಷ್ಠ ಎಂದು ವಿಂಗಡಿಸಿದ್ದಾರೆ.

ಯಾವುದೇ ಒಂದು ಧರ್ಮದ ಮುಂಚೂಣಿಯಲ್ಲಿ ನಿಂತವರು ತಮ್ಮನ್ನು ತಾವು ಅಧಿಪತಿಗಳೆಂದು ಭಾವಿಸಿಕೊಂಡು ಇತರ ಜನ ಸಮುದಾಯಗಳ ಸಾಂಸ್ಕೃತಿಕತೆಯನ್ನು ಹೀಗಳೆಯುವುದು ಯಜಮಾನ ಸಂಸ್ಕೃತಿಯ ನಿದರ್ಶನವಾಗಿದೆ. ಇದು ಜನ ಸಮುದಾಯಗಳನ್ನು ಹೀಗಳೆಯುವ ಆ ಮೂಲಕ ದಮನಿಸಿಬಿಡುವ ಅಪ್ರಜಾತಾಂತ್ರಿಕ ನಿಲುವಲ್ಲದೆ ಬೇರೆಯಲ್ಲ.

ಯಾವುದೇ ಸಮುದಾಯದ ಭಾಷೆ, ಉಡುಪು, ಆಹಾರಾಭ್ಯಾಸ ಮುಂತಾದವುಗಳ ಬಗ್ಗೆ ಪಟ್ಟಭದ್ರ ಧರ್ಮಗಳು ಈ ಬಗೆಯ ನಿಷೇಧಗಳನ್ನು ಪ್ರಚುರಪಡಿಸಿದ್ದರಿಂದ ನೂರಾರು ಪಂಗಡಗಳು ಕೀಳರಿಮೆಗೊಳಗಾಗಿ ತಮ್ಮತನದ ಬಗ್ಗೆಯೇ 'ಮುಚ್ಚುಮರೆ' ಪ್ರವೃತ್ತಿಗೊಳಪಟ್ಟವು. ಆದ್ದರಿಂದ ಈ ಬಗೆಯ ಮನಸ್ಥಿತಿಯನ್ನು ಮೀರಿ ಭೇದ ಭಾವಗಳಿಲ್ಲದೆ ಪ್ರತಿಯೊಬ್ಬರೂ ಒಂದು ಸಾಮಾಜಿಕ ಸಮಾನತೆಯ ನೆಲೆಯಲ್ಲಿ ಒಂದಾಗಿ ಆಧ್ಯಾತ್ಮಿಕ ಐಕ್ಯತೆ ಸಾಧಿಸಬೇಕೆಂದರೆ, ಬಸವಧರ್ಮವು ಪ್ರತಿಪಾದಿಸುತ್ತಿರುವ ಆಹಾರಾಭ್ಯಾಸಗಳ ಬಗೆಗಿನ 'ಅಲಿಪ್ತ ನಿಲುವು' ತುಂಬಾ ಅನುಕರಣೀಯವಾಗಿದೆ.

ಸಸ್ಯಾಹಾರದ ಹೊರತಾದ ಆಹಾರ ಪದ್ಧತಿಗಳ ಬಗ್ಗೆ ಅಸಹನೆಯ ಧೋರಣೆ ವ್ಯಕ್ತಪಡಿಸುತ್ತಿರುವವರು ತಮ್ಮ ಜಾತಿಶ್ರೇಷ್ಠತೆಯ ಅಹಂಭಾವದಲ್ಲಿದ್ದಾರೆ. ಅಂತಹವರಿಗೆ ಧರ್ಮ ಬೇರೆ, ಸಂಸ್ಕೃತಿ ಬೇರೆ ಎಂಬ ಸತ್ಯ ಮನವರಿಕೆಯಾಗಿಲ್ಲ.

ಆಹಾರದ ಬಗ್ಗೆ ನಿರ್ಬಂಧಗಳಿರಬೇಕೆಂಬ ನಿಲುವನ್ನು ಭಾರತದ ಪ್ರಗತಿಪರ ಧರ್ಮಗಳಲ್ಲೊಂದಾದ ಬೌದ್ಧಧರ್ಮವೂ ಪ್ರತಿಪಾದಿಸಿಲ್ಲ. ಅದೇ ರೀತಿಯಲ್ಲಿ ವಚನಕಾರ ಚಳವಳಿಯ ಸಂದರ್ಭದಲ್ಲೂ ಕಾಯಕ ಹಾಗೂ ಆಹಾರ ಅಭ್ಯಾಸದ ಬಗ್ಗೆ ನಿರ್ದಿಷ್ಟ ನಿಯಮಗಳಿದ್ದವೆಂಬುದಕ್ಕೆ ಸಾಕಷ್ಟು ಆಧಾರಗಳಿಲ್ಲ.

ಮಾಂಸಾಹಾರ ತಪ್ಪು ಎನ್ನುವವರು ಬಸವಧರ್ಮದ ಬಾಗಿಲನ್ನು ಭಾರತೀಯ ಸಮಾಜದ ಶೇ. ೯೫ ಮಂದಿಗೆ ಮುಚ್ಚಿದಂತಾಗುತ್ತದೆ. ಅಷ್ಟು ಮಾತ್ರವಲ್ಲದೆ ಸಸ್ಯಾಹಾರ ಅಭ್ಯಾಸವಿಲ್ಲದೆ ಬೇರೆ ದೇಶಗಳ ಜನರನ್ನೂ ಹೊರಗಿಟ್ಟು 'ಬಸವಧರ್ಮ'ವನ್ನು ಕೇವಲ ಪ್ರಾಂತೀಯ ದೃಷ್ಟಿಕೋನದ ಸೀಮಿತತೆಗೆ ಗುರಿ ಮಾಡುತ್ತದೆ. ಇಡೀ ವಿಶ್ವಕ್ಕೆ ಬೆಳಕು ತೋರಿಸುವ ಸಾಮಾಜಿಕ ಮೌಲ್ಯಗಳ ಬಗ್ಗೆ ಮಾತನಾಡುವ ಬಸವ ಧರ್ಮ ತಪ್ಪದೆ ವಿವಿಧ ಸಂಸ್ಕೃತಿಗಳನ್ನು ಒಳಗೊಳ್ಳುವಷ್ಟು ವಿಶಾಲತೆಯನ್ನು ಹೊಂದಿರಬೇಕು.

ಇದು ಆಧುನಿಕ ದೃಷ್ಟಿಕೋನದ ನೆಲೆಯಿಂದ ಮಾತ್ರ ಹೇಳಬೇಕಾದ ಮಾತಲ್ಲ. ಪ್ರತಿ ಬುಡಕಟ್ಟು ಸಮುದಾಯ, ಪಂಗಡ ಮುಂತಾದವುಗಳನ್ನು ಜಾತ್ಯಾತೀತ ನೆಲೆಯಲ್ಲಿ ಮುನ್ನಡೆಸುವ ಆಶಯ, ಬಸವ ಪರಂಪರೆಯ ನಿಜ ಮೌಲ್ಯಗಳ ಸಾಕಾರದ ಉದ್ದೇಶ ಬಸವ ಧರ್ಮಕ್ಕಿರುವುದು ನಿಜವಾದರೆ ಅದು ಆಹಾರಾಭ್ಯಾಸ, ಉಡುಪು, ಭಾಷೆ ಹಾಗೂ ಆರಾಧನಾ ಪದ್ಧತಿಗಳ ಬಗ್ಗೆ ಅತ್ಯಂತ ಪ್ರಜಾತಾಂತ್ರಿಕ ನಿಲುವುಗಳನ್ನು ಹೊಂದಿರಬೇಕಾಗುತ್ತದೆ. ಇಲ್ಲದಿದ್ದರೆ ಈಗಿರುವ ಎಷ್ಟೋ ಜನವಿರೋಧಿ ಬುರ್ನಾಸು (ಜನವಿರೋಧಿ) ಧರ್ಮಗಳ ಪಟ್ಟಿಗೆ ಇದೂ ಸೇರ್ಪಡೆಯಾಗುತ್ತದೆ.

> **ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲಿ ಮಾಂಸ**
> **ಬಾಯಲಿ ಸುರಿಯ ಗಡಿಗೆ, ಕೊರಳಲಿ ದೇವರಿರಲು**
> **ಅವರ ಲಿಂಗನೆಂಬೆ, ಸಂಗನೆಂಬೆ,**
> **ಕೂಡಲ ಸಂಗಮದೇವಾ, ಅವರ ಮುಖಲಿಂಗಿಗಳೆಂಬೆನು**

ಮಾಂಸಾಹಾರದ ಬಗ್ಗೆ ಜಾತಿ ಶ್ರೇಷ್ಠತೆಯಾಧರಿಸಿದ ಅವಹೇಳನ ಮಾಡುತ್ತಿರುವವರು ಈಗಲಾದರೂ ಸಾಂಸ್ಕೃತಿಕ ಸಮಾನತೆಯ ಆಲೋಚನೆಗಳನ್ನು ಪಡೆದುಕೊಳ್ಳಬೇಕು.

ನಿಸರ್ಗವು ಆಹಾರವನ್ನು ನಿರ್ಮಿಸುವಾಗ ಪರಸ್ಪರಾವಲಂಬನೆ ನಿರ್ಮಿಸಿದೆ. ಒಂದನ್ನೊಂದು ಆಹಾರಕ್ಕಾಗಿ ಬಳಸಿಕೊಳ್ಳುವ ಆಹಾರ ಸರಪಳಿಯು ನಿಸರ್ಗ ಸತ್ಯವಾಗಿರುವಾಗ ಅದನ್ನು ಮನುಷ್ಯನ ವಿರೋಧಿ ಎಂದು ಪರಿಗಣಿಸಬೇಕಾದ ಅಗತ್ಯ ಕಾಣುವುದಿಲ್ಲ.

ಬಸವಣ್ಣ ತನ್ನ ವಚನದಲ್ಲಿ 'ಹೊಲಸು ತಿಂಬುವವನೇ ಹೊಲೆಯ, ಕೊಲುವವನೇ ಮಾದಿಗ' ಎಂದು ಹೇಳುವಾಗ ಆಹಾರಾಭ್ಯಾಸಗಳ ಬಗ್ಗೆ ನಿಷೇಧ ಸೂಚಿಸಿದ್ದಾನೆ ಎಂದು ಅರ್ಥೈಸುವುದು ಆರಾಧ್ಯ ಜಂಗಮ ನಿರ್ದೇಶಿತ ವೀರಶೈವ ಟೀಕುಗಳ ಪರಂಪರೆಯಾಗಿದೆ. ಅಷ್ಟರಮಟ್ಟಿಗೆ ಆ ವಚನದ ಸಾಮರ್ಥ್ಯವನ್ನು ಮೊಟಕುಗೊಳಿಸಿದಂತಾಗಿದೆ. 'ಹೊಲಸು' ಎಂಬುದು ಬಸವಣ್ಣನ ನಿಲುವಿನಲ್ಲಿ ಪರಧನ-ಪರಸತಿ ಆ ಬಗೆಯಲ್ಲಿ ಹೊಲಸು ತಿನ್ನುವುದು ಎಂಬುದು ದುರಾಶಾವಿರೋಧಿ ಹೇಳಿಕೆ.

ಕೊಲ್ಲುವುದು ಎಂಬುದು ಸಾಮಾನ್ಯ ಜನತೆಯ ಮೇಲೆ ಪ್ರಭುತ್ವ ನಡೆಸುವ ದಮನ ವಿರೋಧಿ ಹೇಳಿಕೆ. ರಾಜಶಾಹಿ ನಡೆಸುವ ಹಿಂಸೆಯನ್ನು ನಿರ್ದೇಶಿಸಿ ಈ ಮಾತು ಬಂದಿದೆಯೆಂದು ಗ್ರಹಿಸುವುದೇ ಹೆಚ್ಚು ಸೂಕ್ತ.

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಎಂದು ಹೇಳುವಾಗಲೂ ಈ ಸಾಮಾಜಿಕ ವಾಸ್ತವಗಳ ಬಗ್ಗೆಯೇ ಸೂಚಿಸುತ್ತಿದ್ದಾನೆ. 'ಕಳಬೇಡ, ಎಂಬುದು ಬೇರೆ ಕಡೆ 'ಹೊಲಸು ತಿಂಬುದು' ಎಂದಾಗಬಲ್ಲದು. 'ಕೊಲಬೇಡ' ಎಂಬುದು ಮಾನವ ಮಾನವನ ಮೇಲೆ ನಡೆಸುವ ದೌರ್ಜನ್ಯ ವಿರೋಧಿಯಾಗಿ 'ಕೊಲುವವನೇ' ಎಂಬುದಾಗಬಹುದು.

ಮಾಂಸಾಹಾರವಿರಲಿ, ಸಸ್ಯಾಹಾರವಿರಲಿ ಅವರವರ ವ್ಯಕ್ತ ಅಭಿರುಚಿ ಎಂಬ ನಿಲುವನ್ನು ಒಪ್ಪಿಕೊಂಡಿರುವ ಶ್ರೀ ಮುರುಘರಾಜೇಂದ್ರ ಶರಣರು ಅಸಂಖ್ಯಾತ ಹಿಂದುಳಿದ ಹಾಗೂ ದಲಿತ ಸಮುದಾಯಗಳ ಅಸ್ತಿತ್ವವನ್ನು ಗೌರವಿಸಿದ್ದಾರೆ ಹಾಗೂ ಬಸವ ಧರ್ಮದ ಪ್ರಗತಿಪರತೆಗೆ ಉತ್ತಮ ಬುನಾದಿ ನಿರ್ಮಿಸಿದ್ದಾರೆ.

○ ಡಾ|| ಬಂಜಗೆರೆ ಜಯಪ್ರಕಾಶ್

ವಿವೇಚನೆ

ವೈದಿಕ ಸಂಸ್ಕೃತಿಯ ಆರಾಧಕರಾಗಿ ರೂಪುಗೊಳ್ಳುತ್ತಿರುವ ವೀರಶೈವ-ಲಿಂಗಾಯತರು ಬಸವಣ್ಣನ ಆದರ್ಶಗಳನ್ನು ಗಾಳಿಗೆ ತೂರಿದ್ದಾರೆ. ಸರ್ವ ಸಮಾನತೆಯ ಮುಕ್ತ ಧರ್ಮವೊಂದನ್ನು ಕರ್ಮಠ ಸನಾತನಿಗಳ ಕಪಿಮುಷ್ಠಿಗೆ ಒಪ್ಪಿಸಲಾಗುತ್ತಿದೆ. ಬಸವಣ್ಣನ ಅಪೂರ್ಣ ಕ್ರಾಂತಿಗೆ ಹೊಸ ಆಯಾಮ ಕೊಡಲು ಮುಂದಾದ ಶ್ರೀ ಶಿವಮೂರ್ತಿ ಶರಣರು ಬಸವ ಧರ್ಮವನ್ನು ಎಲ್ಲರಿಗು ಮುಕ್ತಗೊಳಿಸುವ ಕ್ರಾಂತಿಕಾರಿ ಹೆಜ್ಜೆಗೆ ಮುಂದಾಗಿದ್ದಾರೆ. ಇದನ್ನು ಸಹಿಸದ ವೈದಿಕ ಮನಸ್ಸಿನವರು ಧರ್ಮಕ್ಕೆ ಸಂಬಂಧವೇ ಇಲ್ಲದ ಆಹಾರ ವಿಚಾರಗಳನ್ನು ಮುಂದುಮಾಡಿ ಟೀಕೆಗಿಳಿದಿದ್ದಾರೆ. ಶರಣರ ಸಾಮಾಜಿಕ ಕಾಳಜಿ ಬಗೆಗೆ ಅಪಾರ ಗೌರವ ಹೊಂದಿರುವ 'ಸಂವಾದ' ಅವರ ಕ್ರಾಂತಿಕಾರಿ ನಿಲುವನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ.

ಸಮ್ಮೇಳನದ ನಿರ್ಣಯಗಳು

೧. ಬಸವ ಧರ್ಮವನ್ನು ಒಂದು ಸ್ವತಂತ್ರ ಧರ್ಮವೆಂದು ಪರಿಗಣಿಸಿ ಮುಂದಿನ ಜನಗಣತಿಯಲ್ಲಿ ಅದಕ್ಕಾಗಿ ಪ್ರತ್ಯೇಕ ಕಾಲಂ ನೀಡಬೇಕು.

೨. ವಿಜಾಪುರ ಮಹಿಳಾ ವಿಶ್ವವಿದ್ಯಾಲಯಕ್ಕೆ ಶರಣೆ ಅಕ್ಕಮಹಾದೇವಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಒಕ್ಕಲಿನ ಮುದ್ದಣ್ಣ, ಮೈಸೂರು ವಿಶ್ವ ವಿದ್ಯಾಲಯಕ್ಕೆ ಮಾದಾರ ಚನ್ನಯ್ಯ ವಿಶ್ವ ವಿದ್ಯಾಲಯಗಳೆಂದು ನಾಮಕರಣ ಮಾಡಬೇಕು.

೩. ದೇವನಹಳ್ಳಿಯಲ್ಲಿ ಆರಂಭವಾಗಲಿರುವ ವಿಮಾನ ನಿಲ್ದಾಣಕ್ಕೆ 'ಬಸವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ' ವೆಂದು ನಾಮಕರಣ ಮಾಡಬೇಕು.

೪. ಮಾಂಸಾಹಾರಿಗಳು 'ಬಸವ ಧರ್ಮ' ಸ್ವೀಕರಿಸಲು ಯಾವುದೇ ನಿರ್ಬಂಧವಿಲ್ಲ. ಆಹಾರವು ಅವರವರ ವೈಯಕ್ತಿಕ ಅಭಿರುಚಿಗೆ ಬಿಟ್ಟದ್ದು. ಸಸ್ಯಾಹಾರಿಗಳು ಮಾಂಸಾಹಾರಿಗಳನ್ನು ದೂರವಿಡುವುದು ಬೇಡವೆಂಬುದು ಈ ನಿರ್ಣಯದ ಉದ್ದೇಶ.

೫. ವಚನ ಸಾಹಿತ್ಯವನ್ನು ನಮ್ಮ ದೇಶದ ಎಲ್ಲ ಪ್ರಾಂತೀಯ ಭಾಷೆಗಳಲ್ಲಿ ಪ್ರಕಟಿಸಬೇಕು. ಆಲಮಟ್ಟಿ ಜಲಾಶಯಕ್ಕೆ ಶರಣ ಹರ್ಡೇಕರ್ ಮಂಜಪ್ಪನವರ ಹೆಸರಿಡಬೇಕು.

೬. ಬಹು ಮುಖ್ಯ ವಾಗಿ 'ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ' ತಕ್ಷಣ ಕಾರ್ಯಾರಂಭ ಮಾಡಬೇಕು.

ತ್ಯಜಿಸುವುದೇ ಈ ಶರಣರ ಪರಿ.....

ಚಿತ್ರದುರ್ಗ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಶರಣರು ಸದಾ ಕ್ರಾಂತಿಕಾರಿ ನಿಲುವುಗಳನ್ನು ಪ್ರಕಟಿಸುತ್ತಲೇ ಬಂದವರು.

ಪೀಠಕ್ಕೆ ಬಂದ ತಕ್ಷಣವೇ ಅಡ್ಡ ಪಲ್ಲಕ್ಕಿ, ಕಿರೀಟ, ಸಿಂಹಾಸನ, ಛತ್ರಿ, ಚಾಮರಗಳನ್ನು ತ್ಯಜಿಸಿದರು.

'ಜಗದ್ಗುರು' ಪಟ್ಟವನ್ನು ತ್ಯಜಿಸಿದರು.

ಶ್ರೀ ಮಠದೊಳಗಿನ ದೇವರ ಮೂರ್ತಿಗಳನ್ನು ತ್ಯಜಿಸಿದರು.

'ಧರ್ಮ ದಂಡ'ದ ಪ್ರತೀಕ ಬೆತ್ತವನ್ನು ತ್ಯಜಿಸಿದರು.

'ಮಹಾಸ್ವಾಮಿ' ಎಂಬುದನ್ನು ತ್ಯಜಿಸಿದರು.

ಕುಳಿತು ಆಶೀರ್ವದಿಸುವುದನ್ನು ತ್ಯಜಿಸಿದರು.

ಭಕ್ತರ ಮೇಲೆ ಕಾಣಿಕೆಗಳನ್ನು ಇಂತಿಷ್ಟೇ ಕೊಡ ಬೇಕೆಂಬ ಆಜ್ಞೆ ಹೊರಡಿಸುವಿಕೆಯಂತೂ ಇವರ ಬಳಿ ಸುಳಿಯಲೇ ಇಲ್ಲ. ಈಗ, ಅಖಿಲ ಭಾರತ ಪ್ರಪ್ರಥಮ 'ಬಸವ ಧರ್ಮ' ಸಮ್ಮೇಳನದಲ್ಲಿ 'ಪಾದ ಪೂಜೆ' ಮಾಡಿಸಿಕೊಳ್ಳುವುದನ್ನು ಮತ್ತು 'ನಾವು' ಪದ ಪ್ರಯೋಗವನ್ನು ತ್ಯಜಿಸಿದರು.

ಈ ಶರಣರು ಇನ್ನು ಮುಂದೆ ಏನೇನು ತ್ಯಜಿಸುತ್ತಾರೋ ಕಾದು ನೋಡಬೇಕು. ಕೊನೆಗೆ 'ಶಿವಮೂರ್ತಣ್ಣ' ಆಗುವುದೂ ಇದ್ದೀತು !

ಬಸವನ ಅಪೂರ್ಣ ಕ್ರಾಂತಿಯ ಹೊಸ ಹೆಜ್ಜೆಗೆ ಬುನಾದಿ

ಇವತ್ತು ಮಾಂಸಾಹಾರವನ್ನೇ ಮುಖ್ಯವಾಗಿಸಿಕೊಂಡು ಮುರುಘಾಮಠದ ಶಿವಮೂರ್ತಿ ಶರಣರ ವಿರುದ್ಧ ಟೀಕೆ ಮಾಡುತ್ತಿರುವುದು ಪುರೋಹಿತಶಾಹಿಗಳ ಕುತಂತ್ರವೆನ್ನದೇ ಬೇರೆ ವಿಧಿ ಇಲ್ಲ.

ಪ್ರಸ್ತುತ ಲಿಂಗಾಯತ ಸಮಾಜದ ದುರಂತ ಯಾವುದೆಂದರೆ ಬಹಳಷ್ಟು ಲಿಂಗಾಯತರು ಇವತ್ತು ವೈದಿಕ ಸಂಸ್ಕೃತಿಯ ಆರಾಧಕರಾಗಿರುವುದು; ಮಾತ್ರವಲ್ಲ ಯಾವುದನ್ನು ಬಸವಣ್ಣ ವಿರೋಧಿಸಿದ್ದನೋ ಅದನ್ನೇ ಇವತ್ತು ಲಿಂಗಾಯತರು ಪೂಜಿಸುತ್ತಿರುವುದು. ಇದು ಯಾವ ಹಂತ ತಲುಪಿದೆ ಎಂದರೆ ಯಾರಾದರೂ ಲಿಂಗಾಯತರಲ್ಲೂ ಗೋಮಾಂಸ ತಿನ್ನುವವರಿದ್ದಾರೆ ಎಂಬ ವಾಸ್ತವತೆಯ ಬಗ್ಗೆ ಮಾತನಾಡಿದರೆ, ಅದರ ಬಗ್ಗೆ ಕೋಪಗೊಂಡು ಪ್ರತಿಭಟಿಸುತ್ತಾರೆ.

ಹೀಗೆ ನಿಂತ ನೀರಂತಾಗಿರುವ ಒಂದು ಸಮುದಾಯವನ್ನು ಪರಿವರ್ತಿಸಲು, ಅದಕ್ಕೊಂದು ಹೊಸ ಚಾಲನೆ ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಶಿವಮೂರ್ತಿ ಶರಣರನ್ನೇ ವಿರೋಧಿಸುತ್ತಿದ್ದಾರೆ. ಇಂತಹವರಲ್ಲಿ ಕೋ. ಚೆನ್ನಬಸಪ್ಪರಂತಹ ಪ್ರಜ್ಞಾವಂತರೂ ಸೇರಿರುವುದು ವಿಷಾದನೀಯ.

ಶರಣರ ಕಾಯಕದ ಶ್ರಮ ಸಂಸ್ಕೃತಿ ಮತ್ತು ದಾಸೋಹ ಸಂಸ್ಕೃತಿಯಿಂದ ಮಾನ್ಯತೆ ಮತ್ತು ಘನತೆ ಹೊಂದಿದ ಬಸವಧರ್ಮ ಇಂದಿನ ಪರಿಸ್ಥಿತಿಯಲ್ಲಿ ಪುರೋಹಿತಶಾಹಿಯಿಂದ ಮುಕ್ತವಾಗಲು ಹೊಸ ಆಯಾಮ ಪಡೆಯುವುದು ಅನಿವಾರ್ಯವಾಗಿದೆ.

ಚಿತ್ರದುರ್ಗದ ಶಿವಮೂರ್ತಿ ಶರಣರು ಬಸವ ಧರ್ಮ ಸಮ್ಮೇಳನ ನಡೆಸಿರುವುದು ಬಸವ ತತ್ವದರ್ಶನದ ಅಪೂರ್ವ ಕ್ರಾಂತಿಯ ಮುಂದಿನ ಹೆಜ್ಜೆಗಳನ್ನು ರೂಪಿಸಲು ಬುನಾದಿ ಹಾಕಿದಂತಾಗಿದೆ. ದೀನ-ದುರ್ಬಲರ ಮಾನವೀ ಧರ್ಮವಾಗಿ ಚಾಲನೆ ಪಡೆಯಲು ಪ್ರಚೋದನೆ ನೀಡಿದೆ. ಜೀವಪರ ಕಾಳಜಿಯ ಎಲ್ಲರೂ ಇದನ್ನು ಬೆಂಬಲಿಸುವುದು ಅಗತ್ಯವಾಗಿದೆ.

ಅಹಿಂಸೆಯ ಪ್ರವಾದಿಯಾದ ಬುದ್ಧ ಮಾಂಸಾಹಾರವನ್ನು ನಿರಾಕರಿಸದಿರುವಾಗ, ಮಾಂಸಾಹಾರಿಗಳು ಬಸವ ಧರ್ಮೀಯರಾಗಲು ನಿರಾಕರಿಸುವುದು, ಆಹಾರ ಪದ್ಧತಿಯ ಮೇಲಿನ ಪುರೋಹಿತಶಾಹಿಯ ಆಕ್ರಮಣವಾಗುತ್ತದೆ. ಶಿವ ಶರಣರಾದ ಮಾಂಸಾಹಾರಿಗಳನ್ನು ಬಸವಣ್ಣನವರು ತಿರಸ್ಕರಿಸಿರಲಿಲ್ಲವೆಂಬುದು ಅವರ ವಚನಗಳಲ್ಲಿ ವ್ಯಕ್ತವಾಗಿದೆ.

ಶಿವಮೂರ್ತಿ ಶರಣರು ಹೇಳಿರುವುದಾದರೂ ಏನನ್ನು? ಮಾಂಸಾಹಾರ ಮಾಡುವವರನ್ನು ಬಸವಧರ್ಮ ಪರಕೀಯರಂತೆ ಪರಿಗಣಿಸುವುದಿಲ್ಲ; ಅಂಥವರೂ ಬಂದು ಸೇರಿಕೊಂಡರೆ ಆಕ್ಷೇಪವಿಲ್ಲ ಎಂದಿದ್ದಾರಷ್ಟೇ. ಧರ್ಮದ ವಿಸ್ತರಣೆಗಾಗಿ ಶಿವಮೂರ್ತಿ ಶರಣರು ಹೀಗೆ ಹೇಳಿದ್ದಾರೆಯೇ ಹೊರತು ಲಿಂಗಾಯತರನ್ನು ಅವಮಾನಿಸಲೆಂದಲ್ಲ.

ಹಾಗೆ ನೋಡಿದರೆ, ಶಿವಮೂರ್ತಿ ಶರಣರ ಹೇಳಿಕೆ ಅಂತಹ ಕ್ರಾಂತಿಕಾರಿ ಹೇಳಿಕೆಯೇನಲ್ಲ. ಇವರು ಇವತ್ತು ಹೇಳಿರುವುದನ್ನು ಬುದ್ಧ ಬಹಳ ಹಿಂದೆಯೇ ಹೇಳಿದ್ದ.

ಲಿಂಗಾಯತರು, ವೀರಶೈವರು, ಜಂಗಮರು.... ಹೀಗೆ ಅನೇಕ ಪಂಗಡಗಳಾಗಿ ಛಿದ್ರವಾಗಿ ಪರಸ್ಪರ ಕಿತ್ತಾಟದಲ್ಲೇ ಮುಳುಗಿ ಹೋಗಿರುವ ಸಮುದಾಯವನ್ನು ಒಟ್ಟುಗೂಡಿಸಲೆಂದೇ ಶಿವಮೂರ್ತಿ ಶರಣರು ಅದಕ್ಕೊಂದು ಹೊಸ ರೂಪವನ್ನುಕೊಟ್ಟಿದ್ದಾರೆ. ಬಸವಧರ್ಮ ಹೊಸ ಧರ್ಮವಲ್ಲ, ವೀರಶೈವ, ಲಿಂಗಾಯತ, ಜಂಗಮ, ಒಳಪಂಗಡಗಳಾಗಿದ್ದವರನ್ನು ಸಮೀಕರಿಸಲೆಂದು ಬಸವತತ್ವಗಳನ್ನು ಕೇಂದ್ರವಾಗಿರಿಸಿಕೊಂಡು ಅದಕ್ಕೆ ಹೊಸ ರೂಪವನ್ನು ಕೊಟ್ಟಿರುವುದು ಸರಿಯಾದ ಹೆಜ್ಜೆಯಾಗಿದೆ. ಎಲ್ಲಾ ವೀರಶೈವ ಪಂಗಡದವರನ್ನು ಮತ್ತು ಇತರರನ್ನೂ ಸೇರಿಸಲಿಕ್ಕೆಂದೇ ಅದಕ್ಕೊಂದು ವಿಸ್ತಾರವಾದ ಆಯಾಮ ನೀಡಿದ್ದಾರೆ.

ಇವತ್ತು ಶಿವಮೂರ್ತಿ ಶರಣರು ಪ್ರಗತಿಪರವಾದ ನಿಲುವುಗಳನ್ನು ತಾಳುತ್ತಿರುವುದು ಇತರರಿಗೆ ನುಂಗಲಾರದ ತುತ್ತಾಗಿದೆ. ಆದರೆ ಅವರ್ಯಾರೂ ಶರಣರಂತೆ ವಿಧವಾ ವಿವಾಹ, ಮಹಿಳೆಯರ ಸಬಲೀಕರಣ, ಸಾಮಾಜಿಕ ಪರಿವರ್ತನೆಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿಲ್ಲ ಆದ್ದರಿಂದಲೇ ಶಿವಮೂರ್ತಿ ಶರಣರಿಂದಾಗಿ ತಮ್ಮ ಕುರ್ಚಿಗೇ ಸಂಚಕಾರ ಬರುತ್ತದೆ ಎಂದು ಭಯಭೀತರಾಗಿದ್ದಾರೆ.

ಧರ್ಮಕ್ಕೂ, ಮಾಂಸಾಹಾರಕ್ಕೂ ಯಾವುದೇ ಸಂಬಂಧವಿಲ್ಲ. ಇಸ್ಲಾಂ ಧರ್ಮವನ್ನು ಹೊರತುಪಡಿಸಿದರೆ ಯಾವ ಧರ್ಮವೂ ಆಹಾರದ ಬಗ್ಗೆ ನಿಷೇಧಗಳನ್ನು ಹೇರಿಲ್ಲ. ಅಂತಹ ನಿಷೇಧಗಳನ್ನು ಹೇರಿದ ಧರ್ಮ ಎಂದೂ ಹೊರಹೊಮ್ಮಿಲ್ಲ. ಉದಾಹರಣೆಗೆ ಅತಿಯಾದ ಶಿಷ್ಟಾಚಾರವನ್ನು ಬಯಸಿದ್ದ ಜೈನ್ ಧರ್ಮ ಭಾರತದಿಂದಾಚೆಗೆ ಹೋಗಲಿಲ್ಲ. ಹಿಂದೂ ಧರ್ಮವೂ ಹುಟ್ಟಿನಿಂದ ಜಾತಿಯನ್ನೇ ಆಧರಿಸಿತ್ತಾದ್ದರಿಂದ; ಹಲವಾರು ನಿಷೇಧಗಳನ್ನು ಹೊಂದಿತ್ತಾದ್ದರಿಂದ ಅದೂ ಭಾರತದಿಂದ ಹೊರಗೆ ಹೋಗಲು ಸಾಧ್ಯವಾಗಲಿಲ್ಲ. ಇವೆರಡಕ್ಕೂ ವ್ಯತಿರಿಕ್ತವಾಗಿದ್ದು ಬೌದ್ಧ ಧರ್ಮ. ಪ್ರಾಣಿಗಳನ್ನು ಬಲಿ ಕೊಡಬಾರದೆಂದು ಬುದ್ಧ ಹೇಳಿದ್ದನೇ ಹೊರತು, ಅದರ ಸೇವನೆಯನ್ನು ನಿಷೇಧಿಸಲಿಲ್ಲ. ಆ ಕಾರಣದಿಂದಲೇ ಬೌದ್ಧ ಧರ್ಮ ಏಷ್ಯಾ ಖಂಡದಲ್ಲೇ ಹರಡಿತು, ವಿಸ್ತಾರಗೊಳ್ಳುತ್ತಾ ಹೋಯಿತು. ಇವತ್ತಿಗೂ ಬೌದ್ಧ ಧರ್ಮ ಜನರನ್ನು ಆಕರ್ಷಿಸುತ್ತಿರುವುದು ಯಾತಕ್ಕೆ ಎಂಬುದರ ಬಗ್ಗೆ ಎಲ್ಲರೂ ಚಿಂತಿಸಬೇಕಿದೆ.

ಮಾಂಸಾಹಾರಿಗಳ ಬಗ್ಗೆ ಅಭ್ಯಂತರವೇನಿಲ್ಲ ಎಂದು ಶಿವಮೂರ್ತಿ ಶರಣರು ಹೇಳಿರುವುದಕ್ಕೆ ಒಂದು ಪ್ರಮುಖ ಕಾರಣವೂ ಇದೆ. ಇವತ್ತು ಕೆಳವರ್ಗದವರು ಬಸವಧರ್ಮವನ್ನು ಒಪ್ಪಿಕೊಂಡು ಅವರ ಮೇಲೆ ಹೊಸ ನಿರ್ಬಂಧಗಳನ್ನು ಹೇರಿದರೆ, ಬಸವಧರ್ಮವೇ ಅವರಿಗೆ ಪರಕೀಯವಾಗುತ್ತದೆ.

ಧರ್ಮವು ಯಾರಿಗೂ ಪರಕೀಯವಾಗಬಾರದು. ಹಾಗೆಯೇ ಯಾರೂ ಧರ್ಮಕ್ಕೆ ಪರಕೀಯರಾಗಕೂಡದು ಎಂಬ ಉದ್ದೇಶವೇ ಶಿವಮೂರ್ತಿ ಶರಣರದ್ದು. ಇದರಲ್ಲಿ ಆಕ್ಷೇಪಣಾರ್ಹವಾದದ್ದಾದರೂ ಏನು ?

(ಸೌಜನ್ಯ : ಲಂಕೇಶ್ ಪತ್ರಿಕೆ)

❍ ಪ್ರೊ॥ ಕೆ. ರಾಮದಾಸ್

ಬೌದ್ಧ ಧರ್ಮವೂ, ಮಾಂಸಾಹಾರವೂ...

ಬುದ್ಧನು ಬೋಧಿಸಿದ ಧರ್ಮವು ಬೌದ್ಧ ಧರ್ಮ, ಅದನ್ನು ಒಪ್ಪಿಕೊಂಡು ಆಚರಿಸುವವರು ಬೌದ್ಧರು. ಬೋಧಿಯನ್ನು ಪಡೆದು ಕೊಂಡು ಮಹಾಪರಿನಿಬ್ಬಾಣವನ್ನು ಹೊಂದಿದವನು ಬುದ್ಧ. ಬೋಧಿ ಅಂದರೆ ಪರಿಪೂರ್ಣ ಜ್ಞಾನ, ತ್ರಿಕಾಲ ಜ್ಞಾನ, ಸ್ಥೂಲ ಸೂಕ್ಷ್ಮ ಜ್ಞಾನ, ಹುಟ್ಟು ಸಾವುಗಳ ಜ್ಞಾನ, ಸುಖ ದುಃಖದ ಜ್ಞಾನ, ನಾಮ ರೂಪದ ಜ್ಞಾನ, ಕಾರ್ಯಕಾರಣ ನಿಯಮದ ಜ್ಞಾನ, ಇಹಪರಲೋಕ ಜ್ಞಾನ, ಪ್ರಕೃತಿ ನಿಯಮ ಜ್ಞಾನ, ಒಟ್ಟನಲ್ಲಿ ಸರ್ವಜ್ಞತ್ವ.

ಆತ ಭಗವಂತ, ಅರಹಂತ ಸಮ್ಮಾಸಂಬುದ್ಧ ನುಡಿದಂತೆ ನಡೆಯುವವ ನಡೆದಂತೆ ನುಡಿಯುವವ, ಒಳ್ಳೆಯವನಾಗಿ ಬಂದು ಒಳ್ಳೆ ಯವನಾಗಿ ಹೋದವ, ಸಕಲ ಲೋಕಗಳನ್ನು ಬಲ್ಲವ ಮನುಷ್ಯರನ್ನು ಧಮಿ ಸುವುದರಲ್ಲಿ ಅದ್ವಿತೀಯ, ದೇವ ಮಾನವರಿಗೆ ಗುರು, ಬುದ್ಧ ಭಗವಂತ.

ಆ ಭಗವಂತನಿಂದ ಸಂಬೋಧಿತವಾದ ಧರ್ಮವು ಪ್ರಕೃತದಲ್ಲೇ ಕಾಣುವಂಥಾದ್ದು. ಕೂಡಲೇ ಫಲವನ್ನು ಕೊಡುವಂಥಾದ್ದು, ಬಾ ನೋಡು! ಎಂದು ಆಹ್ವಾನಿಸುವಂಥಾದ್ದು ತನ್ನನ್ನು ತಾನು ತಿಳಿದುಕೊಳ್ಳು ವಂಥಾದ್ದು ವಿಮುಕ್ತಿಯನ್ನು ನೀಡುವಂಥಾದ್ದು. ಪ್ರಾರಂಭದಲ್ಲಿ ಉತ್ತಮ, ಮಧ್ಯದಲ್ಲಿ ಉತ್ತಮ, ಅಂತ್ಯದಲ್ಲಿ ಉತ್ತಮ, ದೇವಮಾನವರಿಗೆ ಕಲ್ಯಾಣಕಾರಕ.

ಈ ಧರ್ಮವನ್ನು ನಡೆಸಿಕೊಂಡು ಹೋಗಲು ಸುಪ್ರತಿಷ್ಠಾಪಿಸಲ್ಪಟ್ಟು ಭಗವಂತನ ಸಂಘ, ಅದು ಋಜುಮಾರ್ಗದಲ್ಲಿ ನಡೆದಿದೆ. ನ್ಯಾಯ ಮಾರ್ಗದ ಮೇಲೆ ಹೊರಟಿದೆ. ಸ್ವಾಮಿ ಪಥದ ಮೇಲೆ ಸಾಗಿದೆ, ಆ ಸಂಘದಲ್ಲಿ ಸೋತಾಪತ್ತಿ ಸಕದಗಾಮಿ ಅನಗಾಮಿ ಅರಹಂತ ಸ್ಥಿತಿಯನ್ನು ಪಡೆದ ಭಿಕ್ಖು, ಭಿಕ್ಖುಣಿಯರಿದ್ದಾರೆ. ಆ ಸಂಘವು ಆದರಿಸಲಿಕ್ಕೆ, ಗೌರವಿಸಲಿಕ್ಕೆ, ಸತ್ಕರಿಸಲಿಕ್ಕೆ, ಪೂಜಿಸಲಿಕ್ಕೆ, ದಾನ ಧರ್ಮಕ್ಕೆ ಯೋಗ್ಯವಿದೆ.

ಹೀಗೆ ಇದ್ದ ಬುದ್ಧ ಧರ್ಮ, ಸಂಘದಲ್ಲಿ ಓರ್ವನು ಶರಣು ಹೋಗುತ್ತಾನೆ, ಆಶ್ರಯ ಪಡೆಯುತ್ತಾನೆ. ಆತನು ಪ್ರಾಣಿಹಿಂಸೆ ಮಾಡುವುದಿಲ್ಲ ಕಳವು ಮಾಡುವುದಿಲ್ಲ ವ್ಯಭಿಚಾರ ಮಾಡುವುದಿಲ್ಲ, ಸುಳ್ಳು ನುಡಿಯುವುದಿಲ್ಲ, ಮತ್ತನ್ನುಂಟುಮಾಡುವ ಪದಾರ್ಥವನ್ನು ಸೇವಿಸುವುದಿಲ್ಲ ಎಂಬ ವೈರಾಗ್ಯದ ತರಬೇತಿಯನ್ನು ಪಡೆಯಲು ಐದು ಶೀಲಗಳನ್ನು ಗ್ರಹಣ ಮಾಡುತ್ತಾನೆ, ಆತನು ಆಗ ಬೌದ್ಧ ಉಪಾಸಕ, ಅವಳು ಬೌದ್ಧ ಉಪಾಸಕಿ. ಮತ್ತೆ ತನ್ನ ಉಸಿರಾಟದ ಮೇಲೆ ಏಕಾಗ್ರತೆ ಇಡುತ್ತಾನೆ. ತನ್ನ ಕಾಯಾ, ವಾಚಾ, ಮನಸಾ ಚಟುವಟಿಕೆಗಳ ಮೇಲೆ ಗಮನವನ್ನು ಇರಿಸುತ್ತಾನೆ. ಸಕಲ ಜೀವಿಗಳಿಗೆ ಲೇಸನ್ನೇ ಬಯಸುತ್ತಾನೆ.

ಹೀಗೆ ತ್ರಿಶರಣ ಗಮನ, ಪಂಚಶೀಲ ಗ್ರಹಣ, ತ್ರಿವಿಧ ಧ್ಯಾನ ಮಾಡಿ ದುಃಖದಿಂದ ಬಿಡುಗಡೆಯಾಗಿ ವಿಮುಕ್ತಿಯನ್ನು ಪಡೆದು ಹುಟ್ಟು ಸಾವುಗಳ ಭವಚಕ್ರದಿಂದ ದಾಟಿ ಹೋಗುತ್ತಾನೆ. ಬುದ್ಧ ಧರ್ಮವು ಜ್ಞಾನ, ಪ್ರಜ್ಞೆ, ಎಚ್ಚರಿಕೆ, ಜಾಣ್ಮೆ, ಕರುಣೆ, ದಯೆ, ಅನುಕಂಪಗಳಿಂದ ಕೂಡಿದೆ. ಹೀಗಿದ್ದ ಬುದ್ಧ ಧರ್ಮದಲ್ಲಿ ಮಾಂಸ ಆಹಾರದ ಬಗ್ಗೆ ಸ್ಪಷ್ಟವಾದ ನಿಲುವು ಯಾವುದು? ಈ ವಿಷಯದ ಬಗ್ಗೆ ಅನೇಕರು ಗೋಜಲಾಟದಲ್ಲಿ ಬಿದ್ದಿದ್ದಾರೆ, ಅದನ್ನು ಸರಿಯಾಗಿ ಅರ್ಥೈಸಿ ಕೊಳ್ಳುವುದು ಉಚಿತವಾದುದು. ಅದು ಈ ಮುಂದಿನ ಉಪದೇಶದಿಂದ ನಿಚ್ಚಳವಾಗುವುದು.

ಒಮ್ಮೆ ಜೀವಕ ಕುಮಾರಬಚ್ಚನು ಹೀಗೆ ನುಡಿದನು – 'ಭಂತೆ ನಾನು ಹೀಗೆ ಕೇಳಿದ್ದೇನೆ. ಸಮಣ ಗೌತಮನು ತನ್ನ ಉದ್ದೇಶಕ್ಕೆ ಪ್ರಾಣಿಹತ್ಯೆ ಮಾಡಿ ಆ ಮಾಂಸದಿಂದ ಸಿದ್ಧಪಡಿಸಿದ ಆಹಾರವನ್ನು ಸೇವಿಸುತ್ತಾನೆ ಎಂದು. ಪೂಜ್ಯನೆ ಯಾರು ಹೀಗೆ ಮಾತನಾಡುತ್ತಾರೊ ಅವರು ತಪ್ಪಾಗಿ ನಿರೂಪಿಸುತ್ತಿರಬಹುದೆ, ಧರ್ಮದ ರೀತ್ಯಾ ನಿಂದನೆಗೆ ಒಳಗಾಗುವಂತಹ ಪರಿಸ್ಥಿತಿಯನ್ನುಂಟು ಮಾಡುವರೆ?'

'ಜೀವಕ, ಸಮಣ ಗೌತಮನು ತನ್ನ ಉದ್ದೇಶಕ್ಕೆಂದು ಪ್ರಾಣಿಹತ್ಯೆ ಮಾಡಿದ ಮಾಂಸದಿಂದ ಸಿದ್ಧಪಡಿಸಿದ ಆಹಾರವನ್ನು ಸೇವಿಸುತ್ತಾನೆ ಎಂದು ಯಾರು ಈ ಮಾತನ್ನು ಹೇಳುವರೊ ಅವರು ಸತ್ಯವನ್ನು ನುಡಿಯುವುದಿಲ್ಲ. ನಾನಾದರೂ ಮೂರು ಕಾರಣಗಳು ಇರುವಾಗ ಮಾಂಸ ಸೇವನೆ ಮಾಡಬಾರದು ಎಂದು ಹೇಳುತ್ತೇನೆ. ಪ್ರಾಣಿಹತ್ಯೆಯನ್ನು ಮಾಡುವುದನ್ನು ಕಣ್ಣಿನಿಂದ ಕಂಡಾಗ, ಪ್ರಾಣಿಹತ್ಯೆಯು ತನಗಾಗಿ ಆಗಿದೆ ಎಂದು ಕಿವಿಯಿಂದ ಕೇಳಿದಾಗ, ಪ್ರಾಣಿಹತ್ಯೆ ತನಗಾಗಿ ಆಗಿದೆ ಎಂದು ಸಂದೇಹವಿದ್ದಾಗ ಆ ಮಾಂಸವನ್ನು ಭಕ್ಷಿಸಬಾರದು' ಈ ಮೂರು ಕಾರಣಗಳು ಇಲ್ಲದಾಗ ಮಾಂಸದ ಸೇವನೆ ಮಾಡಬಹುದು ಎಂದು ಹೇಳುತ್ತೇನೆ.'

'ಜೀವಕ, ಬೌದ್ಧ ಭಿಕ್ಖು ಯಾವುದಾದರೊಂದು ಹಳ್ಳಿ ಪಟ್ಟಣದ ಮೇಲೆ ಆಹಾರಕ್ಕೆ ಅವಲಂಬಿತನಾಗಿರುತ್ತಾನೆ. ಭಿಕ್ಷಾಟನೆಯಲ್ಲಿ ಆತನು ಮೈತ್ರಿಯಿಂದೊಡಗೂಡಿದ ಮನಸ್ಸನ್ನು ದಶದಿಕ್ಕುಗಳಲ್ಲಿ ಪಸರಿಸುತ್ತಾನೆ. ಲೋಕದ ಮೇಲೆ ವೈರವಿಲ್ಲದ ಹಗೆತನವಿಲ್ಲದ ಮನಸ್ಸನ್ನೂ ಹರಡುತ್ತಾನೆ. ಅಂಥ ಭಿಕ್ಖುವನ್ನು ಗೃಹಸ್ಥನೊಬ್ಬನು ಭೋಜನಕ್ಕೆ ಆಮಂತ್ರಿಸುತ್ತಾನೆ. ತನ್ನ ಮನದಿಚ್ಛೆಯಂತೆ ಆತನಿಗೆ ಉಣಬಡಿಸುತ್ತಾನೆ.'

'ಜೀವಕ ಆಗ ಆ ಭಿಕ್ಖು ಹೀಗೆಂದುಕೊಳ್ಳುವುದಿಲ್ಲ. ಈ ಭಿಕ್ಷೆಯು ಚೆನ್ನಾಗಿದೆ ಇದರಿಂದ ಒಳ್ಳೆಯದಾಗುತ್ತದೆ, ಈ ಭಿಕ್ಷೆ ಚೆನ್ನಾಗಿಲ್ಲ ಇದರಿಂದ ಕೆಡಕು ಆಗುತ್ತದೆ. ಯಾವ ಗೌರವಕ್ಕೂ ಮೈಮರೆಯದೆ ಅನ್ನವನ್ನು ಅನ್ನವನ್ನಾಗಿಯೇ ಭುಂಜಿಸುತ್ತಾನೆ.'

'ಜೀವಕ ಆ ಸ್ಥಿತಿಯಲ್ಲಿ ಆ ಭಿಕ್ಖು ತನಗಾಗಿಯಾಗಲಿ ಅಥವಾ ದಾಯಕನಿಗಾಗಲಿ ಹಾನಿಯಾಗುವಂತೆ ವರ್ತಿಸುತ್ತಾನೆಯೆ?'

'ಇಲ್ಲ ಭಂತೆ'

'ಜೀವಕ ಆ ಸಮಯದಲ್ಲಿ ಆ ಭಿಕ್ಖು ನಿಂದೆಗೊಳಗಾಗದ ಆಹಾರವನ್ನೇ ಉಪಯೋಗಿಸುತ್ತಾನಲ್ಲವೆ?'

'ಹೌದು ಭಂತೆ'

'ಜೀವಕ ರಾಗ, ದ್ವೇಷ, ಮೋಹ ಈ ಹಾನಿಕಾರಕ ಗುಣಗಳು ತಥಾಗತನಿಂದ ಬೇರು ಸಹಿತ ಕಿತ್ತು ಹಾಕಲ್ಪಟ್ಟಿವೆ. ಇದು ಒಳ್ಳೇ ಆಹಾರವೆಂದರೆ ಅದು ರಾಗದಿಂದ ಕೂಡಿದ ವಿಚಾರ, ಇದು ಕೆಟ್ಟ ಆಹಾರವೆಂದರೆ ಅದು ದ್ವೇಷದಿಂದ ಕೂಡಿದ ವಿಚಾರ, ಈ ಆಹಾರವು ನನಗೇ ಬೇಕು ಎಂದರೆ ಅದು ಮೋಹದಿಂದ ಕೂಡಿದ ವಿಚಾರ. ತಥಾಗತನು ಈ ಯಾವ ವಿಚಾರಗಳನ್ನು ಹೊಂದದೇ ಶರೀರ ಪೋಷಣೆಗಾಗಿ ಮಾತ್ರ ಆಹಾರವನ್ನು ಸೇವಿಸುತ್ತಾನೆ.

'ಜೀವಕ, ತಥಾಗತನು ಮೈತ್ರಿ ಕರುಣೆ ಮುದಿತ ಉಪೇಕ್ಷೆ ಭಾವದಿಂದ ಆಹಾರವನ್ನು ಸೇವಿಸುತ್ತಾನೆ.'

'ಜೀವಕ ತಥಾಗತನಿಗಾಗಿಯೊ ಅಥವಾ ಆತನ ಶಿಷ್ಯರಿಗಾಗಿಯೊ ಯಾರು ಉದ್ದೇಶಪೂರ್ವಕವಾಗಿ ಪ್ರಾಣಿಹತ್ಯೆಯನ್ನು ಮಾಡುತ್ತಾರೆಯೋ ಅವರು ಈ ಐದು ರೀತಿಗಳಲ್ಲಿ ಪಾಪಗಳನ್ನು ಕಟ್ಟಿಕೊಳ್ಳುತ್ತಾರೆ. ಪ್ರಾಣಿವಧೆ ಮಾಡಬೇಕೆಂದು ಮನಸ್ಸು ಮಾಡಿದಾಗ, ಆ ಪ್ರಾಣಿಯನ್ನು ಎಳೆದು ತರುವಾಗ, ಪ್ರಾಣಿಯನ್ನು ಕೊಲ್ಲುವಾಗ ಮಾಂಸದ ಆಹಾರವನ್ನು ಸಿದ್ಧಪಡಿಸುವಾಗ ಮತ್ತು ಹಾಗೆ ಸಿದ್ಧಪಡಿಸಿದ ಆಹಾರವನ್ನು ಬಡಿಸುವಾಗ ಗೃಹಸ್ಥನು ದಾರುಣ ಕೃತ್ಯ ಎಸಗುತ್ತಾನೆ.

'ಜೀವಕ ಕೆಲ ಸಮಣ ಬ್ರಾಹ್ಮಣರು ಹೀಗೆ ಹೇಳುತ್ತಾರೆ –ಸಸ್ಯ ಆಹಾರವೆ ಉತ್ತಮ ಜೀವನಕ್ಕೆ ಕಾರಣ, ಆದರೆ ಹೊಲಸು ನಾರುವ ಮಾಂಸದ ಆಹಾರವು ಸಮ್ಯಕ್ ಜೀವನಕ್ಕೆ ಕೆಟ್ಟದ್ದು ಎಂದು'.

ಅರಿವು

ಅಹಿಂಸೆ, ಕರುಣೆ ಮತ್ತು ಪ್ರೀತಿಯ ಸಾಕಾರ ಮೂರ್ತಿ ಬುದ್ಧ ಆಹಾರದಲ್ಲಿ ಎಂದೂ ಶ್ರೇಷ್ಠ ಕನಿಷ್ಠ ಎಂದು ವಿಂಗಡನೆ ಮಾಡಲಿಲ್ಲ. ಪರಿವರ್ತನಶೀಲತೆಯೇ ಧರ್ಮದ ಅಂತಃಸತ್ವ ಎಂಬುದನ್ನು ಮನಗಂಡಿದ್ದ ಬುದ್ಧ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವಾದಿ ಕೂಡ ಆಗಿದ್ದ. ಆತನ ಶಿಷ್ಯರಲ್ಲಿ ಯಾವುದೇ ತಾರತಮ್ಯ ಇರಲಿಲ್ಲ. ಒಬ್ಬ ವ್ಯಕ್ತಿಯ ಧಾರ್ಮಿಕ ನಂಬಿಕೆಗೂ ಅವನು ಸ್ವೀಕರಿಸುವ ಆಹಾರಕ್ಕೂ ಎಂದೂ ಬುದ್ಧ ಸಂಬಂಧ ಕಲ್ಪಿಸಲಿಲ್ಲ. 'ಶರೀರ ಪೋಷಣೆಗೆ ಯಾವುದು ಅವಶ್ಯವೋ ಅದನ್ನು ತಿನ್ನಬೇಕು ಮತ್ತು ದೇಹಕ್ಕೆ ಯಾವುದು ಒಗ್ಗುವುದೊ ಅದನ್ನು ತಿನ್ನಬೇಕು. ಹಾಗೆ ತಿನ್ನುವಾಗ ರಾಗ, ದ್ವೇಷ, ಮೋಹ ಉತ್ಪನ್ನವಾಗದಂತೆ ಎಚ್ಚರವಹಿಸಬೇಕು' ಎಂಬುದು ಜ್ಞಾನಿಗಳ ನುಡಿ.

❍ ವೈ.ಬಿ. ನಂದನ

'ಆದರೆ ಜೀವಕ ಕೆಟ್ಟ ಕೃತ್ಯಗಳು ಇವು ಇವೆ – ಪ್ರಾಣಿಗಳನ್ನು ವಧೆ ಮಾಡುವುದು, ಅಂಗಛೇದನ ಮಾಡುವುದು, ಹೊಡೆಯುವುದು, ಸಂಕೋಲೆ ಹಾಕುವುದು, ಕಳ್ಳತನ ಮಾಡುವುದು, ಲೂಟಿ ಮಾಡುವುದು, ದರೋಡೆ ಮಾಡುವುದು, ಕೊಳ್ಳೆ ಹೊಡೆಯುವುದು, ದ್ರೋಹ ಬಗೆಯುವುದು, ವ್ಯಭಿಚಾರ ಮಾಡುವುದು ಇವು ನಿಂದನಾರ್ಹವು, ಆದರೆ ಮಾಂಸ ಆಹಾರ ಸೇವನೆ ಅಲ್ಲ.'

'ವಿಲಾಸ ಭೋಗ, ಕಾಮಾಭಿಲಾಷೆ, ಅಶುದ್ಧ ಜೀವನ, ಅಂಟಿಕೊಳ್ಳುವ ಅಸಮ್ಮತಿ, ಇವು ಕೆಟ್ಟವು, ಆದರೆ ಮಾಂಸ ಆಹಾರವಲ್ಲ'.

'ಕ್ರೋಧ, ಪ್ರತಿಷ್ಠೆ ದ್ರೋಹ, ಈರ್ಷ್ಯೆ, ಗರ್ಜನೆ, ಜಂಬ, ದುಸ್ಸಂಗ, ಇವು ಹೀನವಾದವುಗಳು, ಆದರೆ ಮಾಂಸ ಆಹಾರವಲ್ಲ'.

'ತುಚ್ಛ ಜೀವನ, ಸುಳ್ಳು, ನಿಂದೆ, ದ್ರೋಹ, ವಂಚನೆ, ಕುಯುಕ್ತಿ ಅಪಕೀರ್ತಿ ಇವು ತುಚ್ಛವಾದವುಗಳು, ಮಾಂಸ ಆಹಾರವಲ್ಲ'.

'ಕೊಲೆ ಮಾಡಲು, ಕಳವು ಮಾಡಲು, ಅಪರಾಧವೆಸಗಲು ಉತ್ತೇಜನ ನೀಡುವ ಕರ್ಮಗಳು ಭಯಂಕರ ಸ್ಮಶಾನದಲ್ಲಿ ಗೋರಿಯನ್ನು ಕಟ್ಟಿಕೊಂಡಂತೆ, ಮತ್ತು ನರಕದಲ್ಲಿ ಕೊನೆಗೊಂಡಂತೆ, ಆದರೆ ಮಾಂಸ ಆಹಾರದಿಂದ ಅಲ್ಲ.'

'ಮಾಂಸ, ಮತ್ಸ್ಯ ಸೇವನೆಯಿಂದಾಗಲಿ, ಬೆತ್ತಲೆ ನಗ್ನತೆಯಿಂದಾಗಲಿ, ನೆತ್ತಿಯ ಮೇಲೆ ಜಡೆಯನ್ನು ಕಟ್ಟಿಕೊಳ್ಳುವುದರಿಂದಾಗಲಿ, ತಲೆ ಬೋಳಿಸಿಕೊಳ್ಳುವುದರಿಂದಾಗಲಿ, ಒದ್ದೆ ಪೋಷಾಕಿನಿಂದಾಗಲಿ, ಅಗ್ನಿಪೂಜೆಯಿಂದಾಗಲಿ, ಭವಿಷ್ಯ ಸುಖಕ್ಕೆಂದು ಮಾಡುವ ದೇಹದಂಡನೆ ತಪಶ್ಚರ್ಯದಿಂದಾಗಲಿ, ನಿಯಮ ನೀತ್ಯಾದಿಗಳಿಂದಾಗಲಿ, ಮತ್ತು ಎಲ್ಲಿಯವರೆಗೆ ಸಂದೇಹಗಳು ಹೊಯ್ದಾಡುತ್ತವೆಯೊ ಅಲ್ಲಿಯವರೆಗೆ ಯಾರೂ ಪರಿಶುದ್ಧ ಮನಸ್ಸನ್ನು ಪಡೆಯಲಾರರು.'

'ಜೀವಕ ಅಭಿಲಾಷೆಗಳು ಅಂಕಿತದಲ್ಲಿರಲಿ, ನಿನ್ನ ಶಕ್ತಿಯ ಮೇಲೆ ನಿಗಾ ಇಡು, ಸತ್ಯವನ್ನು ಎತ್ತಿ ಹಿಡಿ, ಕರುಣಾಮಯಿಯಾಗಿರು.'

'ಆಶ್ಚರ್ಯ ಭಂತೆ! ಅದ್ಭುತ ಭಂತೆ! ಭಿಕ್ಖುಗಳು ನಿಂದಾತೀತವಾದ ಆಹಾರವನ್ನೇ ಸೇವಿಸುತ್ತಾರೆ, ಮಾಂಸ ಆಹಾರವೇ ದುರ್ಗುಣಗಳ ಉತ್ಪತ್ತಿಗೆ ಕಾರಣವಲ್ಲ, ತ್ಯಜಿಸಬೇಕಾದದ್ದು ದುರ್ಗುಣಗಳನ್ನು, ಮಾಂಸ ಆಹಾರವನ್ನಲ್ಲ. ಇಂದಿನಿಂದ ನಾನು ತ್ರಿರತ್ನದಲ್ಲಿ ಶರಣು ಪಡೆಯುತ್ತೇನೆ.'

'ಜೀವಕ ಇಂದಿನಿಂದ ನೀನು ಧಮ್ಮ ವಿನಯದಲ್ಲಿ ನಡೆಯುವವನಾಗು'.

'ತಮ್ಮ ಅನುಗ್ರಹ ಭಂತೆ'

ಈ ಸೂತ್ರದಿಂದ ಮಾಂಸ ಆಹಾರದ ಬಗ್ಗೆ ಬುದ್ಧನ ನಿಚ್ಚಳವಾದ ಉಪದೇಶವು ಸ್ಪಷ್ಟವಾಗುತ್ತದೆ. ಲೋಕದಲ್ಲಿ ಆಹಾರ ರೂಢಿಯು ಭೌಗೋಳಿಕ ವಾತಾವರಣವನ್ನು ಅವಲಂಬಿಸಿ ಬೆಳೆದುಬಂದಿದೆ, ಆದ್ದರಿಂದ ಜ್ಞಾನಿಗಳು ಹೇಳುತ್ತಾರೆ –'ಶರೀರ ಪೋಷಣೆಗೆ ಯಾವುದು ಅವಶ್ಯವೋ ಅದನ್ನು ತಿನ್ನಬೇಕು ಮತ್ತು ದೇಹಕ್ಕೆ ಯಾವುದು ಒಗ್ಗುವುದೊ ಅದನ್ನು ತಿನ್ನಬೇಕು. ಹಾಗೆ ತಿನ್ನುವಾಗ ರಾಗ, ದ್ವೇಷ, ಮೋಹ ಉತ್ಪನ್ನವಾಗದಂತೆ ಎಚ್ಚರವಹಿಸಬೇಕು ಎಂದು.

ಜಿಜ್ಞಾಸುಗಳು ಹೇಳುತ್ತಾರೆ –'ಮಾಂಸ ಆಹಾರ ಸೇವನೆಯಿಂದ ಒಬ್ಬನು ಪ್ರಾಣಹತ್ಯೆಯಲ್ಲಿ ಅಪ್ರತ್ಯಕ್ಷವಾಗಿ ಭಾಗಿಯಾಗುತ್ತಾನೆ ಎಂದು. ಆತನಿಗೆ ಈತನು ಹೇಳುತ್ತಾನೆ –'ಸಸ್ಯ ಆಹಾರಿಯು ಪ್ರಾಣಿಹತ್ಯೆಯಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗುತ್ತಾನೆ. ಹೇಗೆಂದರೆ ಆತನು ಆಹಾರಕ್ಕೆಂದು ಉಳುವಾಗ ಅಸಂಖ್ಯಾತ ಕ್ರಿಮಿ ಕೀಟಗಳನ್ನು ನಾಶಪಡಿಸುತ್ತಾನೆ, ಬೆಳೆ ಬೆಳೆಸುವಾಗ ಔಷಧಿ ಸಿಂಪಡಿಸಿ ಲೆಕ್ಕವಿಲ್ಲದಷ್ಟು ಕ್ರಿಮಿ ಕೀಟಗಳನ್ನು ಸಾಯಿಸುತ್ತಾನೆ. ಕಾಳು ಬೇಳೆಯನ್ನು ಬಿಸಿಲಲ್ಲಿ ಒಣಗಿಸುವಾಗ ಅನೇಕ ಹುಳ ಹುಪ್ಪಡಿಗಳ ಪ್ರಾಣವನ್ನು ಅಂತ್ಯಗೊಳಿಸುತ್ತಾನೆ, ಎಂದು.

ಈ ಪಾಪಕರ್ಮದಿಂದ ಮುಕ್ತಗೊಳಿಸಲಿಕ್ಕೆ ಬುದ್ಧನು ಕರಣೀಯಮೆತ್ತ ಸುತ್ತದಲ್ಲಿ ಹೀಗೆ ಉಪದೇಶಿಸುತ್ತಾನೆ –'ಯಾವುವೆಲ್ಲ ಜೀವಿಗಳಿವೆಯೊ – ಬಲಹೀನವಾದ ಅಥವಾ ಬಲವಾದ, ಉದ್ದವಾದ ದೊಡ್ಡದಾದ ಅಥವಾ ಮಧ್ಯಮವಾದ, ಸೂಕ್ಷ್ಮವಾದ ಸಣ್ಣದಾದ ಅಥವಾ ಸ್ಥೂಲವಾದ, ಕಾಣುವ ಅಥವಾ ಕಾಣದಿರುವ, ದೂರದಲ್ಲಿರುವ ಅಥವಾ ಹತ್ತಿರದಲ್ಲಿರುವ, ಹುಟ್ಟಿರುವ ಅಥವಾ ಹುಟ್ಟಲಿರುವ ಎಲ್ಲ ಪ್ರಾಣಿಗಳು ಸುಖವಾಗಿರಲಿ ಕ್ಷೇಮವಾಗಿರಲಿ ಎಂದು ಧ್ಯಾನಮಾಡಬೇಕು.

ಮೋಜಿಗಾಗಲಿ, ಯಜ್ಞಯಾಗಕ್ಕಾಗಲಿ, ಬಾಯಿ ಚಟಕ್ಕಾಗಲಿ, ಬೇಟೆಯಾಡಲಿಕ್ಕಾಗಲಿ ಯಾವನೂ ಪ್ರಾಣಿಹತ್ಯೆಯನ್ನು ಮಾಡಕೂಡದು ಎಂದು ದೇವನಾಂಪ್ರಿಯ ಅಶೋಕನು ಶಿಲಾಶಾಸನಗಳನ್ನು ಕೆತ್ತಿಸಿದ್ದಾನೆ, ಹಾಗೆಯೇ ಅಶೋಕನು ಬುದ್ಧನ ಅನುಯಾಯಿಯಾಗಿದ್ದರೂ ಅಪರಾಧಿಗೆ ನೀಡಿದ ಮರಣದಂಡನೆ ಶಿಕ್ಷೆಯನ್ನು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಮೊಟಕುಗೊಳಿಸುತ್ತಿರಲಿಲ್ಲ, ಆದರೆ ಮೂರು ದಿನ ಮರಣವನ್ನು ಮುಂದೂಡುತ್ತಿದ್ದನು. ಕಾರಣ ಆ ಮೂರು ದಿನಗಳಲ್ಲಿ ಅಪರಾಧಿಯ ಬಂಧುಬಳಗದವರು ದಾನ ಧರ್ಮ ಪುಣ್ಯ ಕರ್ಮಗಳಲ್ಲಿ ತೊಡಗಿ ಅಪರಾಧಿಗೆ ಮುಂದಿನ ಜನ್ಮವು ಸುಖವಾಗಲಿ ಎಂದು ಹಾರೈಸಲಿಕ್ಕೆಂದು.

ಆದ್ದರಿಂದ ವಿಚಾರವಾದಿಗಳು ಹೇಳುತ್ತಾರೆ –ಕೊಲ್ಲಲು ಇಚ್ಛಿಸಬೇಡ, ಆದರೆ ಅಪರಾಧಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಬಹುದು ಮತ್ತು ಸ್ವಸಂರಕ್ಷಣೆಯಲ್ಲಿ ಕೊಲ್ಲಬಹುದು ಎಂದು.

ಆದರೆ ಬುದ್ಧನು ಹೇಳುತ್ತಾನೆ –'ಮೊಗ್ಗಲಾನ ಸಕಲ ಪ್ರಾಣಿಗಳಲ್ಲಿ ಮೈತ್ರಿಭಾವನೆಯನ್ನು ತಾಳು ನಾನು ಹಿಂದೆ ಏಳು ವರ್ಷ ಸತತವಾಗಿ ಒಂದು ಕ್ಷಣವೂ ತಪ್ಪದೆ ಮೈತ್ರಿ ಧ್ಯಾನ ಮಾಡಿದೆ. ಅದರ ಪರಿಣಾಮವಾಗಿ ನಾಲ್ಕು ಸೃಷ್ಟಿ ಪ್ರಳಯಗಳಲ್ಲಿ ಬ್ರಹ್ಮನಾಗಿ ಉದ್ಭವಿಸಿದೆ, ಆಗ ನಾನು ಬ್ರಹ್ಮ, ಅಭಿಭೂ, ವಶಾವರ್ತಿ, ಈಶ್ವರನಾಗಿದ್ದೆ. ಮೂವತ್ತಾರು ಬಾರಿ ದೇವತೆಗಳ ಒಡೆಯನಾದ ಇಂದ್ರನಾಗಿ ಹುಟ್ಟಿದ್ದೆ. ಜಂಬೂ ದ್ವೀಪದ ರಾಜನಾದೆ, ದಂಡ ಶಸ್ತ್ರಗಳಿಲ್ಲದೆ ರಾಜ್ಯವನ್ನಾಳಿದೆ, ಧರ್ಮ ರಾಜನಾಗಿ ಧರ್ಮ ಪತಾಕೆಯನ್ನು ಹಿಡಿದೆ' ಹೀಗೆ ಕರುಣ ಮೈತ್ರಿ ಮುದಿತ ಉಪೇಕ್ಷೆ ಭಾವನೆ ತಾಳುವುದೇ ಮಧ್ಯಮ ಮಾರ್ಗ, ಸುವರ್ಣ ಮಾರ್ಗ.

ಬ್ರಹ್ಮಜಾಲ ಸೂತ್ರದಲ್ಲಿ ಬುದ್ಧನು ಉಪದೇಶಿಸುತ್ತಾನೆ –'ಭಿಕ್ಖುಗಳೆ, ಯಾರಾದರೂ ಧರ್ಮವನ್ನು ಪ್ರಶಂಸಿಸಿದಾಗ ಹಿಗ್ಗಬೇಡಿರಿ, ಧರ್ಮವನ್ನು ನಿಂದಿಸಿದಾಗ ಕುಗ್ಗಬೇಡಿರಿ, ಸತ್ಯ ದರುಶನವನ್ನು ಮಾಡಿರಿ'.

'ಮತ್ತೆ ಭಿಕ್ಖುಗಳೆ ಮಿಥ್ಯಾ ದೃಷ್ಟಿಯನ್ನು ಹೊಂದಿದವನು ನರಕಕ್ಕೆ ಹೋಗುತ್ತಾನೆ, ಸಮ್ಯಕ್ ದೃಷ್ಟಿಯನ್ನು ಹೊಂದಿದವನು ಸ್ವರ್ಗಕ್ಕೆ ಹೋಗುತ್ತಾನೆ. ದೇವ ಮಾನವರಿಗೆ ಗುರು ಬುದ್ಧ.

ಇಂತಹ ಅದ್ಭುತ ತತ್ವಗಳು ಬೌದ್ಧ ಧರ್ಮದಲ್ಲಿರುವಾಗ ಆತನು ತೋರಿದ ಮಧ್ಯಮ ಮಾರ್ಗವನ್ನು ಅನುಸರಿಸುವುದು ಸಮಂಜಸವಲ್ಲವೆ? □

'ಶರೀರ ಪೋಷಣೆಗೆ ಯಾವುದು ಅವಶ್ಯವೋ ಅದನ್ನು ತಿನ್ನಬೇಕು ಮತ್ತು ದೇಹಕ್ಕೆ ಯಾವುದು ಒಗ್ಗುವುದೊ ಅದನ್ನು ತಿನ್ನಬೇಕು. ಹಾಗೆ ತಿನ್ನುವಾಗ ರಾಗ, ದ್ವೇಷ, ಮೋಹ ಉತ್ಪನ್ನವಾಗದಂತೆ ಎಚ್ಚರವಹಿಸಬೇಕು'

ಬಸವಧರ್ಮ ಮುಕ್ತಧರ್ಮ

'ಬಸವ ಧರ್ಮ' ಬದಲಾವಣೆಯನ್ನು ಬಯಸುವ ಧರ್ಮ ಯಾವುದೇ ರೀತಿಯ ಬಂಧನಗಳಿಲ್ಲದ ಮುಕ್ತ ಧರ್ಮ. ಸ್ತ್ರೀ ಸಮಾನತೆ ಹಾಗೂ ಸ್ವಾತಂತ್ರ್ಯ, ದಲಿತ ಪರ ಕಾಳಜಿ ಸೇರಿದಂತೆ ಸಕಲರಿಗೂ ಒಳಿತನ್ನೇ ಬಯಸುವ ಬಸವಾದಿ ಶರಣರು ವೈದಿಕತನದ ಕಪಿಮುಷ್ಟಿಯಿಂದ 'ಶರಣ ಸಂಸ್ಕೃತಿ'ಯನ್ನು ಬಿಡುಗಡೆಗೊಳಿಸಿದ್ದರ ಫಲವೇ 'ಬಸವ ಧರ್ಮ'. ಬಸವ ಧರ್ಮಾನುಯಾಯಿಗಳು ಮಡಿವಂತಿಕೆಯನ್ನು ಬಿಟ್ಟು, ಸಮಾನತೆಯ ತತ್ವದಡಿ ಬಾಳಿ ಸಮಾಜಕ್ಕೆ ಬೆಳಕಾಗಬೇಕು. ಈ ಮೂಲಕ 'ಬಸವಧರ್ಮವನ್ನು ಬೆಳೆಸಿ ಶರಣ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕು.

ವಚನಗಳು 'ಬಸವಧರ್ಮ'ದ ಸಂವಿಧಾನವಾಗಿದ್ದು ಅವುಗಳನ್ನು ಪ್ರತಿಯೊಬ್ಬ ಬಸವಾನುಯಾಯಿಗಳು ಅನುಸರಿಸಬೇಕು. ಯಾವುದೇ ದಾಸ್ಯತ್ವ, ದೈನ್ಯತೆಗೆ ಒಳಗಾಗದೆ ನಾನೊಬ್ಬ ಬಸವವಾದಿ, ಬಸವಧರ್ಮೀಯ ಎಂದು ಧೈರ್ಯದಿಂದ ಹೇಳುವ ಛಲ ಬೆಳೆಸಿಕೊಳ್ಳಬೇಕು.

ಬಸವಧರ್ಮ ವ್ಯಕ್ತಿ ಕೇಂದ್ರಿತವಾದುದಲ್ಲ. ಇದು ಸಮಾಜಕೇಂದ್ರಿತ. ಅದರಲ್ಲೂ ಎಲ್ಲ ವ್ಯವಸ್ಥೆಗಳಿಂದ ತಿರಸ್ಕೃತರಾದ ಜನಕೇಂದ್ರಿತವಾದ ಧರ್ಮವಾಗಿದೆ. 'ಬಸವ' ಎಂದರೆ ಕ್ರಾಂತಿ, ಹೋರಾಟ, ಆಂದೋಲನ. ಹಾಗಾಗಿ ಬಸವಣ್ಣನ ಜೊತೆಗೆ 'ಧರ್ಮ' ಸೇರಿಸಿದರೆ ತಪ್ಪಲ್ಲ, ಶೋಷಣೆಯ ವಿರುದ್ಧ ಹೋರಾಡುವ ಎಲ್ಲ ಜನಾಂಗದವರನ್ನೂ 'ಬಸವಧರ್ಮ'ದೊಳಕ್ಕೆ ಬರಮಾಡಿಕೊಳ್ಳಲಾಗುವುದು.

○ ಶ್ರೀ ಶಿವಮೂರ್ತಿ ಶರಣರು

ಪತ್ರಿಕೋದ್ಯಮ : ನಕಲಿ ವೃತ್ತಿ ; ಅಸಲಿ ಉದ್ಯಮ

ಪತ್ರಿಕೋದ್ಯಮ ಸಮೂಹ ಸಂಪರ್ಕ ವೃತ್ತಿಯಾಗಿ ಜಗತ್ತಿನ ಎಲ್ಲೆಡೆ ಬೆಳೆದಿದೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಸುಮಾರು ೪೫,೦೦೦ಕ್ಕೂ ಹೆಚ್ಚು ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ವೃತ್ತಿಪರ ಪತ್ರಿಕೆಗಳು ೧೦೫ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿವೆ. ಇವುಗಳಲ್ಲಿ ಸುಮಾರು ೪೦೦೦ಕ್ಕೂ ಹೆಚ್ಚು ದೊಡ್ಡ ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳುಂಟು. ಪತ್ರಿಕೋದ್ಯಮ ಪ್ರಾರಂಭದಲ್ಲಿ ಮೌಲ್ಯಾಧಾರಿತ ವೃತ್ತಿಯಾಗಿಯೇ ಜನರ ಗಮನ ಸೆಳೆಯಿತು. ರಾಜಾರಾಮ್ ಮೋಹನ್ ರಾಯ್, ಆಗಸ್ಟ್‌ಸ್‌ಹಿಕ್ಕಿ, ತಿಲಕ್, ಗಾಂಧಿ, ನೆಹರೂ, ಅಂಬೇಡ್ಕರ್ ಮೊದಲಾದ ಮಹಾಪುರುಷರು ಪತ್ರಿಕೋದ್ಯಮವನ್ನು ಜನಹಿತಕಾಯುವ ಕಾವಲು ನಾಯಿಯಂತೆ ಪ್ರೀತಿಯಿಂದ ಸಾಕಿ ಬೆಳೆಸಿದರು.

ಈ ವೃತ್ತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸೃಜನಶೀಲತೆಗೆ ಇರುವ ಮಹತ್ವ ಮತ್ತು ಅವಕಾಶ ಅಸೀಮ. ಸ್ವಾತಂತ್ರ್ಯ ಚಳುವಳಿ ಮತ್ತು ತುರ್ತು ಪರಿಸ್ಥಿತಿ ಕಾಲದಲ್ಲಿ ಭಾರತೀಯ ಪತ್ರಿಕೆಗಳು ವಹಿಸಿದ ಪಾತ್ರ ಐತಿಹಾಸಿಕ. ಜನರ ವಾಣಿಯಂತೆ ಪತ್ರಿಕೆಗಳು ಕೆಲಸ ಮಾಡಿ ಪ್ರಜಾಪ್ರಭುತ್ವದ ರಕ್ಷಾಕವಚದಂತೆ ಕೆಲಸಮಾಡಿವೆ. ಇಂದಿಗೂ ಕೂಡ ಪತ್ರಿಕೋದ್ಯಮ ಮೌಲ್ಯಾಧಾರಿತ ವೃತ್ತಿಯೆಂದೇ ಜಗತ್ತಿನಾದ್ಯಂತ ಗೌರವ ಸಂಪಾದಿಸಿದೆ. ಕೆಲವು ಮಂದಿಯಾದರೂ ಕಷ್ಟಪಟ್ಟು ವೃತ್ತಿಧರ್ಮ ಪರಿಪಾಲನೆ ಮಾಡಿದ್ದಾರೆ. ವೃತ್ತಿಯ ಘನತೆ ಮತ್ತು ಜನಹಿತ ರಕ್ಷಣೆಗಾಗಿ ಪ್ರಾಣವನ್ನು ತೆತ್ತಿದ್ದಾರೆ. ಆದರೆ ಬಹಳಷ್ಟು ಮಂದಿ ಆಸೆಬುರುಕ ಉದ್ಯಮಿಗಳು ಈ ಕ್ಷೇತ್ರವನ್ನು ಪ್ರವೇಶಿಸಿ ಮೌಲ್ಯಗಳನ್ನು ಗಾಳಿಗೆ ತೂರಿ ತಮ್ಮ ಹಿತವನ್ನಷ್ಟೇ ರಕ್ಷಿಸಿಕೊಂಡಿದ್ದಾರೆ. ಇಂದಿನ ಪತ್ರಕರ್ತರಲ್ಲಿ ಬಹಳಷ್ಟು ಮಂದಿ ಕಂಪನಿಗಳ ಕಾರ್ಯನಿರ್ವಾಹಕರಂತೆ ಕೆಲಸ ಮಾಡುತ್ತಿದ್ದಾರೆ. ಬಹಳಷ್ಟು ಮಾಲೀಕರು ಮತ್ತು ಪತ್ರಕರ್ತರು ಇಂದಿನ ಜಾಗತೀಕರಣ ಯುಗದಲ್ಲಿ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಂಡು ಪತ್ರಿಕಾರಂಗವನ್ನು ಲಾಭದಾಯಕ ಉದ್ದಿಮೆಯಾಗಿ ಪರಿವರ್ತಿಸಿದ್ದಾರೆ.

ಭಾರತದಲ್ಲಿ ಬಾನುಲಿ ಪತ್ರಿಕೋದ್ಯಮ ದೇಶವ್ಯಾಪಿ ವಿಸ್ತರಿಸಲ್ಪಟ್ಟಿದೆ. ಇಂದು ಸುಮಾರು ೨೦೦ಕ್ಕೂ ಹೆಚ್ಚು ಬಾನುಲಿ ಕೇಂದ್ರಗಳು ಕೆಲಸ ಮಾಡುತ್ತಿವೆ. ಶೇ. ೯೦ಕ್ಕೂ ಹೆಚ್ಚು ಭೌಗೋಳಿಕ ಪ್ರದೇಶ ಮತ್ತು ಶೇ.೯೭.೩ರಷ್ಟು ಜನಸಂಖ್ಯೆಯನ್ನು ಬಾನುಲಿ ಸೇವೆ ಭಾರತದಲ್ಲಿ ತಲುಪುತ್ತಿದೆ. ಸಂಗೀತ, ಕಲೆ, ಸಮಾಚಾರ, ಶಿಕ್ಷಣ, ಮನರಂಜನೆ ಮೊದಲಾದ ಕ್ಷೇತ್ರಗಳಿಗೆ ಬಾನುಲಿ ಅಪಾರ ಕೊಡುಗೆ ನೀಡಿದೆ. ವಿಶೇಷ ಶ್ರೋತೃಗಳ ಕಾರ್ಯಕ್ರಮಗಳು ರೈತರು, ಕಾರ್ಮಿಕರು, ಮಹಿಳೆಯರು, ಮಕ್ಕಳು ಮೊದಲಾದ ಅಲಕ್ಷಿತ ವರ್ಗಗಳ ಅಭಿವೃದ್ಧಿಗಾಗಿ ಪೂರಕವಾಗಿದೆ. ಅಭ್ಯುದಯ ಪತ್ರಿಕೋದ್ಯಮ ಮತ್ತು ಸಂವಹನಕ್ಕೆ ಬಾನುಲಿ ಮಾಧ್ಯಮ ಅಪಾರ ಕೊಡುಗೆ ನೀಡಿದೆ. ಆದರೂ ಈ ಮಾಧ್ಯಮ ದೂರದರ್ಶನದ ಧಾಳಿಗೆ ಒಳಗಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಸರ್ಕಾರದ ತುತ್ತೂರಿಯಂತೆ ಇಲ್ಲಿನ ಸಿಬ್ಬಂದಿ ಕೆಲಸ ಮಾಡಬೇಕಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಣೆಯಲ್ಲಿ ಬಾನುಲಿ ಮಾಧ್ಯಮ ನಿಜಕ್ಕೂ ಹಿಂದೆ ಬಿದ್ದಿದೆ. ಬಾನುಲಿ ಮಾಧ್ಯಮ ತನ್ನ ವೃತ್ತಿ ಘನತೆಯನ್ನು ಮಾತ್ರ ಕಳೆದುಕೊಂಡಿಲ್ಲ, ಬಾನುಲಿ ಪತ್ರಿಕೋದ್ಯಮ ವೃತ್ತಿಯಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ದೂರದರ್ಶನ ಇಂದು ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿ ಬೆಳೆದಿದೆ. ಇದು ಎಲ್ಲ ಮಾಧ್ಯಮಗಳನ್ನು ಹಿಂದಕ್ಕೆ ತಳ್ಳಿ ಸರ್ವವ್ಯಾಪಿ ಮಾಧ್ಯಮವಾಗಿ ಭಾರತ ಮತ್ತಿತ್ತರ ಕಡೆ ಬೆಳೆದಿದೆ. ಆದರೆ ಇದು ತನ್ನ ವೃತ್ತಿಪರ ಘನತೆಯನ್ನು ಕಳೆದುಕೊಂಡು ಜನರಿಗೆ ಕೀಳು ಅಭಿರುಚಿಯ ಮನರಂಜನೆ ಮತ್ತು ಜಾಹೀರಾತುಗಳನ್ನು ನೀಡಿ ನಯವಂಚಕ ಮಾಧ್ಯಮವೆನಿಸಿದೆ.

ಸೌಜನ್ಯ : ಇಂಡಿಯಾ ಟುಡೆ

ಭಾರತವು ಇಂದು ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದ ಚಲನಚಿತ್ರ, ಸುದ್ದಿಚಿತ್ರ ಮತ್ತು ಸಾಕ್ಷ್ಯಚಿತ್ರಗಳನ್ನು ತಯಾರಿಸುವ ಹೆಗ್ಗಳಿಕೆ ಹೊಂದಿದೆ. ನಮ್ಮಲ್ಲಿ ಪ್ರತಿಭಾವಂತ ಚಿತ್ರಸಾಹಿತಿಗಳು, ನಿರ್ದೇಶಕರು, ನಟ-ನಟಿಯರು ಮತ್ತು ತಾಂತ್ರಿಕ ಸಿಬ್ಬಂದಿಗೆ ಯಾವುದೇ ಕೊರತೆಯಿಲ್ಲ. ಆದರೆ ಬಹಳಷ್ಟು ಚಿತ್ರಗಳು ಹಿಂಸೆ, ಲೈಂಗಿಕತೆ, ಪ್ರಣಯ, ನೃತ್ಯ, ಸಂಗೀತ ಮತ್ತಿತ್ತರ ಮಸಾಲೆ ಅಂಶಗಳನ್ನು ಒಳಗೊಂಡು ಜನರನ್ನು ದಾರಿ ತಪ್ಪಿಸುತ್ತಿವೆ. ಹೊಸ ಅಲೆಯ ಚಿತ್ರಗಳನ್ನು ನೋಡುವ ಪ್ರೇಕ್ಷಕರು ನಮ್ಮಲ್ಲಿ ಬಹಳ ಕಡಿಮೆ.

ಭಾರತೀಯ ಜಾಹೀರಾತು ಕ್ಷೇತ್ರದಲ್ಲಿ ಸುಮಾರು ೩೦,೦೦೦ ಕೋಟಿ ರೂ.ಗಳ ಬಂಡವಾಳವನ್ನು ಹೂಡಲಾಗಿದೆ. ಕೇವಲ ಶ್ರೀಮಂತ ಉದ್ಯಮಿಗಳ ಲಾಭಗಳಿಕೆಯ ಸಾಧನವಾಗಿ ಜಾಹೀರಾತು ಬೆಳೆದಿದೆ. ಜನರಿಗೆ ಸರಕು ಸೇವೆಗಳ ಬಗ್ಗೆ ಶಿಕ್ಷಣ ನೀಡುವ ಬದಲಾಗಿ ತಪ್ಪು ಮಾರ್ಗದರ್ಶನ ನೀಡಿ ದಾರಿತಪ್ಪಿಸುವ ಸಾಧನವಾಗಿ ಜಾಹೀರಾತು ಬೆಳೆದಿದೆ. ಇದು ನಿಜಕ್ಕೂ ವೃತ್ತಿಯಾಗಿರದೇ ಉದ್ಯಮವಾಗಷ್ಟೇ ಬೆಳೆದಿದೆ. ಸಾರ್ವಜನಿಕ ಸಂಪರ್ಕ ಕ್ಷೇತ್ರವೂ ಸಹ ಜನರನ್ನು ನಯವಾಗಿ ನಂಬಿಸಿ ದಾರಿತಪ್ಪಿಸುವ ಸಾಧನವಾಗಿ ಬೆಳೆದಿದೆ.

ಸರ್ಕಾರೀ ಮತ್ತು ಖಾಸಗೀ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸಾರ್ವಜನಿಕ ಸಂಪರ್ಕ ಸಿಬ್ಬಂದಿ ಸರ್ಕಾರೀ ಮತ್ತು ಖಾಸಗೀ ಪ್ರಭುಗಳ ಕೈಗೊಂಬೆಗಳಾಗಿದ್ದಾರೆ. ಇಂದಿನ ಕಂಪ್ಯೂಟರೀಕರಣ ಯುಗದಲ್ಲಿ ನಮ್ಮ ದೇಶದಲ್ಲಿ ಬಹಳಷ್ಟು 'ಸಾಫ್ಟ್‌ವೇರ್ ಅಗ್ರಹಾರ'ಗಳು ಸೃಷ್ಟಿಯಾಗಿವೆ. ಗ್ರಾಮೀಣ ಮತ್ತು ದುರ್ಬಲ ಜನವರ್ಗಗಳ ಬದುಕನ್ನು ನೂತನ ಸಂವಹನ ತಂತ್ರಜ್ಞಾನಗಳು ಹಸನಾಗಿರುವ ಯಾವುದೇ ಸೂಚನೆಗಳು ಕಂಡುಬಂದಿಲ್ಲ. ಇಷ್ಟೆಲ್ಲಾ ಇತಿಮಿತಿಗಳ ನಡುವೆಯೂ ಕೆಲವು ಪತ್ರಿಕೆಗಳು ಮತ್ತು ರೇಡಿಯೋ ತಮ್ಮ ವೃತ್ತಿಪರ ಘನತೆ ಮತ್ತು ವ್ಯಕ್ತಿತ್ವಗಳನ್ನು ಕಷ್ಟಪಟ್ಟು ಉಳಿಸಿಕೊಂಡಿವೆ. ನಮ್ಮ ನಡುವೆ ಇಂದಿಗೂ ಕೆಲವು ಮಾನವಂತ

ಅವಲೋಕನ

ಪತ್ರಿಕೋದ್ಯಮ ಮಾನವ ಬದುಕಿನ ಎಲ್ಲಾ ಕ್ಷೇತ್ರಗಳ ಮೇಲೂ ವ್ಯಾಪಕ ಪರಿಣಾಮ ಬೀರುತ್ತಿವೆ. ೨೧ನೇ ಶತಮಾನದಲ್ಲಿಯೂ ಉಳ್ಳವರು ಮತ್ತು ವಂಚಿತರ ನಡುವಿನ ಕಂದಕ ದಿನೇ ದಿನೇ ಹೆಚ್ಚುತ್ತಿದೆ. ನಮ್ಮ ಮಾಧ್ಯಮಗಳು ವಾಸ್ತವವಾಗಿ ಉದ್ದಿಮೆಗಳಾಗಿ ಪರಿವರ್ತಿಸಲ್ಪಟ್ಟಿವೆ. ಈ ಮಾಧ್ಯಮಗಳು ಮೇಲ್ವರ್ಗದ ಮೋಜಿನ ವೇದಿಕೆಗಳಾಗಿವೆಯೇ ವಿನಹ ಜನಪರ ಮಾಧ್ಯಮಗಳಾಗಿ ಕೆಲಸ ಮಾಡುತ್ತಿಲ್ಲ. ಮಾಧ್ಯಮಗಳಲ್ಲಿ ಬಹಳಷ್ಟು ಬಂಧಿತ ವೃತ್ತಿಪರರನ್ನು ಕಾಣುತ್ತಿದ್ದೇವೆಯೇ ಹೊರತು ಸಾರ್ವಜನಿಕ ಹಿತರಕ್ಷಿಸುವ ವಕೀಲರನ್ನಲ್ಲ.

○ ಡಾ|| ಬಿ.ಸಿ. ಮಹೇಶ್ ಚಂದ್ರಗುರು,
ಡಾ|| ಸಿ.ಕೆ. ಪುಟ್ಟರಾಜು

ಪತ್ರಿಕೆಗಳು ಉಳಿದು ವೃತ್ತಿಪರ ಶ್ರೇಷ್ಠತೆ, ಉತ್ತರದಾಯಿತ್ವ ಮತ್ತು ಸಾಮಾಜಿಕ ಹೊಣೆಗಾರಿಕೆಗಳನ್ನು ದಿಟ್ಟವಾಗಿ ಪ್ರದರ್ಶಿಸಿರುವುದು ನಮ್ಮೆಲ್ಲರ ಸೌಭಾಗ್ಯವೇ ಆಗಿದೆ. ಸಾವಿರಾರು ಯುವಜನರಿಗೆ ಉದ್ಯೋಗ ವಕಾಶಗಳನ್ನು ನೀಡಿ ಜನರ ಬದುಕನ್ನು ಹಸನಾಗಿಸಿವೆ.

ಟಿ.ವಿ, ಸಿನಿಮಾ ಮತ್ತು ಡಾಟ್‌ಕಾಮ್‌ಗಳು ವಿಶೇಷವಾಗಿ ಯುವಜನರನ್ನು ದಾರಿತಪ್ಪಿಸುತ್ತಿವೆ. ಅಲ್ಲೊಮ್ಮೆ ಇಲ್ಲೊಮ್ಮೆ ಕೆಲವು ಜನಪರ ಕಾರ್ಯಕ್ರಮಗಳು ಸಿಗುತ್ತಿವೆ. ಆದರೆ ವಾಣಿಜ್ಯ ಹಿತಾಸಕ್ತಿಗಳ ಕೈಗೊಂಬೆಗಳಾಗಿ ಈ ಮಾಧ್ಯಮಗಳು ನಮ್ಮ ಕಣ್ಮುಂದೆ ಮಿಂಚುತ್ತಿರುವುದೊಂದು ವಿಪರ್ಯಾಸ.

ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಆಧುನಿಕ ಸಮಾಜದ ಅವಿಭಾಜ್ಯ ಅಂಗಗಳಾಗಿವೆ. ಇವು ಮಾನವ ಬದುಕಿನ ಎಲ್ಲಾ ಕ್ಷೇತ್ರಗಳ ಮೇಲೂ ವ್ಯಾಪಕ ಪರಿಣಾಮ ಬೀರುತ್ತಿವೆ. ೨೧ನೇ ಶತಮಾನದಲ್ಲಿಯೂ ಉಳ್ಳವರು ಮತ್ತು ವಂಚಿತರ ನಡುವಿನ ಕಂದಕ ದಿನೇ ದಿನೇ ಹೆಚ್ಚುತ್ತಿದೆ. ವಿಶೇಷವಾಗಿ ಸಮಾಚಾರ ಉಳ್ಳವರು ಮತ್ತು ಸಮಾಚಾರ ವಂಚಿತರು ಎಂಬ ಎರಡು ವರ್ಗಗಳ ನಡುವಿನ ಕಂದರವನ್ನು ಮುಚ್ಚುವಲ್ಲಿ ಮಾಧ್ಯಮಗಳು ಪ್ರಾಮಾಣಿಕವಾಗಿ ದುಡಿಯುತ್ತಿಲ್ಲ. ಏಕೆಂದರೆ ನಮ್ಮ ಮಾಧ್ಯಮಗಳು ವಾಸ್ತವವಾಗಿ ಉದ್ದಿಮೆಗಳಾಗಿ ಪರಿವರ್ತಿಸಲ್ಪಟ್ಟಿವೆ. ಈ ಮಾಧ್ಯಮಗಳು ವರ್ಗ ಮಾಧ್ಯಮಗಳಾಗಿ ವಿಜೃಂಭಿಸುತ್ತಿವೆಯೇ ವಿನಹ ಜನಪರ ಮಾಧ್ಯಮಗಳಾಗಿ ದಿಟ್ಟತನದಿಂದ ಕೆಲಸಮಾಡುತ್ತಿಲ್ಲ. ಇಂದು ಮಾಧ್ಯಮಗಳಲ್ಲಿ ಭೂಗತ ಜಗತ್ತಿನ ಮಾಲೀಕರು ಮತ್ತು ಸ್ಥಾಪಿತ ಹಿತಾಸಕ್ತಿಗಳು ಒಡೆಯರಾಗಿರುವ ನಿದರ್ಶನಗಳಿಗೆ ಕೊರತೆಯಿಲ್ಲ. ಮಾಧ್ಯಮಗಳಲ್ಲಿ ಬಹಳಷ್ಟು ಬಂಧಿತ ವೃತ್ತಿಪರರನ್ನು ಕಾಣುತ್ತಿದ್ದೇವೆಯೇ ಹೊರತು ಸಾರ್ವಜನಿಕ ಹಿತರಕ್ಷಿಸುವ ವಕೀಲರನ್ನಲ್ಲ.

ಮಾಧ್ಯಮಗಳು ಇಂದು ಜನರನ್ನು ಪ್ರಜ್ಞಾವಂತರನ್ನಾಗಿ ರೂಪಿಸುವ ಬದಲು ಬೌದ್ಧಿಕ ಗುಲಾಮರನ್ನಾಗಿಸುವ ಕೆಲಸದಲ್ಲಿ ತಲ್ಲೀನವಾಗಿವೆ. ಆದರ್ಶಗಳನ್ನು ಬದಿಗೊತ್ತಿ ಅವಕಾಶವಾದೀ ಸರಕುಸೇವೆಗಳನ್ನು ನೀಡುವುದಕ್ಕೆ ಮಾಧ್ಯಮಗಳ ಮಾಲೀಕರು ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ನಾಗರೀಕ ಸಮಾಜವನ್ನು ಮಾಧ್ಯಮ ಸಮಾಜವನ್ನಾಗಿ ಪರಿವರ್ತಿಸಲಾಗುತ್ತಿದೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಪ್ರಕ್ರಿಯೆಗಳನ್ನು ಮಾಧ್ಯಮಗಳು ಘೋಷಿಸುತ್ತಿವೆ. ಸರ್ವೋದಯ, ಸಾಮಾಜಿಕ ನ್ಯಾಯ, ದೇಶ ಪ್ರೇಮ ಮೊದಲಾದ ಮೌಲ್ಯಗಳು ನಶಿಸುತ್ತಿವೆ.

ಆಧುನಿಕ ಮಾಧ್ಯಮಗಳ ಮೇಲೆ ಸರ್ಕಾರ ಮತ್ತು ಸಾರ್ವಜನಿಕರ ನಿಯಂತ್ರಣ ದಿನೇ ದಿನೇ ಕಡಿಮೆಯಾಗುತ್ತಿರುವುದು ಶೋಚನೀಯ. ಈ ಮಾಧ್ಯಮಗಳು ಲಾಭದಾಯಕ ಉದ್ದಿಮೆಯಾಗಿರುವ ಕಾರಣದಿಂದಾಗಿ ದಮನಕಾರಿ ಶಕ್ತಿಗಳು ಮತ್ತು ಪ್ರವೃತ್ತಿಗಳು ಆಧುನಿಕ ಸಮಾಜದಲ್ಲಿ ಹೆಚ್ಚುತ್ತಿವೆ. ಮಾರುಕಟ್ಟೆ ಶಕ್ತಿಗಳು ಮಾಧ್ಯಮಗಳು ಮತ್ತು ಸರ್ಕಾರಗಳನ್ನು ನಿಯಂತ್ರಿಸುತ್ತಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಈ ನಿಟ್ಟಿನಲ್ಲಿ ಮಾಧ್ಯಮ ವಿಮರ್ಶೆ ಮತ್ತು ಜನಪರ ಹೋರಾಟಗಳ ಅವಶ್ಯಕತೆ ಎಂದಿಗಿಂತ ಇಂದು ಹೆಚ್ಚಾಗಿದೆ.

('ಸಂವಾದ' ಪತ್ರಿಕೆಗೆ ವರ್ಷ ತುಂಬಿದ ಸಂದರ್ಭದಲ್ಲಿ ಮೈಸೂರಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ಸಿದ್ಧಪಡಿಸಿದ ಲೇಖನ.) □



ಈಗಲಾದರೂ ಹುಡುಕು

ಹುಡುಕು
ಹುಡುಕುಡುಕಿ ಕುರುಡಾಗು
ಅಡಗು ನಿನ್ನೊಳಗೂ ಇರುವ ಅರಿವ
ಕೋಶದೊಳಗೆ.
ಬೆಳಕು ಪ್ರತ್ಯಕ್ಷಗೊಂಡಾಗ
ಅರಿವಾಗಿ ಕೊಂದುಕೊಳ್ಳದಿರು
ಅದು ಪ್ರಾಯಶ್ಚಿತ್ತವಲ್ಲ
ಬೆಳಕಾಗಿ ಉರಿವ ಮನಸ್ಸಿನಿಂದೊಡಗೂಡಿ
ಮುಟ್ಟತೊಡಗು
ಕೊಳೆತ ಪಂಚೇಂದ್ರಿಗಳೊಂದೊಂದನೆ

ಮುಟ್ಟಿಸಿಕೊ ಪಡೆದುಕೊ

ಉಗುರು ಸಂದಿಗೆ
ಉರಿವ ಮಣ್ಣು ಹೊಕ್ಕುಕೆಲ್ಲೆ ಏಳಲಿ
ದೇಹದಿಂದೊರಡಲಿ ಕೀವಿನೊಂದಿಗೆ ರಕ್ತ
ಬೆರೆಸು ನೆಲದೊಡಲಿಗೆ, ತೊಳೆದುಕೊ
ಬಿರುನೆಲ ಕರುಣೆದೋರಿದರೆ ನೆಟ್ಟುಕೊ,
ತಲೆ ಕಳಚು
ಮನಸು ಮುದುರು
ವಿಷ ಉಳಿದಿದ್ದರು ಉಳಿದಿರಬಹುದು
ಹೃದಯ ಹಿಂಡು
ಕಟ್ಟಕಡೆಗೆ ಬೇರು ಬಿಡು

ಬುದ್ಧ ಪೆದ್ದನಲ್ಲ ಸುಮ್ಮನೆ ನಗಲು,
ನಿನ್ನ ನೋಡಿ.
ನೀನೆಂದೂ ಹುಡುಕಿರಲಿಲ್ಲ
ನೀರು ನೆರಳು ಅನ್ನ
ನರಕದ ಭಯಕ್ಕೆ ಹುಡುಕಿ ಬರುತ್ತಿದ್ದವು ನಿನ್ನ
ತೂಬಿಗೆ ಉರಿ ಇಟ್ಟು ಏರಿ ಕಾಯಿಸಿ
ಕೆರೆಯ ಕುದಿಸಿದೆ
ಅನ್ನದ ಕಣ್ಣುಕಿತ್ತೆ
ಅನ್ನದಾತನ ಕುರುಡು ಕಂಡು ನಗುತ್ತಿದ್ದೆ
ಪ್ರತಿ ರಾತ್ರಿ ಪ್ರತಿ ದಿನ.

ನಿನ್ನುಸಿರು ಪ್ರಭುವಿನೆದೆ ಸವರಿ ಉರಿದು ಬೆಳಗಾಗುತ್ತಿತ್ತು
ಅಲ್ಲಿ ಪ್ರಭುವಿಲ್ಲ ಪ್ರಜೆಗಳಿರಲಿಲ್ಲ ಇದ್ದದ್ದು
ನೀನು ಮತ್ತು ನೀನು.
ಒಂಟಿಯಾದೆ ಸೋತೆ
ದಾರಿ ಕೇಳಿದರೆ ಊರ ಮಾರಿದೆ ಉಂಡು ಮೃಷ್ಟಾನ್ನ
ನದಿಗಳ ಕುಡಿದು ಬಿಟ್ಟೆ
ಕಲ್ಲಿನಂತಾ ಜನ, ಮಣ್ಣಿನಂತಾ ಜನ
ಗುಲಾಮರಾದರು.
ಹೊಸ ಯಜಮಾನರ ಜೊತೆ ನೀನು
ಸರಸಕ್ಕೆ ಕೂತೆ
ಆಟ ಆರಂಭಿಸಿದೆ
ಅದು ಊರು ಸೋಲುವ ನೀನು ಗೆಲ್ಲುವ ಆಟ
ನಿನ್ನ ಹೊರತು ಎಲ್ಲ ಮರೆತೆ ಮತ್ತಷ್ಟು
ಕೊಳೆತೆ

ನಿನಗೆ ನೀನೆ ಮರೆವಾದೆ
ಇರದ ಇರುವಾದೆ
ನಿನ್ನಸಿವು ಬಾಯಾರಿಕೆ ಹಿಂಗದಾಗಿ
ಕೊತ ಕೊತ ಕುದ್ದೆ

ಇಷ್ಟಾದರು ಜನ ಒಳ್ಳೆಯವರು
ತಮ್ಮ ತನುವೊಳಗೆ ತಣ್ಣಗೆ ಸೆಳೆದು
ನಿನ್ನ ಸಲುಹಿದರು ಉಳಿದೆ.

ಈಗಲಾದರೂ ಹುಡುಕು
ಹುಡುಕುತ್ತ ಹುಡುಕುತ್ತ ಪಾದ ಸವೆಯುತ್ತ
ನೀನೆ ನಿನ್ನ ಮರೆಯುತ್ತ ಹೊಸಬನಾಗುತ್ತೀಯ.

○ ಕೃಷ್ಣಮೂರ್ತಿ ಬಿಳಿಗೆರೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ದಲಿತ ರಾಜಕಾರಣದ ಮಾನದಂಡ !

ಕಾಲ ಅಥವಾ ಯುಗ ಎನ್ನುವುದು ಶೂನ್ಯ ಸ್ಥಿತಿಯೇನೂ ಅಲ್ಲ. ಉದಾಹರಣೆಗೆ 'ಮಧ್ಯಯುಗೀನ' ಎನ್ನುವುದೊಂದು ಗುಣಾತ್ಮಕ ಮೌಲ್ಯದಿಂದ ಕಂಡಿದ್ದು ಅದೊಂದು ವಿದ್ಯಮಾನವನ್ನು ಸೂಚಿಸುತ್ತಿರುತ್ತದೆ. ಅಂದರೆ ಅದು ಪ್ರತಿಗಾಮಿತನದಿಂದ ಕೂಡಿದ್ದು ಹಿಂಸಾತ್ಮಕವಾಗಿ, ಪುರಾತನ ಅಥವಾ ಆಧುನಿಕ ಮನಸ್ಸಿಗೆ ಒಪ್ಪಿಕೊಳ್ಳಲಾಗದ ಸ್ಥಿತಿಯಾಗಿರುತ್ತದೆ. ಹಾಗೆಯೇ ೨೧ನೇ ಶತಮಾನ ಎನ್ನುವ ಗುಣವಾಚಕವೂ ಸಹ ಹೊಸ ಮೌಲ್ಯ ವ್ಯವಸ್ಥೆಯನ್ನು ತೋರಿಸುತ್ತದೆಯಲ್ಲದೆ, ತೊಡುವ ಬಟ್ಟೆಯಿಂದ ಹಿಡಿದು, ಆಹಾರ ಅಥವಾ ತಂತ್ರಜ್ಞಾನಗಳನ್ನು ಸೂಚಿಸುತ್ತಲೇ ಪ್ರಜ್ಞಾವಲಯದಲ್ಲಿ ಮುಕ್ತ-ಸ್ಪರ್ಧಾತ್ಮಕ-ತಾರ್ಕಿಕ-ಭವಿಷ್ಯಾತ್ಮಕ-ವಸ್ತುನಿಷ್ಠ-ಸುಂದರವಾದ ಬದುಕೊಂದನ್ನು ಕಟ್ಟಿಕೊಡುತ್ತದೆ.

ಭಾರತದ ೧೪ನೇ ಲೋಕಸಭೆಯು ೨೧ನೇ ಶತಮಾನದ ಮೊದಲ ಲೋಕಸಭೆಯಾಗಿದೆ. ಈ ವ್ಯವಸ್ಥೆಯು ಕಾಲದ ನಿರೀಕ್ಷೆಗಳಿಂದ ಕೂಡಿದೆಯೇ? ಅಥವಾ ಜಾಗತಿಕ ವ್ಯವಸ್ಥೆಯ ಹೊಸ ಯುಗವೇ? ಈ ಕಾಲದ ಅರ್ಹ ಅಥವಾ ಯೋಗ್ಯ ಅಭ್ಯರ್ಥಿಗಳನ್ನು ಆರಿಸುವ ಮೂಲಕ, ಇಲ್ಲಿ ಭೂತದ ತಪ್ಪುಗಳನ್ನು ಅಥವಾ ಸಂಚುಗಳನ್ನು ನಿರಚನಗೊಳಿಸಲಾಗಿದೆಯೇ? ಭಾರತವು ಒಂದು ಸಮಾಜವಾಗಿ ಮತ್ತು ರಾಷ್ಟ್ರಪ್ರಭುತ್ವವಾಗಿ, ಜಾಗತಿಕ ಹಳ್ಳಿಯಲ್ಲಿ ಸಾಮಾಜಿಕ ಒಲಂಪಿಕ್‌ಗೆ ಅರ್ಹತೆ ಪಡೆದಿದೆಯೇ? ಒಬ್ಬ ಎಲ್ಲವನ್ನು ತಿಳಿದಿದ್ದಾನೆ. ಆಳುತ್ತಿರುವ ಎನ್‌ಡಿಎ ಗುಂಪು ಪ್ರಬಲ ದ್ವಿಜರ ಮತ್ತು ಪ್ರಬಲ ಶೂದ್ರರ ಗುಂಪನ್ನು ಕಟ್ಟಿಕೊಂಡಿದೆ. ಮಾರ್ಕ್ಸಿಯನ್ ಪರಿಭಾಷೆಯಲ್ಲಿ ಹೇಳುವುದಾದರೆ, ಇದು ಶೋಷಕರ ಹೊಂದಾಣಿಕೆಯ ಗುಂಪು. ಕೇರಳ ಮತ್ತು ಪಶ್ಚಿಮ ಬಂಗಾಳದ ಎಡಪಂಥೀಯ ಗುಂಪಿನಿಂದ ಪಡೆದ ದೊಡ್ಡ ರಾಜಕೀಯಾನುಭವ.

ಇನ್ನೊಂದೆಡೆ, ಕಾಂಗ್ರೆಸ್ ಪಕ್ಷವು, ಶೋಷಿತರ ಗುಂಪನ್ನು ಕಟ್ಟಿಕೊಳ್ಳುವ ಬದಲಿಗೆ ಎನ್‌ಡಿಎ ಗುರಿಯೆಡೆಗೆ ದೃಷ್ಟಿ ಹೊಂದಿದ್ದು ಅದೇ ಅವಕಾಶವನ್ನು ಪಡೆಯಲು ಸ್ಪರ್ಧಿಸುತ್ತಿದೆ. ಅಧಿಕೃತವಾಗಿ ಈ ಪಕ್ಷವು ಈಗ 'ಬಡವರ' ಪಕ್ಷವಾಗಿಲ್ಲ, ಈಗ 'ಸಾಮಾನ್ಯ ಮನುಷ್ಯ'ನ ಪಕ್ಷವಾಗಿದೆ. ಎನ್‌ಡಿಎ 'ಭಾರತ ಪ್ರಕಾಶಿಸುತ್ತಿದೆ' ಎಂದು ಕಟ್ಟಿಕೊಂಡುದಕ್ಕೆ ಇದು ಪ್ರಮಾಣಪತ್ರ. ದೆಹಲಿಯಲ್ಲಿರುವ ಕ್ಲಬ್‌ವರ್ಗದ ಕಾಂಗ್ರೆಸ್ ನೀತಿ ನಿರೂಪಕರು, ಕಾಂಗ್ರೆಸ್ ಮತ್ತು ಅದರ ಪಾರಂಪರಿಕ ಕರ್ತವ್ಯನಿಷ್ಠೆ, ನೆಚ್ಚಬಹುದಾದ ಸಾಮಾಜಿಕ ಸಹಕಾರ ಮೂಲಗಳಿಗೆ ವಿರುದ್ಧವಾಗಿದ್ದಾರೆ ಎಂದು ತೋರಿಸಲಾಗುತ್ತಿದೆ. ಇದು ೨೧ನೇ ಶತಮಾನದ ಭಾರತ. ಭಾರತದ ರಾಜಕೀಯವು ಚುನಾಯಿತ ಸಭೆಯ ಮತ್ತು ೧೯೫೦, ಜನವರಿ ೨೬ರಂದು ಭಾರತದ ನಿಷ್ಪಕ್ಷಪಾತ ಸಾಮಾಜಿಕ ಆದೇಶವನ್ನು ರೂಪಿಸಿದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಹೋಗುತ್ತಿದೆ.

ಈಗ ಭಾರತದ ರಾಜಕೀಯವು ೨೧ನೇ ಶತಮಾನದ ಆಶಯವನ್ನು ನಿರಾಕರಿಸುತ್ತದೆ ಎಂಬ ಇಂಗಿತವನ್ನು ಇದು ಸೂಚಿಸುತ್ತದೆ. ಅಸ್ಪೃಶ್ಯರನ್ನು ಮತ್ತು ಆದಿವಾಸಿಗಳನ್ನು ತಮ್ಮ ಸೂಕ್ತ ಸಾಮಾಜಿಕ ಸಂದರ್ಭದಲ್ಲಿಡುವಲ್ಲಿ ಮಧ್ಯಯುಗೀನ ಮನಸ್ಥಿತಿಗೆ ತಳ್ಳುತ್ತದೆ. ಭಾರತದ ಮುಖ್ಯವಾಹಿನಿಯ ಸಮಾಜ ಅಥವಾ ವರ್ಣವ್ಯವಸ್ಥೆಯ ಸೌಲಭ್ಯಗಳು ಮತ್ತು ಅಧಿಕಾರ ರಹಿತತೆಯ ತತ್ವದ ನಾಶಕ್ಕೆ ಅನುಮತಿಸುವುದಿಲ್ಲವೆಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಇದು ವ್ಯವಸ್ಥೆಯನ್ನು ಉತ್ತಮವೆಂದು ಹಾಗೂ ಮುಖ್ಯವಾಹಿನಿ ರಾಜಕೀಯ ಮನೋಭಾವವು, ವರ್ಣ ವ್ಯವಸ್ಥೆಯ ಸಾರ್ವತ್ರಿಕತೆಯನ್ನು ಗೌರವಿಸಬೇಕು ಎಂದು ಸೂಚಿಸುತ್ತದೆ.

ಆದರೆ ದಲಿತ ರಾಜಕೀಯಕ್ಕೆ ತೊಂದರೆಯಾಗಿರುವುದಾದರೂ ಅಥವಾ ಒಳಸಂಚು ಮಾಡುತ್ತಿರುವುದಾದರೂ ಏನು? ೨೦೦೪ರ ಮೇ ತಿಂಗಳ ಮಧ್ಯದ ವೇಳೆಗೆ, ಸುಮಾರು ೧೨೧ ಎಸ್‌ಸಿ/ಎಸ್‌ಟಿಗಳು ಹೆಚ್ಚಿನ ಮೀಸಲು ಚುನಾವಣಾ ಕ್ಷೇತ್ರಗಳಿಂದ ಸಂಸತ್ ಸದಸ್ಯರಾಗಿ ಪ್ರಮಾಣ ಮಾಡಿದರು. ಅವರು ಮೀಸಲು ಸ್ಥಾನಗಳಿಂದ ಸ್ಪರ್ಧಿಸುವುದಕ್ಕೆ ಯಾವುದಾದರೂ ಸಮರ್ಥನೆ ಇದೆಯೇ? ಸಂವಿಧಾನದ ಅಥವಾ ಅದರ ಕರ್ತೃ ಬಾಬಾ ಸಾಹೇಬ್ ಡಾ॥ ಅಂಬೇಡ್ಕರ್‌ರವರ ಆಶಯದ ಪ್ರಕಾರ, ಅವರು ದಲಿತರ ಹಿತಾಸಕ್ತಿಗಳನ್ನು ಅಥವಾ ಗಣರಾಜ್ಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಬೇಕು. ಭೂ ಸುಧಾರಣೆ, ಶಿಕ್ಷಣ, ಕೈಗಾರಿಕಾ ಪಾಲು, ವ್ಯಾಪಾರ, ಜ್ಞಾನ, ಮನರಂಜನಾ ಕೈಗಾರಿಕೆ, ಮಾಧ್ಯಮ ಇತ್ಯಾದಿಗಳು ದಲಿತರ ಅಥವಾ ಗಣರಾಜ್ಯದ ಅಥವಾ ಡಾ॥ ಅಂಬೇಡ್ಕರರ ಆಶಯಕ್ಕನುಗುಣವಾಗಿಲ್ಲ.

ದಲಿತ ರಾಜಕಾರಣಿಗಳು ದಲಿತ ಬುದ್ಧಿಜೀವಿಗಳ ಮಟ್ಟಕ್ಕಿಂತ ಕೆಳಕ್ಕಿಳಿದಿದ್ದಾರೆ. ಇನ್ನೊಂದೆಡೆ, ದಲಿತ ಬುದ್ಧಿಜೀವಿಗಳು ದಲಿತ ಬುಡಮಟ್ಟದ ಕಾರ್ಯಕರ್ತರ ಹಂತಕ್ಕೆ ಹೋಗುತ್ತಿದ್ದಾರೆ. ಎಲ್ಲರು ಘೋಷಣೆಯ ಮೂಲಕ ಮಾತ್ರ. ಅಂಬೇಡ್ಕರ್‌ವಾದಿಗಳು ಬ್ರಾಹ್ಮಣ-ಬ್ರಾಹ್ಮಣವಾದ, ಜಾತಿ ವ್ಯವಸ್ಥೆ-ಜಾತಿ ನಿರ್ಮೂಲನೆ ಹಾಗೂ ಆರ್ಯರ ನಿಗ್ರಹವನ್ನು ಮಾಡಬೇಕೆಂದು ಬಯಸುತ್ತಾರೆ. ಎಲ್ಲರೂ ತಮ್ಮ ಕ್ಷೇತ್ರಗಳಲ್ಲಿ ಒಂದಾಗಿದ್ದಾರೆ. ಇದು ಅಪೇಕ್ಷಣೀಯವೂ ಹಾಗೂ ಬಹುಮುಖ್ಯವೂ ಆಗಿದೆ. ಆದರೆ ಹೆಚ್ಚಿನವರು ತಮ್ಮ ಕ್ಷೇತ್ರಗಳಲ್ಲಿ ಮೇಲೆ ಹೇಳಿದಂತೆ ಬ್ರಾಹ್ಮಣಿಸಂ ಇತ್ಯಾದಿಗಳಿಗೆ ಕೊನೆ ಹಾಡುವ ದಲಿತ ಹಕ್ಕುಗಳಿಗೆ ಆದ್ಯತೆ ನೀಡುತ್ತಿಲ್ಲ.

ಇದೊಂದು ದೊಡ್ಡ ದ್ವಂದ್ವಾತ್ಮಕತೆಯಾಗಿದೆ. ಇಂದಿನ ಅನುಭವಗಳೆಡೆ ಗಮನ ಹರಿಸಿ, ಅತ್ಯಂತ ಪ್ರಮುಖ, ನಿಜವಾದ ಮತ್ತು ಅಖಿಲ ಭಾರತ ದಲಿತ ಹೆಸರು ಮಾಯಾವತಿ. ಆಕೆ ಉತ್ತರಪ್ರದೇಶದ ರಾಜಕೀಯ ವ್ಯವಸ್ಥೆಗಾಗಿ ಮುಲಾಯಂ ಸಿಂಗ್ ಯಾದವರ ಸಮಾಜವಾದಿ ಪಕ್ಷದಿಂದ ಆರಂಭಿಸಿ, ಬಿಎಸ್‌ಪಿ, ಕಾಂಗ್ರೆಸ್ ಮತ್ತು ಬಿಜೆಪಿಗಳೊಂದಿಗೆ ವ್ಯವಹರಿಸಿದರು. ಮೇಲೆ ಹೇಳಿದಂತೆ, ದಲಿತ ಹಕ್ಕುಗಳು ಸರ್ಕಾರದ ರಚನೆಯಲ್ಲಿ ಪ್ರಮುಖವಾಗಿತ್ತೇ? ಅನೇಕ ಸಲ ಲೋಹಿಯಾವಾದಿಯಂತೆ ಮತ್ತು ಆಕಸ್ಮಿಕವಾಗಿ ಅಂಬೇಡ್ಕರ್‌ವಾದಿಯಂತೆ ಕಾಣುವ ಶ್ರೀರಾಮ್‌ವಿಲಾಸ್ ಪಾಸ್ವಾನ್ ಅವರು ಮೇಲ್ಜಾತಿಗಳು, ಒಬಿಸಿಗಳೊಂದಿಗೆ, ಆರ್‌ಜೆಡಿ / ಎನ್‌ಡಿಎ/ ಕಾಂಗ್ರೆಸ್‌ನೊಂದಿಗೆ ಸೇರಿಕೊಂಡಿದ್ದಾರೆ. ಮುಖ್ಯವಾಹಿನಿಯ ರಾಜಕೀಯದಲ್ಲಿ ತೊಡಗಿರುವಾಗ ಇವರಿಗೆ ದಲಿತ ಹಕ್ಕುಗಳ ಯಾವುದೇ ಪ್ರಶ್ನೆ ಬಂದಿತ್ತೇ? ಆರ್‌ಪಿಐ ಯ ಪ್ರಕಾಶ್ ಅಂಬೇಡ್ಕರ್, ಮಹಾರಾಷ್ಟ್ರದ ರಾಮದಾಸ್ ಅಥವಾಲೆಯವರು ಕಾಂಗ್ರೆಸ್/ ಶರದ್ ಪವಾರ್‌ನೊಂದಿಗೆ ವ್ಯವಹರಿಸುವಾಗ, ದಲಿತ ಹಕ್ಕುಗಳ ಸಮಸ್ಯೆಯನ್ನು ಯಾವತ್ತಾದರೂ ಎತ್ತಿದ್ದಾರೆಯೇ?

ಆಂಧ್ರದ ದಲಿತ ಮುಖವಾದ ಜಿ. ವೆಂಕಟಸ್ವಾಮಿ, ಬಿ. ಶಂಕರಾನಂದ ಮತ್ತು ಕರ್ನಾಟಕದ ಹನುಮಂತಪ್ಪ, ತಮಿಳುನಾಡಿನ ದಲಿತ ಏಜಿಲ್‌ಮಲೈ ಮತ್ತು ಡಾ॥ ಕೃಷ್ಣಸ್ವಾಮಿ ಇವರಲ್ಲಿ ಯಾರಾದರೊಬ್ಬರು ಮುಖ್ಯವಾಹಿನಿ ರಾಜಕೀಯದಲ್ಲಿ ಪಾಲ್ಗೊಳ್ಳುವಾಗ ತಮ್ಮ ಅಜೆಂಡಾದಲ್ಲಿ ದಲಿತಹಕ್ಕುಗಳ ಸಮಸ್ಯೆಗಳನ್ನು ಎತ್ತಿದ್ದಾರೆಯೇ? ಕೇರಳದ ಶ್ರೀಮತಿ ಜಾನು ಒಬ್ಬರು ಮಾತ್ರ ಭೂಮಿಯ ಬಗೆಗಿನ ಆದಿವಾಸಿ ಹಕ್ಕುಗಳಿಗೆ ಹೋರಾಡಿ ಜಯ ಪಡೆದವರು, ಈಗ ದಲಿತರ ಹಕ್ಕುಗಳ ದೊಡ್ಡ ಅಜೆಂಡಾವನ್ನು ಹೊಂದಿರುವವರು. ಆದರೆ ದಲಿತ ರಾಜಕೀಯದ

ದಲಿತ ರಾಜಕಾರಣಿಗಳು ದಲಿತ ಬುದ್ಧಿಜೀವಿಗಳ ಮಟ್ಟಕ್ಕಿಂತ ಕೆಳಕ್ಕಿಳಿದಿದ್ದಾರೆ. ಇನ್ನೊಂದೆಡೆ, ದಲಿತ ಬುದ್ಧಿಜೀವಿಗಳು ದಲಿತ ಬುಡ ಮಟ್ಟದ ಕಾರ್ಯಕರ್ತರ ಹಂತಕ್ಕೆ ಹೋಗುತ್ತಿದ್ದಾರೆ. ಎಲ್ಲರು ಘೋಷಣೆಯ ಮೂಲಕ ಮಾತ್ರ ಅಂಬೇಡ್ಕರ್‌ವಾದಿಗಳು ಬ್ರಾಹ್ಮಣ -ಬ್ರಾಹ್ಮಣವಾದ, ಜಾತಿ ವ್ಯವಸ್ಥೆ- ಜಾತಿ ನಿರ್ಮೂಲನೆ ಹಾಗೂ ಆರ್ಯರ ನಿಗ್ರಹವನ್ನು ಮಾಡಬೇಕೆಂದು ಬಯಸುತ್ತಾರೆ. ಎಲ್ಲರೂ ತಮ್ಮ ಕ್ಷೇತ್ರಗಳಲ್ಲಿ ಒಂದಾಗಿದ್ದಾರೆ. ಇದು ಅಪೇಕ್ಷಣೀಯವೂ ಹಾಗೂ ಬಹುಮುಖ್ಯವೂ ಆಗಿದೆ. ಆದರೆ ಹೆಚ್ಚಿನವರು ತಮ್ಮ ಕ್ಷೇತ್ರಗಳಲ್ಲಿ ಮೇಲೆ ಹೇಳಿದಂತೆ ಬ್ರಾಹ್ಮಣಿಸಂ ಇತ್ಯಾದಿಗಳಿಗೆ ಕೊನೆ ಹಾಡುವ ದಲಿತ ಹಕ್ಕುಗಳಿಗೆ ಆದ್ಯತೆ ನೀಡುತ್ತಿಲ್ಲ.

○ ಅನು : ವಿದ್ಯಾ .ಕೆ

ಮಾನದಂಡದಲ್ಲಿ ಆಕೆ ಅಂಚಿನಲ್ಲಿದ್ದಾರೆ. ಆಕೆಯ ಬಗ್ಗೆ ಹೆಚ್ಚು ತಿಳಿದಿಲ್ಲ. ಉಳಿದ ಎಲ್ಲ ದಲಿತ ರಾಜಕಾರಣಿಗಳು ಶುಷ್ಕವಾಗಿರುವವರು. ಎಂದರೆ ೨೧ನೇ ಶತಮಾನದ ಮೊದಲ ಲೋಕಸಭೆಯ ೧೯೫೦, ಜನವರಿ ೨೬ರಂದು ಡಾ॥ ಅಂಬೇಡ್ಕರರಿಗೆ ಭಾರತದ ಸಮಾಜವು ನೀಡಿದ ಭರವಸೆಗಳ ಬಗ್ಗೆ ಸಹ ಮಾತನಾಡದಿರುವುದು ಸಹ ಸ್ಪಷ್ಟವಾಗುತ್ತಿದೆ.

೨೦೫೦ರಲ್ಲಿ ದಲಿತ ಮಧ್ಯಮವರ್ಗ ?

ವ್ಯಾಖ್ಯಾನಿಸುವಾಗ, ಮಧ್ಯಮವರ್ಗವು ಸಾಪೇಕ್ಷ ಪರವಾಗಿದೆ : ಕುಲೀನ, ಮಧ್ಯಮವರ್ಗ ಮತ್ತು ಕೆಳವರ್ಗ. ಶ್ರೀಮಂತಿಕೆಗೆ ಬೇಕಾದ ಎಲ್ಲ ಅಗತ್ಯ ಅರ್ಹತೆಗಳನ್ನು ಹೊಂದಿದ ಅನೇಕ ದಲಿತ ಕುಟುಂಬಗಳಿದ್ದರೂ ದಲಿತ ಕುಲೀನ ವರ್ಗವಾಗಿ ಗೋಚರಿಸುತ್ತಿಲ್ಲ. ಈ ಕುಲೀನ ಎಂಬ ಪರಿಕಲ್ಪನೆಯು ಕೇವಲ ಸಮೃದ್ಧಿಯನ್ನಷ್ಟೇ ಸೂಚಿಸದು. ಇದೊಂದು ರಾಜಕೀಯ-ಸಾಂಸ್ಕೃತಿಕ ಅಭಿವ್ಯಕ್ತಿಯಾಗಿದ್ದು ಸಮೃದ್ಧಿಯು ಪೂರ್ವಾಪೇಕ್ಷಿತ ಅರ್ಹತೆಯಾಗಿದೆ. ಯಾವುದೇ ಸಮಾಜದ ಗಣ್ಯವರ್ಗವು ಸಮಾಜದ ಮೇಲೆ, ರಾಜ್ಯಾಧಿಕಾರದ ಮೇಲೆ ಹೆಚ್ಚಿನ ಪ್ರಭಾವವನ್ನು ಹೊಂದಿರುತ್ತದೆ. ಆದ್ದರಿಂದ ದಲಿತ ಗಣ್ಯವರ್ಗದ ಗೈರುಹಾಜರಿಯಲ್ಲಿ ದಲಿತ ಮಧ್ಯಮವರ್ಗ ಇರಲು ಸಾಧ್ಯವಿಲ್ಲ. ಆದರೆ, ಸಾಮಾನ್ಯ ಮನುಷ್ಯನ ಪರಿಭಾಷೆಯಲ್ಲಿ ನಗರೀಕೃತ ಜನವರ್ಗ, ಸುಸಂಘಟಿತವಾದ ಮನೆ ಸೌಕರ್ಯಗಳು, ಉತ್ತಮ ಆದಾಯ, ಶಿಕ್ಷಣವನ್ನು ಹೊಂದಿದ್ದರೆ, ಅದನ್ನು ಮಧ್ಯಮ ವರ್ಗವೆಂದು ವಿವರಿಸಬಹುದು.

ಈ ವರ್ಗವು ಒಂದೇ ರೀತಿಯಲ್ಲಿ ಯೋಚಿಸುತ್ತಿದ್ದು ಕೆಲವು ಸಮಾನ ಸಂಬಂಧ, ಭ್ರಾತೃತ್ವಗಳಿಗೆ ಸಿಕ್ಕಿಕೊಂಡರು. ಈ ಒಂದು ಮಾನದಂಡದಿಂದ 'ದಲಿತ ಮಧ್ಯಮ ವರ್ಗ' ಎಂದು ವಿವರಿಸಲಾಗುವ ಸಮುದಾಯವೊಂದನ್ನು ಗುರುತಿಸಬಹುದು. ಈ ವರ್ಗವು ಸರ್ಕಾರದ ಹುದ್ದೆಗಳಲ್ಲಿ ಮತ್ತು ಶಾಸನಗಳಲ್ಲಿನ ಸಕಾರಾತ್ಮಕ ನೀತಿಯಿಂದಾಗಿ ಅವಕಾಶವನ್ನು ಗಿಟ್ಟಿಸಿಕೊಂಡಿದೆ. ಎಸ್‌ಸಿ/ಎಸ್‌ಟಿಗಳ ರಾಷ್ಟ್ರೀಯ ಆಯೋಗದ ವರದಿಯ ಪ್ರಕಾರ (೧೯೯೭-೯೮) ಎಲ್ಲ ಕೇಂದ್ರ, ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಎ.ಬಿ.ಸಿ ಶ್ರೇಣಿಗಳ ಎಸ್‌ಸಿ/ಎಸ್‌ಟಿಗಳ ಸಂಖ್ಯೆ ಹತ್ತುಲಕ್ಷ ಇಪ್ಪತ್ನಾಲ್ಕು ಸಾವಿರವಾಗಿದೆ. (ಡಿ ಗುಂಪು ಮತ್ತು ಜಾಡಮಾಲಿಗಳನ್ನು ಹೊರತುಪಡಿಸಿ)

ಸುಮಾರು ಇಪ್ಪತ್ತೆರಡು ಲಕ್ಷಗಳಷ್ಟು ಎಸ್‌ಸಿ/ಎಸ್‌ಟಿಗಳು ರಾಜ್ಯ ಸರ್ಕಾರಗಳಲ್ಲಿದ್ದಾರೆ. ಇನ್ನೊಂದು ಸುಮಾರು ಹತ್ತು ಲಕ್ಷ ಎಸ್‌ಸಿ/ಎಸ್‌ಟಿಗಳು ಖಾಸಗಿ ವಲಯದ ಉದ್ಯೋಗಗಳು ಸೇರಿದಂತೆ, ವ್ಯಾಪಾರ/ವಹಿವಾಟುಗಳಲ್ಲಿ ತೊಡಗಿರಬಹುದು. ಆದ್ದರಿಂದ ಸುಮಾರು ನಲವತ್ತೈದು ಲಕ್ಷ ಅಥವಾ ನಾಲ್ಕೂವರೆ ಮಿಲಿಯ ಎಸ್‌ಸಿ/ಎಸ್‌ಟಿಗಳು ಖಚಿತ ಆದಾಯ, ವಿಮೆ, ನಿವೃತ್ತಿ ನಂತರದ ಸೌಲಭ್ಯಗಳು ಇತ್ಯಾದಿಗಳೊಂದಿಗೆ ಸಾಕಷ್ಟು ಉತ್ತಮವಾದ ಜೀವನವನ್ನು ನಡೆಸುತ್ತಿದ್ದಾರೆನ್ನಬಹುದು. ಒಟ್ಟು ದಲಿತರಲ್ಲಿ ಸುಮಾರು ೦೫.೭೫ ಶೇಕಡಾ ಇರುವ ಈ ದಲಿತ ವರ್ಗವನ್ನು 'ದಲಿತ ಮಧ್ಯಮವರ್ಗ' ಎಂದು ಕರೆಯಲಾಗುತ್ತದೆ. ಈ ಮಧ್ಯಮ ವರ್ಗವು ೨೦೫೦ರೊಳಗೆ ಎಲ್ಲಿರುತ್ತದೆ? ಇದು ನಲವತ್ತು ಮಿಲಿಯಗಳಿಗೆ ಏರುತ್ತದೆಯೇ? ಹಾಗಾಗಲೆಂದು ಹಾರೈಸೋಣ.

ಖಾಸಗೀಕರಣದ ಕಾರಣದಿಂದ ಮಧ್ಯಮವರ್ಗವೆಂದು ಹೇಳುವ ದಲಿತರಲ್ಲಿ ಸುಮಾರು ಅರ್ಧದಷ್ಟು ಜನರು ೨೦೫೦ರ ವೇಳೆಗೆ ಕೊಚ್ಚಿ ಹೋಗುತ್ತಾರೆ. ಪ್ರಮುಖ ಸರ್ಕಾರಿ ಇಲಾಖೆಗಳಲ್ಲಿ (ಕೇಂದ್ರ ಮತ್ತು ರಾಜ್ಯಗಳೆರೆಡು ಸೇರಿ) ಉದ್ಯೋಗ ಅವಕಾಶಗಳು ಸಹ ಕಡಿಮೆಯಾಗುತ್ತಿದೆ. ೧೯೯೦ರ ವೇಳೆಗೆ ಕೇಂದ್ರ ಲೋಕ ಸೇವಾ ಆಯೋಗದಲ್ಲಿ ಸುಮಾರು ೮೦೦ ನಾಗರಿಕ ಸೇವಾ ಹುದ್ದೆಗಳಿದ್ದವು. ಇಂದು, ಕೇಂದ್ರ ಲೋಕಸೇವಾ ಆಯೋಗವು ಸುಮಾರು ಮುನ್ನೂರ ಐವತ್ತು ಹುದ್ದೆಗಳಿಗೆ ಜಾಹೀರಾತು ನೀಡುತ್ತಿದೆ. ಅರ್ಧಕ್ಕಿಂತಲೂ ಹೆಚ್ಚು ಹುದ್ದೆಗಳು ಕಡಿಮೆಯಾಗಿರುವುದನ್ನು ಇದು ತೋರಿಸುತ್ತದೆ.

ಆದರೆ, ನಮಗೆ ಲಭ್ಯವಿರುವ ಅಂಕಿ ಅಂಶಗಳು ಭಯಾನಕ ದಿನಗಳನ್ನು ಸೂಚಿಸುತ್ತದೆ. ಉದಾಹರಣೆಗೆ, ಎ ಶ್ರೇಣಿಯ ದಲಿತ ಅಧಿಕಾರಿಗಳ ಪ್ರಕರಣಗಳನ್ನು ತೆಗೆದುಕೊಳ್ಳಿ. ಆಯೋಗದ ವರದಿಯ ಅನುಸಾರ, ಈ ಗುಂಪಿನ ಅರವತ್ತೇಳು ಸಾವಿರ ದಲಿತ ಅಧಿಕಾರಿಗಳಲ್ಲಿ (ಕೇಂದ್ರ, ಸಾರ್ವಜನಿಕ ವಲಯ ಉದ್ಯಮಗಳು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು) ೫೮.೫೫ ಸಾವಿರ ಅಥವಾ ಶೇಕಡಾ ೮೭.೨೯ ಸಾರ್ವಜನಿಕ ವಲಯದ ಉದ್ಯಮಗಳು (ಪಿಎಸ್‌ಇ)/ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ (ಪಿಎಸ್‌ಬಿ) ಸೇರಿವೆ. ಆದ್ದರಿಂದ, ೨೦೫೦ರಲ್ಲಿ ಎಲ್ಲ ಪಿಎಸ್‌ಇ/ಪಿಎಸ್‌ಬಿಗಳು ಖಾಸಗೀಕರಣಗೊಂಡರೆ, ೯೦ಶೇಕಡಾ 'ಎ' ಶ್ರೇಣಿ ದಲಿತರು ಸುಂಟರ ಗಾಳಿಯಲ್ಲಿ ಹಾರಿಹೋಗುತ್ತಾರೆ! ಪ್ರಾಸಂಗಿಕವಾಗಿ ಹೇಳುವುದಾದರೆ ಇನ್ನೂ ಕೆಲವು ತಲೆಮಾರುಗಳು ಎ ಗುಂಪಿನ ಸರ್ಕಾರೀ



೨೦೫೦ರಲ್ಲಿ ದಲಿತ ಮಧ್ಯಮವರ್ಗ

ಉದ್ಯೋಗಗಳಿಗೆ ಪ್ರವೇಶಿಸುವುದಕ್ಕೆ ಅವಕಾಶ ಪಡೆದರೆ ಈ ದಲಿತ ಗುಂಪು ದಲಿತ ಗಣ್ಯವರ್ಗವಾಗಿ ರೂಪುಗೊಳ್ಳುವ ಉತ್ತಮ ಸಾಮರ್ಥ್ಯವನ್ನು ಹೊಂದುತ್ತವೆ. ಯಾವುದೇ ನಿರ್ಣಾಯಕ ಬಿಡುಗಡೆಯ ಹೋರಾಟಗಳ ಭರವಸೆಯಿಲ್ಲದೆ ಸಮುದಾಯವು ತನ್ನ ಸ್ವಂತದ ಕುಲೀನ ವರ್ಗವನ್ನು ಉತ್ಪಾದಿಸಲು ಸಾಧ್ಯವಿಲ್ಲ.

ಅಲ್ಲದೆ, ಒಟ್ಟು ಸರ್ಕಾರೀ ಹುದ್ದೆಗಳಲ್ಲಿ(ಕೇಂದ್ರ ಸರ್ಕಾರೀ, ಪಿಎಸ್‌ಇಗಳು, ಪಿಎಸ್‌ಬಿಗಳು) ಶೇಕಡಾ ೪೭.೬೨ ಪಿಎಸ್‌ಇಗಳು ಮತ್ತು ಪಿಎಸ್‌ಬಿಗಳು ಸೇರಿವೆ. ಖಾಸಗೀಕರಣದ ಕಾರಣದಿಂದ ಮಧ್ಯಮವರ್ಗವೆಂದು ಹೇಳುವ ದಲಿತರಲ್ಲಿ ಸುಮಾರು ಅರ್ಧದಷ್ಟು ಜನರು ೨೦೫೦ರ ವೇಳೆಗೆ ಕೊಚ್ಚಿ ಹೋಗುತ್ತಾರೆ. ಪ್ರಮುಖ ಸರ್ಕಾರಿ ಇಲಾಖೆಗಳಲ್ಲಿ(ಕೇಂದ್ರ ಮತ್ತು ರಾಜ್ಯಗಳೆರೆಡು ಸೇರಿ) ಉದ್ಯೋಗಾವಕಾಶಗಳು ಸಹ ಕಡಿಮೆಯಾಗುತ್ತಿದೆ. ೧೯೯೦ರ ವೇಳೆಗೆ ಕೇಂದ್ರ ಲೋಕ ಸೇವಾ ಆಯೋಗದಲ್ಲಿ ಸುಮಾರು ೮೦೦ ನಾಗರಿಕ ಸೇವಾ ಹುದ್ದೆಗಳಿದ್ದವು. ಇಂದು, ಕೇಂದ್ರ ಲೋಕಸೇವಾ ಆಯೋಗವು ಸುಮಾರು ಮುನ್ನೂರ ಐವತ್ತು ಹುದ್ದೆಗಳಿಗೆ ಜಾಹೀರಾತು ನೀಡುತ್ತಿದೆ. ಅರ್ಧಕ್ಕಿಂತಲೂ ಹೆಚ್ಚು ಹುದ್ದೆಗಳು ಕಡಿಮೆಯಾಗಿರುವುದನ್ನು ಇದು ತೋರಿಸುತ್ತದೆ. ಸಿ ಗುಂಪಿನ ನೇಮಕಾತಿಯಲ್ಲೂ ಅದೇ ರೀತಿಯ ಇಳಿಕೆಯನ್ನು ಕಾಣಬಹುದು. ರಾಜ್ಯಗಳಲ್ಲೂ ಇದೇ ರೀತಿಯ ಸ್ಥಿತಿಯನ್ನು ಕಾಣುತ್ತೇವೆ. ದಲಿತರಿಗೆ ಹೆಚ್ಚಿನ ಉದ್ಯೋಗಾವಕಾಶ ನೀಡುವ ಅಂಚೆ ಮತ್ತು ತಂತಿ ಇಲಾಖೆಯು ಸಹ ಖಾಸಗಿ ವಲಯಕ್ಕೆ ತೆರೆದುಕೊಳ್ಳುತ್ತಿದೆ.

ಖಾಸಗಿ ಭದ್ರತಾ ಏಜೆನ್ಸಿಗಳಿಂದಾಗಿ, ದಲಿತರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸುವ ಪೊಲೀಸ್ ಸಿಬ್ಬಂದಿಗಳ ನೇಮಕಾತಿಯೂ ನಿಂತುಬಿಟ್ಟಿದೆ. ದಲಿತರು ಖಾಸಗೀಕರಣಕ್ಕೆ ಉತ್ತರವನ್ನು ಕಂಡುಕೊಳ್ಳದಿದ್ದರೆ ಸೇವೆಯಲ್ಲಿರುವ ಮೂವತ್ತೈದು ಲಕ್ಷ ದಲಿತರ ಸಂಖ್ಯೆಯು ೨೦೫೦ರ ವೇಳೆಗೆ ಹತ್ತು ಲಕ್ಷಕ್ಕೆ ಅಥವಾ ೧೯೬೦ರ ಹಂತಕ್ಕೆ ಇಳಿಯಬಹುದು. ಎಂದರೆ ಮುಂಬರುವ ಐವತ್ತು ವರ್ಷಗಳಲ್ಲಿ ಮಾತನಾಡುವುದಕ್ಕೂ ಯಾವುದೇ ದಲಿತ ಮಧ್ಯಮವರ್ಗ ಇರುವುದಿಲ್ಲ. ಈ ವಿಷಯ ಸ್ಥಿತಿಯು ೨೦೫೦ರ ವೇಳೆಗೆ ತೀವ್ರವಾಗುತ್ತದೆ. ಇಂದಿಗಿಂತಲೂ ಹೆಚ್ಚು ಅರ್ಹತೆ ಪಡೆದ ದಲಿತರು ಉದ್ಯೋಗಗಳನ್ನು ಅರಸುತ್ತಿರುತ್ತಾರೆ. ಆದರೆ ಆಗ ಇಂದಿಗಿಂತಲೂ ಕಡಿಮೆ ಸರ್ಕಾರೀ ಉದ್ಯೋಗಗಳಿರುತ್ತವೆ. ಆದರೂ, ದಲಿತ ಗುಂಪು ತೀವ್ರ ಪೆಟ್ಟನ್ನು ತಿಂದರೂ ಸಹ ಅದರ ಬಗ್ಗೆ ಕನಿಷ್ಠ ಕಾಳಜಿಯನ್ನು ವ್ಯಕ್ತಪಡಿಸುತ್ತಿಲ್ಲ.

ಬುದ್ಧಿಜೀವಿ ದಲಿತರು ಮಾರುಕಟ್ಟೆ ಆರ್ಥಿಕತೆಗೆ ಹೆಚ್ಚು ಭಯಪಡುತ್ತಾರೆ. ಬೇಸರವೆಂದರೆ, ಅವರು ಎಲ್ಲವನ್ನು ಮಾರುಕಟ್ಟೆ ಇಚ್ಛೆಗೆ ಬಿಟ್ಟುಬಿಟ್ಟಿದ್ದಾರೆ. ಮಾರುಕಟ್ಟೆ ಆರ್ಥಿಕತೆಯು ಉತ್ತಮವಾಗಿದ್ದಲ್ಲಿ ತನ್ನ ಸ್ವಂತ ತರ್ಕಗಳಿಂದ ಮಾರುಕಟ್ಟೆ ಬೆಳವಣಿಗೆಯು ಹಸಿವೆಯಲ್ಲಿ ಕೊನೆಗೊಳ್ಳುತ್ತದೆ. ಶಿಕ್ಷಣ ಅಥವಾ ಉದ್ಯೋಗದಿಂದ ಪ್ರಯೋಜನ ಪಡೆಯದ ಅತೀ ಬಡ ದಲಿತರು, ೧೯೫೦ರಲ್ಲಿರುವಂತೆ ಇಂದು ಬಡತನ ರೇಖೆಯಲ್ಲಿಲ್ಲ. ಆದರೆ, ಮಾರುಕಟ್ಟೆಯು ತನ್ನದೇ ರೀತಿಯಲ್ಲಿ ದಲಿತರನ್ನು ಮಾರುಕಟ್ಟೆಯಲ್ಲಿ ಪ್ರತಿಷ್ಠಿತ ಪಾಲುದಾರರನ್ನಾಗಿಸುವುದಿಲ್ಲ. ಅದು ಅಮೇರಿಕಾದಲ್ಲಿ ಕಪ್ಪು ಜನರಿಗೆ ಹಾಗೆ ಮಾಡಲಾಗಲಿಲ್ಲ. ಅಂತೆಯೇ ಭಾರತದಲ್ಲಿ ದಲಿತರಿಗೂ ಹಾಗೆ ಮಾಡುವುದಿಲ್ಲ.

[illegible] ಅರ್ಥ ಮಾಡಿಕೊಳ್ಳಬೇಕು : ಅವರು ಉಳಿಸಿದ ಹಣವು ಎರಡು ತಲೆಮಾರುಗಳಿಗಿಂತ ಹೆಚ್ಚು ಬರುವುದಿಲ್ಲ. ಹಿಂದೆ ಉತ್ತರ ಪ್ರದೇಶದಲ್ಲಿ ಜಮೀನ್ದಾರರಾಗಿದ್ದ ಅನೇಕರ ಮಕ್ಕಳು ಇಂದು ರಿಕ್ಷಾಚಾಲಕರಾಗಿದ್ದಾರೆ. ಅನೇಕ ನವಾಬರ ಮಕ್ಕಳು ಲಕ್ನೊ ಬೀದಿ ಬದಿಗಳಲ್ಲಿ ಬಟಾಣಿ ಕಾಳುಗಳನ್ನು ಮಾರುತ್ತಿದ್ದಾರೆ. ೧೯೫೦ರಲ್ಲಿ ಆರಂಭಿಸಿದ ಪಯಣವು ೨೦೫೦ರ ತನಕ ಸಾಗುವುದೇ ? ೧೯೫೦ರ ಸ್ಥಿತಿಗೆ ಹಿಂತಿರುಗುವುದೇ?

ಬುಡಮಟ್ಟದ ಸವಾಲುಗಳು ?

ಭೂಪಾಲ್ ಸಮ್ಮೇಳನದ (ಜನವರಿ ೨೦೦೧) ನಂತರ, ತಕ್ಷಣವೇ ಡಾ. ಅರುಣ್ ಕುಮಾರ್ ಪಿಲ್ಲೈ ಆಂಧ್ರ ಪ್ರದೇಶದಲ್ಲಿ ಭೂಪಾಲ್ ಡಾಕ್ಯುಮೆಂಟಿನ ಮೇಲೆ ರಾಜ್ಯ ಮಟ್ಟದ ಸಮ್ಮೇಳನವನ್ನು ಏರ್ಪಡಿಸಿದ್ದರು. ಡಾಕ್ಯುಮೆಂಟಿನ ಮುಖ್ಯ ಲೇಖಕನಾದ ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದರು. ಪ್ರಸಿದ್ಧ ತೆಲುಗು ದಲಿತ ಪತ್ರಕರ್ತರಾದ ಎಂ. ಲಕ್ಷ್ಮಯ್ಯ ಅವರೂ ಸಹ ಮಾತನಾಡುವವರಿದ್ದರು. ಸಮ್ಮೇಳನವು ತುಂಬಾ ಯಶಸ್ವಿಯಾಗಿತ್ತು. ಹುಟ್ಟಿನಿಂದ ದಲಿತರಾದ ಆದರೆ, ದೃಷ್ಟಿಕೋನದಲ್ಲಿ ಮಾರ್ಕ್ಸ್‌ವಾದಿಯಾಗಿರುವ ತುಂಬಾ ಪ್ರಮುಖ ವಿದ್ವಾಂಸರೊಬ್ಬರನ್ನು ಡಾಕ್ಯುಮೆಂಟಿನ ಬಗ್ಗೆ ವಿಮರ್ಶೆ ಮಾಡುವುದಕ್ಕೆ ಕರೆಯಲಾಗಿತ್ತು. ಆಕೆ ವಿಷಯದ ಬಗ್ಗೆ ಮಾತನಾಡದೆ 'ಕರ್ತೃತ್ವ'ದ ಬಗ್ಗೆ ಗಂಭೀರ ಆಕ್ಷೇಪಣೆಯನ್ನು ಎತ್ತಿದರು. ಅವರ ಪ್ರಕಾರ 'ಬುಡಮಟ್ಟದ ದಲಿತರಿಂದ ಡಾಕ್ಯುಮೆಂಟ್ ಬರೆಯಲಾಗದ್ದರಿಂದ ಅದು ಸಮುದಾಯಕ್ಕೆ ಯಾವುದೇ ಭರವಸೆಯನ್ನು ನೀಡಲಾಗುವುದಿಲ್ಲ'. ನನ್ನ ಉತ್ತರದಲ್ಲಿ ಕಾರ್ಲ್‌ಮಾರ್ಕ್ಸ್ ಅಥವಾ ಲೆನಿನ್ ಬುಡಮಟ್ಟದಿಂದ ಬಂದವರಲ್ಲ ಎಂಬುದನ್ನು ಸಮರ್ಥಿಸುವುದಕ್ಕೆ ಪ್ರಯತ್ನಿಸಿದೆ. ಡಾ॥ಅಂಬೇಡ್ಕರ್ ಮತ್ತು ಥಾಮಸ್ ಜೆಫರ್‌ಸನ್ ಸೇರಿದಂತೆ ಅನೇಕ ಉದಾಹರಣೆಗಳನ್ನು ನೀಡಿದೆ. 'ಮೇಲ್ಪದರರದ ಬರಹಗಾರರ' ಮಹತ್ವದ ಬಗ್ಗೆ ಸ್ಥೂಲವಾಗಿ ವಿವರಿಸಿದೆ. ಬುಡಮಟ್ಟದಲ್ಲಿರುವ ಒಬ್ಬ ವ್ಯಕ್ತಿಯು ಪರಿಮಿತ ದೃಷ್ಟಿಕೋನದಿಂದ ವಿಷಯಗಳನ್ನು ನೋಡುತ್ತಿದ್ದು, ಮೇಲ್ಪದರರದ ಬರಹಗಾರ ವಿಶಾಲ ದೃಷ್ಟಿಕೋನದಿಂದ ಅದರ ಪೂರ್ಣತೆಯಲ್ಲಿ ವಿಷಯಗಳನ್ನು ಗ್ರಹಿಸಬಲ್ಲ. ನಾನು ಕೆಲವು ವರ್ಷಗಳ ಹಿಂದೆ ಅಮೇರಿಕನ್ ವಿದ್ವಾಂಸನೊಬ್ಬನನ್ನು ಭೇಟಿಯಾಗಿದ್ದೆ. ಅವನು ಕೆಲವು ತಳಮಟ್ಟದ ಸಂಪರ್ಕಗಳನ್ನು ಬಯಸಿದ್ದ. ಮೇಲ್ಪದರರದ ದಲಿತರು, ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಬಲ್ಲರು ಎಂದು ಅವನಿಗೆ ತಿಳಿಸಿದೆ. ಅವನು ಮೇಲ್ಪದರರದಿಂದ ಬಂದವನಾಗಿದ್ದು ಪ್ರಸಿದ್ಧ ಅಮೇರಿಕನ್ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್‌ನಾಗಿದ್ದರಿಂದ ನನ್ನ ಉದಾಹರಣೆಗಿಂತ ಹೆಚ್ಚಾಗಿ ತಳಮಟ್ಟದ ದಲಿತರ ಬಗ್ಗೆ ಹೆಚ್ಚು ನೆಚ್ಚಿಕೊಂಡಿದ್ದ.

ನನ್ನ ತೆಲುಗು ಮತ್ತು ಕನ್ನಡ ಅಂಕಣಗಳ ಮೂಲಕ, ನಾನು ಎರಡು ದಕ್ಷಿಣದ ರಾಜ್ಯಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಗಮನಿಸುತ್ತೇನೆ. ತಮಿಳುನಾಡಿನಲ್ಲಿನ ನನ್ನ ಸಂಪರ್ಕಗಳಿಂದಾಗಿ, ತಮಿಳು ದಲಿತ ಬುದ್ಧಿಜೀವಿಗಳ ಕೆಲಸದ ಬಗ್ಗೆ ತಿಳಿದುಕೊಂಡಿದ್ದೇನೆ. ಇಂದು, ಪ್ರಾಯಶಃ ಒಟ್ಟು ದಲಿತೇತರ ನಿಯತಕಾಲಿಕೆಗಳನ್ನು ಬಿಟ್ಟು ಸೇರಿಸಿದರೂ ಅದಕ್ಕಿಂತಲೂ ಹೆಚ್ಚು ನಿಯತಕಾಲಿಕೆಗಳನ್ನು ದಲಿತರು ಉತ್ಪಾದಿಸುತ್ತಿದ್ದಾರೆ. ಹೆಚ್ಚಿನ ಪ್ರತಿಯೊಂದು ಜಿಲ್ಲೆಯಲ್ಲಿ ಸ್ಥಳೀಯ ಭಾಷೆಗಳಲ್ಲಿ ಕನಿಷ್ಠ ಎರಡು ನಿಯತಕಾಲಿಕೆಗಳು

ಬುಡಮಟ್ಟದ ಸವಾಲುಗಳು

ಪ್ರಕಟವಾಗುತ್ತದೆ. ಪರಿಮಿತ ಪ್ರಚಾರದಲ್ಲಿ, ಸಣ್ಣ ಗಾತ್ರಗಳಲ್ಲಿ, ಕಡಿಮೆ ವೆಚ್ಚದ ಮುದ್ರಣದಿಂದ, ಆಕರ್ಷಕವಲ್ಲದ ವಿನ್ಯಾಸಗಳಿಂದ ಕೂಡಿದ ಈ ನಿಯತಕಾಲಿಕೆಗಳು ದಲಿತ ಚಳವಳಿಗಳ ಸ್ವರೂಪದ ಮೇಲೆ ಅಗಾಧ ಪರಿಣಾಮ ಬೀರುತ್ತಿದೆ. ನಾನೇ ಸ್ವತಃ ಪ್ರತೀವಾದವೂ ಹಿಂದಿಯಲ್ಲಿ ಒಂದು ಡಜನ್‌ಗಿಂತಲೂ ಹೆಚ್ಚು ಅಂಥ ಪ್ರಕಟಣೆಗಳನ್ನು ಪಡೆಯುತ್ತಿದ್ದೇನೆ. ನಾನು ಅನಿವಾರ್ಯವಾಗಿ ಇಂಗ್ಲಿಷಿನಲ್ಲಿ ಬರೆಯುತ್ತಿರುವುದರಿಂದ ಮೇಲ್ಪದರರದ ದಲಿತರ, ದಲಿತ ಉಪಕುಲಪತಿಗಳ, ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರ, ನಿವೃತ್ತ ಹಿರಿಯ ನಾಗರಿಕ ಸೇವಕರ ಬರಹಗಳನ್ನು ಗಮನಿಸುತ್ತಿದ್ದೇನೆ.

ತಳಮಟ್ಟದ ದಲಿತರಿಗೆಂದು ಉತ್ಪಾದಿಸುವ ಸ್ಥಳೀಯ ದಲಿತ ನಿಯತಕಾಲಿಕೆಗಳಿಗೂ, ಮೇಲ್ಪದರರದ ದಲಿತರ ಬರಹಗಳಿಗೂ ಅಗಾಧವಾದ ಹೋಲಿಕೆಯಿದೆ. ಮೊದಲ ದೃಷ್ಟಾಂತದಲ್ಲೇ 'ತಳಮಟ್ಟದ ದಲಿತರು ಮತ್ತು ಮೇಲ್ಪದರರದ ದಲಿತರಲ್ಲಿ ಇರುವ ವಿಷಯ, ಕಾಳಜಿ, ಮಾತುಗಳಲ್ಲಿನ ಏಕಭಿಪ್ರಾಯಗಳಿಂದ ಯಾರಾದರೂ ಸ್ವಾಭಿಮಾನವನ್ನು ಪಡೆಯಬಹುದು. ಸುಮಾರು ಅರ್ಧ ಡಜನ್‌ನಷ್ಟು ದಲಿತೇತರ ಬರಹಗಾರರು ತಮ್ಮ ದಲಿತಪರ ಬರಹಗಳಿಗೆ ಹೆಸರಾದವರು. ಅವರು ಸಹ ಅತೀ ಉತ್ಸಾಹದಿಂದ ಅದೇ ವಿಷಯಗಳನ್ನು ಹೇಳುವರು. ಆದರೆ ಭಯ ಹುಟ್ಟಿಸುವ ವಾಸ್ತವವೆಂದರೆ, ಅಂಬೇಡ್ಕರೋತ್ತರ ದಲಿತ ಬೌದ್ಧಿಕ ಕ್ರಿಯಾಶೀಲತೆಯಲ್ಲಿ ಒಬ್ಬೇ ಒಬ್ಬ ದಲಿತನ ಪುಸ್ತಕವನ್ನು ಸಹ ಇತರ ಭಾರತೀಯ ಭಾಷೆಗಳಿಗೆ ಅನುವಾದಿಸಲಾಗಿಲ್ಲ. ಅಂಬೇಡ್ಕರೋತ್ತರ ದಲಿತರು ಏಕೆ ಉಲ್ಲೇಖಾರ್ಹವಾದ ಒಂದು ಪುಸ್ತಕವನ್ನು ತಂದಿಲ್ಲ ಎಂಬುದು

> **ತಳಮಟ್ಟದ ದಲಿತರು ತಮ್ಮೆಲ್ಲ ನಿಷ್ಠೆಯಿಂದ ಖಾಸಗೀಕರಣವನ್ನು ತಡೆಯುವುದಕ್ಕೆ ಪ್ರಯತ್ನಿಸಬೇಕು. ಇಲ್ಲದಿದ್ದರೆ ಈ ಸಿದ್ಧಾಂತವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಭಾರತದೆಲ್ಲೆಡೆ ದಲಿತ ಚಳವಳಿಗಳು ಖಾಸಗೀಕರಣವನ್ನು ತಡೆಯುವುದರಲ್ಲಿ ನಿರತವಾಗಿವೆ. ದಲಿತ ಚಳವಳಿಯು ಖಾಸಗೀಕರಣದ ವಿದ್ಯಮಾನವನ್ನು ತಡೆಗಟ್ಟಲಾಗದೆಂಬ ತಿಳಿವಳಿಕೆಯಿಂದ ಸಂಪೂರ್ಣ ಖಾಸಗಿ ವಲಯದಲ್ಲಿ ಪಾಲನ್ನು ಡಿಮ್ಯಾಂಡ್ ಮಾಡುವಾಗ ಮೇಲ್ಪದರರದ ದಲಿತರು ಗಟ್ಟಿ ಬೆಂಬಲಿಗರಾಗಿ ನಿಲ್ಲಬಹುದು. ಹೀಗೆ ಆಗದಿದ್ದರೆ ದಲಿತರ ಅಮೂಲ್ಯ ಶಕ್ತಿ ಸಂಪನ್ಮೂಲಗಳ ವ್ಯಯವಾಗುತ್ತದೆ.**

ಒಗಟಿನ ಪ್ರಶ್ನೆಯಾಗಿ ಉಳಿದಿದೆ. ಸಮಕಾಲೀನ ದಲಿತ ಪ್ರಜ್ಞೆಯು ತಳಮಟ್ಟದ ದಲಿತರಿಂದ ನಿಯಂತ್ರಣವಾಗಿದೆಯೇ ಹೊರತು ಸಾರ್ವತ್ರಿಕ ವಿದ್ಯಮಾನಗಳಿಂದಲ್ಲ. ತಳಮಟ್ಟದ ದಲಿತರ ಒಡೆತನದಲ್ಲಿರುವ ಮತ್ತು ಅವರು ನಡೆಸುವ ಲಕ್ಷಗಟ್ಟಲೆ ಪ್ರಕಟಣೆಗಳು ಮತ್ತು ಸಾಮಾಜಿಕ ಸಂಘಟನೆಗಳು, ರಾಜಕೀಯ ಕಾರ್ಯಕರ್ತರು ದಲಿತ ಜಗತ್ತಿಗೆ ಕಾಳಜಿಯ ಮಾದರಿಯೊಂದನ್ನು ಮುಂದಿಟ್ಟಿದ್ದಾರೆ. ಈ ತಳಮಟ್ಟದ ಮಾದರಿಯನ್ನು ಅನುಸರಿಸದೆ ಬೇರೆ ಆಯ್ಕೆ ಮೇಲ್ಪದರರದ ದಲಿತರಿಗೆ ಇಲ್ಲ. ತಳಮಟ್ಟದ ದಲಿತರು ಕಡಿಮೆ ವಿದ್ಯಾಭ್ಯಾಸ ಪಡೆದವರು, ಡಾ॥ಅಂಬೇಡ್ಕರ್ ಬರಹಗಳಿಗೆ ಸ್ವಲ್ಪ ಮಟ್ಟಿಗೆ ತೆರೆದುಕೊಂಡವರು ಮತ್ತು ಆಧುನಿಕ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿದುಕೊಂಡಿರುವವರು. ಆದ್ದರಿಂದ ಅವರು ಮೇಲ್ಪದರರದ ದಲಿತರಿಗಿಂತ ಹೆಚ್ಚು ಪ್ರಾಮಾಣಿಕರು, ಹೆಚ್ಚು ನಿಷ್ಠಾವಂತರು ಆಗಿದ್ದಾರೆ.

ಉದಾಹರಣೆಗೆ, ಉನ್ನತ ಶಿಕ್ಷಣ ಪಡೆದ, ವಿಶಾಲವಾಗಿ ಓಡಾಡಿದ ದಲಿತನು ಖಾಸಗೀಕರಣ, ಆರ್ಥಿಕ ಸುಧಾರಣೆಗಳು, ತಳಮಟ್ಟದ ದಲಿತರ ಅರ್ಥೈಸುವಿಕೆಯ ರೀತಿಯನ್ನು ಅರ್ಥಮಾಡಿಕೊಳ್ಳಬಲ್ಲ ಮತ್ತು ಅದರ ಬಗ್ಗೆ ಮಾತನಾಡಬಲ್ಲ : 'ಆರ್ಥಿಕ ಸುಧಾರಣೆ/ಖಾಸಗೀಕರಣವು ಬ್ರಾಹ್ಮಣನಾದ ನರಸಿಂಹರಾವ್ ಮಂಡಲ ಆಯೋಗಕ್ಕೆ ಮಾಡಿದ ಪ್ರತಿಕ್ರಿಯೆ, ಮೀಸಲಾತಿಯನ್ನು ಅಪ್ರಸ್ತುತ ಮಾಡುವುದಕ್ಕೆ ಮಾಡಿದ ಹೊಸ ವಿಧಾನ. ಬಿಜೆಪಿಯು ಈ ಯೋಜನೆಯನ್ನು ಅತ್ಯಂತ ತೀವ್ರಗೊಳಿಸುತ್ತಿದೆ'. ಸತ್ಯವು ಇನ್ನೊಂದು ರೀತಿಯಲ್ಲಿರಬಹುದು : 'ಆರ್ಥಿಕ ಸುಧಾರಣೆಗಳು, ಖಾಸಗೀಕರಣಗಳು ಜಾಗತೀಕರಣದಿಂದ ಹುಟ್ಟಿಕೊಂಡವು. ಈ ವಿದ್ಯಮಾನವು ಯುಎಸ್‌ಎನಲ್ಲಿ ಹುಟ್ಟಿಕೊಂಡದ್ದು, ಯಾವುದೇ ರಾಷ್ಟ್ರವು ಅದರಿಂದ ತಪ್ಪಿಸಿಕೊಳ್ಳುವಂತಿಲ್ಲ. ಅದನ್ನೇ ಬ್ರಾಹ್ಮಣ ನರಸಿಂಹರಾವ್ ಮತ್ತು ಈಗ ಬಿಜೆಪಿಯು ಮೀಸಲಾತಿಯನ್ನು ಅಪ್ರಸ್ತುತಗೊಳಿಸುವುದಕ್ಕೆ ದೇವರು ಕಳುಹಿಸಿದ ಅವಕಾಶವೆಂದು ತಿಳಿದಿದ್ದಾರೆ'.

ತಳಮಟ್ಟದ ದಲಿತರು ತಮ್ಮೆಲ್ಲ ನಿಷ್ಠೆಯಿಂದ ಖಾಸಗೀಕರಣವನ್ನು ತಡೆಯುವುದಕ್ಕೆ ಪ್ರಯತ್ನಿಸಬೇಕು. ಇಲ್ಲದಿದ್ದರೆ ಈ ಸಿದ್ಧಾಂತವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಭಾರತದೆಲ್ಲೆಡೆ ದಲಿತ ಚಳವಳಿಗಳು ಖಾಸಗೀಕರಣವನ್ನು ತಡೆಯುವುದರಲ್ಲಿ ನಿರತವಾಗಿವೆ. ದಲಿತ ಚಳವಳಿಯು ಖಾಸಗೀಕರಣದ ವಿದ್ಯಮಾನವನ್ನು ತಡೆಗಟ್ಟಲಾಗದೆಂಬ ತಿಳಿವಳಿಕೆಯಿಂದ ಸಂಪೂರ್ಣ ಖಾಸಗಿ ವಲಯದಲ್ಲಿ ಪಾಲನ್ನು ಡಿಮ್ಯಾಂಡ್ ಮಾಡುವಾಗ ಮೇಲ್ಪದರರದ ದಲಿತರು ಗಟ್ಟಿ ಬೆಂಬಲಿಗರಾಗಿ ನಿಲ್ಲಬಹುದು. ಹೀಗೆ ಆಗದಿದ್ದರೆ ದಲಿತರ ಅಮೂಲ್ಯ ಶಕ್ತಿ ಸಂಪನ್ಮೂಲಗಳ ವ್ಯಯವಾಗುತ್ತದೆ. 'ಇಸಂ'ಗಳ ಕಾಟವು ತಳಮಟ್ಟದ ಉತ್ಪನ್ನವಾಗಿದ್ದು ಇದು ದಲಿತ ಹಕ್ಕುಗಳನ್ನು ಅಂಚಿಗೆ ತಳ್ಳುತ್ತಿರುತ್ತದೆ.

ರಾಜಕೀಯ ಅಧಿಕಾರ ಕ್ಷೇತ್ರದಲ್ಲಿ ಪಾಲನ್ನು ಪಡೆಯುವುದು ದಲಿತ ಚಳವಳಿಗಳ ಮುಖ್ಯ ಉದ್ದೇಶವಾಗಿದೆಯೆಂಬುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಭಾರತದ ಸಂಪತ್ತು ಮತ್ತು ಸಂಪನ್ಮೂಲಗಳಲ್ಲಿ ಪಾಲನ್ನು ಪಡೆಯುವುದು ಏಕೆ ಅಸಂಗತವಾಗಿಯೇ ಉಳಿದುಬಿಟ್ಟಿತು. ತಳಮಟ್ಟದ ದಲಿತರು, ಸಂಪತ್ತಿನ ಬದಲಿಗೆ ದಲಿತ ಚಳವಳಿಗಳ ಹೊಗೆ ಹೊತ್ತುಕೊಳ್ಳುವಂತೆ ಪರಿವರ್ತನೆಗೊಂಡಿರುವುದು ಕಂಡು ಬರುತ್ತದೆ. □

ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು

ಂಕೆ.ವಿ. ಸುಬ್ಬಣ್ಣ



ಏನಿನ ಒಗಟು

ಕ್ಯೊಗೆನ್ ತನ್ನ ಶಿಷ್ಯರೆದುರು ಹಾಕಿದ ಒಗಟು ಇದು-

'ಆಳವಾದ ಒಂದು ದರೆ. ಅದರ ಅಂಚಿನಲ್ಲಿ ಹುಟ್ಟಿ ಕೋಲಿನ ಹಾಗೆ ಬೆಳೆದು, ಕಂದರದ ಕಡೆ ಬಾಗಿಕೊಂಡಿರುವ ಒಂದು ಗಿಡವಿದೆ. ಝೆನ್ ಎಂಬ ಮನುಷ್ಯ ಹಲ್ಲುಗಳಿಂದ ಗಿಡವನ್ನು ಕಚ್ಚಿಕೊಂಡು ಕೆಳಕ್ಕೆ ನೇತಾಡುತ್ತಿದ್ದಾನೆ. ಆತನ ಕೈಗಳಿಗೂ ಆಧಾರವಿಲ್ಲ, ಕಾಲುಗಳಿಗೂ ಆಧಾರವಿಲ್ಲ. ಹಾಗಿರುವಾಗ, ಮೇಲೆ ದರೆಯ ತುದಿಯಲ್ಲಿ ನಿಂತ ಒಬ್ಬ ಮನುಷ್ಯ - 'ಬೋಧಿಧರ್ಮ ಇಂಡಿಯಾದಿಂದ ಚೀನಾಕ್ಕೆ ಬಂದುದಕ್ಕೆ ಕಾರಣವೇನು, ಹೇಳು' ಎಂದು ಕೂಗಿ ಕೇಳುತ್ತಾನೆ.

ಉತ್ತರ ಹೇಳಲಿಲ್ಲವೋ ಆತ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಂತೆ. ಉತ್ತರ ಹೇಳುತ್ತಾನೋ ಕಂದರಕ್ಕೆ ಬಿದ್ದು ಸಾಯುತ್ತಾನೆ.

ಇಂಥ ಹೊತ್ತಲ್ಲಿ ಆತ ಏನು ಮಾಡಬೇಕು?

ಬೆವರೊರೆಸುವ ಹಾಳೆಗಳು

ಗುರು ತೆಶನ್, ಹೀಗೆ ಹೇಳಿದ್ದನಂತೆ --

ನಿರ್ವಾಣ, ಬೋಧಿ ಎಂಬುದೆಲ್ಲ ಏನು ಗೊತ್ತೋ ? ಜೀವ ಸತ್ತ ಕೊರಡುಗಳು. ನಿಮ್ಮ ಕತ್ತೆಯನ್ನೊಯ್ದು ಅವಕ್ಕೆ ಕಟ್ಟಿಕೊಳ್ಳಬಹುದಷ್ಟೇ. ಮಹಾಗ್ರಂಥದ ದ್ವಾದಶ ಅಧ್ಯಾಯಗಳಿವೆಯಲ್ಲ, ಅವು ಪ್ರೇತಗಳ ದ್ವಾದಶನಾಮಗಳು. ಮೈಯೊಳಗಿನ ಬೆವರೊರೆಸಿಕೊಳ್ಳಲು ಬೇಕಾದರೆ ಆ ಗ್ರಂಥದ ಕಾಗದ ಬಳಸಿಕೊಳ್ಳಿ. ಚತುರ್ಗುಣಗಳು, ದಶಾವಸ್ಥೆಗಳು ಎಂದೆಲ್ಲ ಹೇಳುತ್ತಾರಲ್ಲ, ಅವೆಲ್ಲವೂ ಸ್ಮಶಾನದಲ್ಲಿ ಅಲೆಯುವ ಕಾಲದೋಷಗಳು.

ಇವಕ್ಕೂ ನಿಮ್ಮ ಮುಕ್ತಿಗೂ ಯಾವ ಸಂಬಂಧ ?

ಹೌದಾ ಮಗು

ಝೆನ್ ಗುರು ಹಕುಇನ್ ಪರಿಶುದ್ಧ ಚರಿತ್ರನೆಂದು ಊರಿಗೆ ಊರೇ ಕೊಂಡಾಡುತ್ತಿತ್ತು. ಹೀಗಿರುವಾಗ ಒಂದು ಘಟನೆ ನಡೆಯಿತು. ಅಲ್ಲೇ ಒಬ್ಬ ವ್ಯಾಪಾರಿ ವಾಸಮಾಡಿಕೊಂಡಿದ್ದ. ಅವನಿಗೊಬ್ಬ ಮಗಳಿದ್ದಳು-ಎಳೆವಯಸ್ಸಿನವಳು, ಚೆಲುವೆ, ಅವಿವಾಹಿತೆ. ಆಕೆ ಗರ್ಭಿಣಿಯಾಗಿ ಬಿಟ್ಟಿದ್ದಳು. ಈ ಅಪರಾಧಕ್ಕೆ ಯಾರು ಕಾರಣರು ಎನ್ನುವುದನ್ನು ತಿಳಿಯಲು ಆ ಹುಡುಗಿಯ ತಂದೆ ತಾಯಿಗಳು ಎಷ್ಟೇ ಪ್ರಯತ್ನಿಸಿದಾಗ್ಯೂ ಆಕೆ ಬಾಯಿ ಬಿಡಲೇ ಇಲ್ಲ. ಆಮೇಲೆ ಹಿಂಸೆಕೊಟ್ಟು ಬಾಯಿ ಬಿಡಿಸಿದಾಗ ಆಕೆ ಹಕುಇನ್‌ನೇ ಇದಕ್ಕೆ ಕಾರಣ ಎಂದುಬಿಟ್ಟಳು.

ತಂದೆ ತಾಯಿಗಳು ಹಕುಇನ್‌ನ ಬಳಿ ಹೋಗಿ ಶಪಿಸಿದರು. ಮರುಮಾತಾಡದ ಆತನ ಬಗ್ಗೆ ಅವರಿಗೆ ಮತ್ತೂ ಕ್ರೋಧ ಉಂಟಾಯಿತು. ಮಗುವನ್ನು ಒಯ್ದು ಆತನ ಬಳಿಯಲ್ಲೇ ಬಿಟ್ಟು ಬಂದರು. ಹಕುಇನ್ ಆಚೀಚೆ ಮನೆಗಳಿಂದ ದಿನವೂ ಹಾಲನ್ನು ಬೇಡಿ ತಂದು ಆ ಮಗುವನ್ನು ಅಕ್ಕರೆಯಿಂದ ಸಾಕಿದ.

ಅದಾಗಿ ಒಂದು ವರ್ಷ ಕಳೆಯುವ ಹೊತ್ತಿಗೆ ಹುಡುಗಿ ಪಶ್ಚಾತ್ತಾಪಗೊಂಡಿದ್ದಳು. ಇನ್ನು ಮುಚ್ಚಿಟ್ಟುಕೊಳ್ಳಲು ಸಾಧ್ಯವೇ ಇಲ್ಲ ಎನಿಸಿ ಸತ್ಯವನ್ನು ಹೊರಗೆಡವಿದಳು. ಮೀನು ಮಾರಿಕೊಂಡಿದ್ದ ಒಬ್ಬ ಹುಡುಗ ಇದಕ್ಕೆ ಕಾರಣ ಎನ್ನುವುದು ಸ್ಪಷ್ಟವಾದಾಗ ತಂದೆ ತಾಯಿಗಳಿಗೆ ಆಘಾತವಾಯಿತು. ಅವರು ಪಶ್ಚಾತ್ತಾಪದಿಂದ ನರಳಿದರು. ಹಕುಇನ್‌ನ ಹತ್ತಿರ ಹೋಗಿ ಬಗೆಬಗೆಯಲ್ಲಿ ಆತನ ಕ್ಷಮೆಯನ್ನು ಯಾಚಿಸಿದರು. ಮಗುವನ್ನು ಹಿಂದಕ್ಕೆ ಒಯ್ಯುವೆವೆಂದು ಬೇಡಿಕೊಂಡರು. ಎಲ್ಲವನ್ನೂ ಸಾವಧಾನವಾಗಿ ಕೇಳಿಕೊಂಡ ಹಕುಇನ್ ತುದಿಯಲ್ಲಿ 'ಹೌದಾ?' ಎಂದ, ಮಗುವನ್ನು ಹಿಂದಕ್ಕೆ ಕೊಟ್ಟ

ತೂಕದಲ್ಲಿ ಮಾತು



ಗುರು ಟೊಜನ್, ವಿಹಾರದ ಉಗ್ರಾಣದಲ್ಲಿ ಕೂತು ಸೆಣಬನ್ನು ತೂಕ ಮಾಡುತ್ತಿದ್ದ. ಅಲ್ಲಿಗೆ ಒಬ್ಬ ಭಿಕ್ಷು ಬಂದು ಪ್ರಶ್ನೆ ಮಾಡಿದ-

'ಬುದ್ಧ ಎಂಬುದೇನು, ಹೇಳುತ್ತೀರಾ?' ಎಂದು.

ಟೊಜನ್ ಉತ್ತರಿಸಿದ - 'ಹತ್ತು ಸೇರು ಸೆಣಬು.'

ಸವಿಯುವ ದೃಷ್ಟಾಂತ

ಬುದ್ಧದೇವ ಹೇಳಿದ ಒಂದು ದೃಷ್ಟಾಂತ ಕಥೆ ಇದು-

ದಾರಿಗನೊಬ್ಬ ಕಾಡಿನಲ್ಲಿ ಹೋಗುತ್ತಿದ್ದಾಗ ಒಂದು ಹುಲಿ ಆತನನ್ನು ಅಟ್ಟಿಸಿಕೊಂಡು ಬಂತು. ಆತ ಓಡತೊಡಗಿದ. ಓಡಿ ಓಡಿ ಒಂದು ದರೆಯ ಅಂಚಿಗೆ ಬಂದ. ಕೆಳಗೆ ಪ್ರಪಾತ; ಬೇರೆ ದಾರಿ ಕಾಣದೆ, ದರೆಯ ಅಂಚಿನಲ್ಲಿ ಬೆಳೆದುಕೊಂಡಿದ್ದ ಒಂದು ದಪ್ಪನೆಯ ಬಳ್ಳಿಯನ್ನು ಹಿಡಿದು ಕೆಳಕ್ಕೆ ಜೋತ.

ಮೇಲೆ, ದರೆಯ ಅಂಚಿನ ತನಕ ಅಟ್ಟಿಸಿಕೊಂಡು ಬಂದ ಹುಲಿ, ಅಲ್ಲೇ ನಿಂತು ಗರ್ಜಿಸುತ್ತಿತ್ತು. ಬಳ್ಳಿಗೆ ಜೋತುಬಿದ್ದು ಕೆಳಗೆ ನೋಡಿದರೆ, ಕೆಳಗೆ ಪ್ರಪಾತದಲ್ಲಿ ಇನ್ನೊಂದು ಹುಲಿ ಮೇಲೆ ಇವನ ಕಡೆಗೆ ನೋಡಿ ಗರ್ಜಿಸತೊಡಗಿತ್ತು. ಈಗ ಆತ ಬಳ್ಳಿಗೆ ಜೋತು ಎರಡು ಹುಲಿಗಳ ಮಧ್ಯೆ ಸಿಕ್ಕಿಬಿದ್ದಂತಾಗಿತ್ತು.

ಏನು ಮಾಡಬೇಕೆಂದು ತೋಚದೆ ದಿಙ್ಮೂಢನಾಗಿ ಹಾಗೇ ನೋಡುತ್ತಿದ್ದಾಗ ಮೇಲಕ್ಕೆ ಎರಡು ಇಲಿಗಳು ಬಂದವು. ಒಂದು ಕಪ್ಪು ಇಲಿ. ಇನ್ನೊಂದು ಬಿಳಿಯ ಇಲಿ. ಎರಡೂ, ಆ ಬಳ್ಳಿಯನ್ನು ಕಚ್ಚಿ ಅಗಿಯತೊಡಗಿದವು. ಆತುರಾತುರವಾಗಿ ಬಳ್ಳಿಯನ್ನು ಕತ್ತರಿಸಿದವು. ಅದೇ ಹೊತ್ತಿಗೆ ಆತ ಕೊಂಚ ಈಚೆ ತಿರುಗಿದರೆ, ಅಲ್ಲಿ ಮತ್ತೊಂದು ಬಳ್ಳಿಯ ಕುಡಿ ತೂಗುತ್ತಿತ್ತು. ಅದರ ತುದಿಯಲ್ಲಿ ಪಳಪಳ ಹೊಳೆಯುವ ದ್ರಾಕ್ಷಿಗೊಂಚಲು ಮಿರುಗುತ್ತಿತ್ತು. ಆತ, ಜೋತುಬಿದ್ದ ಬಿಳಲನ್ನು ಒಂದೇ ಕೈಯಲ್ಲಿ ಗಟ್ಟಿಯಾಗಿ ಹಿಡಿದು, ಇನ್ನೊಂದು ಕೈಯನ್ನು ದ್ರಾಕ್ಷಿಗೊಂಚಲಿನ ಕಡೆ ಚಾಚಿದ. ಹೇಗೋ ಕಷ್ಟದಿಂದ ದ್ರಾಕ್ಷಿಯನ್ನು ಕಿತ್ತುಕೊಂಡ.

ಆ ದ್ರಾಕ್ಷಿ ಎಷ್ಟು ಸವಿಯಾಗಿತ್ತು!

ಸ್ತ್ರೀ ಕಥನ : ವಿಭಿನ್ನ ಸ್ತ್ರೀವಾದಗಳು

ಡಾ|| ಶೈಲಜ ಹಿರೇಮಠ

ಭಾರತವೂ ಸೇರಿದಂತೆ ಜಗತ್ತಿನ ಬೇರೆ-ಬೇರೆ ದೇಶಗಳಲ್ಲಿ ಸ್ತ್ರೀವಾದಗಳ ಕುರಿತು ಅನೇಕ ಬಗೆಯ ಚರ್ಚೆಗಳು ನಡೆಯುತ್ತಿವೆ. ಸ್ತ್ರೀವಾದಗಳ ಕುರಿತು ಎಷ್ಟು ಬಗೆಯ ಚರ್ಚೆಗಳಿವೆಯೋ ಅಷ್ಟು ಬಗೆಯ ಸ್ತ್ರೀವಾದ ಅಧ್ಯಯನ ಮಾದರಿಗಳಿವೆ. ಜಗತ್ತಿನ ಮಹಿಳಾ ಚಿಂತನೆಯ ಒಟ್ಟಾರೆ ಇತಿಹಾಸವನ್ನು ಗಮನಿಸಿದರೆ, ಅದರಲ್ಲಿ ಮಹಿಳೆಯರ ಬಹುರೂಪಿ ಕಥನಗಳಿವೆ.

ಸ್ತ್ರೀವಾದವನ್ನು ಪಶ್ಚಿಮದಿಂದ ಆಮದಾದ ವಿಚಾರವೆಂದು ಮೂಗು ಮುರಿಯುತ್ತಾರೆ. ನಾವು ಪಡೆಯುತ್ತಿರುವ ಶಿಕ್ಷಣ, ಮಾತನಾಡುತ್ತಿರುವ ಬಹುತೇಕ ಚಿಂತನೆಗಳು ಪಶ್ಚಿಮದಿಂದ ಆಮದಾಗಿದ್ದರೂ ಪುರುಷಶಾಹಿ ಧೋರಣೆಯುಳ್ಳ ಸುಶಿಕ್ಷಿತ ಗಂಡಸರಿಗೆ ಇವ್ಯಾವುವೂ ಹೊರಗಿನಿಂದ ಬಂದ ವಿಚಾರಧಾರೆಗಳು ಎಂದನಿಸಿಲ್ಲ. ಸ್ತ್ರೀವಾದದ ಭೂಮಿಕೆಯಲ್ಲಿ ಹೊರಬರುತ್ತಿರುವ ಮಹಿಳಾ ಅಭಿವ್ಯಕ್ತಿಯನ್ನು ಮಟ್ಟ ಹಾಕಲು ಪಶ್ಚಿಮದ ವಿಚಾರಗಳೆಂದು ತಕರಾರು ಎತ್ತುತ್ತಾರೆ. ಆದರೆ ಈ ಎಲ್ಲ ಅಡೆತಡೆಗಳನ್ನು ಮೀರಿ ಇಂದು ಸ್ತ್ರೀವಾದಗಳು ವ್ಯಾಪಕವಾಗಿ ಬೆಳೆಯುತ್ತಿವೆ.

ವಸಾಹತುಶಾಹಿ ವಿರುದ್ಧದ ಹೋರಾಟದ ಸಂದರ್ಭದಲ್ಲಿ ವಸಾಹತು ಶಾಹಿ ಶಿಕ್ಷಣದ ಪ್ರಭಾವಕ್ಕೊಳಗಾದ ಮೇಲ್ಜಾತಿಯ ಮಧ್ಯಮವರ್ಗದ ಪುರುಷರೇ ರಾಷ್ಟ್ರೀಯತೆಯ ಹೆಸರಿನಲ್ಲಿ ಭಾರತೀಯತೆಯನ್ನು ಕಟ್ಟಿ ಕೊಟ್ಟರು. ಮೇಲ್ಜಾತಿಯ ಮಧ್ಯಮವರ್ಗದ ಮಹಿಳೆಯರನ್ನು ಭಾರತೀಯ ಸಂಸ್ಕೃತಿಯ ರಕ್ಷಕಳನ್ನಾಗಿಯೇ ಚಿತ್ರಿಸಿದರು. ಆರಂಭದಲ್ಲಿ ಶಿಕ್ಷಣಕ್ಕೆ ಮೈತೆರೆದುಕೊಂಡವರೆಂದರೆ ಮೇಲ್ಜಾತಿಯ ಮಧ್ಯಮ ವರ್ಗದ ಮಹಿಳೆಯರು. ಇವರ ಎದುರಿಗೆ ಈಗಾಗಲೇ ತಮ್ಮ ಜಾತಿಯ ಪುರುಷರು ಕಟ್ಟಿಕೊಟ್ಟ 'ಭಾರತೀಯ ಮಹಿಳೆ' ಎನ್ನುವ ಏಕರೂಪದ ಮಾದರಿಯಿತ್ತು. ಅದನ್ನವರು ತಿರಸ್ಕರಿಸಲಿಲ್ಲ. ವೈದಿಕಶಾಹಿ ಸಂಸ್ಕೃತಿಯ ಭೂಮಿಕೆಯಲ್ಲಿ ಬೆಳೆದುಬಂದ ಈ ಮಹಿಳೆಯರು ತಮ್ಮ ಸಂಸ್ಕೃತಿಯ ಪ್ರಭಾವದಿಂದ ಹೊರಬಂದವರಲ್ಲ. ವೈದಿಕರು ಸಂಸ್ಕೃತಿಗಿರುವ ಬಹುತ್ವ ಆಯಾಮ ಗಳನ್ನು ಬದಿಗೆ ಸರಿಸಿ ತಮ್ಮ ಸಂಸ್ಕೃತಿಯನ್ನೇ ಇಡೀ ದೇಶದ ಸಂಸ್ಕೃತಿ ಯೆನ್ನುವಂತೆ ಚಿತ್ರಿಸುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀವಾದಿ ಗಳೂ ಅಷ್ಟೇ. ತಮ್ಮ ಸಮಸ್ಯೆಯನ್ನು ದೇಶದ ಇಡೀ ಮಹಿಳಾ ಸಮಸ್ಯೆ ಎನ್ನುವಂತೆ ಚಿತ್ರಿಸುತ್ತಾರೆ. ಸಮಾಜದ ಅಂಚಿನಲ್ಲಿ ಅತಂತ್ರವಾಗಿ ಬದುಕು ತ್ತಿರುವ ದಲಿತ ಮಹಿಳೆಯರ ಬಗ್ಗೆ ಮಾತನಾಡುವುದನ್ನು ಅವರಿಗರಿವಿಲ್ಲ ದಂತೆಯೇ ಮರೆತುಬಿಟ್ಟಿರುತ್ತಾರೆ.

'ಗಂಡಸರ ಯಜಮಾನ್ಯ ಮತ್ತು ಹೆಂಗಸರ ಅಧೀನತೆ ಅನ್ನುವುದು ಭಾರತದಲ್ಲಿ ಎಲ್ಲ ಆಸ್ತಿ ಸಂಬಂಧಗಳನ್ನು ನಿಯಂತ್ರಿಸುತ್ತದೆ. ಸರಕಾರ ಮತ್ತು ಕಾನೂನುಗಳು ಇದನ್ನು ಅನುಮೋದಿಸುತ್ತದೆ. ಉದಾಹರಣೆಗೆ ವಿವಾಹಿತ ಸ್ತ್ರೀಯೊಬ್ಬಳು ಗಂಡನ ಅನುಮತಿ ಇಲ್ಲದೆ ಪಾಸ್ ಪೋರ್ಟ್‌ಗೆ ಅರ್ಜಿ ಹಾಕುವುದು ಹೆಚ್ಚು ಕಡಿಮೆ ದುಸಾಧ್ಯ. ಇದೇ ತರಹ ಗಂಡ ಜೀವಂತವಾಗಿದ್ದು ಹೆಂಡತಿ ಇರುವ ಊರಿನಲ್ಲೇ ಇದ್ದರೆ ಪಡಿತರ ಚೀಟಿಯನ್ನು ಗಂಡನ ಹೆಸರಿನಲ್ಲಿ ಮಾತ್ರ ಕೊಡುತ್ತಾರೆ. ಸಾಮಾಜಿಕ ಜೀವನದಲ್ಲಿ ಗಂಡನ ಹೆಸರಿನ ಹಂಗಿಲ್ಲದೆ ಹೆಂಗಸರು ತಾನು ಸ್ವತಂತ್ರವಾಗಿ ರೂಪಿಸಿ ಕೊಳ್ಳಬಲ್ಲ ಸಂಬಂಧವಾಗಲಿ, ಕರಾರಾಗಲಿ ಇಲ್ಲವೇ ಇಲ್ಲ ಅನ್ನಬಹುದು' (ಮಧುಕೀಶ್ವರ್ : ೧೯೯೭; ಪು. ೨೮-೨೯) ಎಂದು ಹೇಳುವ ಭಾರತದ ಬಹುಪಾಲು ಸ್ತ್ರೀವಾದಿಗಳು ವರದಕ್ಷಿಣೆ, ಮದುವೆ, ಉದ್ಯೋಗ, ಆಸ್ತಿಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ವಿಚ್ಛೇದನ ಮೊದಲಾದ ಸಮಸ್ಯೆಗಳನ್ನು ಇಡೀ ಭಾರತದ ಮಹಿಳೆಯರ ಸಮಸ್ಯೆಗಳನ್ನಾಗಿ ಚಿತ್ರಿಸುತ್ತಾರೆ. ಅವರು ದಲಿತ ಮಹಿಳೆಯರ ಬಗ್ಗೆ ಮಾತನಾಡಿದ್ದು ಕಡಿಮೆ. ನಿತ್ಯ ದುಡಿದು ಅರೆಹೊಟ್ಟೆ ಉಣ್ಣುವ, ಅಂಗೈ ಅಗಲ ಜಾಗದಲ್ಲಿ ಮಲಗುವ ದಲಿತ ಮಹಿಳೆಗೆ ಆಸ್ತಿಹಕ್ಕಿನ ಪರಿಕಲ್ಪನೆ ಎಲ್ಲಿಂದ ಬರಬೇಕು? ಕಟ್ಟಿಕೊಂಡ ಗಂಡ, ಮಕ್ಕಳನ್ನು ಹುಟ್ಟಿಸಿ ಎಲ್ಲಿಯೋ ಹೋಗಿಬಿಟ್ಟಿರುತ್ತಾನೆ. ಮಕ್ಕಳಿಗಾಗಿ ನಿತ್ಯವೂ ತಿರುದುಣ್ಣುವ ಅವಳಿಗೆ ವಿಚ್ಛೇದನ ಎನ್ನುವ ಮಾತೇ ಅಪರಿಚಿತ. ಶಿಕ್ಷಣ, ರಾಜಕೀಯ ಮೀಸಲಾತಿ, ಆರ್ಥಿಕ ಸಬಲೀಕರಣ ಈ ಯಾವ ಪರಿಕಲ್ಪನೆಗಳು ಅವಳ ಪರಿಚಯದ ಪರಿಧಿಗೆ ಬಂದಿಲ್ಲ. ಅಶ್ಲೀಲ ಜಾಹಿರಾತಿನ ವಿರುದ್ಧ ಪ್ರತಿಭಟಿಸುವ ಸ್ತ್ರೀವಾದಿಗಳು ಸಾರ್ವಜನಿಕರ ಎದುರಿನಲ್ಲೇ ಮೇಲ್ಜಾತಿಯ ಪುರುಷರಿಂದ ನಿತ್ಯ ಬೆತ್ತಲಾಗುತ್ತಿರುವ ದಲಿತ ಮಹಿಳೆಯ ಅಳಲನ್ನು ಕೇಳಿಸಿಕೊಳ್ಳಬೇಕಿದೆ.

ಕೌಟುಂಬಿಕವಾಗಿ ಸುರಕ್ಷಿತವಾಗಿದ್ದು ಸಾಮಾಜಿಕ ಸ್ಥಾನಮಾನವನ್ನು ಅನುಭವಿಸುತ್ತಿರುವ ಮಹಿಳೆಯರು ಕಟ್ಟುವ ಸ್ತ್ರೀವಾದವು ಒಂದು ಮಿತಿಯನ್ನು ಕಾಯ್ದುಕೊಂಡಿದೆ. ಬಹುಪಾಲು ಸ್ತ್ರೀವಾದಿಗಳು ಕೌಟುಂಬಿಕ ವ್ಯವಸ್ಥೆಯೊಳಗಿನ ಪುರುಷ ಪ್ರಧಾನ್ಯತೆಯ ವಿರುದ್ಧ ಕೆಂಡ ಕಾರುತ್ತಾರೆ. 'ಊಟ ಬಡಿಸುವಾಗಿನ ತಾರತಮ್ಯಕ್ಕೂ ಪೂರಕವಾದ ಹಲವು ಜನಪದ ನಂಬಿಕೆಗಳಿವೆ. ಇರುವ ಆಹಾರದಲ್ಲಿ ಉತ್ಕೃಷ್ಟವಾದ ಭಾಗವನ್ನು ಮಗನಿಗೋಸ್ಕರ ತೆಗೆದಿಟ್ಟು ಉಳಿದ ಭಾಗವಷ್ಟೇ ಮಗಳಿಗೆ ನೀಡುತ್ತಾಳೆ. ಉಡಿಗೆ ತೊಡಿಗೆಗಳ ವಿಷಯದ ತಾರತಮ್ಯವೂ ಬಾಲ್ಯದಿಂದಲೇ ಪ್ರಾರಂಭ. ಗಂಡು ಹುಡುಗ ಬಿಗಿಯಾದ ಚಲನ ವಲನ ಗಳಿಗೆ ಅನುಕೂಲವಾದ ಚಲ್ಲಣ ಧರಿಸಿದರೆ, ಹುಡುಗಿಗೆ ತುಂಬುನಿರಿಗೆಯ ಲಂಗಗಳು ರಭಸವಾಗಿ ನಡೆದರೆ ಎಡವುವಂಥ ಜಿಗಿದು ನೆಗೆದು ಆಡ ಲಾಗದ ಉಡುಗೆಗಳನ್ನು ಒದಗಿಸಲಾಗುತ್ತದೆ. ಊಟದಲ್ಲಷ್ಟೇ ಅಲ್ಲ ಆಟದಲ್ಲೂ ಹೀಗೆ....' (ಧರಣಿದೇವಿ ಮಾಲಗತ್ತಿ : ೧೯೯೮; ಪು. ೧೧೪) ಇವುಗಳಲ್ಲದೆ ಮಹಿಳೆಯಾಗಿದ್ದ ಕಾರಣಕ್ಕೆ ವೇದವನ್ನೋದುವ ಅವಕಾಶದಿಂದ ವಂಚಿತವಾದದ್ದು, ಮುಟ್ಟನ್ನು ಮೈಲಿಗೆಯನ್ನಾಗಿ ಪರಿಗಣಿಸಿದ್ದುದು, ಮನೆಗೆಲಸಕ್ಕೆ ಮೌಲ್ಯವಿಲ್ಲದ್ದುದು, ಮೊದಲಾದವು ಗಳನ್ನು ಚರಿತ್ರೆಯಲ್ಲಿ ತಮ್ಮ ಮೇಲೆ ನಡೆದ ಹಾಗೂ ವರ್ತಮಾನದಲ್ಲೂ ಮುಂದುವರೆಯುತ್ತಿರುವ ಬಹುದೊಡ್ಡ ಅನ್ಯಾಯಗಳೆಂದು ನಿರ್ವಚಿಸು ತ್ತಾರೆ. ಮತ್ತು ಅದಕ್ಕಾಗಿ ವಿಷಾದ ಪಡುತ್ತಾರೆ. ಹೀಗೆ ಮೇಲುಜಾತಿ ಮಹಿಳೆಯರು ತಮ್ಮ ಬವಣೆಗಳನ್ನೇ ಕೇಂದ್ರವಾಗಿರಿಸಿಕೊಂಡು ಸ್ತ್ರೀವಾದ ವನ್ನು ಕಟ್ಟುತ್ತಾರೆ. ವಿಷಾದದ ಸಂಗತಿಯೆಂದರೆ ಅಲ್ಲಿ ದಲಿತ ಹಾಗೂ ಬುಡಕಟ್ಟು ಸ್ತ್ರೀಯರು ಇರುವುದೇ ಇಲ್ಲ.

ಮಹುಕ್ತಿ

ವಸಾಹತುಶಾಹಿ ವಿರುದ್ಧದ ಹೋರಾಟದ ಸಂದರ್ಭದಲ್ಲಿ ವಸಾಹತು ಶಾಹಿ ಶಿಕ್ಷಣದ ಪ್ರಭಾವಕ್ಕೊಳಗಾದ ಮೇಲ್ಜಾತಿಯ ಮಧ್ಯಮವರ್ಗದ ಪುರುಷರೇ ರಾಷ್ಟ್ರೀಯತೆಯ ಹೆಸರಿನಲ್ಲಿ ಭಾರತೀಯತೆಯನ್ನು ಕಟ್ಟಿ ಕೊಟ್ಟರು. ಮೇಲ್ಜಾತಿಯ ಮಧ್ಯಮವರ್ಗದ ಮಹಿಳೆಯರನ್ನು ಭಾರತೀಯ ಸಂಸ್ಕೃತಿಯ ರಕ್ಷಕಳನ್ನಾಗಿಯೇ ಚಿತ್ರಿಸಿದರು. ಆರಂಭದಲ್ಲಿ ಶಿಕ್ಷಣಕ್ಕೆ ಮೈತೆರೆದುಕೊಂಡವರೆಂದರೆ ಮೇಲ್ಜಾತಿಯ ಮಧ್ಯಮ ವರ್ಗದ ಮಹಿಳೆಯರು. ಇವರ ಎದುರಿಗೆ ಈಗಾಗಲೇ ತಮ್ಮ ಜಾತಿಯ ಪುರುಷರು ಕಟ್ಟಿಕೊಟ್ಟ 'ಭಾರತೀಯ ಮಹಿಳೆ' ಎನ್ನುವ ಏಕರೂಪದ ಮಾದರಿಯಿತ್ತು. ಅದನ್ನವರು ತಿರಸ್ಕರಿಸಲಿಲ್ಲ.

ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿಯಂತಹ ಸಾಮಾಜಿಕ ಸಂಗತಿಗಳ ಕುರಿತು ಮಾತನಾಡಿದರೂ ಅವರಿಗರಿವಿಲ್ಲದಂತೆಯೇ ದಲಿತ ಮಹಿಳೆಯರನ್ನು ಕೈಬಿಟ್ಟಿರುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀಯರನ್ನು ಕೇಂದ್ರವಾಗಿರಿಸಿಕೊಂಡು ಬೆಳೆಸಿದ ಚಿಂತನೆಗೆ ಸಾರ್ವತ್ರಿಕ ಸ್ವರೂಪವನ್ನು ಲೇಪಿಸುತ್ತಾರೆ. ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿದ್ದು ದಾರಿದ್ರ್ಯತೆಯಿಂದ ಬಳಲುತ್ತಿರುವ, ಅಕ್ಷರ ಲೋಕವನ್ನೇ ಅರಿಯದ ದಲಿತ ಮಹಿಳೆಯರ ಕಷ್ಟ ನಷ್ಟಗಳನ್ನು ಮಾನಾಪಮಾನಗಳನ್ನು ಕನಿಷ್ಠ ಪಕ್ಷ ಕೇಳಿಸಿಕೊಳ್ಳುವ ಸೌಜನ್ಯವನ್ನು ತೋರುವುದಿಲ್ಲ. ಹೀಗಾಗಿ ಮೇಲ್ಜಾತಿಯ ಸ್ತ್ರೀವಾದಿಗಳಿಗೆ ದಲಿತ ಮಹಿಳೆಯ ಶೋಷಣೆಯ ಒಳಹರಿವುಗಳು ಕೈಗೆಟುಕದೇ ಹೋಗಿಬಿಡುತ್ತವೆ.

ರ್‍ಯಾಡಿಕಲ್ ಎಂದೆನಿಸಿಕೊಂಡ ಕೆಲವು ಸ್ತ್ರೀವಾದಿಗಳು ಶೂದ್ರ ಮಹಿಳೆಯ ಕುರಿತು ಅಲ್ಲಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ. ಉಮಾ ಚಕ್ರವರ್ತಿಯವರು 'ವ್ಹಾಟ್ ಎವರ್ ಹ್ಯಾಪನ್ಡ್ ಟು ದ ವೈದಿಕ್ ದಾಸಿ' ಎನ್ನುವ ಲೇಖನದಲ್ಲಿ ಕೊನೆಯಲ್ಲಿ ಹೇಳಿದ ಮಾತುಗಳನ್ನು ಗಮನಿಸಬೇಕು. ''ಸಮಾಜದ ಮೇಲ್ವರ್ಗಗಳ ಬಗೆಗೆ ಮಾತ್ರ ಗಮನವಿಟ್ಟು ಇನ್ನೆಲ್ಲರನ್ನೂ ನಿರ್ಲಕ್ಷಿಸುವ ಈ ಗುಣ ದಯಾನಂದ ಅವರ ಅಭಿಪ್ರಾಯಗಳಲ್ಲೂ ಕಾಣುತ್ತದೆ. 'ಆರ್ಯ ತಾಯಿಯರು ತಮ್ಮ ಮಕ್ಕಳ ಪೋಷಣೆಯನ್ನು ಮಾಡಬಾರದು. ಬದಲಾಗಿ ಅವರನ್ನು ದಾದಿಯರ ಕೈಗೊಪ್ಪಿಸಿ, ತಾವು ತಮ್ಮ ಆರೋಗ್ಯವನ್ನು ಸರಿಪಡಿಸಿಕೊಳ್ಳಬೇಕು. ಏಕೆಂದರೆ ಮತ್ತೆ ಅವರು ಬಲಿಷ್ಠ ಪುತ್ರರನ್ನು ಹೇರುವುದಕ್ಕೆ ತಯಾರಾಗಬೇಕಾಗುತ್ತದೆ.' ಹಾಗಾದರೆ ದಾದಿಯರ ಗತಿಯೇನು? ಅವಳು ಯಾರು? ಸಂತಾನೋತ್ಪತ್ತಿಯ ವ್ಯವಸ್ಥೆಯಲ್ಲಿ ಅವಳ ಪಾತ್ರವೇನು? ಅವಳು ಬಲಿಷ್ಠ ಪುತ್ರರನ್ನು ಹೆರಬೇಕಾಗಿಲ್ಲವೇ? ಇಲ್ಲಿ ದಯಾನಂದ ಅವರು ಒಂದು ವರ್ಗದ ಖರ್ಚಿನಲ್ಲಿ ಇನ್ನೊಂದು ವರ್ಗಕ್ಕೆ ಲಾಭ ಮಾಡಿಕೊಡುತ್ತಿರುವುದು ಸ್ಪಷ್ಟವಾಗಿದೆ.

೧೯ನೇ ಶತಮಾನದ ರಾಷ್ಟ್ರೀಯವಾದಿಗಳ ಮಟ್ಟಿಗೆ ಬಹಳಷ್ಟು ವರ್ಗಗಳ ಹೆಂಗಸರು ಅಸ್ತಿತ್ವದಲ್ಲೇ ಇರಲಿಲ್ಲ. ವೈದಿಕ ಸುವರ್ಣಯುಗದಲ್ಲಿ ವೈದಿಕ ದಾಸಿ ಮತ್ತು ಅವಳಂಥವರಿಗೆ ಯಾವ ಹಕ್ಕುಗಳಿದ್ದವು ಎಂಬುದರ ಬಗೆಗೆ ತಿಳಿದುಕೊಳ್ಳಲು ಯಾರೂ ಪ್ರಯತ್ನಿಸಲಿಲ್ಲ'' (ಉಮಾ ಚಕ್ರವರ್ತಿ, ಉದ್ಧೃತ: ಮನುಚಕ್ರವರ್ತಿ: ೧೯೯೯; ಪು. ೯೧-೯೨) ಶೂದ್ರ ಮಹಿಳೆಯ ಕುರಿತು ಉಮಾ ಚಕ್ರವರ್ತಿ ಅವರಿಗೆ ಇರುವ ಕಾಳಜಿ ಕಕ್ಕುಲಾತಿಯನ್ನು ಗೌರವಿಸಬೇಕಿದೆ.

ನಮ್ಮ ಚಿಂತನೆಗೆ ಈ ಬಗೆಯ ವಿಚಾರ ಧಾರೆಯನ್ನು ಮಾದರಿಯಾಗಿಟ್ಟುಕೊಳ್ಳಬೇಕಿದೆ. ಶೂದ್ರ ಮಹಿಳೆಯರ ಜೊತೆಜೊತೆಗೆ ಅತ್ಯಂತ ತಿರಸ್ಕಾರಕ್ಕೆ ಒಳಗಾದಂತಹ ಪಂಚಮ ಸ್ತ್ರೀಯರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ನಮ್ಮ ಇವತ್ತಿನ ಸ್ತ್ರೀವಾದಿ ಅಧ್ಯಯನವು ದಲಿತರಲ್ಲಿ ದಲಿತರಾದ ಪಂಚಮ ಮಹಿಳೆಯರತ್ತ ಸಾಗಬೇಕಿದೆ. ಅವರ ಮೇಲೆ ನಡೆಯುತ್ತಿರುವ ಶೋಷಣೆಗಳತ್ತ ಗಮನಹರಿಸುವ ಅಗತ್ಯವಿದೆ.

ನಮ್ಮ ಭಾರತದಲ್ಲಿ ಪಿತೃಪ್ರಧಾನ ವ್ಯವಸ್ಥೆಯೆನ್ನುವುದು ಏಕರೂಪಿಯಾಗಿಲ್ಲ. ಆಯಾ ಜಾತಿ, ಧರ್ಮಕ್ಕನುಗುಣವಾಗಿ ಪಿತೃಪ್ರಧಾನ ವ್ಯವಸ್ಥೆಗಳು ಬೇರೆ ಬೇರೆ ಸ್ವರೂಪ ಹಾಗೂ ಸಂರಚನೆಯನ್ನು ಹೊಂದಿವೆ. ಜಾತಿಗೊಂಡ ಪಿತೃಪ್ರಧಾನ ವ್ಯವಸ್ಥೆಗಳ ಹುನ್ನಾರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆಯಾ ಜಾತಿಗಳ ನೆಲೆಗಳಲ್ಲಿಯೇ ಸ್ತ್ರೀವಾದಗಳು ಹುಟ್ಟಿಕೊಳ್ಳಬೇಕಿದೆ. ವೈದಿಕ ಸ್ತ್ರೀವಾದದಂತೆ, ದಲಿತ ಹೆಣ್ಣು ಮಕ್ಕಳು ದಲಿತ ಸ್ತ್ರೀವಾದವನ್ನು ಶೂದ್ರ ಮಹಿಳೆಯರು, ಶೂದ್ರ ಸ್ತ್ರೀವಾದವನ್ನು ಕಟ್ಟಿಕೊಳ್ಳುವ ಅಗತ್ಯವಿದೆ. ಹಾಗೆ ಮುಸ್ಲಿಂ ಸ್ತ್ರೀವಾದ, ಕ್ರಿಶ್ಚಿಯನ್ ಸ್ತ್ರೀವಾದ, ಜೈನ ಸ್ತ್ರೀವಾದ ಮೊದಲಾದ ಸ್ತ್ರೀವಾದಗಳು ರೂಪ ಪಡೆಯಬೇಕಿದೆ.

ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿಯಂತಹ ಸಾಮಾಜಿಕ ಸಂಗತಿಗಳ ಕುರಿತು ಮಾತನಾಡಿದರೂ ಅವರಿಗರಿವಿಲ್ಲದಂತೆಯೇ ದಲಿತ ಮಹಿಳೆಯರನ್ನು ಕೈಬಿಟ್ಟಿರುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀಯರನ್ನು ಕೇಂದ್ರವಾಗಿರಿಸಿಕೊಂಡು ಬೆಳೆಸಿದ ಚಿಂತನೆಗೆ ಸಾರ್ವತ್ರಿಕ ಸ್ವರೂಪವನ್ನು ಲೇಪಿಸುತ್ತಾರೆ. ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿದ್ದು, ದಾರಿದ್ರ್ಯತೆಯಿಂದ ಬಳಲುತ್ತಿರುವ, ಅಕ್ಷರ ಲೋಕವನ್ನೇ ಅರಿಯದ ದಲಿತ ಮಹಿಳೆಯರ ಕಷ್ಟ ನಷ್ಟಗಳನ್ನು, ಮಾನಾಪಮಾನಗಳನ್ನು ಕನಿಷ್ಠ ಪಕ್ಷ ಕೇಳಿಸಿ ಕೊಳ್ಳುವ ಸೌಜನ್ಯವನ್ನು ತೋರುವುದಿಲ್ಲ. ಹೀಗಾಗಿ ಮೇಲ್ಜಾತಿಯ ಸ್ತ್ರೀವಾದಿಗಳಿಗೆ ದಲಿತ ಮಹಿಳೆಯ ಶೋಷಣೆಯ ಒಳಹರಿವುಗಳು ಕೈಗೆಟುಕದೇ ಹೋಗಿಬಿಡುತ್ತವೆ.

ಎರಡು ಮೂರು ತಲೆಮಾರುಗಳವರೆಗೆ ಮೀಸಲಾತಿ ಪಡೆದ ದಲಿತ ಮಹಿಳೆಯ ಸಮಸ್ಯೆಗಳ ಸ್ವರೂಪ ಬೇರೆಯಾಗಿದ್ದರೆ, ಮೀಸಲಾತಿ ಪಡೆಯದೇ ಇರುವ ದಲಿತ ಮಹಿಳೆಯ ಸ್ವರೂಪವೇ ಬೇರೆ. ಮೀಸಲಾತಿ ಸವಲತ್ತನ್ನು ಹೊಂದದೆ ಇರುವ ದಲಿತ ಮಹಿಳೆಯರು ಜಾತಿಗೊಂಡ ಊಳಿಗಮಾನ್ಯ ಶಾಹಿ ಪಿತೃಪ್ರಧಾನ ವ್ಯವಸ್ಥೆಯನ್ನು ಎದುರಿಸುತ್ತಿರುತ್ತಾಳೆ. ಅದಕ್ಕಾಗಿ ದಲಿತ ಮಹಿಳೆ ಎಂದ ತಕ್ಷಣ ಏಕರೂಪ ಮಾದರಿಯನ್ನಾಗಿ ಗ್ರಹಿಸುವುದು ಅಪಾಯಕಾರಿಯಾಗುತ್ತದೆ. ಹೀಗಾಗಿ ದಲಿತ ಎನ್ನುವ ಪದವನ್ನು ಅತ್ಯಂತಿಕವಾಗಿ ಬಳಸದೇ ವಿಶ್ಲೇಷಣಾತ್ಮಕ ಪರಿಕಲ್ಪನೆಯನ್ನಾಗಿ ಬಳಸುವುದು ಸೂಕ್ತವೆನಿಸುತ್ತದೆ. ಪ್ರಮುಖವಾಗಿ ಮೀಸಲಾತಿ ಪಡೆಯದೇ ಇರುವ ಮಹಿಳೆಯರನ್ನು ಕೇಂದ್ರವಾಗಿರಿಸಿಕೊಂಡೇ ಈ ಲೇಖನ ರೂಪುಗೊಂಡಿದೆ.

'ಆಳದಲ್ಲಿ ಎಲ್ಲ ಜಾತಿಗಳ ಮಹಿಳೆಯರ ಸಮಸ್ಯೆಗಳು ಒಂದೇ ಎಂದು ತಾತ್ವಿಕವಾಗಿ ನಾವು ಒಪ್ಪಿಕೊಂಡರೂ ಇದು ಮಾತಿನಲ್ಲಿ ಕಂಡಂತೆ ಬದುಕಿನಲ್ಲಿ ಕಾಣಲಾರದು. ಜಾತಿನಾಶವಾಗಬೇಕು ಎಂದು ದಲಿತ ಮಹಿಳೆ ಅಂದಾಗ ಅದರಾಳಕ್ಕಿರಬಹುದಾದ ತಲ್ಲಣ, ಆಕ್ರೋಶ, ಅವಮಾನ, ನೋವು ಹಾಗೂ ಅಭದ್ರತೆ ಅದೇ ಬ್ರಾಹ್ಮಣ ಹೆಣ್ಣುಮಗಳು ಅದೇ ಮಾತನ್ನು ಜಾತಿಯ ಬಗೆ ಹೇಳುವಾಗ ಅಂಥಾದ್ದೇ ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆಂದು ಹೇಳಲಾಗದು. ವಿಚಿತ್ರ ಎಂದರೆ ಭಾರತೀಯ ಜಾತಿ ಪರಂಪರೆ ಮಹಿಳಾ ಸಮಾಜಕ್ಕೂ ಬಡಿದು ಅದು ಅವರವರನ್ನು ಮಾತ್ರ ಪ್ರಧಾನವಾಗಿ ಕಂಡುಕೊಂಡು ಅವರಲ್ಲದೆ ಹೊರಗಿನವರನ್ನು ದೂರವಾಗಿಯೇ ಕಾಣುವಂತೆ ಮಾಡಿದೆ. ಭಾರತದ ಉದ್ದಕ್ಕೂ ಇರುವ ಇಂತಹ ಅಸಮಾನ ಜಾತಿ ಮನಸ್ಸು ಮಹಿಳಾ ವಾದವನ್ನು ಬಿಚ್ಚಿಕೊಳ್ಳದಂತೆ ಮಾಡಿದೆ.' (ಮೊಗಳ್ಳಿ ಗಣೇಶ್ : ೧೯೯೮; ಪು.೩-೪)

ಸಂಕುಚಿತವಾಗಿ ಬೆಳೆಯುತ್ತಿರುವ ಸ್ತ್ರೀವಾದವು ಮೈಚಳಿಬಿಟ್ಟು ನಿಜವಾದ ಅರ್ಥದಲ್ಲಿ ವಿಸ್ತಾರತೆಯನ್ನು ಪಡೆದುಕೊಳ್ಳಬೇಕಾದರೆ ದಲಿತ ಮಹಿಳೆಯ ಮೇಲೆ ನಡೆಯುವ ಶೋಷಕ ಸಂರಚನೆಯನ್ನು ಗುರುತಿಸಬೇಕಿದೆ. ಮೇಲ್ಜಾತಿಯ ಹಾಗೂ ಮಧ್ಯಮ ಜಾತಿಗೆ ಸೇರಿದ ನಮ್ಮಂಥ ಮಹಿಳೆಯರು ಬೀದಿ-ಬೀದಿಗಳಲ್ಲಿ ಬೆತ್ತಲೆ ಮಾರಾಟವಾದ ಮಹಿಳಾ ಗುಲಾಮರ ಬದುಕಿನ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಒತ್ತಡವನ್ನು ನಿರ್ಮಿಸಿಕೊಳ್ಳಬೇಕಿದೆ.

ವಿದೇಶಿ ಪ್ರವಾಸಿಗರು ಮಹಿಳಾ ಗುಲಾಮರ ದಾರುಣಸ್ಥಿತಿಯನ್ನು ವಿವರಿಸಿದ್ದಾರೆ. ಸ್ಟ್ರಾಬೋ ''ಬಡತನದಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಲು ಸಾಧ್ಯವಿಲ್ಲದವರು ಅವರನ್ನು ಪೇಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಶಂಖ ಊದಿ ಡಂಗುರ ಹೊಡೆದರೆ ಜನ ನೆರೆಯುತ್ತಿದ್ದರು. ಕೊಂಡುಕೊಳ್ಳುವವರು ಬೆತ್ತಲೆ ಬೆನ್ನು ಭುಜಗಳನ್ನು ಪರೀಕ್ಷಿಸಿ ತನಗೆ ಒಪ್ಪಿಗೆಯಾದ ಆಕೆಯನ್ನು ಕೊಂಡುಕೊಂಡು ತನ್ನ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತಿದ್ದರು. ಸತ್ತವರನ್ನು ರಣಹದ್ದುಗಳಿಗೆ ಬಿಸಾಡುತ್ತಿದ್ದರು'' (ಸ್ಟ್ರಾಬೋ : ೧೯೬೪; ಪು. ೬೪) ಎಂದು ಹೇಳಿದರೆ, ವಾಸ್ಕೋದ ಗಾಮಾ ಮತ್ತಿತರರು ''ಗುಲಾಮರನ್ನು ಪ್ರಾಣಿಗಳಂತೆ ಕೊಲ್ಲುವುದು ಮಾರುವುದು ನಡೆಯುತ್ತಿತ್ತು. ಗೋವೆಯ ಚೌಕದಲ್ಲಿ ಹೆಂಗಸರನ್ನು ಗಂಡಸರನ್ನು ಬೆತ್ತಲೆ ನಿಲ್ಲಿಸಿ ಹರಾಜು ಮಾಡುತ್ತಿದ್ದರು. ಕನ್ಯೆಯೆಂದು ಹೇಳಿಕೊಂಡು ಬಂದವಳನ್ನು ಕನ್ಯೆಯೇ ಅಲ್ಲವೆ ಎಂಬುದನ್ನು ಹೆಂಗಸರ ಮೂಲಕ ಪರೀಕ್ಷೆ ಮಾಡಿಸಿದ ಮೇಲೆ ಕೊಂಡುಕೊಂಡು ಇಟ್ಟುಕೊಳ್ಳುತ್ತಿದ್ದರು'' (ವಾಸ್ಕೋದ ಗಾಮಾ : ೧೯೬೬; ಪು. ೨೪೧) ಎಂದಿದ್ದಾರೆ. ಜಾತಿ ಕಾರಣದಿಂದಾಗಿಯೇ ಕೌಟುಂಬಿಕ ಚೌಕಟ್ಟಿನೊಳಗೆ ಈ ಸಮಾಜದಲ್ಲಿ ಸುರಕ್ಷಿತವಾಗಿರುವ ಮೇಲ್ಜಾತಿಯ ಸ್ತ್ರೀಯರಿಗೆ ದಲಿತ ಮಹಿಳೆಯರಿಗಿದ್ದಂತೆ ಈ ಬಗೆಯ ದುರಂತ ಚರಿತ್ರೆಯಿಲ್ಲ.

ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ತಮ್ಮ ಮೇಲೆ ನಡೆಯುತ್ತಿರುವ ಶೋಷಣೆಗಳನ್ನು ಹಾಗೂ ಶೋಷಕ ವ್ಯವಸ್ಥೆಯ ಸಂರಚನೆಗಳನ್ನು ಗುರುತಿಸಿ ಪ್ರತಿಭಟಿಸುವಷ್ಟು ಪ್ರಜ್ಞಾವಂತರಾಗಿದ್ದಾರೆ. ದಲಿತಳಾಗಿ ಹುಟ್ಟಿದ್ದು ಪಾಪವಾಗಿ, ಬಾಳಿನುದ್ದಕ್ಕೂ ನರಕ ಯಾತನೆಯನ್ನು ಅನುಭವಿಸುತ್ತಿದ್ದರೂ, ತನ್ನ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಯುತ್ತಿದೆ ಎನ್ನುವುದರ ಪರಿವೆ ಇಲ್ಲದೆ ಅಮಾಯಕಳಾಗಿ ಬದುಕುತ್ತಿದ್ದಾಳೆ. ಜೀವಂತ ಶವವಾಗಿರುವ ದಲಿತ ಮಹಿಳೆಯರ ಅಸಹಾಕತೆಯನ್ನು ನೋವಿನ ಒಳದನಿಗಳನ್ನು ಎಲ್ಲ ಮಹಿಳೆಯರು ಮೊದಲು ಕೇಳಿಸಿಕೊಳ್ಳಬೇಕಿದೆ. ಶೂದ್ರಳಾಗಿ ನಾನು ಅನೇಕ ಬಗೆಯ ಶೋಷಣೆಗಳಿಗೆ ಒಳಗಾಗಿದ್ದೇನೆ, ಒಳಗಾಗುತ್ತಿದ್ದೇನೆ. ನನಗಿಂತಲೂ ಭೀಕರ ಗಾಡಾಂಧಕಾರದಲ್ಲಿ ಕೊಳೆಯುತ್ತಿರುವ ದಲಿತ ಮಹಿಳೆಯ ಅಪಮಾನಗಳನ್ನು ಆಪ್ತವಾಗಿ ಆಲಿಸುವುದು

ಮುಖ್ಯವೆನಿಸುತ್ತದೆ. ಎಲ್ಲ ಮಹಿಳೆಯರೂ ದಲಿತರೇ ನಿಜ. ಆದರೆ ಯಾರ ನೋವು ಮೊದಲು, ಯಾರ ಅಪಮಾನ ಮೊದಲು, ಈ ದೇಶದಲ್ಲಿ ಮೊದಲು ಯಾರು ಅಕ್ಷರ ಲೋಕಕ್ಕೆ ಒಳಗಾದರು ಈ ಪ್ರಶ್ನೆಗಳು ಇವತ್ತು ಪ್ರಸ್ತುತ.

ಮಹಿಳೆಯರಾದ ನಾವೆಲ್ಲರೂ ಅಪಮಾನಗಳಿಗೆ, ಹಿಂಸೆಗಳಿಗೆ, ಶೋಷಣೆಗಳಿಗೆ ಒಳಗಾದವರಾದರೂ ನಮ್ಮೊಳಗೆ ಅತ್ಯಂತ ಹಿಂಸೆಗೆ ಒಳಗಾದ ದಲಿತ ಮಹಿಳೆಯರ ಅಪಮಾನಗಳನ್ನು ನಮ್ಮ ಕಣ್ಣುಗಳಿಂದಲೇ ನಿಚ್ಚಳವಾಗಿ ನೋಡಬೇಕಿದೆ, ನಮ್ಮ ಕಿವಿಗಳಿಂದಲೇ ಪ್ರಾಮಾಣಿಕವಾಗಿ ಆಲಿಸಬೇಕಿದೆ, ನಮ್ಮ ಹೃದಯಾಂತರಾಳದಿಂದಲೇ ಮಾನವೀಯತೆಯ ದೀಪದ ಬೆಳಕಲ್ಲಿ ಅವರ ನೋವುಗಳನ್ನು ಗ್ರಹಿಸಬೇಕಿದೆ.

ಅತ್ಯಂತ ಕ್ರೂರವಾದ ಭಾರತೀಯ ಜಾತಿ ವ್ಯವಸ್ಥೆಗಳಲ್ಲಿ ಕೊನೆಯ ಅಂಚಿನಲ್ಲಿರುವ ಮಹಿಳೆಯರು ಜಾತಿಯ ಶಾಪದ ಜೊತೆಗೆ ಲಿಂಗ, ವರ್ಗ ಹಾಗೂ ವರ್ಣದ ಕಾರಣಗಳಿಂದಾಗಿ ಪುರುಷ ವಿಕಾರಗಳನ್ನು ಅಸಹಾಯಕತೆಯಿಂದ ಎದುರಿಸುತ್ತಿದ್ದಾರೆ. ಇವತ್ತಿನ ನಮ್ಮಂತಹ ವಿದ್ಯಾವಂತ, ಆಧುನಿಕ ಮಹಿಳೆಯರಿಗೆ ಹೊಸ ಬಗೆಯ ಆಲೋಚನೆ ಮಾಡುವಂಥವರಿಗೆ ಯಾವುದು ತಿರಸ್ಕೃತವಾಗಿತ್ತೊ ಅದೇ ಪ್ರಧಾನ ಆಕಾರವಾಗಬೇಕು. ಭಾರತೀಯ ಸಂಸ್ಕೃತಿಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದವರನ್ನು, ದಬ್ಬಾಳಿಕೆಗೆ ಬಲಿಯಾದವರನ್ನು ಇಟ್ಟುಕೊಂಡೇ ನಮ್ಮ ಅಧ್ಯಯನ ಸಾಗಬೇಕಿದೆ. ಮೇಲ್ಜಾತಿಯವರು ಸೃಷ್ಟಿಸಿದ ಜಾತಿ ಶ್ರೇಣೀಕರಣವನ್ನಿಟ್ಟುಕೊಂಡೇ ಮಹಿಳಾ ಸ್ಥಿತಿಗತಿಗಳನ್ನು ಅವಲೋಕನ ಮಾಡಬೇಕಿದೆ. ಯಾವ ಯಾವ ಜಾತಿಗಳು, ಯಾವ ಯಾವ ಶ್ರೇಣಿಯಲ್ಲಿದ್ದವು, ಯಾವುವು ಅಧಿಕೃತವಾಗಿದ್ದವು, ಯಾವುವು ಸುರಕ್ಷಿತವಾಗಿದ್ದವು, ಯಾವುವು ಬೀದಿಗಿದ್ದವು, ಇಲ್ಲೆಲ್ಲ ಯಾವ ಜಾತಿಯ, ಯಾವ ವರ್ಗದ ಮಹಿಳೆ ಹೆಚ್ಚು ತಬ್ಬಲಿಯಾಗಿದ್ದಳು ಎನ್ನುವುದನ್ನು ವಿಶ್ಲೇಷಿಸಬೇಕಿದೆ.

ಇಂದಿನ ಆಧುನಿಕ ಸಂದರ್ಭದಲ್ಲಿ ಪಿತೃಪ್ರಧಾನ ವ್ಯವಸ್ಥೆ, ಊಳಿಗಮಾನ್ಯ ವ್ಯವಸ್ಥೆ ಹೊಸರೂಪಗಳಲ್ಲಿ ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳುತ್ತಿವೆ. ಹಿಂದೆಂದಿಗಿಂತಲೂ ಇಂದು ಮಹಿಳಾ ಸಮುದಾಯಗಳ ಮೇಲೆ ಅದರಲ್ಲೂ ದಲಿತ ಮಹಿಳೆಯರ ಮೇಲೆ ಅಡ್ಡ ಪರಿಣಾಮಗಳನ್ನು ಬೀರುತ್ತಿವೆ ಎನ್ನುವುದು ಸ್ಪಷ್ಟ. ಅದಕ್ಕಾಗಿ ಸ್ತ್ರೀವಾದಿಗಳು ಅತ್ಯಂತ ಎಚ್ಚರ ಹಾಗೂ ಜವಾಬ್ದಾರಿಯಿಂದ ಮಾತನಾಡಬೇಕಿದೆ.

ಹಿಂದೊಮ್ಮೆ ನನ್ನೊಂದಿಗೆ ವಾಸವಾಗಿದ್ದ ಕಾಲೇಜು ಉಪನ್ಯಾಸಕಿ ಯಾವುದೋ ಒಂದು ಸಂದರ್ಭದಲ್ಲಿ ವಿಷಾದದಿಂದ ಹೇಳಿದ ಮಾತುಗಳು ನೆನಪಿಗೆ ಬರುತ್ತಿವೆ. "ನನ್ನ ಜಾತಿ ಕೇಳಿದ ತಕ್ಷಣ ನನ್ನೊಂದಿಗೆ ಮಾತನಾಡುವ ಗಂಡಸರ ವರ್ತನೆಗಳು ಕ್ಷಣಾರ್ಧದಲ್ಲಿ ಬದಲಾಗಿಬಿಡುತ್ತವೆ. ಸುಲಭವಾಗಿ ನಾನು ಅವರಿಗೆ ಕೈಗೆ ಸಿಕ್ಕಿಬಿಡುವ ಹೆಣ್ಣೆಂದು ನಿರ್ಧರಿಸಿಬಿಡುತ್ತಾರೆ. ಸುಶಿಕ್ಷಿತರೆನಿಸಿಕೊಂಡ ರೀತಿಯಲ್ಲಿ ನಮ್ಮೊಂದಿಗೆ ವರ್ತಿಸುತ್ತಾರೆ." ಉನ್ನತ ಶಿಕ್ಷಣ, ಉನ್ನತ ಹುದ್ದೆಯಲ್ಲಿರುವ ದಲಿತ ಮಹಿಳೆಯ ಸ್ಥಿತಿ ಹೀಗಿರಬೇಕಾದರೆ, ಮೀಸಲಾತಿ ಪಡೆಯದೇ ಜಾತಿಗೊಂಡ ಊಳಿಗಮಾನ್ಯಶಾಹಿ ಪಿತೃಪ್ರಧಾನ ವ್ಯವಸ್ಥೆಯಲ್ಲಿರುವ ದಲಿತ ಮಹಿಳೆಯ ಪರಿಸ್ಥಿತಿ ಹೇಗಿರಬೇಡ? ದಲಿತ ಮಹಿಳೆ ತನ್ನ ಜಾತಿಯಲ್ಲಿಯೇ ಇರುವ ಪಿತೃಪ್ರಧಾನ ವ್ಯವಸ್ಥೆಯಿಂದ ಘಾಸಿಗೊಂಡಿದ್ದಾಳೆ. ಅದರ ಜೊತೆಗೆ ಜಾತಿಗೊಂಡ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕ್ರೂರವಾಗಿ ನಲುಗಿ ಹೋಗಿದ್ದಾಳೆ.

ಕೌಟುಂಬಿಕವಾಗಿ, ಸಾಮಾಜಿಕವಾಗಿ ಭೀಕರ ಹತ್ಯೆಗೊಳಗಾದ ದಲಿತ ಮಹಿಳೆಯ ವೇದನೆಗೂ, ಹೆಣ್ಣಾದ ಕಾರಣಕ್ಕೆ ನನಗೆ ಬಡ್ತಿ ಸಿಗುತ್ತಿಲ್ಲ, ನನ್ನ ಪ್ರತಿಭೆಯನ್ನು ಗೌರವಿಸುತ್ತಿಲ್ಲ ಎನ್ನುವ ಮೇಲ್ಜಾತಿಯ ಮಹಿಳೆಯ ವೇದನೆಗೂ ಅಜಗಜಾಂತರ ವ್ಯತ್ಯಾಸವಿದೆ.

ಸಮಾಜದ ಜಾತಿ ಶ್ರೇಣೀಕರಣದಲ್ಲಿ ದಲಿತ ಮಹಿಳೆಯರು ಮೇಲ್ಜಾತಿಯ, ಮೇಲ್ವರ್ಗದ ಪುರುಷರಿಂದ ಶೋಷಣೆಗೆ ಒಳಗಾಗಿದ್ದಾರೆ, ಒಳಗಾಗುತ್ತಿದ್ದಾರೆ. ಪಾತರದವರು, ಜೋಗತಿಯರು, ಬಸವಿಯರು, ಬಾಲಬಸವಿಯರು ಈ ಮೊದಲಾದ ಶೂದ್ರ ಹಾಗೂ ದಲಿತ ಮಹಿಳೆಯರ ಸಾಂಸ್ಕೃತಿಕ ಕಥನಗಳು ಇದನ್ನೇ ವಾಚ್ಯಗೊಳಿಸುತ್ತವೆ. ಪಾತರ, ಜೋಗತಿ, ಬಸವಿ ಬಿಡುವ ಆಚರಣೆಯ ಹೆಸರಿನಲ್ಲಿ ಪ್ರತಿವರ್ಷ ಏನಿಲ್ಲೆಂದರೂ ೫೦೦ ರಿಂದ ೧೦೦೦ ದವರೆಗೆ ದಲಿತ ಹುಡುಗಿಯರು ಲೈಂಗಿಕ ಮಾರುಕಟ್ಟೆಗೆ ತಳ್ಳಲ್ಪಡುತ್ತಿದ್ದಾರೆ. ಇದರ ಮೇಲೆ, ಕೆಳಜಾತಿಯಲ್ಲಿ ಹುಟ್ಟಿದ್ದ ಕಾರಣಕ್ಕಾಗಿಯೇ ಅನೇಕ ಕನ್ಯೆಯರು, ಮಹಿಳೆಯರು, ಮೇಲ್ಜಾತಿಯ, ಮೇಲ್ವರ್ಗದ ಪುರುಷರಿಂದ ಅತ್ಯಾಚಾರಕ್ಕೆ ಒಳಗಾಗು

ಭಾರತೀಯ ಸ್ತ್ರೀ ವಾದಕ್ಕೆ ಏಕರೂಪವಿಲ್ಲ. ಇದರೊಳಗೆ ಬೇರೆ ಬೇರೆ ಜಾತಿಗಳ ಬೇರೆ ಬೇರೆ ಮಾದರಿಗಳಿವೆ. ಸಮಗ್ರವಾಗಿ ಹೆಣ್ಣು ಭಾರತದ ಪುರುಷಶಾಹಿ ವ್ಯವಸ್ಥೆಯಲ್ಲಿ ಒಂದೇ ಬಗೆಯಾಗಿ ತುಳಿತಕ್ಕೆ ಒಳಪಟ್ಟಿದ್ದರೂ ಕೂಡ ವರ್ಣಾಶ್ರಮದ ಕಾರಣವಾಗಿ ಮಹಿಳೆಯ ಮೇಲಿನ ಶೋಷಣೆಯ ನೆಲೆಗಳು ಅತ್ಯಂತ ಸಂಕೀರ್ಣವಾಗಿ ವ್ಯಾಪಿಸಿವೆ. ಈ ಶೋಷಣೆಯ ಸಂಕೀರ್ಣತೆಯನ್ನು ತಲಸ್ಪರ್ಶಿಯಾಗಿ ಶೋಧಿಸಬೇಕಾದರೆ, ಜಾತಿಪ್ರಣೀತವಾದ ಗುಂಪುಗಳನ್ನು ಭಿನ್ನವಾಗಿ ಪರಿಶೀಲಿಸಬೇಕಾಗುತ್ತದೆ.

ತ್ತಿದ್ದಾರೆ, ಬೆತ್ತಲೆಯಾಗಿ ಮೆರವಣಿಗೆಯಾಗುತ್ತಿದ್ದಾರೆ. ಈ ಬಗೆಯ ಘಟನೆಗಳು ನಮ್ಮ ವೃತ್ತಪತ್ರಿಕೆಗಳಲ್ಲಿ ಪ್ರತಿನಿತ್ಯ ಬರುತ್ತಲೇ ಇರುತ್ತವೆ.

ಜಾತಿ ಕಾರಣದಿಂದಲೇ ಸುರಕ್ಷಿತವಾಗಿರುವ ಮೇಲ್ವರ್ಗದ, ಮೇಲ್ಜಾತಿಯ ಮಹಿಳೆಯರಿಗೆ, ದಲಿತ ಮಹಿಳೆಯರು ಅನುಭವಿಸುವ ಈ ಬಗೆಯ ಅಪಮಾನ, ಕಿರುಕುಳ, ನೋವು, ಹಿಂಸೆಗಳು ಅರ್ಥವಾಗುವುದಿಲ್ಲ. ಮೇಲ್ಜಾತಿಯ ಮಹಿಳೆಯರಿಗೆ ವೈಧವ್ಯ, ಗೃಹಬಂಧನವೇ ತೀವ್ರ ಸಮಸ್ಯೆಗಳಾಗಿ ಕಾಡುತ್ತವೆ. ಹಾಗೆಂದು ಮೇಲ್ಜಾತಿಯ ಮಹಿಳೆಯರ ಸಮಸ್ಯೆಗಳನ್ನು ಸರಳೀಕರಣಗೊಳಿಸುತ್ತಿದ್ದೇನೆಂದಲ್ಲ, ಮೊದಲು, ನಮಗಿಂತಲೂ ನೊಂದವರ ನೋವನ್ನು ಕೇಳಬೇಕಿದೆ. ಅವರ ಸಮಸ್ಯೆಗಳನ್ನು ಆಲಿಸುವ ಅಗತ್ಯವಿದೆ. ಸಮಾಜದಲ್ಲಿ, ಸಮುದಾಯಗಳಲ್ಲಿ ಇದ್ದುಕೊಂಡೂ ತಬ್ಬಲಿತನವನ್ನು ಅನುಭವಿಸುತ್ತಿರುವ ದಲಿತ ಮಹಿಳೆಯರ ಅಧ್ಯಯನ ನಡೆಯಬೇಕಿದೆ.

ಭಾರತೀಯ ಸ್ತ್ರೀ ವಾದಕ್ಕೆ ಏಕರೂಪವಿಲ್ಲ. ಇದರೊಳಗೆ ಬೇರೆ ಬೇರೆ ಜಾತಿಗಳ ಬೇರೆ ಬೇರೆ ಮಾದರಿಗಳಿವೆ. ಸಮಗ್ರವಾಗಿ ಹೆಣ್ಣು ಭಾರತದ ಪುರುಷಶಾಹಿ ವ್ಯವಸ್ಥೆಯಲ್ಲಿ ಒಂದೇ ಬಗೆಯಾಗಿ ತುಳಿತಕ್ಕೆ ಒಳಪಟ್ಟಿದ್ದರೂ ಕೂಡ ವರ್ಣಾಶ್ರಮದ ಕಾರಣವಾಗಿ ಮಹಿಳೆಯ ಮೇಲಿನ ಶೋಷಣೆಯ ನೆಲೆಗಳು ಅತ್ಯಂತ ಸಂಕೀರ್ಣವಾಗಿ ವ್ಯಾಪಿಸಿವೆ. ಈ ಶೋಷಣೆಯ ಸಂಕೀರ್ಣತೆಯನ್ನು ತಲಸ್ಪರ್ಶಿಯಾಗಿ ಶೋಧಿಸಬೇಕಾದರೆ, ಜಾತಿಪ್ರಣೀತವಾದ ಒಂದೊಂದು ಗುಂಪುಗಳನ್ನು ಭಿನ್ನವಾಗಿ ಪರಿಶೀಲಿಸಬೇಕಾಗುತ್ತದೆ. ಪಶ್ಚಿಮದಲ್ಲಿ ಕಪ್ಪು ಮತ್ತು ಬಿಳಿ ಮಹಿಳೆಯರ ಶೋಷಣೆಯ ಅಂತರವನ್ನು ಗುರುತಿಸಿಕೊಂಡಂತೆಯೇ ಜಾತಿನಿಷ್ಠವಾದ ಭಾರತದಲ್ಲಿ ವೈದಿಕ ಮಹಿಳಾಕಥನ, ಹಾಗೇ ಶೂದ್ರ ಮಹಿಳಾ ಕಥನ, ಮುಸ್ಲಿಂ ಮಹಿಳಾ ಕಥನ, ಕ್ರಿಶ್ಚಿಯನ್ ಮಹಿಳಾ ಕಥನ ಹಾಗೂ ದಲಿತ ಮಹಿಳಾ ಕಥನ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾದ ಜರೂರಿದೆ. ಈ ಪ್ರತ್ಯೇಕತೆ ವೈದಿಕ ಮಹಿಳಾ ಕಥನಕ್ಕೆ ವಿರುದ್ಧವಾದುದಲ್ಲ. ದಲಿತ ಮಹಿಳೆಯರ ಸಮಸ್ಯೆಗಳನ್ನು ವೈದಿಕ ಮಹಿಳೆಯ ಸಮಸ್ಯೆಗಳ ಜೊತೆಗೂಡಿಸಿ ಸಾಮಾಜಿಕ ನ್ಯಾಯವನ್ನು ಹುಡುಕುವುದಕ್ಕೆ, ಪ್ರತಿಪಾದಿಸುವುದಕ್ಕೆ ಬರುವುದಿಲ್ಲ. ಹೇಗೆ ಒಬ್ಬ ಜೋಗತಿ, ಬಸವಿಯ ಸಾಮಾಜಿಕ, ಧಾರ್ಮಿಕ ಶೋಷಣೆಗಳು ಭಿನ್ನವೊ, ಹಾಗೆಯೇ ವೈದಿಕ ಮಹಿಳೆಯರ ಸಾಮಾಜಿಕ, ಧಾರ್ಮಿಕ ಶೋಷಣೆಗಳು ಕೂಡ ಸೂಕ್ಷ್ಮವಾಗಿ ಬೇರೆ ಬೇರೆಯಾಗಿರುತ್ತವೆ. ಅಂದರೆ ಶೋಷಣೆಯ ಕೇಂದ್ರ ಒಬ್ಬೊಬ್ಬರಿಗೂ ಒಂದೊಂದು ಬಗೆಯ ತಾರತಮ್ಯವನ್ನು ಹಿಂಸೆಯನ್ನು ಸೃಷ್ಟಿಸಿರುತ್ತದೆ. "ಜಾತಿಗೊಂಡ ಪಿತೃಪ್ರಧಾನ ಅಧಿಕಾರ ಸಂಬಂಧಗಳ ಒಳಗಿನ ವಿಭಿನ್ನ ನೆಲೆಗಳನ್ನು ಆಧರಿಸಿ, ನಮ್ಮ ವಿಭಿನ್ನ ಶೋಷಿತ ಸ್ಥಾನಗಳು ರೂಪಿತಗೊಂಡಿರುತ್ತವೆ. ಈ ಒಂದು ಸಂರಚನೆಯಲ್ಲಿ ನಾವು ಕೇವಲ ಮಹಿಳೆಯರಾಗಿರುವುದಿಲ್ಲ. ಬದಲಿಗೆ ಜಾಡುಮಾಲಿ ಮಹಿಳೆಯಾಗಿ, ರೈತಾಪಿ ಮಹಿಳೆಯಾಗಿ, ವೃತ್ತಿ ಮಹಿಳೆಯಾಗಿ ಅಸ್ತಿತ್ವದಲ್ಲಿರುತ್ತೇವೆ. ಈ ಪ್ರತಿಯೊಂದು ವಿವರಣೆಯೂ ನಮ್ಮ ಸಾಮಾಜಿಕ ಸ್ಥಿತಿಗತಿಗಳ ನಿರ್ದಿಷ್ಟತೆಯನ್ನು ಸೂಚಿಸುತ್ತದೆ. ಈ ಆಯಾಮಗಳು ಸಂಕೀರ್ಣ ರೀತಿಯಲ್ಲಿ ಒತ್ತರಿಸಿ ಆ ಮೂಲಕ ನಮ್ಮ ನಿಜದನಿಗಳನ್ನು ಪೃಥಕ್ಕರಿಸುತ್ತದೆ." (Alisamma women's collective: 2000; Pp. 45)

ಹಿಂದೆಂದಿಗಿಂತಲೂ ಇವತ್ತು ಭಾರತೀಯ ಸಂಸ್ಕೃತಿಗಳಿಗೆ ಏಕರೂಪವನ್ನು ನೀಡುವ ಪ್ರಯತ್ನ ತೀವ್ರವಾಗಿ ನಡೆದಿದೆ. ಬಲಪಂಥಿಯರ ಈ ಧೋರಣೆಗಳಿಂದಾಗಿ ಮಹಿಳೆಯರು ಅದರಲ್ಲೂ ದಲಿತ ಮಹಿಳೆಯರು ನೇರವಾಗಿ ಪ್ರಪಾತಕ್ಕೆ ಬೀಳುವ ಅಪಾಯವಿದ್ದುದರಿಂದ, ನಿರ್ಲಕ್ಷಿತ ಮಹಿಳಾ ಸಮುದಾಯಗಳ ಅಧ್ಯಯನವನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಬೇಕಿದೆ. ಹಾಗೂ ಅವರಲ್ಲಿ ಜಾಗೃತಿಯನ್ನು ಮೂಡಿಸಬೇಕಿದೆ.

ಉಲ್ಲೇಖಗಳು

೧. ಧರಣಿದೇವಿ ಮಾಲಗತ್ತಿ : ೧೯೯೮; ಸ್ತ್ರೀವಾದ ಮತ್ತು ಭಾರತೀಯತೆ, ಚೇತನ ಬುಕ್ ಹೌಸ್, ಮೈಸೂರು.

೨. ಮಧುಕೀಶ್ವರ್ : ೧೯೯೭; ಮಾನುಷಿಯ ಮಾತು, ಮೀರಾ ಎಲ್.ಜಿ. (ಅನು), ಅಕ್ಷರ ಚಿಂತನ ಪ್ರಕಾಶನ, ಹೆಗ್ಗೋಡು.

೩. ಮನು ಚಕ್ರವರ್ತಿ : ೧೯೯೮; ಬಹುಮುಖಿ, ಮೀರಾ ಎಲ್.ಜಿ. (ಅನು), ಅಕ್ಷರ ಚಿಂತನ ಪ್ರಕಾಶನ, ಹೆಗ್ಗೋಡು.

೪. ಮೊಗಳ್ಳಿ ಗಣೇಶ್ : ೧೯೯೮, ಸೊಲ್ಲು, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

೫. ವಾಸ್ಕೊದ ಗಾಮಾ ಮತ್ತಿತರರು : ೧೯೬೬; ಪ್ರವಾಸಿ ಕಂಡ ಇಂಡಿಯಾ ಸಂಪುಟ ೨, ನಾಗೇಗೌಡ ಎಚ್.ಎಲ್. (ಅನು), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬. ಸ್ಟ್ರಾಬೋ : ೧೯೬೪; ಪ್ರವಾಸಿ ಕಂಡ ಇಂಡಿಯಾ ಸಂಪುಟ ೧, ನಾಗೇಗೌಡ ಎಚ್.ಎಲ್. (ಅನು), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೭. Alisamma Women's Collective : March-April 2002; "Different Sisters', The Dalit, K.K. Nagar, Chennai.

ಚುನಾವಣೆ: ಮಹಿಳಾ ಪ್ರಾತಿನಿಧ್ಯ

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.೩೩ ಮೀಸಲು ನೀಡಬೇಕೆಂಬುದು ರಾಷ್ಟ್ರ ರಾಜಕಾರಣದ ಬಹುದೊಡ್ಡ ಕ್ಲೀಷೆ. ಮಹಿಳಾ ಮಣಿಗಳಿಗೆ ಪುರುಷರಿಗೆ ಸಮಾನವಾದ ಅವಕಾಶ ಕಲ್ಪಿಸುವ ಬಗ್ಗೆ ಪ್ರಧಾನಿಯಿಂದ ಹಿಡಿದು ಪಂಚಾಯಿತಿ ಸದಸ್ಯರವರೆಗೆ ಎಲ್ಲರೂ ಗಂಟೆ ಗಟ್ಟಲೆ ಭಾಷಣ ಬಿಗಿಯುತ್ತಾರೆ. ಆದರೆ ಚುನಾವಣೆಗಳಲ್ಲಿ ಟಿಕೆಟ್ ಹಂಚಿಕೆ ವಿಷಯ ಬಂದಾಗ ಮಾತ್ರ ಎಲ್ಲರದೂ ದಿವ್ಯ ಮೌನ.

ಈ ಲೋಕಸಭೆ ಚುನಾವಣೆ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ದೇಶದ ೫೪೩ ಲೋಕಸಭೆ ಕ್ಷೇತ್ರಗಳಿಗೆ ಒಟ್ಟು ೨೧೬೫ ಅಭ್ಯರ್ಥಿಗಳು ಸ್ಪರ್ಧಿಸಿದ್ದು ಈ ಪೈಕಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಕೇವಲ ೧೭೭.

ಸೋನಿಯಾ ಗಾಂಧಿ ಅಧ್ಯಕ್ಷತೆಯ ಕಾಂಗ್ರೆಸ್ ಇತರ ಪಕ್ಷಗಳಿಗಿಂತ ಹೆಚ್ಚಿನ ಮಹಿಳೆಯರಿಗೆ ಟಿಕೆಟ್ ನೀಡಿದೆ. ಆ ಪಕ್ಷ ಒಟ್ಟು ೪೧೭ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು ೪೫ ಮಹಿಳೆಯರಿಗೆ ಟಿಕೆಟ್ ನೀಡಿದೆ. ಇದು ಒಟ್ಟು ಅಭ್ಯರ್ಥಿಗಳ ಶೇ.೧೦.೭೯ ಮಾತ್ರ. ಅಂದರೆ ಶೇ. ೩೩ರ ಪ್ರಸ್ತಾವಿತ ಮೀಸಲು ಪ್ರಮಾಣದ ೧/೩ರಷ್ಟು! ನಂತರದ ಸ್ಥಾನ ಬಿಜೆಪಿಗೆ. ರಾಜಸ್ಥಾನ ಮತ್ತು ಮಧ್ಯಪ್ರದೇಶಗಳಂಥ ಪ್ರಮುಖ ರಾಜ್ಯಗಳಲ್ಲಿ ಮಹಿಳಾ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡಿರುವ ಪಕ್ಷ ಈ ಲೋಕಸಭೆ ಚುನಾವಣೆಯಲ್ಲಿ ಶೇ.೮.೨೪ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ನೀಡಿದೆ. ಅಂದರೆ ಪಕ್ಷದ ಪರವಾಗಿ ಕಣಕ್ಕಿಳಿದಿರುವ ೩೬೪ ಅಭ್ಯರ್ಥಿಗಳಲ್ಲಿ ಕೇವಲ ೩೦ ಮಂದಿ ಮಾತ್ರ ಮಹಿಳೆಯರು.

> **ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ನೀಡುವುದಾಗಿ ಎಲ್ಲರೂ ಮಾತಾಡುತ್ತಾರೆ. ಆದರೆ ಸಂದರ್ಭ ಬಂದಾಗಲೆಲ್ಲ ಇಂಥ ಮಾತುಗಳು ಬರೀ ಘೋಷಣೆಗಳಾಗಿ ಮಾತ್ರ ಉಳಿಯುತ್ತವೆ. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ. ೩೩ ಮೀಸಲು ನೀಡುವ ಮಾತನಾಡುತ್ತಿದ್ದ ಎಲ್ಲಾ ರಾಜಕೀಯ ಪಕ್ಷಗಳು ಪ್ರಸಕ್ತ ಚುನಾವಣೆಯಲ್ಲಿ ಕೂಡ ಇಂಥದೇ ಗೋಸುಂಬೆಯಾಟ ಆಡಿವೆ.**

ಮೂರನೇ ಸ್ಥಾನದಲ್ಲಿರುವುದು ಮುಲಾಯಂ ಸಿಂಗ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ. ಒಟ್ಟು ೨೩೭ ಕ್ಷೇತ್ರಗಳಲ್ಲಿ ಕಣಕ್ಕಿಳಿದಿರುವ ಎಸ್‌ಪಿ, ೨೪ ಮಹಿಳೆಯರಿಗೆ ಅವಕಾಶ ಕಲ್ಪಿಸಿದೆ. ಅಂದರೆ ಒಟ್ಟು ಸ್ಪರ್ಧಿಗಳ ಶೇ.೧೦.೧೧ ರಷ್ಟು ಮಾಯಾವತಿ ಅಧ್ಯಕ್ಷತೆಯ ಬಹುಜನ ಸಮಾಜ ಪಕ್ಷ ಗರಿಷ್ಠ ೪೩೫ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿದ್ದು ಈ ಪೈಕಿ ಕೇವಲ ೨೦ ಮಹಿಳೆಯರಿದ್ದಾರೆ.

ಎಡಪಕ್ಷಗಳ ಪೈಕಿ ಸಿಪಿಎಂ ತಾನು ಸ್ಪರ್ಧಿಸಿರುವ ೬೯ ಕ್ಷೇತ್ರಗಳ ಪೈಕಿ ೮ ಕಡೆ ಮಹಿಳೆಯರಿಗೆ ಅವಕಾಶ ನೀಡಿದೆ. ಶರದ್ ಪವಾರ್ ನೇತೃತ್ವದ ಎನ್‌ಸಿಪಿ ೩೨ಕಡೆ ಸ್ಪರ್ಧೆಗಿಳಿದಿದ್ದು ಐವರು ಮಹಿಳೆಯರಿಗೆ ಟಿಕೆಟ್ ನೀಡಿದೆ. ಶೇಕಡಾವಾರು ಲೆಕ್ಕಾಚಾರದಲ್ಲಿ(ಶೇ.೧೫.೬೩) ಈ ಪಕ್ಷಕ್ಕೆ ಅಗ್ರಸ್ಥಾನ.

ಎನ್‌ಡಿಎ ಸದಸ್ಯ ಪಕ್ಷ ಜೆಡಿಯು ೭೩ ಕಡೆ ಸ್ಪರ್ಧಿಸಿದ್ದು ಕೇವಲ ಮೂರು ಮಹಿಳೆಯರಿಗೆ ಟಿಕೆಟ್ ನೀಡಿದೆ. ದೇವೇಗೌಡರ ನೇತೃತ್ವದ ಜೆಡಿಎಸ್ ೪೩ ಕಡೆ ಅಭ್ಯರ್ಥಿಗಳನ್ನು ನಿಲ್ಲಿಸಿದ್ದು, ಆ ಪೈಕಿ ನಾಲ್ವರು ಮಹಿಳೆಯರು.

ಇತರ ಪಕ್ಷಗಳಿಗೆ ಹೋಲಿಸಿದರೆ ಪಿ.ಎ.ಸಂಗ್ಮಾ- ಮಮತಾ ಬ್ಯಾನರ್ಜಿ ನೇತೃತ್ವದ ನ್ಯಾಷನಲಿಸ್ಟ್ ತೃಣಮೂಲ ಕಾಂಗ್ರೆಸ್ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದೆ. ಆ ಪಕ್ಷದ ಒಟ್ಟು ಅಭ್ಯರ್ಥಿಗಳ ಪೈಕಿ ಶೇ. ೧೮.೧೮ ಮಹಿಳೆಯರು. ಪಕ್ಷ ಒಟ್ಟು ೩೩ ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ೬ ಮಹಿಳೆಯರು ಕಣಕ್ಕಿಳಿದಿದ್ದಾರೆ. ಉಳಿದಂತೆ ತೆಲುಗುದೇಶಂ ೩೩ರಲ್ಲಿ ೪, ಬಿಜು ಜನತಾದಳ ೧೨ರಲ್ಲಿ ಒಬ್ಬ ಮಹಿಳೆಗೆ ಅವಕಾಶ ನೀಡಿವೆ.

ತಮಿಳುನಾಡಿನಲ್ಲಿ ಜಯಲಲಿತಾ ನೇತೃತ್ವದ ಎಐಎಡಿಎಂಕೆ ೩೩ ಸ್ಥಾನಗಳಿಗೆ ಸ್ಪರ್ಧಿಸಿದ್ದು ಕೇವಲ ಇಬ್ಬರು ಮಹಿಳೆಯರಿಗೆ ಮಾತ್ರ ಟಿಕೆಟ್ ನೀಡಿದೆ. ಅದೇ ಪ್ರತಿಪಕ್ಷ ಡಿಎಂಕೆ ತಾನು ಸ್ಪರ್ಧಿಸಿರುವ ೧೬ ಕ್ಷೇತ್ರಗಳ ಪೈಕಿ ಮೂವರು ಮಹಿಳೆಯರಿಗೆ ಅವಕಾಶ ನೀಡಿದೆ. ಶಿವಸೇನೆ ೫೬ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು ಇದರಲ್ಲಿ ೬ ಮಹಿಳೆಯರಿದ್ದಾರೆ. ಅಕಾಲಿದಳ ಪಂಜಾಬ್‌ನ ೧೦ ಸ್ಥಾನಗಳಲ್ಲಿ ಕಣಕ್ಕಿಳಿದಿದ್ದು ಕೇವಲ ಒಬ್ಬ ಮಹಿಳೆಗೆ ಟಿಕೆಟ್ ನೀಡಿದೆ.

ಮಹಿಳಾ ಮೀಸಲು ವಿಧೇಯಕವನ್ನು ಕಟುವಾಗಿ ವಿರೋಧಿಸುತ್ತಿರುವ ಲಾಲೂ ಪ್ರಸಾದ್ ಯಾದವ್ ನೇತೃತ್ವದ ಆರ್‌ಜೆಡಿ ೪೧ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು ಈ ಪೈಕಿ ಕೇವಲ ಒಬ್ಬ ಮಹಿಳಾ ಸ್ಪರ್ಧಿ ಇದ್ದಾರೆ.

ಇನ್ನು ೧೭ ರಾಜ್ಯಮಟ್ಟದ ಹಾಗೂ ಮಾನ್ಯತೆ ಪಡೆದ ಪಕ್ಷಗಳು ಒಬ್ಬ ಮಹಿಳೆಗೂ ಟಿಕೆಟ್ ನೀಡಿಲ್ಲ. ಇದರಲ್ಲಿ ಅಸ್ಸಾಂ ಗಣಪರಿಷತ್, ಫಾರ್ವರ್ಡ್ ಬ್ಲಾಕ್, ನ್ಯಾಷನಲ್ ಕಾನ್ಫರೆನ್ಸ್, ಪಿಎಂಕೆ, ಎಂಡಿಎಂಕೆ, ಸೇರಿವೆ.

ಗುರಿ ಸಾಧನೆ : ಮಹಿಳೆಯರಿಗೆ ಶೇ.೩೩ ಸ್ಥಾನ ಮೀಸಲಿಡಬೇಕೆಂಬ ನೀತಿ ಪಾಲಿಸಿರುವ ಏಕೈಕ ಪಕ್ಷ ಜಮ್ಮು - ಕಾಶ್ಮೀರದಲ್ಲಿ ಕಾಂಗ್ರೆಸ್ ಜತೆಗೂಡಿ ಅಧಿಕಾರ ನಡೆಸುತ್ತಿರುವ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ. ಪಕ್ಷ ರಾಜ್ಯದಲ್ಲಿ ಮೂರು ಕ್ಷೇತ್ರ ಗಳಲ್ಲಿ ಸ್ಪರ್ಧಿಸಿದ್ದು ಆ ಪೈಕಿ ಒಬ್ಬರು ಮಹಿಳೆಗೆ ಟಿಕೆಟ್ ದಕ್ಕಿದೆ! ಆಕೆ ಬೇರಾರೂ ಅಲ್ಲ, ಅನಂತನಾಗ್‌ನಿಂದ ಸ್ಪರ್ಧಿಸಿರುವ ಪಕ್ಷದ ಅಧ್ಯಕ್ಷೆ ಮೆಹಬೂಬಾ ಮಫ್ತಿ.

ಪಿಡಿಪಿಯನ್ನೂ ಮೀರಿಸಿ ಶೇ.೧೦೦ರಷ್ಟು ಮಹಿಳಾ ಪ್ರಾತಿನಿಧ್ಯ ನೀಡಿರುವ ಎರಡು ಪಕ್ಷಗಳಿವೆ. ಅವೆಂದರೆ, ಸಂಯುಕ್ತ ಗೋವಾ ಪ್ರಜಾಸತ್ತಾತ್ಮಕ ಪಕ್ಷ ಹಾಗೂ ಮಣಿಪುರ್ ಪೀಪಲ್ಸ್ ಪಾರ್ಟಿ. ಈ ಪಕ್ಷಗಳು ಸ್ಪರ್ಧಿಸಿರುವ ಸ್ಥಾನಗಳ ಸಂಖ್ಯೆ ತಲಾ ಒಂದು!

೧೯೯೯ರ ಲೋಕಸಭೆ ಚುನಾವಣೆಯಲ್ಲಿ ಒಟ್ಟು ೨೪೭ ಮಹಿಳಾ ಅಭ್ಯರ್ಥಿಗಳು ಕಣದಲ್ಲಿದ್ದರು. ಆ ಪೈಕಿ ಗೆಲುವು ಸಾಧಿಸಿದವರು ಕೇವಲ ೪೮. ಇದರಲ್ಲಿ ರಾಷ್ಟ್ರಪತಿಯವರು ನಾಮಕರಣ ಮಾಡಿದ ಒಬ್ಬ ಸದಸ್ಯೆಯೂ ಸೇರಿದ್ದಾರೆ. ಅಂದರೆ ವಿಸರ್ಜಿತ ಲೋಕಸಭೆಯಲ್ಲಿದ್ದ ಮಹಿಳಾ ಸದಸ್ಯರ ಪ್ರಮಾಣ ಕೇವಲ ಶೇ. ೯.೦೨.

(ಸೌಜನ್ಯ : ವಿಜಯ ಕರ್ನಾಟಕ)



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೪೫೩ / ೯೪೪೮೦೪೮೩೦೬

ಕೆ. ಷರೀಫಾ : ಎರಡು ಕವನಗಳು

ಮಾಯದ ಲೋಕ

ಸದ್ದು ಗದ್ದಲವಿಲ್ಲ
ಪ್ರತಿಭಟನೆಯ ಧ್ವನಿ
ಮೊದಲೇ ಇಲ್ಲ
ಹೀಗೇಕೆ ಮೌನವಾಗಿ ಮಲಗಿದೆ
ಅಕ್ಷರದಂಗಳದ ಜಗತ್ತು?
ನನ್ನವರ ಆತ್ಮಗಳ ಸದ್ದು
ಗದ್ದಲವನು ಯಾರು ನುಂಗಿದರು?
ಅವರ ಕಟ್ಟೆಯ ಮೇಲಿನ
ಆಪ್ತ ಜಗತ್ತಿನ ಮಾತುಗಳ ?
ನನ್ನ ನಾಡಿನ ಆ ಮೂಲೆಯಲ್ಲಿ
ಹಾಡಿದ ಕೋಗಿಲೆಯ ಧ್ವನಿ
ಈ ಮೂಲೆಯವರೆಗೂ ಕೇಳುತ್ತಿತ್ತು
ಇಂದೇಕೆ ಕೇಳುತ್ತಿಲ್ಲ ಯಾರ ಕಿವಿಗೂ
ಕೋಗಿಲೆಯ ಹಾಡು ?
ಯಾವ ಮಾಯದ ಲೋಕ
ಆವರಿಸಿದೆ ಅವರ
ತೆರೆದ ಬುದ್ಧಿಯ ಮೇಲೆ
ಮಾಯದ ಟಿ.ವಿ. ಲೋಕವೋ



ಇಂಟರ್ ನೆಟ್ ಜಾಲವೋ
ಜಗತ್ತಿನ ಮಹಾಯುದ್ಧಗಳೋ
ಹರಡಿದ ಕೋಮುಜ್ವಾಲೆಗಳೋ
ದಹಿಸಿದ ಜಾಗತೀಕರಣದ ಬಿಸಿಯೋ
ಖಾಸಗೀಕರಣ ಉದಾರೀಕರಣ
ತ್ರಿಕರ್ಣದ ಸುಳಿಯಲಿ ಸಿಕ್ಕು
ಅಸ್ತಿತ್ವವಿಲ್ಲದೇ ಹಾರುತ್ತಿರುವ
ತರಗೆಲೆಯ ತೂರಾಟ
ಡಂಗುರದ ಶಬ್ದವೇನು
ಗಂಟೆ, ಜಾಗಟೆ ಮದ್ದಳೆಗಳೇನು
ಮೈಕಿನಲಿ ಡಂಗುರ ಸಾರಿದರೇನು
ಮುಚ್ಚಿದ ಬಾಗಿಲೊಳಗೆ
ಏರ್ ಕಂಡೀಶನ್ನುಗಳು
ಕೋಣೆಗಳ ತಂಪಾಗಿಸಲು
ಇಲ್ಲಿ ರಾಮ-ರಹೀಮ-ಏಸು
ಯಾರು ಬಂದರೂ ಕೇಳುವುದಿಲ್ಲ
ಎಲ್ಲಿ ಚದುರಿ ಹೋಯಿತು ಬದುಕು
ಮನದ ಮೂಲೆಯಲಿ ಬೆಳಕು
ಹೇಗೆ ಪ್ರತಿಫಲಿಸೀತು?
ಅಂತರಂಗದ ತರಂಗಗಳ
ಆಲಿಸಲು ನಮಗೆ ಬಿಡುವೆಲ್ಲಿ
ತಣ್ಣನೆಯ ಮೌನ ಹೊದ್ದು
ಮಾಯಾವಿ ಲೋಕದ ಜಾಲದಲಿ
ಮರೆಯಾಗಿಹನು ಮಾನವ

ಭಾರತ ಪ್ರಕಾಶಿಸುತ್ತಿದೆ



ಚುನಾವಣೆಗಳ ಅಬ್ಬರದಲಿ
ರಾಜಕೀಯಕ್ಕೆ ಹೊಸ ಮೆರಗು
ಹೇಳಿಕೆ ನೀಡುತ್ತಿದ್ದಾರೆ
ಭಾರತ ಪ್ರಕಾಶಿಸುತ್ತಿದೆ.

ಹೌದು
ಮಾರಿಕೊಂಡಿದ್ದಾರೆ ವಿದೇಶಿಯರಿಗೆ
ಲಾಭದಾಯಕ ಉದ್ದಿಮೆಗಳ
ಹರಾಜಿಗಿಟ್ಟಿದ್ದಾರೆ ಖಜಾನೆಗಳ
ಹೇಳುತ್ತಿದ್ದಾರೆ - ಭಾರತ ಪ್ರಕಾಶಿಸುತ್ತಿದೆ.

ಹೌದು
ಲಕ್ಷಾಂತರ ನಿರುದ್ಯೋಗಿಗಳು
ಕೈಗಾರಿಕೆಗಳು ಬಾಗಿಲು ಮುಚ್ಚಿ
ಬೀದಿ ಬೀದಿಯಲಿ ಭಿಕ್ಷಾಟನೆ
ಹೇಳುತ್ತಿದ್ದಾರೆ - ಭಾರತ ಪ್ರಕಾಶಿಸುತ್ತಿದೆ.

ಹೌದು
ರೈತರ ಮಾಲಿಗೆ ಬೆಲೆಯಿಲ್ಲ
ಅವರ ಕೊರಳಿಗೆ ಉರುಳು ನೀಡಿ
ಅನ್ನದಾತನ ಬೆನ್ನು ಮುರಿದು
ಹೇಳುತ್ತಿದ್ದಾರೆ - ಭಾರತ ಪ್ರಕಾಶಿಸುತ್ತಿದೆ.

ಹೌದು
ಕೋಮುವಾದಿ ದಂಗೆಗಳಲಿ
ಪ್ರಾಣ, ಮಾನ, ಮನೆ, ಬಂಧುಗಳನ್ನಗಲಿದ
ಮಾನಿನಿಯರು ಗೋಳಾಡುತ್ತಿದ್ದಾರೆ
ಹೇಳುತ್ತಿದ್ದಾರೆ - ಭಾರತ ಪ್ರಕಾಶಿಸುತ್ತಿದೆ.

ಹೌದು
ಗೋಮಾತೆಗೆ ಪೂಜಿಸಿರೆನ್ನುತ
ಹೆತ್ತ ಮಾತೆಯ ಗರ್ಭ ಸೀಳಿ
ಜೀವಂತ ಸುಡುವ ಭಂಡರು
ಹೇಳುತ್ತಾರೆ - ಭಾರತ ಪ್ರಕಾಶಿಸುತ್ತಿದೆ.

ಹೊಸ ಪುಸ್ತಕ



ಸ್ತ್ರೀ ಕಥನ

ಲೇ. ಡಾ|| ಶೈಲಜ ಹಿರೇಮಠ

ಬೆಲೆ: ರೂ. ೭೫/-

ಮಹಿಳಾ ಪರ ಸಾಂಸ್ಕೃತಿಕ ಹುಡುಕಾಟದಲ್ಲಿ ಬಹುಮುಖ್ಯವಾದ ಕೃತಿ ಇದು. ಮಹಿಳಾ ಚಳವಳಿ ಕೂಡ ಕೇವಲ ಮೇಲ್ವರ್ಗದ ಮಹಿಳೆಯರ ಹಿಡಿತದಲ್ಲಿ ಸಿಲುಕಿರುವ ಸಂದರ್ಭದಲ್ಲಿ ತಳಹಂತದ ನಿರ್ಲಕ್ಷಿತ ಮಹಿಳೆಯರನ್ನು ಚಳವಳಿ ಒಳಗೊಳ್ಳಬೇಕಾದ ಅನಿವಾರ್ಯತೆಯನ್ನು ಲೇಖಕಿ ಗಂಭೀರವಾಗಿ ಪ್ರತಿಪಾದಿಸುತ್ತಿದ್ದಾರೆ. ಸೂಕ್ಷ್ಮವಾಗಿ ಮತ್ತು ಒಳನೋಟಗಳ ಸಂಶೋಧನಾತ್ಮಕ ಬರವಣಿಗೆ ಈ ಕೃತಿಯ ಹೆಗ್ಗಳಿಕೆ.

ಪ್ರಕಾಶಕರು : ಭುವನ ಪ್ರಕಾಶನ ವಿದ್ಯಾರಣ್ಯ - ೫೮೩ ೨೭೬

ಜಾಗೃತಿ

ಲೇ. ಕೆ. ಚಿನ್ನಪ್ಪಭಾರತಿ, ಅನು: ಸುಶೀಲಾ

ಬೆಲೆ: ರೂ. ೧೨೫/-

ಇದು ಗುಡ್ಡಗಾಡು ಜನಾಂಗವೊಂದರ ನೋವಿನ ಪ್ರತಿಭಟನೆಯ ಮತ್ತು ಕ್ರಾಂತಿಕಾರಿ ಹೋರಾಟದ ವಿಕಾಸದ ಕಥೆ. ಪ್ರಗತಿಪರ ಸಾಹಿತ್ಯ ಮತ್ತು ಸಾಮೂಹಿಕ ಆಂದೋಲನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಲೇಖಕರು, ಆದಿವಾಸಿ ಜನರು ಲಾಭಕೋರ ಮನುಷ್ಯರ ಕುತಂತ್ರಗಳಿಗೆ ಬಲಿಯಾಗಿ ನರಳುವ ಚಿತ್ರವನ್ನು ಅತ್ಯಂತ ಸಮರ್ಥವಾಗಿ ಇಲ್ಲಿ ಬಿಂಬಿಸುತ್ತಾರೆ. ತಮಿಳಿನ ಕೃತಿಯನ್ನು ಸುಶೀಲ ಸಮರ್ಥವಾಗಿ ಕನ್ನಡಿಸಿದ್ದಾರೆ.

ಪ್ರಕಾಶಕರು : ಅಧ್ಯಯನ ಪ್ರಕಾಶನ, ಶಿರಸಿ, ಉತ್ತರ ಕನ್ನಡ



ತೆಂಕಲ ಕೇರಿ

ಲೇ. ಮಂಜುನಾಥ ಗೀತಾ

ಬೆಲೆ: ರೂ. ೫೦/-

ಹೊಸ ತಲೆಮಾರಿನ ಪ್ರಮುಖ ಕಥಾ ಲೇಖಕರಲ್ಲಿ ಮಂಜುನಾಥ ಗೀತಾ ಕೂಡ ಒಬ್ಬರು. ಕೆಳ ಸಮುದಾಯದ ನೋವು ಸಂಕಷ್ಟಗಳನ್ನು ನಿರ್ಲಿಪ್ತವಾಗಿ ಬಿಚ್ಚಿ ಇಡುವ ಅವರ ಕಥನ ಕಲೆ ಓದುಗರನ್ನು ಸೆಳೆಯುತ್ತದೆ.

ಕ್ರೌರ್ಯ ಮತ್ತು ಅಸಹಾಯಕತೆಯಲ್ಲೇ ಇಡೀ ಬದುಕು ಸವೆಸಬೇಕಾದ ಜನವರ್ಗದ ಹಸಿದ ಕಣ್ಣುಗಳಿಗೆ ಇಲ್ಲಿನ ಕಥೆಗಳಲ್ಲಿ ಉತ್ತರ ಹುಡುಕಬಹುದು. ಅಪ್ಪಟ ಗ್ರಾಮ್ಯ ಭಾಷೆ ಮತ್ತು ಸಂವೇದನೆಗಳು ಈ ಕೃತಿಯ ಮಹತ್ವವನ್ನು ಹೆಚ್ಚಿಸಿವೆ.

ಪ್ರಕಾಶಕರು : ಸಂವಹನ, ಶಿವರಾಂ ಪೇಟೆ, ಮೈಸೂರು - ೫೭೦ ೦೦೧



ತಲೆಮಾರು

ಲೇ. ಅಲೆಕ್ಸ್ ಹೇಲಿ

ಅನು: ಡಾ|| ಬಂಜಗೆರೆ ಜಯಪ್ರಕಾಶ್

ಬೆಲೆ: ರೂ. ೧೫೦/-

ನಿಗ್ರೋ ಜನಾಂಗದ ಮೇಲೆ ಬಿಳಿಯರು ಎಸಗಿದ ಅಮಾನವೀಯ ಆಕ್ರಮಣದ ಸತ್ಯ ಕಥೆಯನ್ನೊಳಗೊಂಡ ಕಾದಂಬರಿ ಇದು. ಅನೇಕ ಭಾಷೆಗಳಲ್ಲಿ ತರ್ಜುಮೆಗೊಂಡು ಪ್ರಪಂಚದ ಅದ್ಭುತ ಕಥನವಾಗಿ ಬೆಳೆದು ನಿಂತಿದೆ. ಅದನ್ನು ಅಷ್ಟೇ ಸಮಂಜಸವಾಗಿ ಕನ್ನಡಕ್ಕೆ ಕರೆದು ತಂದ ಹೆಗ್ಗಳಿಕೆ ಬಂಜಗೆರೆಯವರದು. 'ತಲೆಮಾರು' ಕಾದಂಬರಿಯನ್ನು ಓದಿದ ಯಾವ ಓದುಗರೇ ಆದರೂ ಬಂಜಗೆರೆಯವರಿಗೆ ಅಭಿನಂದನೆ ಸಲ್ಲಿಸುವುದನ್ನು ಮರೆಯುವುದಿಲ್ಲವೇನೋ ಎಂದೆನಿಸುತ್ತದೆ.

ಪ್ರಕಾಶಕರು : ಆನಂದಕಂದ ಗ್ರಂಥಮಾಲೆ, ಮಲ್ಲಾಡಿ ಹಳ್ಳಿ - ೫೭೭ ೫೫೧



ಮ್ಯಾಸ ಮಂಡಲ

ಲೇ. ಡಾ|| ಮೀರಾಸಾಬಿಹಳ್ಳಿ ಶಿವಣ್ಣ

ಬೆಲೆ: ರೂ. ೮೦/-

ವ್ಯಾಪಕ ಕ್ಷೇತ್ರ ಕಾರ್ಯಗಳ ಅಧ್ಯಯನದ ಫಲವಾಗಿ ಮೂಡಿಬಂದಿರುವ ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಕೃತಿ ಇದು. ನಮ್ಮ ನಡುವಿನ ಜಾನಪದ ಮತ್ತು ಬುಡಕಟ್ಟು ಸಂಸ್ಕೃತಿಯ ಗಂಭೀರ ಚಿಂತಕರಾದ ಲೇಖಕರು, ಜೀವಂತಿಕೆ ಹಾಗೂ ವಿಮರ್ಶಾತ್ಮಕ ಬರವಣಿಗೆಯ ಮೂಲಕ ಓದುಗರಿಗೆ ಹೊಸ ನೋಟಗಳನ್ನು ತೆರೆದು ಕೊಡುತ್ತಾರೆ. ಜಾನಪದ ಸಂಸ್ಕೃತಿ ಚಿಂತಕರು ಮತ್ತು ಆಧುನಿಕ ನೆಲೆಯಲ್ಲಿ ನೋಡಬಲ್ಲವರು ಓದಬೇಕಾದ ಕೃತಿ ಇದು.

ಪ್ರಕಾಶಕರು : ಕನ್ನಡ ಪುಸ್ತಕ ಪ್ರಾಧಿಕಾರ ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

ಉರ್ವಿ (ನಾಟಕ)

ಲೇ. ಆನಂದ್ ಋಗ್ವೇದಿ

ಬೆಲೆ: ರೂ. ೨೫/-

ಪೌರಾಣಿಕ ಸನ್ನಿವೇಶವೊಂದರ ವಿನ್ಯಾಸದಲ್ಲಿ ಸಮಕಾಲೀನ ಭಾರತವನ್ನು ಅನಾವರಣ ಮಾಡುವ ಕೃತಿ ಇದು. ಉರ್ವಿಯನ್ನು ಓದುತ್ತಿದ್ದಂತೆ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರ ಜಾರಿಗೆ ತರುವ ಯೋಜನೆಗಳ ಪರಿಣಾಮವಾಗಿ ಆದಿವಾಸಿಗಳು - ದಲಿತರು ನಾಶವಾಗುತ್ತಿರುವ ಚಿತ್ರ ಕಣ್ಣ ಮುಂದೆ ಸುಳಿಯುತ್ತದೆ. ವರ್ತಮಾನದ ಹಿಂಸೆ ಮತ್ತು ತಲ್ಲಣಗಳನ್ನು ಪೌರಾಣಿಕ ಹಿನ್ನೆಲೆಯಲ್ಲಿ ಪ್ರಸ್ತುತ ಪಡಿಸುವ ಈ ಕೃತಿ ರಂಗಭೂಮಿಗೆ ನೀಡಿದ ಕೊಡುಗೆ.

ಪ್ರಕಾಶಕರು : ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಕೃಷ್ಣಾಪುರದೊಡ್ಡಿ ಆರ್.ಪಿ.ಸಿ. ಬಡಾವಣೆ, ಬೆಂಗಳೂರು - ೫೬೦ ೦೪೦



ವಾಗ್ವಾದ

'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ' ಪತ್ರಿಕೆಯಲ್ಲಿ ಎಂ.ವಿ. ನಾಡಕರ್ಣಿ ಅವರು 'ಹಿಂದೂಧರ್ಮದಲ್ಲಿ ಜಾತಿ ಪದ್ಧತಿ ಇಲ್ಲ' ಎಂಬ ಲೇಖನವನ್ನು ಪ್ರಕಟಿಸಿದ್ದರು (ಇಪಿಡಬ್ಲ್ಯೂ ನವೆಂಬರ್ ೮, ೨೦೦೩). ಅದಕ್ಕೆ ಉತ್ತರವಾಗಿ ಗೇಲ್ ಓಮ್‌ವಿಡ್ತ್ ಅವರು ಇಪಿಡಬ್ಲ್ಯೂ ನಲ್ಲೇ ಉತ್ತರ ಬರೆದಿದ್ದರು. ನಾಡಕರ್ಣಿ ಅವರ ಲೇಖನದ ಅನುವಾದ 'ಹೊಸತು' ವಿನಲ್ಲಿ ಪ್ರಕಟವಾಗಿದೆ. ಸಾರ್ವಜನಿಕವಾಗಿ ನಾವು ನಂಬುವ ಮೌಲ್ಯಗಳು ಇತರ ಸಮುದಾಯಗಳ ಮೇಲೆ ಗಾಢ ದುಷ್ಪರಿಣಾಮಗಳಿಗೂ ಕಾರಣವಾಗಬಲ್ಲವಾದ್ದರಿಂದ ಅಂಥ ಮೌಲ್ಯಗಳನ್ನು ವಿಶ್ಲೇಷಣೆ ಮಾಡುವುದು ಅಗತ್ಯ ಎನಿಸಿ ಗೇಲ್ ಓಮ್‌ವಿಡ್ತ್ ಅವರ ಉತ್ತರವನ್ನು ಆರೋಗ್ಯಕರ ಸಂವಾದಕ್ಕಾಗಿ 'ಸಂವಾದ' ಓದುಗರಿಗಾಗಿ ನೀಡುತ್ತಿದ್ದೇವೆ.

○ ಗೇಲ್ ಓಮ್‌ವಿಡ್ತ್
ಅನು: ವಿ.ಕೆ

ಜಾತಿ ಮತ್ತು ಹಿಂದೂಧರ್ಮ

ಎಂ. ವಿ. ನಾಡಕರ್ಣಿಯವರ ಇತ್ತೀಚಿನ ಲೇಖನವಾದ 'ಜಾತಿ ಪದ್ಧತಿಯು ಹಿಂದೂಧರ್ಮಕ್ಕೆ ಸಹಜವೇ?: ಮಿಥ್ಯೆಯ ನಿರ್ಮೂಲನೆ' (ಇಪಿಡಬ್ಲ್ಯೂ, ನವೆಂಬರ್ ೮, ೨೦೦೩) ಯು 'ಮತಾಂತರಗಳ ನೈತಿಕತೆ ಮತ್ತು ಸೂಕ್ತತೆ : ಗಾಂಧಿಯನ್ ದೃಷ್ಟಿಕೋನದಲ್ಲಿ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳ ವಿಮರ್ಶಾತ್ಮಕ ನಿರ್ಧರಣೆ' (ಜನವರಿ ೧೮) ಎಂಬ ಅವರ ಮೊದಲಿನ ಲೇಖನವನ್ನು ಅನುಸರಿಸಿ ಬಂದಿದೆ. ಈ ಎರಡು ಲೇಖನಗಳು ಹಿಂದುತ್ವ ಐಡಿಯಾಲಜಿಯ ಪಡಿಯಚ್ಚಾಗಿದ್ದು ಮುಖ್ಯವಾಗಿ ಹುರುಳಿಲ್ಲದ ವಿಧಾನವನ್ನು, ಆಯ್ದ ಉದ್ಧರಣೆಯನ್ನು ಹೊಂದಿದ್ದು (ಉದಾಹರಣೆಗೆ, ೧೦ ವರ್ಷ ಹಳೆಯದಾದ ನನ್ನ ಪುಸ್ತಕದಿಂದ ತೆಗೆದುಕೊಂಡ ಉಲ್ಲೇಖಗಳು) ಮತ್ತು ಅತಾರ್ಕಿಕತೆಯನ್ನು ತೋರಿಸುತ್ತದೆ.

'ಜಾತಿ ಪದ್ಧತಿ' ಲೇಖನದಲ್ಲಿ ಅತಾರ್ಕಿಕತೆಯು ವಿವೇಚನಾ ರಹಿತ ವಾಗ್ವಾದಗಳನ್ನು ಮಂಡಿಸುತ್ತದೆ. ೪,೦೦೦ ವರ್ಷಗಳಿಂದಲೂ ಇತ್ತು ಎಂದು ಹೇಳಲಾಗುವ ಹಿಂದೂ ಧರ್ಮವು 'ಪ್ರಾಚೀನ' ಹಾಗೂ 'ಮಧ್ಯಕಾಲೀನ ಮತ್ತು 'ಆಧುನಿಕ' ರೂಪಗಳನ್ನು ಒಳಗೊಂಡಿದೆಯೆಂದು ಬಿಂಬಿಸಲಾಗುತ್ತಿದೆ. ಇದು ಅತ್ಯಂತ ಅಸಮರ್ಥನೀಯವಾದ ಚಾರಿತ್ರಿಕ ಆಧಾರವನ್ನು ಹೊಂದಿದ್ದು 'ಹಿಂದೂ' ಪರಿಕಲ್ಪನೆಯನ್ನು ಮುಸ್ಲಿಂ ಆಳ್ವಿಕೆಯು ಸ್ಥಾಪನೆಯಾಗುವವರೆಗೆ ಧಾರ್ಮಿಕ ನಂಬಿಕೆಗಾಗಿ ಬಳಸಿರಲೇ ಇಲ್ಲ. (ಭಾರತದ ಕೆಲವು ಭಾಗಗಳಲ್ಲಿ ಮಾತ್ರ ನಂತರ ಬಳಸಲಾಗುತ್ತಿತ್ತು. ಉದಾಹರಣೆಗೆ ತುಕಾರಾಂ ತನ್ನ ಎಲ್ಲ ೪,೭೦೦ ಅಬಂಗ್‌ಗಳಲ್ಲಿ ಈ ಪದವನ್ನು ಬಳಸಿರದಿದ್ದರೂ, 'ಹಿಂದೂ' ಭಕ್ತಿ ಸಂತರಲ್ಲಿ ಒಬ್ಬರೆಂದು ನಾಡಕರ್ಣಿಯವರು ಹೇಳಿದ್ದಾರೆ) ಮತ್ತು ಇದು ೧೯ನೇ ಶತಮಾನದವರೆಗೆ ಭಾರತದಾದ್ಯಂತ ಸಾಮಾನ್ಯ ಬಳಕೆಗೆ ಬಂದಿರಲಿಲ್ಲ.

ಈ ಬಗ್ಗೆ ಅನೇಕ ವಿದ್ವಾಂಸರು ದಾಖಲಿಸಿದ್ದಾರೆ. ನಾನಿಲ್ಲಿ ಅವರನ್ನು ಉದಾಹರಿಸಬೇಕಿಲ್ಲ. ನಾಡಕರ್ಣಿಯವರು ಗ್ರಹಿಸಿದ ಮತ್ತು ದಾಖಲಿಸಿದ ಅತಾರ್ಕಿಕತೆಯು ಹೇಗಿದೆಯೆಂದರೆ ಜಾತಿಯಲ್ಲಿನ ಬದಲಾವಣೆಗಳು ಸಾಮಾಜಿಕ ಚಾರಿತ್ರಿಕ ಸಂರಚನೆಯಾಗಿದೆ. (ಇದನ್ನು ನಾನು ಸರಿಯೆಂದು ಭಾವಿಸುತ್ತೇನೆ. ಆದರೆ ಹಿಂದೂ ಧರ್ಮದಲ್ಲಿ ಇದೆಯೆನ್ನುವ ದ್ರವ್ಯತೆಯ ಲಕ್ಷಣವನ್ನು ಅದೆಂದೂ ಪ್ರಶ್ನೆ ಮಾಡುವುದಿಲ್ಲ. (ಪ್ರಾಸಂಗಿಕವಾಗಿ ಬೌದ್ಧ, ಜೈನ ಮತ್ತು ಶ್ರಮನಿಕ) ಪರಂಪರೆಗಳನ್ನು ಹಿಂದೂ ಧರ್ಮದ ಭಾಗವಾಗಿ ಪರಿಗಣಿಸಬಹುದೇ ಎಂಬ ಬಗ್ಗೆ ನಾಡಕರ್ಣಿಯವರು ಮೌನವಾಗಿದ್ದಾರೆ)

ಈ ಮೂಲ ಪ್ರಶ್ನೆಯ ಮುಂದೆ ಇತರ ಅಪರಾಧಗಳು ಮಂಕಾಗುತ್ತವೆ. ಆದರೆ ನಾನು ಕೆಲವು ಸಂಗತಿಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಮೊದಲನೆಯದಾಗಿ, ಪುರುಷ ಸೂಕ್ತಕ್ಕೆ ಸಂಬಂಧಿಸಿದಂತೆ ಪ್ರಕ್ಷೇಪವಿದೆಯೆಂದು ಅಂಬೇಡ್ಕರ್ ಹೇಳಿದ್ದಾರೆಂದು ನಾಡಕರ್ಣಿಯವರು ಹೇಳಿದ್ದು, ಈ ಅಭಿಪ್ರಾಯವು ಅಂಬೇಡ್ಕರ್‌ರದ್ದು ಮಾತ್ರವಾಗಿರದೆ ಅನೇಕ ಸಂಸ್ಕೃತ ವಿದ್ವಾಂಸರ ಅಭಿಪ್ರಾಯವು ಹೌದು. ಬೇರೆ ಬೇರೆ ಪಠ್ಯಗಳು (ಧಾರ್ಮಿಕವಾಗಿರುವ ಅಥವಾ ಅಲ್ಲದಿರುವ) ಬೇರೆ ಬೇರೆ ಕಾಲಘಟ್ಟಗಳ ಮಾಹಿತಿಯನ್ನು ಒಳಗೊಂಡಿರುವುದು ಚಾರಿತ್ರಿಕವಾಗಿ ಅನಿವಾರ್ಯವಾದುದು ; ಪಠ್ಯವೊಂದನ್ನು ಅದರ ಕಾಲದ ಸಾಮಾಜಿಕ ಮತ್ತು ಭೌತಿಕ ಸ್ಥಿತಿಗತಿಗಳ ಚೌಕಟ್ಟಿನೊಳಗಿದ್ದು ನೋಡುವುದು, ಅದರ ಕಾಲ ನಿರ್ಧರಣೆ ಮಾಡುವುದು, ವಿದ್ವಾಂಸರ ದೃಷ್ಟಿಯಲ್ಲಿ ಮಹತ್ವದ ಕಾರ್ಯವಾಗಿರುತ್ತದೆ.

ನನ್ನ ತಿಳಿವಳಿಕೆಯ ಮೇರೆಗೆ ಋಗ್ವೇದದ ಉಳಿದ ಭಾಗಕ್ಕೆ ಪುರುಷ ಸೂಕ್ತವನ್ನು ತುಂಬಾ ತಡವಾಗಿ ಸೇರಿಸಲಾಗಿರುವುದನ್ನು ತೆಗೆದುಕೊಳ್ಳಲಾಗಿದೆ. (ವಿವರಣೆಗೆ ಸಂಬಂಧಿಸಿದಂತೆ 'ಪ್ರಕ್ಷೇಪ' ಪದವನ್ನು ಬಳಸಬಹುದೇ ?) ಋಗ್ವೇದ ಕಾಲವನ್ನು (ಅನೇಕ ವಿದ್ವಾಂಸರ ಪ್ರಕಾರ ೧೫೦೦ಬಿ.ಸಿ - ೧೦೦೦ ಬಿ.ಸಿ) ೪,೦೦೦ ವರ್ಷವೆಂದು ಸಾಬೀತು ಮಾಡುವುದನ್ನು ಅದು (ಕೃತಿ) ಸಮರ್ಥಿಸಿಕೊಳ್ಳುವುದಿಲ್ಲ. ನಾನು ಇತ್ತೀಚಿನ ನನ್ನ ಪುಸ್ತಕವಾದ 'ಭಾರತದಲ್ಲಿ ಬೌದ್ಧಧರ್ಮ ; ಬ್ರಾಹ್ಮಣ್ಯ ಮತ್ತು ಜಾತಿಗೊಂದು ಸವಾಲು' (ಸೇಜ್ ಇಂಡಿಯಾ, ೨೦೦೩) -ಇದರಲ್ಲಿ ಜಾತಿಯು (ವರ್ಣಾಶ್ರಮ ಧರ್ಮದ ಮೊದಲ ಸಹಸ್ರಮಾನದ ಮಧ್ಯಕಾಲದ ಪರಿಕಲ್ಪನೆಯಾಗಿ ಉದ್ಭವವಾಗಿದೆ. ಮೊದಲಿಗದು ಸಾಮಾಜಿಕ ಸಂರಚನೆಯ ವಾಸ್ತವವಾಗಿರದೆ, ಉದಯಿಸುತ್ತಿರುವ ಸಾಮಾಜಿಕ ವ್ಯವಸ್ಥೆಯ ನಿರ್ದೇಶನಾತ್ಮಕ ತತ್ವವಾಗಿತ್ತು ಅಷ್ಟೇ ಎಂದು ನಾನು ವಾದಿಸಿದ್ದೇನೆ.

ಸುಮಾರು ಒಂದು ಸಹಸ್ರಮಾನದವರೆಗೆ ಸಮಾಜದ ಸ್ವರೂಪವು ಹೇಗಿರಬೇಕೆಂಬುದರ ಬಗ್ಗೆ ಬ್ರಾಹ್ಮಣಿಕ ಪರಂಪರೆ (ವರ್ಣಾಶ್ರಮ ಧರ್ಮವನ್ನು ಸಮರ್ಥಿಸುವ) ಮತ್ತು ಶ್ರಮನಿಕ ಪರಂಪರೆ, ಆದರೆ ವಿಶೇಷವಾಗಿ ಬೌದ್ಧಧರ್ಮದ, ನಡುವೆ ಯುದ್ಧ ನಡೆದಿತ್ತು. ಈ ಅವಧಿಯ ವಾಸ್ತವಿಕ ಸಾಮಾಜಿಕ ಪರಿಸ್ಥಿತಿಯು ನಾಡಕರ್ಣಿಯವರು ಕರೆಯುವ 'ಹಿಂದೂ ಧರ್ಮ'ವನ್ನು ಸಮರ್ಥಿಸುತ್ತದೆನ್ನುವುದು ಅರ್ಥಹೀನವಾದುದು. ವಾಸ್ತವಿಕವಾಗಿ ಅವರು ಬ್ರಾಹ್ಮಣ ಶ್ರುತಿಗಳಿಂದ ಮಾತ್ರ ತೆಗೆದುಕೊಂಡಿದ್ದಾರೆ. ಬಹುಮುಖ್ಯವಾದ ಸಮಸ್ಯೆಯೆಂದರೆ, ವರ್ಣ ಗುಂಪುಗಳಿಗೆ ಕೊಟ್ಟ ಗೀತೆಯ ಸಮರ್ಥನೆಯು ಹುಟ್ಟಿನ ಆಧಾರವಾಗಿದೆಯೇ ಅಥವಾ 'ಅರ್ಹತೆ' ಆಧಾರವಾಗಿದೆಯೇ ಎಂಬುದನ್ನು ಅರ್ಥೈಸುವಂಥದ್ದಾಗಿದೆ. ನಾಡಕರ್ಣಿಯವರು ವಾದಿಸುವುದೇನೆಂದರೆ, ಹಿಂದುತ್ವದ ಎಲ್ಲ ಆಧುನಿಕ ಐಡಿಯಾಲಜಿಗಳು ಅರ್ಹತೆಯ ಮೂಲವನ್ನು ಕುರಿತದ್ದೇ ಆಗಿವೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಗಾಂಧಿಯು ಕಷ್ಟ ಜೀವಿತದ ಕೊನೆಯಲ್ಲಿ ಅದನ್ನು ಮಾಡಿದ್ದರಷ್ಟೇ. (ಗಾಂಧಿಯವರು ಕಾಲಾನುಕ್ರಮದಲ್ಲಿ ಬಂದಿರುವ ಕುಲಕಸುಬನ್ನು ಅನುಸರಿಸಿ, 'ಸ್ವಧರ್ಮ'ವನ್ನು ಬೆಂಬಲಿಸಿದ್ದರು -ಅದನ್ನು ಬದಿಗಿಡಿ) ಪ್ರಾಚೀನ ಪಠ್ಯಗಳು ಇದನ್ನೇ ಹೇಳುತ್ತದೆಯೆಂದು ನಾನು ನಂಬಲಾರೆ. ಹಾಗೇನಾದರೂ ಅದು ಈ ಸಂಗತಿಯನ್ನು ಪ್ರತಿಪಾದಿಸಿದಲ್ಲಿ ಕೆಲವು ರೀತಿಯ ಪೂರ್ವಭಾವಿತ 'ಅರ್ಹತೆ' ಮತ್ತು 'ಗುಣ'ಕ್ಕನುಸಾರವಾಗಿ ಕೆಲವು ಕಾರ್ಯ, ಜವಾಬ್ದಾರಿಗಳು ಮತ್ತು ಹಕ್ಕುಗಳನ್ನು ಯಾವುದೇ ಕಾಲದಲ್ಲಾದರೂ ಜನರಿಗೆ ಆರೋಪಿಸುವುದು ಮತ್ತು ಅವರನ್ನು ಭಿನ್ನವಾಗಿ ನೋಡುವುದು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ವಿರೋಧಿಯಾದುದು. ಮುಖ್ಯವಾಗಿ, ಶ್ರಮಜೀವಿಗಳು ಓದುವುದಕ್ಕೆ ಅನರ್ಹರು ಅಥವಾ ಕೆಲವು ಮೌಲ್ಯಯುತ ಧಾರ್ಮಿಕ ಪಠ್ಯಗಳನ್ನು ಓದುವುದಕ್ಕೆ ಅನರ್ಹರು. ಹಾಗೇನಾದರೂ ಅವರು ಮಾಡಿದಲ್ಲಿ ಅವರು ಶಿಕ್ಷಾರ್ಹರಾಗುತ್ತಾರೆ ಎನ್ನುವುದಕ್ಕೆ ಯಾವುದೇ ಪ್ರಜಾಸತ್ತಾತ್ಮಕ ಸಮಾಜವು ಕಾನೂನು ರೂಪಿಸಲಾದೀತೆ ? ಬ್ರಾಹ್ಮಣರೆಂದು ಕರೆಯಲಾಗದ ಜನರು (ಅರ್ಹತೆ ಮೂಲಕ ಅಥವಾ ಅರ್ಹತೆಯಿದ್ದು) ಕಲಿಸುವುದನ್ನು ಅಥವಾ ಅಂಥ ಪಠ್ಯಗಳ ಬಗ್ಗೆ ವಾದಿಸುವುದನ್ನು ನಿಷೇಧಿಸುವ ಕಾನೂನನ್ನು ಯಾವುದೇ ಪ್ರಜಾಪ್ರಭುತ್ವ ಸಮಾಜವು ಮಾಡಬಹುದೇ ? ಹುಟ್ಟಿನ ಮೂಲಕದ ವರ್ಣದಂತೆ ಅರ್ಹತೆಯಿಂದ ಮೂಲಕದ ವರ್ಣವು ಅಸಹ್ಯಕರವಾದ ಪರಿಕಲ್ಪನೆಯಾಗಿದೆ. ನಾಡಕರ್ಣಿಯವರು ಮಹಿಳೆಯ ಬಗ್ಗೆ ಹೇಳುವುದಿಲ್ಲ. ಯಾಕೆಂದರೆ ಇದರಿಂದ ಬಹುಮಟ್ಟಿಗೆ ಏನನ್ನು ಸಮರ್ಥಿಸಲಾಗದಂತಾಗುತ್ತದೆ.

ಆಕಸ್ಮಿಕವೆಂದರೆ, ನಾಡಕರ್ಣಿಯವರು ಉದ್ಧರಿಸಿದ ಗೀತೆಯ ಪ್ರಕರಣಗಳು (IV : 13, II : 31, XVIII : 47) ನನ್ನ ಓದಿನ ಮೇರೆಗೆ ಅತ್ಯಂತ ವರ್ಣಪರವಾದುದು, ಅನಿವಾರ್ಯವಲ್ಲ. ನಾನು XVIII : 41 - 47 ರ ಇಡೀ ಸರಣಿಯನ್ನೇ ಉಲ್ಲೇಖಿಸುತ್ತೇನೆ. ಇದು I : 40 - 47 ರ

ಶ್ಲೋಕಗಳಿಗಿಂತ ಕೆಟ್ಟದಾಗಿದೆ. ವರ್ಣ ಸಂಕರಣವು (ವರ್ಣಗಳ ಮಿಶ್ರಣ) ಕುಟುಂಬದ ನಾಶಕ್ಕೆ ಕಾರಣವಾಗುತ್ತದೆ ಮತ್ತು ಇಬ್ಬರ ನರಕಕ್ಕೂ ಕಾರಣವಾಗುತ್ತದೆ ಎಂದು ಇದು ಹೇಳುತ್ತದೆ. ಇಂಥ ಶ್ಲೋಕಗಳು ಕೇವಲ ವಿವರಣೆ ಕೊಟ್ಟಲ್ಲಿ ಏನನ್ನೂ ಹೇಳಿದಂತಾಗುವುದಿಲ್ಲ. ಅವುಗಳನ್ನು ಒಪ್ಪಬಹುದೇ ಅಥವಾ ಒಪ್ಪಬಾರದೇ ಎಂದು ಒಬ್ಬ ವ್ಯಕ್ತಿ ಹೇಳಬಹುದು. ನಾಡಕರ್ಣಿಯವರಿಗೆ ಬ್ರಾಹ್ಮಣವಾದದ 'ನಿಯಮಾವಳಿ'ಯ ಬಗ್ಗೆ ಅಂಥ ಭಾವನಾತ್ಮಕ 'ಅಸಮ್ಮತಿ' ಇದ್ದರೂ ಸಹ ಅವುಗಳು ಅನೇಕವಿದ್ದು ಇಂದಿಗೂ ಯಾಕೆ ಅವುಗಳನ್ನು ಹಿಡಿದಿಟ್ಟುಕೊಳ್ಳಲಾಗಿದೆ ?

ಧಮ್ಮ ಪದದಲ್ಲಿ ಅಥವಾ ಸಾಂಖ್ಯ ತತ್ವಶಾಸ್ತ್ರದಲ್ಲಿ ಕಂಡುಬಾರದ್ದು ಗೀತೆಯಲ್ಲಿ ಏನಿದೆ ? ನಿರ್ದಿಷ್ಟವಾಗಿ ಗೀತೆಯನ್ನು ಮಾತ್ರ ಯಾಕೆ ಪವಿತ್ರ ಗ್ರಂಥವೆಂದು ಪರಿಗಣಿಸಲಾಯಿತು ? ಗೀತೆ ಅಲ್ಲದಿದ್ದರೆ ನಾಡಕರ್ಣಿಯವರು ಬೇರೆ ಪಠ್ಯಗಳನ್ನು ಶಿಫಾರಸ್ಸು ಮಾಡುತ್ತಾರೆ ?

ಭಕ್ತಿಯ ಸಂಗತಿಯನ್ನು ಎತ್ತಿಕೊಂಡು ನಾಡಕರ್ಣಿಯವರು ಹಿಂದೂ ಧರ್ಮದ ಚೌಕಟ್ಟಿನೊಳಗೆ ಜಾತೀಯತೆಯ ವಿರುದ್ಧ ಹೋರಾಡಲು ಅತ್ಯಂತ ಮಹತ್ವದ ಚಳವಳಿಯಾಗಿದೆ' ಎಂದು ಹೇಳುತ್ತಾರೆ. ಆದರೆ, ನಾವು ಎಲ್ಲ ಭಕ್ತಿಸಂತರನ್ನು ಒಂದೇ ವ್ಯವಸ್ಥೆಯೊಳಗೆ, ಒಂದೇ ಧರ್ಮದೊಳಗೆ, ಒಂದೇ ಚೌಕಟ್ಟಿನೊಳಗೆ ವರ್ಗೀಕರಣ ಮಾಡುವ ಪ್ರವೃತ್ತಿಯ ವಿರುದ್ಧ ಎಚ್ಚರದಿಂದಿರಬೇಕಾಗುತ್ತದೆ. ಸಂಪ್ರದಾಯಸ್ಥ ಸಾಂಸ್ಥೀಕೃತಗೊಂಡ ವರ್ಗವೂ ಇದೆ. ಇದರಲ್ಲಿ ಅನೇಕರು ಹಣ ಮತ್ತು ಅಧಿಕಾರದ ನಿಯಂತ್ರಣ ಹೊಂದಿದವರು. ಎರಡು ಉದಾಹರಣೆಗಳನ್ನು ತೆಗೆದುಕೊಳ್ಳುವುದಾದರೆ, ಉತ್ತರಭಾರತ ವಲ್ಲಭರು, ಮಹಾರಾಷ್ಟ್ರದಲ್ಲಿನ ರಾಮದಾಸಿಗಳು. ನಾನು ಕ್ರಾಂತಿಕಾರಿ ಭಕ್ತಿ ಸಂತರೆಂದು ಕರೆಯುವ – ಕಬೀರ್, ರವಿದಾಸ್, ಮೀರಾ ಮತ್ತು ಮಹಾರಾಷ್ಟ್ರದ ತುಕಾರಾಂ, ಚೋಕಾಮೇಲ, ನಾಮದೇವ್, ಧ್ಯಾನ್‌ದೇವ್ – ಇವರುಗಳು ಸ್ವಲ್ಪ ಭಿನ್ನರು. ಕಬೀರ್ ತನ್ನನ್ನು 'ಹಿಂದೂ' ಮತ್ತು 'ಮುಸ್ಲಿಂ' (ಸಾಮಾನ್ಯವಾಗಿ ಅವರನ್ನು ತುರ್ಕರೆಂದು ಕರೆದಿದ್ದಾನೆ) ಇಬ್ಬರಿಂದಲೂ ಸ್ಪಷ್ಟವಾಗಿ ಪ್ರತ್ಯೇಕಿಸಿಕೊಂಡಿದ್ದ ಹಾಗೇ ನಾನಕ್ ಕೂಡ. ಆದ್ದರಿಂದ ನಾಡಕರ್ಣಿಯವರು ಅವನನ್ನು 'ಹಿಂದೂಧರ್ಮ'ದ ಭಾಗವೆಂದು ಪರಿಗಣಿಸುವುದಿಲ್ಲ.

ತುಕ ಮುಖ್ಯವಾಗಿ ವಿಠೋಬ ಅಥವಾ ವಿಠಲನ ರೂಪದ ಬಗ್ಗೆ ಮಾತಾಡಿದ್ದಾನೆ. ಆದರೆ ವರ್ಕರಿಗಳಿಗಾಗಿ, 'ವಿಷ್ಣುದಾಸ್' ಅಥವಾ 'ವೈಷ್ಣವ ವೀರ್' ಪದವನ್ನು ಬಳಸುವಾಗ, ಅನೇಕ ಮುಸ್ಲಿಮರನ್ನು ಒಳಗೊಂಡು ಮತ್ತು ಬ್ರಾಹ್ಮಣ ಸಂಸ್ಕಾರಗಳನ್ನು ಮತ್ತು ಅದ್ವೈತ ತತ್ತ್ವಶಾಸ್ತ್ರವನ್ನು ಅನುಸರಿಸುವ ಪಂಡಿತರನ್ನು ಹೊರತುಪಡಿಸಿ ಬಳಸಿದ್ದಾನೆ. ವರ್ಕರಿಗಳಿಗಲ್ಲದೆ, 'ಇತರರ' ಬಗ್ಗೆ ಹೇಳುವಂತೆ ಧರ್ಮ ಮತ್ತು ಕರ್ಮದ ಅನೇಕ ಅಭಂಗಗಳಿವೆ. ವಾಸ್ತವವೆಂದರೆ ಚೋಕಾ ಮೇಲನು ಸಣ್ಣ ವಯಸ್ಸಿನಲ್ಲೇ ತನ್ನ ಜಾತಿ ಕರ್ತವ್ಯವನ್ನು ಮಾಡುತ್ತಿರುವಾಗಲೇ ಅದರಿಂದ ತಪ್ಪಿಸಿಕೊಳ್ಳಲಾಗದೆ ಸತ್ತ.

ತುಕನ ಹಸ್ತ ಪ್ರತಿಗಳನ್ನು ಶೂದ್ರನೆಂಬ ಕಾರಣಕ್ಕಾಗಿ ನೀರಿಗೆಸೆಯಲಾಯಿತು. ಯಾಕೆಂದರೆ ಬರೆಯುವುದಾಗಲಿ ಅಥವಾ ಬೋಧಿಸುವುದಾಗಲಿ ಆತನಿಗೆ ನಿಷೇಧವಾಗಿತ್ತು. ಅಲ್ಲದೆ, ಅಂತಿಮವಾಗಿ ಆತನ ತನ್ನ ಸಂಪ್ರದಾಯಸ್ಥ ವಿರೋಧಿಗಳಿಂದ ಕೊಲೆಗೀಡಾದುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. (ಭಾರತ ಪಾಟಂಕರ್ ಮತ್ತು ನಾನು ಅನುವಾದಿಸಿದ ತುಕನ ಪದ್ಯಗಳನ್ನು ನೋಡಿ.) 'ತುಕನ ಹೇಳಿಕೆಗಳು.... ಕ್ರಾಂತಿಕಾರಿ ಭಕ್ತನ ಹಾಡುಗಳು'. ಕ್ರಿಟಿಕಲ್ ಏಷ್ಯನ್ ಸ್ಟಡೀಸ್ ೩೩, ೨, ಜೂನ್ ೨೦೦೩ (ಮುನ್ನುಡಿಯೊಂದಿಗೆ ಮರಾಠಿಯಿಂದ ಅನುವಾದಗಳು) ಕ್ರಾಂತಿಕಾರಿ ಸಂತರು ಜಾತಿ, ಅಸ್ಪೃಶ್ಯತೆ ಹಾಗೂ ಇತರ ಹೀನ ಪ್ರವೃತ್ತಿಗಳ ಬಗ್ಗೆ ಮಾಡಿದ ವಿರೋಧವನ್ನು ಪ್ರಗತಿಪರ ಹಾಗೂ ಸುಧಾರಣಾವಾದಿ ಎಂದು ಹೇಳಲಾಗುವ 'ಹಿಂದೂ ಧರ್ಮ' ಕ್ಕೆ 'ಆಧಾರ' ಎಂಬುದಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಜಾತಿಯು ನಿರ್ನಾಮವಾಗುತ್ತದೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ. ಖಂಡಿತವಾಗಿ, ಆಧುನಿಕ ಪ್ರಜಾಸತ್ತಾತ್ಮಕ ಸಂದರ್ಭದಲ್ಲಿ ತುಂಬಾ ಕಷ್ಟಕರ ವಾಗಿ ಮತ್ತು ಅಸಾಧ್ಯವೆಂದು ತೋರುವ ಜಾತಿ ಪದ್ಧತಿಯು ಒಂದು ಕಡೆ ಅದರ ಚಾರಿತ್ರಿಕ ರೂಪವು ಸಹ ಖಂಡಿತವಾಗಿ ಅಗೋಚರವಾಗುತ್ತದೆ. ಇದೇ ಸಮಯದಲ್ಲಿ 'ರೂಪಗಳು' ಅಥವಾ 'ಪಳೆಯುಳಿಕೆಗಳು ಅಥವಾ ನಾಡಕರ್ಣಿಯವರು ಅಥವಾ ಇತರರು ಏನೆಂದಾದರೂ ಕರೆಯಲಿ' – 'ಜಾತಿ ಅನನ್ಯತೆ' ಮತ್ತು 'ದೈವ'ಗಳೆಂದು ಅವರು ಪದಗಳನ್ನು ಉಪ ಯೋಗಿಸಿದರಾದರೂ ಅವುಗಳೇನೂ ವಾಸ್ತವ ಸಂಗತಿಗಳಾಗಿ ಉಳಿದಿಲ್ಲ. ಈ ಪಳೆಯುಳಿಕೆಗಳ ಮತ್ತು ಅವಶೇಷ ರೂಪಗಳ ಬಗ್ಗೆ ಅವರ ಸ್ಪಷ್ಟ ನಿಲುವೇನು ?

'ಆಧುನಿಕ' ಕಾಲಕ್ಕೆ ಬಂದಾಗ ಸುಧಾರಣಾ ನೀತಿಗಳ ಮೂಲಕ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡ ಎಳವ ಮತ್ತು ನಾಡಾರರನ್ನು ದಲಿತರಿಗೆ ಉದಾಹರಣೆಯಾಗಿ ತೆಗೆದುಕೊಳ್ಳುವುದು ಘೋರ ಅಪರಾಧವಾಗುತ್ತದೆ. ಕೇರಳದಲ್ಲಿರುವ ಪುಲಯ ಮತ್ತು ಚೆರುಮನ್ನರು ಅಥವಾ ತಮಿಳುನಾಡಿನಲ್ಲಿರುವ ಪರಯ ಮತ್ತು ಪಲ್ಲಾರರಂತೆ ಎಳವ (ತಿಯಾರೆಂದು ಸಹ ಕರೆಯುತ್ತಾರೆ) ಮತ್ತು ನಾಡಾರರು ಅಸ್ಪೃಶ್ಯರೆಂದೂ ಆಗಲಾರರು. ಇವರು ಕೆಳಹಂತದ ಹಿಂದುಳಿದ ಜಾತಿಗಳಿಗೆ ಸೇರಿದವರು. ಇವರಲ್ಲಿ ಅನೇಕರು ಆಧುನಿಕ ಬದಲಾವಣೆಗಳಿಂದ ಪ್ರಯೋಜನ ಪಡೆದಿದ್ದಾರೆ. ಪರಿಶಿಷ್ಟ ಜಾತಿಗಳಿಂದ ಮೇಲಿರುವ ಮತ್ತು ಮೇಲ್ಜಾತಿ ಶೂದ್ರರಿಂದ ಮತ್ತು ದ್ವಿಜ ವರ್ಗಗಳಿಂದ ಕೆಳಗಿರುವ –ಮುಂಚಿನಂತೆ ಅದೇ ಶ್ರೇಣೀಕೃತ ಸ್ಥಾನದಲ್ಲಿ ಉಳಿದಿರುವ ಇವರು ಸಾಮಾಜಿಕ ಗುಂಪುಗಳೆಂಬುದು ಇನ್ನೂ ಎದ್ದು ಕಾಣುವ ಸತ್ಯವಾಗಿದೆ.

ಅಂತಿಮವಾಗಿ ಜಾತಿಯು ನಿರ್ನಾಮವಾಗುತ್ತದೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ. ಖಂಡಿತವಾಗಿ, ಆಧುನಿಕ ಪ್ರಜಾಸತ್ತಾತ್ಮಕ ಸಂದರ್ಭದಲ್ಲಿ ತುಂಬಾ ಕಷ್ಟಕರವಾಗಿ ಮತ್ತು ಅಸಾಧ್ಯವೆಂದು ತೋರುವ ಜಾತಿ ಪದ್ಧತಿಯು ಒಂದು ಕಡೆ ಅದರ ಚಾರಿತ್ರಿಕ ರೂಪವು ಸಹ ಖಂಡಿತವಾಗಿ ಅಗೋಚರವಾಗುತ್ತದೆ. ಇದೇ ಸಮಯದಲ್ಲಿ 'ರೂಪಗಳು' ಅಥವಾ 'ಪಳೆಯುಳಿಕೆಗಳು ಅಥವಾ ನಾಡಕರ್ಣಿಯವರು ಅಥವಾ ಇತರರು ಏನೆಂದಾದರೂ ಕರೆಯಲಿ' – 'ಜಾತಿ ಅನನ್ಯತೆ' ಮತ್ತು 'ದೈವ'ಗಳೆಂದು ಅವರು ಪದಗಳನ್ನು ಉಪಯೋಗಿಸಿದರಾದರೂ ಅವುಗಳೇನೂ ವಾಸ್ತವ ಸಂಗತಿಗಳಾಗಿ ಉಳಿದಿಲ್ಲ. ಈ ಪಳೆಯುಳಿಕೆಗಳ ಮತ್ತು ಅವಶೇಷ ರೂಪಗಳ ಬಗ್ಗೆ ಅವರ ಸ್ಪಷ್ಟ ನಿಲುವೇನು ? ಆರ್ಥಿಕ ಕ್ಷೇತ್ರದಲ್ಲಿ ಸಕಾರಾತ್ಮಕ ಕ್ರಿಯೆಯ (ಮೀಸಲಾತಿ) ಕಾರ್ಯಕ್ರಮಗಳ ಅವಶ್ಯಕತೆ ಇನ್ನೂ ಇದೆಯೇ ಎಂಬುದರ ಬಗ್ಗೆ ಅವರಿಗೆ ಸಮ್ಮತಿ ಇದೆಯೇ ಅಥವಾ ಇಲ್ಲವೇ? ಅತ್ಯಧಿಕ ಲಾಭದಾಯಕವಾಗಿರುವ ಬಹುತೇಕ 'ಹಿಂದೂ' ದೇವಾಲಯಗಳಲ್ಲಿ ವಂಶಪಾರಂಪರ್ಯವಾದ ಬ್ರಾಹ್ಮಣ ಪೌರೋಹಿತ್ಯದ ಯಾಜಮಾನ್ಯವನ್ನು ಮುಂದುವರಿಸುವ ಬಗ್ಗೆ ಸಮ್ಮತಿ ಇದೆಯೇ ಅಥವಾ ಇಲ್ಲವೇ? ಇದನ್ನು ನಿರ್ಮೂಲ ಮಾಡಬೇಕೆನ್ನುವುದರ ಬಗ್ಗೆ ಖಚಿತ ನಿಲುವೇನು?

ಗಾಂಧಿಯ ನಿರ್ದಿಷ್ಟ ಉದಾಹರಣೆಗಳೊಂದಿಗೆ ಮತಾಂತರಕ್ಕೆ ವಿರೋಧವನ್ನು ನಾಡಕರ್ಣಿಯವರು ತನ್ನ ಜನವರಿ ೧೮ರ ಲೇಖನದಲ್ಲಿ ಸಮರ್ಥಿಸಿದ್ದರು. ಮತಾಂತರ ವಿರುದ್ಧ ವಾದಿಸುವುದಕ್ಕೆ ಅನೇಕ ಕಾರಣಗಳಿರಬಹುದು. ಅದನ್ನು ನಿಷೇಧಿಸುವ ಯಾವುದೇ ಕಾನೂನನ್ನು ಅಥವಾ 'ಮತಾಂತರ'ವಾಗುವ ಜನರ (ನಿರ್ದಿಷ್ಟ ಧರ್ಮವನ್ನು ಅಥವಾ ಧರ್ಮದೊಳಗಿನ ನಿರ್ದಿಷ್ಟ ಗುಂಪನ್ನು ಅನುಸರಿಸಲು ಆಯ್ಕೆ ಮಾಡುವವರು) ವಿರುದ್ಧ ತಾರತಮ್ಯವನ್ನು ಇದು ಸಮರ್ಥಿಸುವುದಿಲ್ಲ. ಕಾನೂನುಗಳು ಇತರರ ಹಕ್ಕುಗಳನ್ನು ಉಲ್ಲಂಘಿಸುವ ಪದ್ಧತಿಗಳನ್ನು ಮಾತ್ರ ನಿಷೇಧಿಸುತ್ತದೆ. ಇಲ್ಲದಿದ್ದರೆ ಧಾರ್ಮಿಕ ದೃಷ್ಟಿಯ ಪ್ರಚಾರವು ರಾಜಕೀಯ ದೃಷ್ಟಿಯ ಪ್ರಚಾರದಂತೆ ಮೂಲಭೂತ ಹಕ್ಕಾಗಿದೆ.

ನಾಡಕರ್ಣಿಯವರು ಇಸ್ಲಾಂ ಹಾಗೂ ಕ್ರೈಸ್ತ ಧರ್ಮದೊಳಗೂ ಪ್ರತಿಗಾಮಿತನ, ಪ್ರಗತಿಪರರು ಹಾಗೂ ಪ್ರಜಾಸತ್ತಾತ್ಮಕ ಪ್ರವೃತ್ತಿಗಳಿವೆ ಎಂದು ಬರೆದಿದ್ದಾರೆ. ಇದು ಸತ್ಯ. ನಾನು (ಮತ್ತು ಅನೇಕರು) ಈ ಧರ್ಮಗಳಲ್ಲಿರುವ ಪ್ರಜಾಸತ್ತಾತ್ಮಕ ಪರಂಪರೆಗೆ ಬೆಂಬಲ ಕೊಡುತ್ತೇನೆ. ಹಾಗೆಯೇ ಪ್ರತಿಗಾಮಿತನವನ್ನು ವಿರೋಧಿಸುತ್ತೇನೆ. ಅದೇ ರೀತಿಯಲ್ಲಿ 'ಹಿಂದೂ ಧರ್ಮ' ತನ್ನನ್ನು ತಾನು ಧಾರ್ಮಿಕ 'ಹಿಂದೂ' ಎಂದು ಕರೆದುಕೊಳ್ಳುವ ಹಕ್ಕನ್ನು ಖಂಡಿತ ಬೆಂಬಲಿಸುತ್ತೇನೆ. ಉಳಿದಂತೆ, 'ಹಿಂದೂಧರ್ಮ' ಎಂಬುದಾಗಿ ಪರಿಗಣಿಸಲು ಅವರು ತೆಗೆದುಕೊಂಡ ನಿಲುವು ಯಾವ ಬಗೆಯದು ಎಂಬುದನ್ನು ಅವಲಂಬಿಸಿದೆ : ಅವರು ಸಕಾರಾತ್ಮಕ ಕ್ರಿಯೆಯನ್ನು ಬೆಂಬಲಿಸುತ್ತಾರೆಯೇ ಅಥವಾ ಎಲ್ಲ ಹಂತಗಳಲ್ಲಿ ವೈವಿಧ್ಯಮಯ ಕಾರ್ಯಗಳನ್ನು ಬೆಂಬಲಿಸುವರೇ? ದೇವಾಲಯಗಳಿಂದ ವಂಶಪಾರಂಪರ್ಯ ಪೌರೋಹಿತ್ಯವನ್ನು ನಿರ್ಮೂಲನೆ ಮಾಡುವುದನ್ನು ಅವರು ಬೆಂಬಲಿಸುತ್ತಾರೆಯೇ ? ಯಾವ ಧರ್ಮವನ್ನು ಅನುಸರಿಸಬೇಕೆಂದು ಆಯ್ಕೆಮಾಡುವ ಜನತೆಯ ಹಕ್ಕನ್ನು ಬೆಂಬಲಿಸುತ್ತಾರೆಯೇ ? ನಾನು ಉತ್ತರಕ್ಕಾಗಿ ಕಾಯುತ್ತೇನೆ.

ಕಾಲವು ಗುಲಾಮಗಿರಿಗೆ ತಳ್ಳಿದೆ
ಭ್ರಮಾತ್ಮಕ ಬಂಧನಗಳಿಂದ ನಾವು ಸ್ವತಂತ್ರರಾಗುವೆವು
ಪ್ರತಿಯೊಬ್ಬರು ಶಕ್ತಿಯುತರು ಮತ್ತು ಸಂಪದ್ಭರಿತರು
ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಚಂಡಾಲ
ಎಲ್ಲರಿಗೂ ಹಕ್ಕುಗಳಿವೆ
ಮಹಿಳೆ, ಮಕ್ಕಳು, ಗಂಡು ಮತ್ತು ಹೆಣ್ಣು ಹಾಗು
ವೇಶ್ಯಯರಿಗೂ ಕೂಡಾ
–ತುಕ (ತುಕಾರಾಂ),
೧೭ನೇ ಶತಮಾನದ ಮರಾಠಿ ಸಂತ

ಕಾಳಜಿ

ದಲಿತ ಚಳವಳಿ:
ಅಗತ್ಯ ಮತ್ತು ಔಚಿತ್ಯ

ಅರವಿಂದ ಚೊಕ್ಕಾಡಿ

ಬಹುಶಃ ಮತೀಯವಾದ ಮತ್ತು ಜಾಗತೀಕರಣ ಎನ್ನುವ ಸಂಗತಿಗಳು ಇಡೀ ವ್ಯವಸ್ಥೆಯನ್ನು ವಿಚಿತ್ರ ಚಿಂತನೆಗೆ ಹಚ್ಚಿವೆ. ಸೋವಿಯತ್ ರಷ್ಯಾ ಬಿದ್ದೊಡನೆ ಇಡೀ ಕಮ್ಯುನಿಸ್ಟ್ ಫಿಲಾಸಫಿಯೇ ಸತ್ತುಹೋಯಿತು ಎನ್ನುವ ಅರ್ಥದಲ್ಲಿ ಮಾತನಾಡುವ ಮಂದಿಗೆ ಪ್ರಗತಿ ಪರವಾದ ವಿಚಾರ ಹೋರಾಟಗಳೆಲ್ಲ ಇಂದು ಪ್ರಸ್ತುತತೆಯನ್ನು ಕಳೆದುಕೊಂಡಿದ್ದು ಸಾಂಸ್ಕೃತಿಕ ಚಿಂತನೆಯೇ ಎಲ್ಲ ಸಮಸ್ಯೆಗಳಿಗೂ ಪರಿಹಾರ ಎನ್ನುವ ತಿಳಿವಳಿಕೆಯನ್ನು ಸೂಕ್ಷ್ಮವಾಗಿ ಕಾಣಬಹುದು. ತನ್ನ ಕಲ್ಚರ್ ಏನು ಎಂಬುದನ್ನು ವ್ಯಕ್ತಿ ನಿರ್ಧರಿಸಬೇಕೇ ವಿನಾ ಸಮಾಜವಲ್ಲ, ಸಮಾಜ ಅದನ್ನು ನಿರ್ಧರಿಸುತ್ತಾ ಹೋದಾಗ ವ್ಯಕ್ತಿ ಘನತೆಯ ಉಲ್ಲಂಘನೆಯಾಗುತ್ತಲೂ ಹೋಗುತ್ತದೆ. ಇಂಥಲ್ಲಿ ಆರ್ಥಿಕತೆಯನ್ನು ಸಾಮಾಜಿಕ ಸಂದರ್ಭದಲ್ಲೂ ಸಂಸ್ಕೃತಿಯನ್ನು ವೈಯಕ್ತಿಕ ಸಂದರ್ಭದಲ್ಲೂ ನೋಡಬೇಕಾದ ಅಗತ್ಯವಿದೆ. ಅದು ಬಿಟ್ಟು ಯಾವುದಾದರೊಂದು ಹೊಸ ಸಂಗತಿ ಬಂದೊಡನೆ 'ಅಯ್ಯೋ ಸಂಸ್ಕೃತಿ ಹಾಳಾಯಿತು' ಎನ್ನುವ ಧಾಟಿಯಲ್ಲಿ ಮಾತನಾಡುವುದು ಮೂರ್ಖತನವಾಗುತ್ತದಷ್ಟೆ ಅಲ್ಲ; ಪ್ರಗತಿಯ ಮುಂಚಲನೆಯನ್ನು ಹಿಂದಕ್ಕೆ ತಳ್ಳುವ ಪ್ರಯತ್ನವೂ ಆಗುತ್ತದೆ.

ಹಳೆಯದನ್ನು ಕಳೆದುಕೊಳ್ಳದೆ ಹೊಸದನ್ನು ಪಡೆದುಕೊಳ್ಳಲು ಬರುವುದಿಲ್ಲ. ಒಂದು ಕಾಲಕ್ಕೆ ಮುಕ್ತ ಲೈಂಗಿಕತೆಯು ಸಮಾಜದ ಸ್ವೀಕೃತ ಮೌಲ್ಯವಾಗಿತ್ತು. ಆ ಕಾಲಕ್ಕೆ ಅದು ನಾನಾ ರೀತಿಯ ಮನುಷ್ಯ ಸಂಬಂಧಗಳನ್ನು ರೂಪಿಸಿರಲು ಸಾಧ್ಯವಿದೆ. ಅದನ್ನು ತೊಡೆದು ಹಾಕಿ ವಿವಾಹ ಸಂಸ್ಥೆ ಸ್ಥಿರಪಟ್ಟಾಗ ಅದೆಷ್ಟೊ ಅಂಶಗಳನ್ನು ಕಳೆದುಕೊಂಡಿರಲೇಬೇಕು. ಹಾಗಂತ ಅವನ್ನು ಕಳೆದುಕೊಳ್ಳದೆ ಹೋಗಿದ್ದರೆ ಕೌಟುಂಬಿಕ ಸಂಬಂಧಗಳು ಇಂದು ಇರುವ ರೀತಿಯಲ್ಲಿ ಇರುತ್ತಿರಲಿಲ್ಲ. ನಾಗರಿಕತೆಯ ಬೆಳವಣಿಗೆಯೂ ಆಗುತ್ತಿರಲಿಲ್ಲ. ಹೀಗಿರುವಾಗ ಸಾಂಸ್ಕೃತಿಕ ಚಿಂತನೆಯ ತಪ್ಪು ತಿಳಿವಳಿಕೆಗಳು ಅದರರದೆ ಆದ ದೌರ್ಬಲ್ಯಗಳಿಂದ ಬಳಲುತ್ತಿವೆಯಲ್ಲದೆ ಆರ್ಥಿಕ ದೃಷ್ಟಿಕೋನದ ಸಾಮಾಜಿಕ ಹೋರಾಟಗಳಿಗೂ ತೊಡಕಾಗಿಬಿಡುತ್ತದೆ. ಈ ವ್ಯಾಪ್ತಿಗೆ ದಲಿತ ಚಳವಳಿಯೂ ಒಳಪಡುತ್ತದೆ.

ಒಂದಷ್ಟು ಮಂದಿ ದಲಿತರು ಮೇಲಕ್ಕೆ ಬಂದಿದ್ದಾರೆ. ಹಾಗಂತ ದಲಿತ ಚಳವಳಿ ಪ್ರಸ್ತುತತೆಯನ್ನು ಕಳೆದುಕೊಂಡಿದೆ ಅಥವಾ ಅದರ ಬಿಗುವು ಕಡಿಮೆಯಾಗಬೇಕು ಎಂದು ಭಾವಿಸುವುದು ತಪ್ಪಾಗುತ್ತದೆ. ಮೇಲೆ ಬಂದಿರುವುದಕ್ಕಿಂತ, ಮೇಲೆ ಬರಬೇಕಾದವರ ಸಂಖ್ಯೆ ಜಾಸ್ತಿ ಇದೆ. ಅವರು ಜಾತಿ, ವರ್ಗಶೋಷಣೆ ಮತ್ತು ಮೇಲೆ ಬಂದಿರುವ ದಲಿತರ ನಡವಳಿಕೆಗಳು ಬೀರುವ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ವರ್ಗ ಹೋರಾಟದ ಅಗತ್ಯವನ್ನು ಎಷ್ಟೆಲ್ಲ ಒತ್ತಿ ಹೇಳಿದರೂ ಜಾತಿಹೋರಾಟ ಪ್ರಸ್ತುತತೆಯನ್ನು ಕಳೆದುಕೊಂಡಿಲ್ಲ. ಒಬ್ಬ ದುರ್ಬಲ ಬ್ರಾಹ್ಮಣ ವರ್ಗ ತಾರತಮ್ಯದ ಒಂದೇ ನೆಲೆಯಲ್ಲಿ ಶೋಷಿಸಲ್ಪಡುತ್ತಾನೆ. ಆದರೆ ದುರ್ಬಲ ದಲಿತನೊಬ್ಬ ವರ್ಗ ಮತ್ತು ಜಾತಿ ಅರ್ಥಾತ್ ಆರ್ಥಿಕ ಮತ್ತು ಸಾಮಾಜಿಕವಾದ ಎರಡೆರಡು ಕಾರಣಕ್ಕಾಗಿ ಶೋಷಿಸಲ್ಪಡುತ್ತಾನೆ.

ಆದರೆ ವರ್ಗಶೋಷಣೆ ಆರ್ಥಿಕ ಸ್ವರೂಪದ್ದಾಗಿದ್ದು ಹೆಚ್ಚು ಕಮ್ಮಿ ಏಕರೂಪಿಯಾಗಿದೆ. ಆದರೆ ಕಲ್ಚರ್‌ನೊಂದಿಗೆ ಥಳುಕು ಹಾಕಿಕೊಳ್ಳುವ ಜಾತಿ ಶೋಷಣೆಯ ಸ್ವರೂಪ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಸ್ವರೂಪವನ್ನು ತಳೆಯುತ್ತದೆ. ದಲಿತ ಶೋಷಣೆ ಎಲ್ಲ ಪ್ರದೇಶಗಳಲ್ಲೂ ಇದೆ. ಆದರೆ ಉತ್ತರಪ್ರದೇಶ-ಬಿಹಾರ ಮುಂತಾದ ಉತ್ತರ ಭಾರತದ ರಾಜ್ಯಗಳಲ್ಲಿ ನಡೆಯುವ ದಲಿತ ಶೋಷಣೆಗೂ ದಕ್ಷಿಣದ ರಾಜ್ಯಗಳಲ್ಲಿ ನಡೆಯುವ ದಲಿತ ಶೋಷಣೆಗೂ ವ್ಯತ್ಯಾಸವಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಉತ್ತರ ಕರ್ನಾಟಕದ ಭಾಗಗಳಲ್ಲಿ ನಡೆಯುತ್ತಿರುವ ಶೋಷಣೆಯ ಸ್ವರೂಪಕ್ಕೂ ದಕ್ಷಿಣ ಕರ್ನಾಟಕದ ಸ್ಥಿತಿಗತಿಗಳಿಗೂ ವ್ಯತ್ಯಾಸವಿದೆ. ಸಾಂಸ್ಕೃತಿಕವಾಗಿ ಕೇರಳದ ಪ್ರಭಾವದಲ್ಲಿರುವ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನಡೆಯುವ ದಲಿತ ಶೋಷಣೆಯ ಸ್ವರೂಪ ಬೇರೆಯದಾಗಿದೆ.

ಇಂಥಲ್ಲಿ ಉತ್ತರ ಪ್ರದೇಶ - ಬಿಹಾರದಂತಹ ಪ್ರದೇಶಗಳಲ್ಲಿ ನಡೆಯುವ ದಲಿತ ಶೋಷಣೆಗೆ ಕೊಡಬೇಕಾದಂತಹ ಪ್ರತಿಕ್ರಿಯೆಯನ್ನು ದಕ್ಷಿಣ ಕನ್ನಡದ ದಲಿತ ಶೋಷಣೆಗೆ ಕೊಡಲು ಬರುವುದಿಲ್ಲ. ಅಲ್ಲಿನ ಸ್ಥಿತಿಗತಿಗಳಿಗೆ ಕಟುವಾದ ಪ್ರತಿಕ್ರಿಯೆಯು ಅಗತ್ಯವಿದೆ. ಆದರೆ ಅದೇ ತೆರನಾದ ಪ್ರತಿಕ್ರಿಯೆಯನ್ನು ಕಡಿಮೆ ಸ್ವರೂಪದ ಶೋಷಣೆ ನಡೆಯುವಲ್ಲಿಗೆ ಕೊಟ್ಟಾಗ ಒಂದು ಕಡೆಯಿಂದ ಚಳವಳಿಯ ವಿಶ್ವಾಸಾರ್ಹತೆಯ ಪ್ರಶ್ನೆ ಬರುತ್ತದೆ. ಉದಾಹರಣೆಗೆ ಮಂಡಲ್ ಆಯೋಗದ ವರದಿ ಬಂದಾಗ ಉತ್ತರ ಭಾರತದ ಮೇಲುಜಾತಿಗಳು ಸ್ಫೋಟಕ ಪ್ರತಿಕ್ರಿಯೆ ಕೊಟ್ಟವು. ಆದರೆ ಅದಕ್ಕಿಂತ ಬಹಳ ಹಿಂದೆಯೇ ಹಾವನೂರು ವರದಿ ಬಂದಾಗ ಕರ್ನಾಟಕದ ಮೇಲುಜಾತಿಗಳು ಸಾಕಷ್ಟು ಸಹನೀಯವಾಗಿಯೇ ಸ್ವೀಕರಿಸಿವೆ. (ಅದು ಇಲ್ಲಿನ ಮೇಲುಜಾತಿಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ತಂತ್ರವೂ ಇರಬಹುದು),

ಅಂಥಲ್ಲಿ ಮಂಡಲ್ ವರದಿಗೆ ಪ್ರತಿಭಟನೆ ಕೊಟ್ಟ ಮೇಲುಜಾತಿಗಳಿಗೆ ಕೊಡಬೇಕಾದ ಪ್ರತಿಕ್ರಿಯೆಯನ್ನೇ ಹಾವನೂರು ವರದಿಯನ್ನು ಸ್ವೀಕರಿಸಿದ ಮೇಲುಜಾತಿಗಳಿಗೂ ಕೊಟ್ಟಾಗ ಸಹಜವಾಗಿಯೇ ಚಳವಳಿಯ ಬಗ್ಗೆ ಮೇಲುಜಾತಿಗಳಲ್ಲಿ ವಿಶ್ವಾಸಾರ್ಹತೆ ಕುಸಿಯುತ್ತದೆ. ಮತ್ತೊಂದು ಕಡೆ ಚಳವಳಿಯನ್ನು ಮುನ್ನಡೆಸುವ ದಲಿತ ಶಕ್ತಿಗಳಲ್ಲಿ ಅಳ್ಳಕಗಳು ಕಾಣಿಸಿಕೊಳ್ಳುತ್ತವೆ. ಚೌಕಾಸಿ ವ್ಯವಹಾರಗಳು, ತನಗಾಗದವರ ಮೇಲೆಲ್ಲ ಅಗತ್ಯವಿರದಿದ್ದರೂ ಜಾತಿನಿಂದನೆಯ ಆರೋಪ ಹಾಕುವುದು, ಜಾತಿಮೂಲವನ್ನು ಹಿಡಿದು ಸಿಕ್ಕ ಸಿಕ್ಕವರ ಮೇಲೆ ಸಿಕ್ಕ ರೀತಿಯಲ್ಲಿ ಹರಿಹಾಯುವುದು ಇವೆಲ್ಲ ನಡೆಯುವುದು ಇಲ್ಲೇ. ಯಾಕೆಂದರೆ ಬಿಹಾರದಂತಹ ರಾಜ್ಯಗಳಲ್ಲಿ ದಲಿತರು ಅನುಭವಿಸಿದ ಮಟ್ಟದ ಸಂಕಟವನ್ನು ಅನುಭವಿಸದೆ ಅಲ್ಲಿನ ದಲಿತರು ಕೊಡಬೇಕಾದ ರೀತಿಯ ಪ್ರತಿಭಟನೆಯ ದಾರಿಯನ್ನು ಅದೇ ರೀತಿ ಸ್ವೀಕರಿಸಿದಾಗ ಹೋರಾಟವು ನೈಜ ಅನುಭವದ ಬಲವನ್ನು ಕಳೆದುಕೊಳ್ಳುತ್ತದೆ. ಅಲ್ಲಿ ಉಂಟಾಗುವ ಗ್ಯಾಪ್ ಅನ್ನು ವಿಕೃತಿಗಳು ಆಕ್ರಮಿಸಿಬಿಡುತ್ತವೆ.

ಈಗಾಗಲೇ ಮೇಲಕ್ಕೆ ಬಂದಿರುವ ದಲಿತರೇ ಹೋರಾಟದ ಚುಕ್ಕಾಣಿ ಹಿಡಿಯುವುದು ಸಹ ಬದಲಾದ ಸನ್ನಿವೇಶದಲ್ಲಿ ಹೋರಾಟದ ಅಂತಃಸತ್ತ್ವಕ್ಕೆ ಧಕ್ಕೆ ತರಲು ಸಾಧ್ಯವಿದೆ. ಗುನ್ನಾರ್ ಮಿರ್‌ಡಾಲ್ ಹೇಳುವಂತೆ ಭಾರತದ ಬುದ್ಧಿಜೀವಿಗಳು ಮೇಲುವರ್ಗದೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆಯೇ ಹೊರತು ಕೆಳವರ್ಗದೊಂದಿಗಲ್ಲ ಎನ್ನುವ ಮಾತು ಇಲ್ಲಿಯೂ ಸತ್ಯವಾಗುತ್ತದೆ. ಮೇಲುವರ್ಗದ ದಲಿತರು ಕಟ್ಟಿಕೊಡುವ ಹೋರಾಟದ ಸ್ವರೂಪದಲ್ಲಿ ಅವರು ಅನುಭವಿಸಿದ ನೋವುಗಳಿಗೆ ತಕ್ಕ ಸ್ಪಂದನೆ ಅನುಭವವಾಗಿ ಬಂದಿದ್ದರೆ ಬದಲಾದ ಸನ್ನಿವೇಶದಲ್ಲಿ ಕೆಳವರ್ಗದ ದಲಿತರು ಅನುಭವಿಸುವ ನೋವುಗಳು ಕೇವಲ ಗ್ರಹಿಕೆಯಾಗಿ ಮಾತ್ರವೇ ಅವರಿಗೆ ದಕ್ಕುತ್ತದೆ. ಗ್ರಹಿಕೆ ಯಾವಾಗಲೂ ಅನುಭವಕ್ಕಿಂತ ಕೆಳಗೇ ಇರುತ್ತದೆ. ಮೇಲುಜಾತಿಗಳಲ್ಲೂ ಕೆಲಮಂದಿ ದಲಿತ ಪರರಿರುತ್ತಾರೆ.

ಆದರೆ ಶೋಷಿತ ದಲಿತರ ನೋವುಗಳು ಮೇಲು ಜಾತಿಗಳವರ ಗ್ರಹಿಕೆಯಾಗಲು ಸಾಧ್ಯವೇ ಹೊರತು ಯಾವ ಕಾಲಕ್ಕೂ ಅನುಭವವಾಗಲು ಸಾಧ್ಯವಿಲ್ಲ. ಅಂಥಲ್ಲಿ ಅವರ ತಿಳಿವಳಿಕೆಗಳಲ್ಲಿ ದೋಷಗಳಿರಲು ಸಾಧ್ಯವಿದೆ. ಅಂದ ಮಾತ್ರಕ್ಕೆ ಅವರ ತಿಳಿವಳಿಕೆಗಳಿಗೆ ದಲಿತ ವಿರೋಧಿ ಅನ್ನುವ ಬಣ್ಣ ಹಚ್ಚಬೇಕಾಗಿಲ್ಲ. ಮೇಲುಜಾತಿಯ ಒಬ್ಬ

ಕೆಳಹಂತದ ದಲಿತರು ಜಾತಿ, ವರ್ಗಶೋಷಣೆ ಮತ್ತು ಮೇಲೆ ಬಂದಿರುವ ದಲಿತರ ನಡವಳಿಕೆಗಳು ಬೀರುವ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ವರ್ಗ ಹೋರಾಟದ ಅಗತ್ಯವನ್ನು ಎಷ್ಟೆಲ್ಲ ಒತ್ತಿ ಹೇಳಿದರೂ ಜಾತಿಹೋರಾಟ ಪ್ರಸ್ತುತತೆಯನ್ನು ಕಳೆದುಕೊಂಡಿಲ್ಲ. ಒಬ್ಬ ದುರ್ಬಲ ಬ್ರಾಹ್ಮಣ ವರ್ಗ ತಾರತಮ್ಯದ ಒಂದೇ ನೆಲೆಯಲ್ಲಿ ಶೋಷಿಸಲ್ಪಡುತ್ತಾನೆ. ಆದರೆ ದುರ್ಬಲ ದಲಿತನೊಬ್ಬ ವರ್ಗ ಮತ್ತು ಜಾತಿ ಅರ್ಥಾತ್ ಆರ್ಥಿಕ ಮತ್ತು ಸಾಮಾಜಿಕವಾದ ಎರಡೆರಡು ಕಾರಣಕ್ಕಾಗಿ ಶೋಷಿಸಲ್ಪಡುತ್ತಾನೆ. ಆದರೆ ವರ್ಗಶೋಷಣೆ ಆರ್ಥಿಕ ಸ್ವರೂಪದ್ದಾಗಿದ್ದು ಹೆಚ್ಚು ಕಮ್ಮಿ ಏಕರೂಪಿಯಾಗಿದೆ.

ವ್ಯಕ್ತಿಗೆ ಪ್ರಾಮಾಣಿಕತೆ ಇದ್ದರೂ ದಲಿತರ ನೋವುಗಳು ಜೀವನಾನುಭವವಾಗಿ ದಕ್ಕಲು ಸಾಧ್ಯವಿಲ್ಲದಿರುವಂತೆಯೇ ಪ್ರಾಮಾಣಿಕ ದಲಿತನೊಬ್ಬನಿಗೆ ಮೇಲುಜಾತಿ ಜನರ ತಲ್ಲಣಗಳು ಜೀವನಾನುಭವವಾಗಿ ದಕ್ಕಲು ಸಾಧ್ಯವೇ ಇಲ್ಲ ಎಂಬುದನ್ನು ಒಪ್ಪಿಕೊಂಡರೆ ಸಾಕಾಗುತ್ತದೆ. ಇಂಥಲ್ಲಿ ಹೋರಾಟಕ್ಕೆ ಹೊಸ ದಾರಿಯನ್ನು ಒದಗಿಸಿಕೊಡಬೇಕಾದ ಅಗತ್ಯವಿದೆ.

ದಲಿತ ಚಳವಳಿಯ ಪ್ರಧಾನ ವೇದಿಕೆಯಲ್ಲಿ ನಿಲ್ಲಬೇಕಾದವರು ದುರ್ಬಲ ದಲಿತರೇ ಹೊರತು ಮೇಲುವರ್ಗದ ದಲಿತರಲ್ಲ. ಮೇಲುವರ್ಗದ ದಲಿತರ ಮೇಲೆ ಕೂಡ ಶೋಷಣೆ ನಡೆಯುತ್ತದೆ. ಹಾಗೆಂದರೆ ಸಾಮಾಜಿಕ ವ್ಯವಸ್ಥೆಯ ಉನ್ನತ ಸ್ತರದಲ್ಲಿರುವ ಬ್ರಾಹ್ಮಣರ ಮೇಲೂ ಶೋಷಣೆ ನಡೆಯುತ್ತದೆ. ಹಾಗಂತ ಇದನ್ನೇ ಹೋರಾಟದ ಪ್ರಧಾನ ವಿಚಾರವಾಗಿ ತೆಗೆದುಕೊಳ್ಳಲು ಬರುವುದಿಲ್ಲ. ರೂಟ್ ಲೆವೆಲ್ ಅನ್ನು ಪ್ರಧಾನವಾಗಿ ತೆಗೆದುಕೊಳ್ಳಬೇಕಾಗುತ್ತದೆ. ದುರ್ಬಲ, ಶೋಷಿತ ದಲಿತರೇ ಹೋರಾಟದ ಮುಂಚೂಣಿಯಲ್ಲಿ ನಿಲ್ಲಬೇಕು ; ಸೂತ್ರಧಾರಿಗಳಾಗಬೇಕು.

ಮೇಲುವರ್ಗದ ದಲಿತರು ಮೇಲುಜಾತಿಯ ದಲಿತ ಪರ ನಿಲುಮೆ ಉಳ್ಳವರು ಸಪೋರ್ಟ್ ಮಾಡುವ ಕೆಲಸ ಮಾಡಬೇಕೇ ಹೊರತು ಅವರೇ ದುರ್ಬಲ ಶೋಷಿತ ದಲಿತರ ಪ್ರತಿನಿಧಿಗಳಾಗಿ ನಿಲ್ಲುವುದಲ್ಲ. ಯಾರು ನೊಂದಿದ್ದಾರೋ ಅವರೇ ನೋವನ್ನು ನಿವಾರಿಸಿಕೊಳ್ಳಬೇಕು; ಆಗ ಅವರ ಪ್ರಯತ್ನದಲ್ಲಿ 'ಇದು ಆಗಲೇಬೇಕು' ಎನ್ನುವ ಅಂತರಂಗದ ತುಡಿತವಿರುತ್ತದೆ. ಕರ್ತೃತ್ವ ಶಕ್ತಿ ಇರುತ್ತದೆ. ಅವರ ಪರ ಇರುವವರು ಅವರಿಗೆ ನೆರವಾಗುವ ಕೆಲಸವನ್ನು, ಸೂಕ್ತ ವೇದಿಕೆ ಸಿದ್ಧಪಡಿಸಿ ಕೊಡುವ ಕಾರ್ಯವನ್ನು, ದುರ್ಬಲ-ಶೋಷಿತ ದಲಿತರು ಹೋರಾಟಕ್ಕೆ ಬೇಕಾದ ತಿಳಿವಳಿಕೆಯನ್ನು ಸ್ಪಷ್ಟೀಕರಿಸಿಕೊಳ್ಳಲು ಸಹಾಯ ಮಾಡಬೇಕು.

ಎರಡನೆಯದಾಗಿ ಚಳವಳಿ ಬಹಳ ವಿಕೇಂದ್ರೀಕರಣಗೊಳ್ಳಬೇಕಾದ ಅಗತ್ಯವಿದೆ. ಪ್ರಾದೇಶಿಕ ಭಿನ್ನತೆಯೊಂದಿಗೆ ಸೂಕ್ತವಾಗಿ ಸ್ಪಂದಿಸುವುದಕ್ಕೆ ವಿಕೇಂದ್ರೀಕರಣವೇ ಸೂಕ್ತ ಔಷಧವಾಗಿದೆ. ಈಗ ದಕ್ಷಿಣ ಕನ್ನಡ, ಉಡುಪಿಯಂತಹ ಜಿಲ್ಲೆಗಳಲ್ಲಿ ದಲಿತ ಚಳವಳಿ ಗಟ್ಟಿಯಾಗಿ ಬೇರುಬಿಡಲು ಸಾಧ್ಯವಾಗಿಲ್ಲ. ಯಾಕೆಂದರೆ ಈ ಪ್ರದೇಶಗಳ ದಲಿತ ಹೋರಾಟಗಾರರು ಅಖಿಲ ಕರ್ನಾಟಕ, ಅಖಿಲ ಭಾರತ ಮಟ್ಟದ ದಲಿತ ಚಳವಳಿಯ ಸ್ವರೂಪವನ್ನು ಮಾದರಿಯಾಗಿ ತೆಗೆದುಕೊಳ್ಳುತ್ತಾರೆ. ಅವು ಅತ್ಯಂತ ಕ್ರೂರ ದಬ್ಬಾಳಿಕೆಗೆ ಸೂಕ್ತವಾದ ಚಳವಳಿಯ ಮಾದರಿಯನ್ನು ಕಟ್ಟಿಕೊಡುತ್ತವೆ. ಆದರೆ ಆ ಮಾದರಿ ಕರಾವಳಿ ಕರ್ನಾಟಕದ ಪ್ರದೇಶದ ದಲಿತ ಶೋಷಣೆಗೆ ಸರಿ ಹೊಂದುವುದಿಲ್ಲ. ಆಗ ದಲಿತ ಚಳವಳಿ ಈ ಪ್ರದೇಶಗಳಲ್ಲಿ ಬಲವಾಗಿ ಬೇರುಬಿಡಲು ಸಾಧ್ಯವಾಗದೇ ಹೋಗುತ್ತವೆ.

ಅದರ ಬದಲು ಕರಾವಳಿ ಕರ್ನಾಟಕಕ್ಕೆ ಯಾವ ರೀತಿಯ ಹೋರಾಟ ಅಗತ್ಯವೋ ಅದನ್ನು ಆ ಪ್ರದೇಶದ ದಲಿತರೇ ಸ್ವಂತ ಮಾದರಿಯಲ್ಲಿ ನಿರ್ವಚನ ಮಾಡಬೇಕಾಗಿದೆ. (ಈ ಮಾತು ಎಲ್ಲಾ ಪ್ರದೇಶಗಳಿಗೂ ಅನ್ವಯಿಸುತ್ತದೆ) ಬಹು ಮಟ್ಟಿಗೆ ಕರಾವಳಿ ಕರ್ನಾಟಕದ ಭಾಗದಲ್ಲಿ ಜಾತಿ ಶೋಷಣೆಯನ್ನು ಎರಡನೆ ಆದ್ಯತೆಯಾಗಿ ತೆಗೆದುಕೊಂಡು ವರ್ಗ ಶೋಷಣೆಯನ್ನು ಪ್ರಧಾನ ಆದ್ಯತೆಯಾಗಿ ತೆಗೆದುಕೊಳ್ಳಬಹುದಾದ ವೇದಿಕೆ ಇದೆ.

ಈ ದೇಶದ ದಲಿತರು ಕೊಂಚವಾದರೂ ಮೇಲಕ್ಕೆ ಬರಲು ಸಾಧ್ಯವಾದದ್ದು ಬ್ರಿಟಿಷ್ ಪ್ರಭುತ್ವದ ಆಡಳಿತದಿಂದ. ಅದು ಅಂಬೇಡ್ಕರ್ ಅವರಿಗೂ ತಿಳಿದಿತ್ತು. ಹಾಗಂತ ಭಾರತದ ರಾಷ್ಟ್ರೀಯ ಚಳವಳಿಯಿಂದ ಕೊಂಚ ದೂರ ನಿಲ್ಲಲು ಅವರಿಂದ ಸಾಧ್ಯವಾಯಿತೇ ವಿನಾ ರಾಷ್ಟ್ರೀಯ ಚಳವಳಿಯನ್ನು ವಿರೋಧಿಸಿ ಬ್ರಿಟಿಷ್ ಪ್ರಭುತ್ವದ ಪರ ನಿಲ್ಲಲು ಅವರಿಂದ ಸಾಧ್ಯವಾಗಲಿಲ್ಲ. ಈ ದೇಶವನ್ನು ಅತ್ಯಂತ ವಸ್ತುನಿಷ್ಠವಾಗಿ ವಿಶ್ಲೇಷಿಸುವಾಗಲೂ 'ಇದು ನನ್ನ ದೇಶ' ಎನ್ನುವ ಭಾವನೆಯು ಯಾವುದೋ ಸಂದರ್ಭದಲ್ಲಿ ಕೊಂಚ ಮಟ್ಟಿಗೆ ಅಥೆಂಟಿಸಿಟಿಗೆ ಅತೀತವಾಗಿ ನಿಲ್ಲಿಸಿಬಿಡುತ್ತದೆ. ಇದೇ ಸಾಂಸ್ಕೃತಿಕ ಬಹುರೂಪತೆಯನ್ನು ಉಳಿಸುವ ಶಕ್ತಿಯಾಗಿದೆ. ಆದರೆ ಆರ್ಥಿಕ ದೃಷ್ಟಿಕೋನದ ಸಂದರ್ಭದಲ್ಲಿ ಈ ತೊಡಕು ಇಲ್ಲ.

ಆದರೆ ಬಿಹಾರ-ಉತ್ತರ ಪ್ರದೇಶಗಳಂತಹ ಪ್ರದೇಶಗಳಲ್ಲಿ ಹೀಗಿಲ್ಲ. ಅಲ್ಲಿ ವರ್ಗ ಶೋಷಣೆಗಿಂತ ಜಾತಿ ಶೋಷಣೆಯೇ ಹೋರಾಟದ ಪ್ರಧಾನ ಆದ್ಯತೆಯಾಗಿರಬೇಕಾಗುತ್ತದೆ. ಜಾತಿ ಹೋರಾಟದ ಅಗತ್ಯವನ್ನು ಪೂರೈಸದೆ ವರ್ಗ ಹೋರಾಟಕ್ಕೆ ಮುನ್ನಡೆಯುವುದರಿಂದ ಭಾರತೀಯ ಸಂದರ್ಭದಲ್ಲಿ ವಿಶೇಷ ಪ್ರಯೋಜನವಾಗಲಾರದು. ಹಾಗೆಯೇ ಜಾತಿ ಹೋರಾಟದ ಸ್ಥಿತಿಯನ್ನು ವರ್ಗ ಹೋರಾಟದ ಸ್ಥಿತಿಗೆ ಬದಲಾಯಿಸಿದರೆ ಅರ್ಧ ಯಶಸ್ಸು ಸಾಧಿಸಿದಂತೆಯೇ.

ಯಾಕೆಂದರೆ ಆರ್ಥಿಕ ಸ್ವರೂಪದಲ್ಲಿರುವ ವರ್ಗ ಹೋರಾಟವು ಏಕರೂಪತೆಯನ್ನು, ಸಮಾನ ಮನಸ್ಕತೆಯನ್ನು ವಿಶಾಲ ನೆಲೆಯಲ್ಲಿ ಹರಡಿಬಿಡುತ್ತದೆ. ಅದರಿಂದ ಸಾಂಸ್ಕೃತಿಕ ಏಕರೂಪತೆ ಬರುತ್ತದೆಂದು ಭಾವಿಸಬೇಕಾದ ಅಗತ್ಯವಿಲ್ಲ. ಸಂಸ್ಕೃತಿಯು ಸಹಜವಾಗಿಯೇ ಅಂತರ್ಮುಖಿಯಾದುದು; ಭಾವನಾತ್ಮಕವಾದುದು. ಅದನ್ನು ಪರಿಪೂರ್ಣವಾಗಿ ಮೀರುವುದು ಅಸಾಧ್ಯ. ಒಬ್ಬ ಬ್ರಾಹ್ಮಣನಿಗೆ ಬ್ರಾಹ್ಮಣಶಾಹಿತ್ವದ ಮೇಲೆ ಆಕ್ಷೇಪವಿರಬಹುದು. ಮೇಲುವರ್ಗದ ಬ್ರಾಹ್ಮಣರ ಮೇಲೆ ಅಸಹನೆ ಇರಬಹುದು. ಸಮಗ್ರ ಬ್ರಾಹ್ಮಣ ಸಮುದಾಯದ ಮೇಲೆ ಅತೃಪ್ತಿ ಇರಬಹುದು. ಆದರೆ ಎಲ್ಲೋ ಒಂದೆಡೆ ಅತಿಥಿ ಸತ್ಕಾರದ ವಿಧಾನದಲ್ಲೋ, ಆಹಾರದ ವಿಧಾನದಲ್ಲೋ ಆತನ ಕಲ್ಚರ್‌ನ ನೆಲೆಗಳು ಅಪ್ರಜ್ಞಾಪೂರ್ವಕವಾಗಿ ಉಳಿದುಕೊಳ್ಳುತ್ತದೆ. ಅದರ ಬಗ್ಗೆ ಪ್ರೀತಿಯೂ ಇರಲು ಸಾಧ್ಯವಿದೆ. (ಈ ಮಾತು ಎಲ್ಲ ಜಾತಿ ಜನಾಂಗ ಧರ್ಮ ಪಂಗಡ ಮತಗಳವರಿಗೂ ಅನ್ವಯಿಸುತ್ತದೆ.)

ಅದರಿಂದಾಗಿ ತನ್ನದಲ್ಲದ ನೆಲೆಗಳನ್ನು ಅತ್ಯಂತ ಅಥೆಂಟಿಕ್ ಆಗಿ ಹೇಳಬಲ್ಲವನಿಗೆ ತನ್ನ ನೆಲೆಯ ಬಗ್ಗೆ ಅತ್ಯಂತ ಅಥೆಂಟಿಕ್ ಆಗಿ ಹೇಳಲು ಕಷ್ಟವಾಗುತ್ತದೆ. ಶಿವರಾಮ ಕಾರಂತರಂತಹ ವಾಸ್ತವವಾದಿ ಬರಹಗಾರರಿಗೂ ಕೂಡ ಅವರ ನೆಲೆಯ ಬಗ್ಗೆಯೇ ಹೇಳುವಾಗ ಅತ್ಯಂತ ಅಥೆಂಟಿಕ್ ಆಗಿ ಹೇಳಲು ಸಾಧ್ಯವಾಗಿಲ್ಲ. ಹಾಗೆ ಅಥೆಂಟಿಸಿಟಿ ಕಳೆದುಹೋದಾಗ ಬೇರೊಂದು ಸಾಂಸ್ಕೃತಿಕ ನೆಲೆಯಲ್ಲಿ ನಿಂತು ಕಾರಂತರನ್ನು ನೋಡುವ ಬರಹಗಾರನಿಗೆ ಕಾರಂತರ ಮಿತಿ ಅರ್ಥವಾಗುತ್ತದೆ. ಯಾಕೆಂದರೆ ಆತ ಕಾರಂತರನ್ನು ಅಥೆಂಟಿಕ್ ಆಗಿ ನೋಡಬಲ್ಲ. ಹಾಗಂತ ಇಲ್ಲಿ ಅಪ್ರಾಮಾಣಿಕತೆಯನ್ನು ಗುರುತಿಸಬೇಕಾದ ಅಗತ್ಯ ಇಲ್ಲ. ಅಂಬೇಡ್ಕರ್ ಅವರನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ.

ಈ ದೇಶದ ದಲಿತರು ಕೊಂಚವಾದರೂ ಮೇಲಕ್ಕೆ ಬರಲು ಸಾಧ್ಯವಾದದ್ದು ಬ್ರಿಟಿಷ್ ಪ್ರಭುತ್ವದ ಆಡಳಿತದಿಂದ. ಅದು ಅಂಬೇಡ್ಕರ್ ಅವರಿಗೂ ತಿಳಿದಿತ್ತು. ಹಾಗಂತ ಭಾರತದ ರಾಷ್ಟ್ರೀಯ ಚಳವಳಿಯಿಂದ ಕೊಂಚ ದೂರ ನಿಲ್ಲಲು ಅವರಿಂದ ಸಾಧ್ಯವಾಯಿತೇ ವಿನಾ ರಾಷ್ಟ್ರೀಯ ಚಳವಳಿಯನ್ನು ವಿರೋಧಿಸಿ ಬ್ರಿಟಿಷ್ ಪ್ರಭುತ್ವದ ಪರ ನಿಲ್ಲಲು ಅವರಿಂದ ಸಾಧ್ಯವಾಗಲಿಲ್ಲ. ಈ ದೇಶವನ್ನು ಅತ್ಯಂತ ವಸ್ತುನಿಷ್ಠವಾಗಿ ವಿಶ್ಲೇಷಿಸುವಾಗಲೂ 'ಇದು ನನ್ನ ದೇಶ' ಎನ್ನುವ ಭಾವನೆಯು ಯಾವುದೋ ಸಂದರ್ಭದಲ್ಲಿ ಕೊಂಚ ಮಟ್ಟಿಗೆ ಅಥೆಂಟಿಸಿಟಿಗೆ ಅತೀತವಾಗಿ ನಿಲ್ಲಿಸಿಬಿಡುತ್ತದೆ. ಇದೇ ಸಾಂಸ್ಕೃತಿಕ ಬಹುರೂಪತೆಯನ್ನು ಉಳಿಸುವ ಶಕ್ತಿಯಾಗಿದೆ. ಆದರೆ ಆರ್ಥಿಕ ದೃಷ್ಟಿಕೋನದ ಸಂದರ್ಭದಲ್ಲಿ ಈ ತೊಡಕು ಇಲ್ಲ.

ಆರ್ಥಿಕತೆಯು ಬಹಿರ್ಮುಖಿ ಚಟುವಟಿಕೆಗೆ ಸಂಬಂಧಿಸಿದ್ದಾಗಿದ್ದು ಅಲ್ಲಿ ತನ್ನ ಮತ್ತು ತನ್ನದಲ್ಲದ ನೆಲೆಯನ್ನು ಏಕರೀತಿಯಲ್ಲಿ ಸ್ವೀಕರಿಸಿ ಅತ್ಯಂತ ಅಥೆಂಟಿಕ್ ಆಗಿ ಹೇಳಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಜಾತಿ ಹೋರಾಟದ ಸ್ಥಿತಿಯನ್ನು ವರ್ಗ ಹೋರಾಟದ ಮಜಲಿಗೆ ಎತ್ತಿ ಹಾಕುವ ಪ್ರಯಾಸದಾಯಕ ಕೆಲಸ ಸಾಧ್ಯವಾದರೆ ಅರ್ಧಯಶಸ್ಸು ಸಾಧಿಸಿದಂತೆಯೇ ಎಂದು ಹೇಳಿದ್ದು. ಸ್ವಾತಂತ್ರ್ಯ ಬಂದು ಐದು ದಶಕಗಳು ಕಳೆದರೂ ಅದು ಸಾಧ್ಯವಾಗಿಲ್ಲವೆಂದು ಆತಂಕ ಪಡಬೇಕಾಗಿಲ್ಲ.

ಒಂದು ದೇಶದ ಚರಿತ್ರೆಯಲ್ಲಿ ಐವತ್ತು ವರ್ಷ ಬಹಳ ಚಿಕ್ಕ ಅವಧಿಯಾಗಿದೆ. ಅಂಥಲ್ಲಿ ತುಂಬಾ ತುಂಬಾ ನಿಧಾನಗತಿಯಲ್ಲಿ ಸಾಗುವ ಭಾರತೀಯ ಸಮಾಜ ವರ್ಗ ನೆಲೆಗೆ ತಲುಪಬೇಕಾದರೆ ಶತಮಾನಗಳೇ ಬೇಕಾಗಬಹುದು. ಅಲ್ಲಿಯ ತನಕ ಜಾತಿ ನೆಲೆಯ ಹೋರಾಟದ ಅಗತ್ಯ ಖಂಡಿತವಾಗಿಯೂ ಇದೆ. ಒಬ್ಬ ಒಕ್ಕಲಿಗನಿಗೆ ಮತ್ತೊಬ್ಬ ಒಕ್ಕಲಿಗನಿಂದ ಅವಮಾನವಾದರೆ, ಒಬ್ಬ ಲಿಂಗಾಯಿತನಿಗೆ ಮತ್ತೊಬ್ಬ ಲಿಂಗಾಯಿತನಿಂದ ಅವಮಾನವಾದರೆ, ಒಬ್ಬ ಬ್ರಾಹ್ಮಣನಿಗೆ ಮತ್ತೊಬ್ಬ ಬ್ರಾಹ್ಮಣನಿಂದ ಅವಮಾನವಾದರೆ ಸಹಿಸಿಕೊಳ್ಳಲು ಆಗುವುದಿಲ್ಲ. ಹಾಗಿರುವಾಗ ಸಾಮಾಜಿಕ ವ್ಯವಸ್ಥೆಯ ತಳಮಟ್ಟದಲ್ಲಿರುವ ದಲಿತರಿಗೆ ಎಲ್ಲರಿಂದಲೂ ಆಗುವ ಅವಮಾನದ ಒಳಗುದಿಯೇನಿರಬಹುದೆಂಬುದನ್ನು ದಲಿತೇತರರು ಅರ್ಥಮಾಡಿಕೊಳ್ಳಬೇಕು.

ಹಾಗೆಯೇ ತಾನು ದಲಿತ ಎನ್ನುವಂಥದ್ದು ತನ್ನೆಲ್ಲ ತಪ್ಪುಗಳನ್ನು ಸಮರ್ಥಿಸುವ ಸಂಗತಿಯಾಗಬಾರದು ಎಂಬುದನ್ನು ದಲಿತರೂ ಅರ್ಥಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ದಲಿತ ಚಳವಳಿ ಈಗಲೂ ಅಗತ್ಯವಿದೆ; ಆದರದು ಹೊಸ ಆಯಾಮವನ್ನು ಪಡೆದುಕೊಳ್ಳಬೇಕಾಗಿದೆ ಎಂದು ನಾನು ಭಾವಿಸುತ್ತೇನೆ. □

ವಿವೇಕಾನಂದರ ವಿಚಾರಗಳು

ಸಂಸ್ಕೃತ ಭಾಷೆ ಸೋತು, ಅವಹೇಳನಕ್ಕೆ ಗುರಿಯಾದ ಹಿಂದೂಗಳು ಧಾರ್ಮಿಕ ಗ್ರಂಥ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಎಲ್ಲೆಯೊಳಗೆ ಮಾತ್ರ ಜೀವಿಸಬೇಕಾಯಿತು. ಆದಕಾರಣ ಅಂದಿನಿಂದ ಅನಾದಾರಕ್ಕೆ ಗುರಿಯಾದ ಪುರೋಹಿತರ ಹತ್ತಿರ ಅನಿಶ್ಚಿತವಾಗಿ ಸಂಸ್ಕೃತ ಭಾಷೆ ಜೀವಿಸತೊಡಗಿತು. ಬ್ರಾಹ್ಮಣ್ಯ ಶಕ್ತಿಯ ಅವಶಿಷ್ಟವಾದ ಪುರೋಹಿತನಾದರೂ, ಕೊನೆಗೆ ಜೀವನೋಪಾಯಕ್ಕಾಗಿ ಅಷ್ಟೇನೂ ಪ್ರಾಮುಖ್ಯವಲ್ಲದ ಮದುವೆ ಮುಂತಾದುವನ್ನು ಮಾಡಿಸುವ ಕೆಲಸಕ್ಕೆ ಕೈಹಾಕಬೇಕಾಯಿತು.

ಸಂಗ್ರಹ:
ಜ.ಹೂ. ನಾರಾಯಣಸ್ವಾಮಿ

ಭರತ ಖಂಡಕ್ಕೆ ಅಂತರ್ಜಾತಿ ಮದುವೆ ಅವಶ್ಯಕ

ನಮ್ಮ ಸಮಾಜದಲ್ಲಿ ನೂರಾರು ವರ್ಷಗಳಿಂದಲೂ ಮದುವೆ ಪ್ರತಿಯೊಂದು ಮತದ ಒಳಪಂಗಡಗಳಲ್ಲಿಯೇ ಪರಿಮಿತಿಗೊಂಡು ಎಂತಹ ಅವಸ್ಥೆಗೆ ತಂದಿದೆ ಎಂದರೆ ಮದುವೆ ಎಂದರೆ ಭ್ರಾತೃ ವರ್ಗದವರು, ಬಂಧು ವರ್ಗದವರಿಗೆ ಇದು ಮೀಸಲಾಗಿ ಹೋಗಿದೆ. ಈ ಕಾರಣದಿಂದಲೇ ಜನಾಂಗ ಶಾರೀರಿಕ ದುರ್ಬಲತೆಯನ್ನು ಹೊಂದುತ್ತಿದೆ. ಪರಿಣಾಮವಾಗಿ ಎಲ್ಲಾ ಬಗೆಯ ರೋಗರುಜಿನಗಳು ಮತ್ತು ಇತರ ಕೆಡುಕುಗಳಿಗೂ ಸುಲಭವಾಗಿ ಪ್ರವೇಶ ದೊರೆತಿದೆ. ಕೆಲವೇ ಮಂದಿ ವ್ಯಕ್ತಿಗಳ ಸಣ್ಣ ವೃತ್ತದೊಳಗೆ ರಕ್ತಚಲನೆಯಾಗಬೇಕಾಯಿತು. ಆದ್ದರಿಂದ ರಕ್ತ ಕಲುಷಿತವಾಗಿದೆ. ಆದ್ದರಿಂದ ಹೊಸದಾಗಿ ಹುಟ್ಟಿದ ಮಕ್ಕಳು ತಮ್ಮ ತಂದೆ ತಾಯಿಗಳಿಂದ ಹುಟ್ಟುತ್ತಲೇ ಅವರ ದೇಹ ಪ್ರಕೃತಿಯ ರೋಗಗಳನ್ನು ಪಿತ್ರಾರ್ಜಿತವಾಗಿ ಹೊಂದುತ್ತಾರೆ. ಹೀಗೆ ರಕ್ತ ರಕ್ತದಿಂದ ಹುಟ್ಟಿದ ಅವರ ದೇಹಗಳಲ್ಲಿ ಯಾವ ರೋಗದ ಸೂಕ್ಷ್ಮ ಕ್ರಿಮಿಗಳನ್ನು ತಡೆಗಟ್ಟುವ ಶಕ್ತಿಯಿರುವುದಿಲ್ಲ. ಈ ರೋಗಗಳಾದರೂ ಯಾವಾಗಲೂ ಅವರನ್ನು ಬಲಿ ತೆಗೆದುಕೊಳ್ಳಲು ಕಾದುಕೊಂಡಿರುತ್ತವೆ. ಈ ಮದುವೆಯ ವೃತ್ತವನ್ನು ವಿಶಾಲವಾಗಿ ಮಾಡುವುದರ ಮೂಲಕ ಮಾತ್ರ ನಾವು ಹೊಸ ಬಗೆಯ ಬೇರೆ ವಿಧವಾದ ರಕ್ತವನ್ನು ಸಂತಾನಕ್ಕೆ ತುಂಬಬಹುದು. ಆಗ ಅವು ನಮ್ಮ ಈಗಿನ ಕಾಲದ ಅನೇಕ ಬಗೆಯ ರೋಗಗಳು ಮತ್ತು ಅವುಗಳ ಕೆಡಕು ಪರಿಣಾಮಗಳಿಂದ ಪಾರಾಗಬಹುದು.

ರೋಗದ ಕಾರಣಗಳನ್ನೆಲ್ಲ ಬೇರು ಸಹಿತ ಕಿತ್ತೊಗೆಯಬೇಕು. ಅವುಗಳನ್ನು ಹಾಗೇ ಅಡಗಿಸಿದರೆ ಪ್ರಯೋಜನವಿಲ್ಲ. ನಮಗೆ ಅನೇಕ ವಿಧವಾದ ಸುಧಾರಣೆಗಳು ಬೇಕು. ಇದನ್ನು ನಿರಾಕರಿಸುವಷ್ಟು ದಡ್ಡರಾರಿದ್ದಾರೆ? ಉದಾಹರಣೆಗೆ ಭರತಖಂಡಕ್ಕೆ ಅಂತರ್ಜಾತಿಯ ವಿವಾಹ ಪದ್ಧತಿ ಅವಶ್ಯಕ.

ಭಾಷೆ

ನಮ್ಮ ದೇಶದಲ್ಲಿ ಪೂರ್ವಕಾಲದಿಂದಲೂ ವಿದ್ಯಾಭ್ಯಾಸವೆಲ್ಲ ಸಂಸ್ಕೃತದ ಮೂಲಕ ನಡೆದು ಬಂದ ಕಾರಣ ಪಂಡಿತರಿಗೂ ಜನಸಾಮಾನ್ಯರಿಗೂ ಒಂದು ದೊಡ್ಡ ಕಂದಕ ಉಂಟಾಗಿದೆ. ಬುದ್ಧನಿಂದ ಹಿಡಿದು ಚೈತನ್ಯ ಮತ್ತು ಶ್ರೀರಾಮಕೃಷ್ಣರವರೆಗೆ ಪ್ರಪಂಚದ ಉದ್ಧಾರಕ್ಕೆ ಬಂದ ಮಹಾಪುರುಷರೆಲ್ಲ ಜನಸಾಮಾನ್ಯರಿಗೆ ಅವರಾಡುವ ಭಾಷೆಯಲ್ಲೇ ಬೋಧಿಸಿದರು. ಪಾಂಡಿತ್ಯವೇನೋ ಒಳ್ಳೆಯದು. ನಮಗೆ ಅರ್ಥವಾಗದ ಬಹಳ ಕಷ್ಟವಾದ, ಅಸ್ವಾಭಾವಿಕವಾದ, ಕೃತಕವಾದ ಭಾಷೆಯ ಮೂಲಕ ಅಲ್ಲದೇ, ಬೇರೆ ಬೇರೆ ರೀತಿ ಅದನ್ನು ವ್ಯಕ್ತಪಡಿಸಲು ಸಾಧ್ಯವೇ ಇಲ್ಲವೇ? ಮಾತನಾಡುವ ಭಾಷೆಯಲ್ಲಿ ಕಲೆಗೆ ಅವಕಾಶವೇ ಇಲ್ಲವೇ? ಸ್ವಾಭಾವಿಕವಾದ ಭಾಷೆಯನ್ನು ಬಿಟ್ಟು ಕೃತಕವಾದ ಭಾಷೆಯನ್ನು ಸೃಷ್ಟಿಸುವುದರಲ್ಲಿ ಏನು ಪ್ರಯೋಜನ? ನೀವು ಮನೆಯಲ್ಲಿ ಆಡುವ ಮಾತಿನ ಮೂಲಕ ನಿಮ್ಮ ಪಾಂಡಿತ್ಯಪೂರ್ಣವಾದ ಅನ್ವೇಷಣೆಗಳನ್ನು ಕುರಿತು ಯೋಚಿಸುವುದಿಲ್ಲವೇ? ಹಾಗಿದ್ದರೆ ನೀವು ಬರೆಯುವುದಕ್ಕೆ ಪ್ರಯತ್ನಿಸಿದಾಗ ವಿಚಿತ್ರವಾದ, ಕ್ಲಿಷ್ಟವಾದ ಭಾಷೆಯಲ್ಲಿ ಏತಕ್ಕೆ ಪ್ರಯತ್ನಿಸುತ್ತೀರಿ? ನೀವು ಮನಸ್ಸಿನಲ್ಲಿ ಯಾವ ಭಾಷೆಯ ಮೂಲಕ ತತ್ವಕ್ಕೆ ಮತ್ತು ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆಲೋಚಿಸುತ್ತೀರೋ, ಯಾವ ಭಾಷೆಯ ಮೂಲಕ ಬಹಿರಂಗವಾಗಿ ಜನಗಳೊಡನೆ ವಾದಿಸುವಿರೋ, ಅದೇ ಭಾಷೆಯಲ್ಲವೇ ವೈಜ್ಞಾನಿಕ ಮತ್ತು ತಾತ್ವಿಕ ವಿಷಯಗಳನ್ನು ಬರೆಯಲು ಉಪಯೋಗಿಸಬೇಕಾದುದು? ಅದು ಸಾಧ್ಯವಿಲ್ಲದೇ ಇದ್ದರೆ ನಿಮ್ಮ ಮನಸ್ಸಿನಲ್ಲಿ ಮತ್ತು ಇತರರೊಡನೆ ಅದಕ್ಕೆ ಸಂಬಂಧಪಟ್ಟ ಆಲೋಚನೆಗಳನ್ನು ಮಾಡಲು ಹೇಗೆ ಸಾಧ್ಯ? ನಾವು ಸ್ವಾಭಾವಿಕವಾಗಿ ಯಾವ ಭಾಷೆಯಲ್ಲಿ ವ್ಯಕ್ತಗೊಳಿಸುವೆವೊ ಅದಕ್ಕಿಂತ ಶ್ರೇಷ್ಠವಾದ ಭಾಷೆ ಬೇರೊಂದಿಲ್ಲ. ನಾವು ಆ ಭಾವನೆಯನ್ನು ಬಿಡಕೂಡದು, ಆ ರೀತಿ ವ್ಯಕ್ತಗೊಳಿಸುವುದನ್ನು, ಉಚ್ಚರಿಸುವುದನ್ನು ಬಿಡಕೂಡದು. ಯಾವ ಕೃತಕವಾದ ಭಾಷೆಗೂ ಆ ಶಕ್ತಿ, ಆ ತೀಕ್ಷ್ಣತೆ ಮತ್ತು ಅರ್ಥಗರ್ಭಿತವಾಗಿರುವುದು ಇರಲಾರದು. ನೀವು ಮಾತನಾಡುವ ಭಾಷೆಯನ್ನು ಸರಾಗವಾಗಿ ಉಪಯೋಗಿಸುವಂತೆ ಬೇರೊಂದು ಭಾಷೆಯನ್ನು ಉಪಯೋಗಿಸಲಾರಿರಿ. ಭಾಷೆಯನ್ನು ಶುದ್ಧವಾದ ಉಕ್ಕಿನಂತೆ ಮಾಡಬೇಕು. ನೀವು ಇಚ್ಛಿಸಿದ ಕಡೆ ಅದನ್ನು ತಿರುಗಿಸಲು ಸಾಧ್ಯವಾಗುವಂತೆ ಇರಬೇಕು. ಅನಂತರ ಅದು ಹಿಂದಿನ ಸ್ಥಿತಿಗೆ ಬರಬೇಕು. ಅದು ದೊಡ್ಡ ಬಂಡೆಯನ್ನು ಕೂಡ ಕ್ಷಣಾರ್ಧದಲ್ಲಿ ಕೂಡ ಕತ್ತರಿಸಿದರೂ ಕೂಡ ಮೊಂಡಾಗುವುದಿಲ್ಲ. ನಾವು ಬರಿಯ ಸಂಸ್ಕೃತ ಭಾಷೆಯ ನಿಧಾನವಾದ ಅಲಂಕಾರಿಕ ವೇಷವನ್ನು ಅನುಸರಿಸುವುದರಿಂದ ನಮ್ಮ ಭಾಷೆ ಕೃತಕವಾಗುತ್ತದೆ. ಭಾಷೆ ಒಂದು ಜನಾಂಗ ಎಷ್ಟು ಮಟ್ಟಿಗೆ ಮುಂದುವರಿದಿದೆ ಎಂದು ತಿಳಿದುಕೊಳ್ಳಲು ಪ್ರಮಾಣವಾಗಿದೆ.

ಸಂಸ್ಕೃತ ಭಾಷೆ ಸೋತು, ಅವಹೇಳನಕ್ಕೆ ಗುರಿಯಾದ ಹಿಂದೂಗಳು ಧಾರ್ಮಿಕ ಗ್ರಂಥ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಎಲ್ಲೆಯೊಳಗೆ ಮಾತ್ರ ಜೀವಿಸಬೇಕಾಯಿತು. ಆದಕಾರಣ ಅಂದಿನಿಂದ ಅನಾದಾರಕ್ಕೆ ಗುರಿಯಾದ ಪುರೋಹಿತರ ಹತ್ತಿರ ಅನಿಶ್ಚಿತವಾಗಿ ಸಂಸ್ಕೃತ ಭಾಷೆ ಜೀವಿಸತೊಡಗಿತು. ಬ್ರಾಹ್ಮಣ್ಯ ಶಕ್ತಿಯ ಅವಶಿಷ್ಟವಾದ ಪುರೋಹಿತನಾದರೂ, ಕೊನೆಗೆ ಜೀವನೋಪಾಯಕ್ಕಾಗಿ ಅಷ್ಟೇನೂ ಪ್ರಾಮುಖ್ಯವಲ್ಲದ ಮದುವೆ ಮುಂತಾದುವನ್ನು ಮಾಡಿಸುವ ಕೆಲಸಕ್ಕೆ ಕೈಹಾಕಬೇಕಾಯಿತು. ಅದೂ ಕೂಡ ಮಹಮದೀಯ ಆಳರಸರ ಕೃಪಾದೃಷ್ಟಿಯಿರುವ ಪರಿಯಂತರ ಮಾತ್ರ.

ಸರಳ ಶೈಲಿಯೇ ರಹಸ್ಯ. ನನ್ನ ಆದರ್ಶ ಭಾಷೆಯೇ ನನ್ನ ಗುರುದೇವನ ಭಾಷೆ. ಅದು ಬಹಳ ಗ್ರಾಮ್ಯವಾದ, ಆದರೂ ಅತ್ಯಂತ ಭಾವಪ್ರದರ್ಶಕವಾದ ಭಾಷೆಯಾಗಿತ್ತು. ನಾವು ಯಾವ ಭಾವನೆಯನ್ನು ವ್ಯಕ್ತಗೊಳಿಸಬೇಕೆಂದು ಇರುವೆವೊ ಭಾಷೆ ಅದನ್ನು ಸೂಚಿಸುವಂತಿರಬೇಕು.

ಕಲೆ

ಶಿಷ್ಯ : 'ಹಿಂದೂ ದೇಶದ ಮತ್ತು ಪಾಶ್ಚಾತ್ಯ ದೇಶಗಳ ಕಲೆಗಳಲ್ಲಿ ನೀವು ಯಾವ ವ್ಯತ್ಯಾಸವನ್ನು ನೋಡಿದಿರಿ'?

ಸ್ವಾಮೀಜಿ : 'ಎಲ್ಲಾ ಕಡೆಯೂ ಅದು ಸುಮಾರಾಗಿ ಒಂದೇ ತರಹ ಇದೆ. ಸ್ವಕಲ್ಪಿತ ಕೃತಿಗಳು ಬಹಳ ವಿರಳ. ಆ ದೇಶದಲ್ಲಿ ಬಗೆಬಗೆಯ ವಸ್ತುಗಳ ಛಾಯಾಚಿತ್ರಗಳ ಪ್ರತಿಕೃತಿಯನ್ನು ಮುಂದಿಟ್ಟುಕೊಂಡು ಚಿತ್ರಗಳನ್ನು ಬರೆಯುವರು. ಯಾವಾಗ ಯಂತ್ರದ ಸಹಾಯವನ್ನು ತೆಗೆದುಕೊಳ್ಳುವರೋ ಆಗ ಕಲ್ಪನಾಶಕ್ತಿಯೇ ಮಾಯವಾಗುತ್ತದೆ; ಭಾವ ವ್ಯಕ್ತವಾಗಲು ಅವಕಾಶವೇ ಇರುವುದಿಲ್ಲ. ಪ್ರಾಚೀನ ಕಾಲದ ಕಲಾವಿದರು ಸ್ವತಂತ್ರ ಭಾವನೆಗಳನ್ನು ಚಿತ್ರದ ಮೂಲಕ ವ್ಯಕ್ತಪಡಿಸುತ್ತಿದ್ದರು. ಈಗ ವರ್ಣಚಿತ್ರ ಛಾಯಾಚಿತ್ರಗಳಂತೆಯೇ ಇದ್ದು ಸ್ವಂತ ಕಲ್ಪನಾಶಕ್ತಿ ಅದಕ್ಕೆ ಪ್ರಯತ್ನ ಎಲ್ಲಾ ಕಡಿಮೆಯಾಗುತ್ತಿದೆ. ಆದರೆ ಪ್ರತಿಯೊಂದು ಜನಾಂಗವು ಕೇವಲ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಅದರ ನಡೆ, ನುಡಿ,

ಜೀವನದ ರೀತಿ ಈ ತೈಲಚಿತ್ರ ಮತ್ತು ಶಿಲ್ಪಕಲೆಗಳಲ್ಲಿ ತನ್ನದೇ ಆದ ಒಂದು ವಿಶೇಷ ವೈಶಿಷ್ಟ್ಯದೊಂದಿಗೆ ವ್ಯಕ್ತಪಡುತ್ತದೆ. ಉದಾಹರಣೆಗೆ ಪಾಶ್ಚಾತ್ಯ ದೇಶದಲ್ಲಿ ಸಂಗೀತ ಮತ್ತು ನಾಟಕಕಲೆಯ ಭಾವಗಳು ಬಹುತೀಕ್ಷ್ಣವಾಗಿರುತ್ತವೆ. ನಾಟ್ಯದಲ್ಲಿ ಅವರ ಅಂಗಾಂಗಗಳು ಮುರಿಯುವಂತೆ ಇರುತ್ತವೆ. ವಾದ್ಯ ಸಂಗೀತದಲ್ಲಿ ಅದರ ಧ್ವನಿ ಭರ್ಜಿಯಂತೆ ನಮ್ಮ ಕಿವಿಯನ್ನಿರಿಯುತ್ತವೆ. ಹಾಗೆ ಹಾಡುಗಾರಿಕೆಯೂ ಕೂಡ ಅದಕ್ಕೆ ವಿರುದ್ಧವಾಗಿ ನಮ್ಮ ದೇಶದಲ್ಲಿ ನಾಟ್ಯಕಲೆ ಅಲೆ ಅಲೆಯಾಗಿ ತೇಲುತ್ತಾ ಹೊರಳಿ ಬಂದಂತೆ ಇರುವುದು. ಹಾಗೆಯೇ ಸಂಗೀತದ ವಿಧವಿಧದ ಉಚ್ಚ ಸ್ವರಗಳಲ್ಲಿ ಕೂಡ. ಅಂತೆಯೇ ವಾದ್ಯ ಸಂಗೀತದಲ್ಲಿಯೂ ಇರುತ್ತದೆ. ಆದ್ದರಿಂದ ಕಲೆಯ ವಿಚಾರದಲ್ಲಿಯೂ ವಿವಿಧ ಜನರಲ್ಲಿ ವಿವಿಧ ಭಾವಗಳು ಸ್ಫುಟಗೊಳ್ಳುವುವು. ಯಾರು ತೀರ ದೇಹಾತ್ಮವಾದಿಗಳೋ ಅವರು ಪ್ರಕೃತಿಯನ್ನು ಗುರಿಯಾಗಿಟ್ಟುಕೊಂಡು ಅದಕ್ಕೆ ಸಂಬಂಧಪಟ್ಟಂತೆ ಕಲೆಯ ಭಾವವನ್ನು ವ್ಯಕ್ತಪಡಿಸುವರು. ಯಾರು ಪ್ರಕೃತಿಯನ್ನು ಮೀರಿದ ಅತೀಂದ್ರಿಯ ಸತ್ಯವನ್ನು ತಮ್ಮ ಗುರಿಯಾಗಿಟ್ಟುಕೊಂಡಿರುವರೋ ಅವರು ಪ್ರಕೃತಿಶಕ್ತಿಯ ಮೂಲಕ ಕಲೆಯಲ್ಲಿ ತಮ್ಮ ಭಾವವನ್ನು ವ್ಯಕ್ತಪಡಿಸುವರು. ಮೊದಲಿನ ವರ್ಗದ ಜನರ ಪ್ರಕೃತಿಯೇ ಕಲೆಯ ಮೂಲಾಧಾರ. ಎರಡನೆಯ ವರ್ಗದವರಿಗೆ ಭಾವನೆಯೆ ಕಲೆಯ ಬೆಳವಣಿಗೆಗೆ ಮುಖ್ಯ ಉದ್ದೇಶ. ಆದ್ದರಿಂದ ಕಲೆಯಲ್ಲಿ ಎರಡೂ ತಮ್ಮದೇ ಆದ ಹಾದಿಯಲ್ಲಿ ಮುಂದುವರಿದಿವೆ. ಪಾಶ್ಚಾತ್ಯರ ಕೆಲವು ತೈಲಚಿತ್ರಗಳನ್ನು ನೋಡಿದರೆ, ಅವು ಸಂಪೂರ್ಣ ಪ್ರಕೃತಿಯ ವಸ್ತುಗಳೆಂದು ಭ್ರಾಂತಿಪಡುವಂತಾಗುವುದು. ಈ ದೇಶದಲ್ಲಿಯೇ ನಮ್ಮ ಪೂರ್ವಿಕರು ಶಿಲ್ಪಕಲೆಯಲ್ಲಿ ಉಚ್ಚಶಿಖರವನ್ನೇರಿದ್ದರು. ಆಗಿನ ಕಾಲದ ಯಾವುದಾದರೊಂದು ವಿಗ್ರಹವನ್ನು ನೋಡಿದರೆ ಅದು ನಮ್ಮನ್ನು ಈ ಭೌತಿಕ ಪ್ರಪಂಚವನ್ನು ಮರೆಯುವಂತೆ ಮಾಡಿ ಒಂದು ಹೊಸ ಆದರ್ಶ ಪ್ರಪಂಚಕ್ಕೊಯ್ಯುವುದು. ಈಗ ಪಶ್ಚಿಮ ದೇಶಗಳಲ್ಲಿ ಹಿಂದಿನ ಕಾಲದ ತೈಲಚಿತ್ರಗಳನ್ನು ಚಿತ್ರಿಸಲಾಗುವುದಿಲ್ಲ.

ಗ್ರೀಕ್ ಕಲೆಯ ರಹಸ್ಯವೆ ಪ್ರಕೃತಿಯ ಕೂಲಂಕುಷ ಅನುಕರಣ. ಭಾರತೀಯ ಕಲೆಯ ರಹಸ್ಯವಾದರೊ ಒಂದು ಆದರ್ಶನ್ನು ನಿರೂಪಿಸುವುದರಲ್ಲಿದೆ. ಗ್ರೀಕ್ ಚಿತ್ರಕಾರನು ಶಕ್ತಿಯನ್ನೆಲ್ಲಾ ಒಂದು ಚೂರ ಸ್ಥೂಲವಾಗಿರುವ ಮಾಂಸದ ತುಂಡನ್ನು ಚಿತ್ರಿಸುವುದರಲ್ಲಿ ವಿನಿಯೋಗಿಸುವನು. ಅಲ್ಲಿ ಎಷ್ಟು ಮಟ್ಟಿಗೆ ಜಯಶೀಲನಾಗುವನು ಎಂದರೆ ನಾಯಿ ಅದನ್ನು ನಿಜವಾದ ಮಾಂಸದ ತುಂಡೆಂದು ಭ್ರಮಿಸಿ ಕಚ್ಚಲು ಹೋಗುವುದು. ಪ್ರಕೃತಿಯ ಅನುಕರಣದಲ್ಲಿ ಏನಿದೆ ಪಾಂಡಿತ್ಯ? ನಾಯಿಯ ಮುಂದೆ ನಿಜವಾದ ಒಂದು ಮಾಂಸದ ತುಂಡನ್ನು ಏತಕೆ ಎಸೆಯಬಾರದು?

ಇಂದ್ರಿಯಾತೀತ ಆದರ್ಶವನ್ನು ರೂಪಿಸಲು ಹೊರಟ ಭಾರತೀಯನ ಸ್ವಭಾವವಾದರೂ ವಿಚಿತ್ರವಾದ ಚಿತ್ರಗಳನ್ನು ನಿರೂಪಿಸುವುದರಲ್ಲಿ ವ್ಯರ್ಥವಾಗಿದೆ. ನಿಜವಾದ ಕಲೆಯನ್ನು ಒಂದು ಪುಷ್ಪಕ್ಕೆ ಹೋಲಿಸಬಹುದು. ಅದು ನೆಲದಿಂದ ಬರುವುದು, ನೆಲದಿಂದ ಸಾರವನ್ನು ಹೀರುವುದು, ನೆಲದೊಂದಿಗೆ ಸಂಪರ್ಕವನ್ನು ಪಡೆಯುವುದು, ಆದರೂ ಅದರಿಂದ ಮೇಲಿದೆ. ಇದರಂತೆಯೇ ಕಲೆ ಪ್ರಕೃತಿಯೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರಬೇಕು. ಸಂಪರ್ಕ ಎಲ್ಲಿ ಇಲ್ಲವೊ ಅಲ್ಲಿ ಅವನತಿಗೆ ಬರುವುದು. ಆದರೂ ಅದು ಪ್ರಕೃತಿಯನ್ನು ಮೀರಿರಬೇಕು.

ಕಲೆ ಸೌಂದರ್ಯವನ್ನು ವ್ಯಕ್ತಗೊಳಿಸಬೇಕು. ಪ್ರತಿಯೊಂದರಲ್ಲಿಯೂ ಒಂದು ಕಲೆ ಇರಬೇಕು. ಬರಿಯ ಕಟ್ಟಡಕ್ಕೂ ವಾಸ್ತುಶಿಲ್ಪಕ್ಕೂ ವ್ಯತ್ಯಾಸವೆ ಮೊದಲನೆಯದು. ಕೇವಲ ಆರ್ಥಿಕ ದೃಷ್ಟಿಯಿಂದ ಕಟ್ಟಿದ ಕಟ್ಟಡ, ಎರಡನೆಯದು ಒಂದು ಭಾವನೆಯನ್ನು ವ್ಯಕ್ತಗೊಳಿಸುವ ಯೋಗ್ಯತೆಯ ಮೇಲೆ.

ಪ್ರಶ್ನೆ: ಪಾಶ್ಚಾತ್ಯ ಸಂಗೀತ ಹೇಗಿರುತ್ತದೆ?

ಸ್ವಾಮೀಜಿ: ಓ ಅದು ತುಂಬಾ ಚೆನ್ನಾಗಿರುತ್ತದೆ. ನಮ್ಮಲ್ಲಿ ಇಲ್ಲದ ಸಾಮರಸ್ಯದ ಪರಾಕಾಷ್ಠ ಅದರಲ್ಲಿದೆ. ನುರಿತಿಲ್ಲದ ನಮ್ಮ ಕಿವಿಗೆ ಅದು ಇಂಪಾಗಿ ಕೇಳುವುದಿಲ್ಲ. ಅದಕ್ಕೇ ನಾವು ಅದನ್ನು ಇಷ್ಟಪಡುವುದಿಲ್ಲ. ಆ ಸಂಗೀತಗಾರರು ನರಿಗಳಂತೆ ಕೂಗುವರೆಂದೆನ್ನಿಸುವುದು. ನನಗೂ ಮೊದಲು ಇದೇ ಬಗೆಯ ಅಭಿಪ್ರಾಯವಿತ್ತು. ಆದರೆ ಯಾವಾಗ ನಾನು ಗಮನವಿಟ್ಟು ಆ ಸಂಗೀತವನ್ನು ಕೇಳತೊಡಗಿದೆನೊ ಮತ್ತು ಸೂಕ್ಷ್ಮವಾಗಿ ಅಭ್ಯಾಸ ಮಾಡತೊಡಗಿದೆನೊ, ಆಗ ನಾನು ಅದನ್ನು ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳತೊಡಗಿದೆ. ಸಂಪೂರ್ಣವಾಗಿ ಅನುರಕ್ತನಾದೆ. ಹೀಗೆ ಎಲ್ಲಾ ಕಲೆಗಳೂ ಕೂಡ. ಮಹಾಪರಿಷ್ಕೃತವಾದ ತೈಲಚಿತ್ರವನ್ನು ಪ್ರಾಸಂಗಿಕವಾಗಿ ನೋಡಿದಾಗ ನಮಗೆ ಅದರ ಸೌಂದರ್ಯ ಎಲ್ಲಿದೆ ಎಂದು ಗ್ರಹಿಸಲಾಗುವುದಿಲ್ಲ. ಅದೂ ಅಲ್ಲದೆ ಒಂದು ನಿರ್ದಿಷ್ಟ ಗುರಿಯವರೆಗೆ ಕಣ್ಣು ಪಳಗಿದ ಹೊರತು ಒಂದು ಕಲಾಕೃತಿಯ ಆಳವಾದ ಪ್ರತಿಭೆಯನ್ನು ಅದರ ಸೂಕ್ಷ್ಮತಮ ರಚನೆ ಮತ್ತು ಸಂಯೋಜನೆಗಳನ್ನು ಮೆಚ್ಚಲಾಗುವುದಿಲ್ಲ. ನಮ್ಮ ನಿಜವಾದ ಸಂಗೀತ ಕೀರ್ತನೆ ಮತ್ತು ಧೃಪದ್ ಅಲ್ಲದೆ ಉಳಿದುವು ಮುಸಲ್ಮಾನ ಪದ್ಧತಿ ಪ್ರಕಾರ ಮಾರ್ಪಟ್ಟು ಹಾಳಾಗಿ ಹೋಗಿವೆ. ಚಿಕ್ಕದಾದ ಮತ್ತು ಲಘುವಾದ ತಪ್ಪ ಹಾಡುಗಳನ್ನು ಮೂಗಿನಲ್ಲಿ ಹಾಡಿ ಹುಚ್ಚು ಹುಚ್ಚಾಗಿ ಒಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ಮಿಂಚಿನಂತೆ ತಾರಾಡಿದ ಮಾತ್ರಕ್ಕೆ ಅದು ಸಂಗೀತ ಪ್ರಪಂಚದಲ್ಲಿ ಮಹತ್ವ ಪೂರಿತವಾದುದೆಂದು ತಿಳಿದಿರುವೆಯೇನು? ಖಂಡಿತ ಅಲ್ಲ. ಪ್ರತಿಯೊಂದು ರಾಗವನ್ನು ಎಲ್ಲಾ ಸ್ವರದಲ್ಲಿ ಸಂಪೂರ್ಣ ಬಾರಿಸದ ಹೊರತು ಸಂಗೀತ ಶಾಸ್ತ್ರವೆಲ್ಲಾ ಹಾಳಾಗಿ ಹೋಗುವುದು. ಚಿತ್ರಕಲೆಯಲ್ಲಿ ಪ್ರಕೃತಿಯ ಸಂಪರ್ಕವನ್ನಿಟ್ಟುಕೊಂಡು ನೀನು ಅದನ್ನು ಎಷ್ಟೊಂದು ಕಲಾ ಸೌಂದರ್ಯಪೂರಿತವಾಗಿ ಬೇಕಾದರೂ ಮಾಡಬಹುದು. ಹೀಗೆ ಮಾಡುವುದರಿಂದ ಯಾವ ಹಾನಿಯೂ ಇಲ್ಲ. ಪರಿಣಾಮ ಕೂಡ ಒಳ್ಳೆಯದೆ ಆಗುವುದು. ಅದರಂತೆಯೇ ಸಂಗೀತದಲ್ಲಿ ಶಾಸ್ತ್ರ ರೀತಿಯಲ್ಲಿದ್ದು ನಿನ್ನ ಕೌಶಲ್ಯವನ್ನು ಎಷ್ಟು ಬೇಕಾದರೂ ತೋರಿಸಬಹುದು. ಕಿವಿಗೂ ಅದು ಹಿತಕರವಾಗಿರುವುದು. ಮಹಮ್ಮದೀಯರು ಅನೇಕ ಬಗೆಯ ರಾಗ ರಾಗಿಣಿಯರನ್ನು ಇಂಡಿಯಾಕ್ಕೆ ಬಂದ ಮೇಲೆ ತೆಗೆದುಕೊಂಡರು. ಆದರೆ ಅವರು ತಪ್ಪ ಸಂಗೀತದ ಮೇಲೆ ತಮ್ಮ ವೈಶಿಷ್ಟ್ಯದ ಮುದ್ರೆಯನ್ನೊತ್ತಿದರು. ಅದಕ್ಕೇ ಸಂಗೀತ ಶಾಸ್ತ್ರವೆಲ್ಲ ಹಾಳಾಗಿ ಹೋಯಿತು.

ಪ್ರಶ್ನೆ: ಏಕೆ ಮಹರಾಜ್ ಯಾರಿಗೆ ತಾನೆ ತಪ್ಪ ಸಂಗೀತದ ಮೇಲೆ ಅಭಿಲಾಷೆಯಿಲ್ಲ?

ಉತ್ತರ: ಜೀರುಂಡೆಯ ಜೀರೆಂಬುವ ಶಬ್ದ ಕೂಡ ಕೆಲವರಿಗೆ ತುಂಬಾ ಇಷ್ಟ. ಸಂತಾಲರಿಗೆ ಅವರ ಸಂಗೀತವೇ ಎಲ್ಲಾ ಸಂಗೀತಕ್ಕಿಂತಲೂ ಉತ್ತಮವೆನ್ನಿಸುವುದು. ಒಂದು ಸ್ವರ ಇನ್ನೊಂದು ಸ್ವರದ ಮೇಲೆ ಅಷ್ಟು ಬೇಗ ಪರಂಪರೆಯಾಗಿ ಬಂದು ಬಿದ್ದರೆ ಸಂಗೀತದ ಮಧುರತೆಯನ್ನೇ ನಾಶಮಾಡುವುದಲ್ಲದೆ ಅಪಸ್ವರವನ್ನು ಕೂಡ ಉಂಟುಮಾಡುವುದೆಂಬುದು ನಿನಗೆ ಅರ್ಥವಾಗುವುದಿಲ್ಲ ಎಂದು ಕಾಣುತ್ತದೆ. ಸಂಗೀತದಲ್ಲಿ ಏಳು ಸ್ವರಗಳ ಪರಿವರ್ತನೆ ಮತ್ತು ಸಂಭೋಗಗಳು ಯಾವುದಾದರೊಂದು ಬಗೆಯ ಅಥವಾ ಬಗೆಬಗೆಯ ರಾಗರಾಗಿಣಿಗಳನ್ನು ಉಂಟುಮಾಡುತ್ತವೆಂಬುದು ನಿನಗೆ ಗೊತ್ತಿಲ್ಲವೆ. ಈಗ ತಪ್ಪದಲ್ಲಿ ಒಂದು ಸಂಪೂರ್ಣ ರಾಗವನ್ನು ತೇಲಿಸಿ ಹೇಳಿ, ಹೊಸರಾಗ ಉತ್ಪತ್ತಿ ಮಾಡಿದಾಗ ಎಲ್ಲಕ್ಕಿಂತ ಹೆಚ್ಚಾಗಿ ಧ್ವನಿಯನ್ನು ನಡುಗಿಸಿದ ಸ್ವರದಿಂದ ಸ್ವರಕ್ಕೆ ಬದಲಾಯಿಸುತ್ತಾ ತೀವ್ರಮಟ್ಟಕ್ಕೆ ಎತ್ತಿದಾಗ, ರಾಗವು ಹೇಗೆ ತಾನೆ ಅಖಂಡವಾಗಿರುವುದು? ಜೊತೆಗೆ ಕೇವಲ ಪರಿಣಾಮವನ್ನುಂಟು ಮಾಡಲು ತೇಲಿಸಿ ಮತ್ತು ಲಘುವಾಗಿ ಎಳೆಯುವುದನ್ನು ಈ ಬಗೆ ಧಾರಾಳವಾಗಿ ಉಪಯೋಗಿಸುವುದರಿಂದ ಸಂಗೀತದ ಶೈಲಿಯೇ ಸಂಪೂರ್ಣವಾಗಿ ಹಾಳಾಗುವುದು. ಹಾಡನ್ನು ಭಾವಪೂರ್ವಕವಾಗಿ ಅದರ ಅರ್ಥ ತಿಳಿಯುವಂತೆ ಹಾಡುವುದು ಈ ತಪ್ಪ ರೂಢಿಗೆ ಬಂದಾಗಿನಿಂದ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಈಗಿನ ಕಾಲದಲ್ಲಿ ನಾಟಕ ಮಂದಿರಗಳನ್ನು ಉತ್ತಮಗೊಳಿಸುವುದರಿಂದ ಕೊಂಚಮಟ್ಟಿಗೆ ನಿಜವಾದ ಕಲೆ ಊರ್ಜಿತಗೊಳ್ಳುತ್ತಿದೆ. ಆದರೆ ಮತ್ತೊಂದು ಕಡೆ ಎಲ್ಲಾ ರಾಗ ಮತ್ತು ರಾಗಿಣಿಗಳ ಮೇಲಿನ ಗೌರವವೂ ಹೆಚ್ಚು ಹೆಚ್ಚಾಗಿ ಗಾಳಿಗೆ ತೂರಿಬಿಟ್ಟಂತಾಗಿದೆ.

ಅದರಂತೆಯೇ ಧೃಪದ್ ಹಾಡುಗಾರಿಕೆಯಲ್ಲಿ ಪ್ರವೀಣರಾದವರಿಗೆ ಈ ತಪ್ಪವನ್ನು ಕೇಳುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಆದರೆ ನಮ್ಮ ಸಂಗೀತದಲ್ಲಿ ಆರೋಹಣ ಅವರೋಹಣ ಚೆನ್ನಾಗಿರುವುದು. ಫ್ರೆಂಚರು ಮೊದಲು ಈ ವೈಶಿಷ್ಟ್ಯವನ್ನು ಕಂಡುಹಿಡಿದು ಶ್ಲಾಘಿಸಿದರು. ಅದನ್ನು ತಮ್ಮ ಸಂಗೀತದಲ್ಲಿ ಅನುಸರಿಸಲು ಆಚರಣೆಗೆ ತರಲು ಪ್ರಯತ್ನಿಸಿದರು. ಅವರು ಈ ರೀತಿ ಮಾಡಿದ ಮೇಲೆ ಇಡೀ ಯೂರೋಪು ಅದರಲ್ಲಿ ಸಂಪೂರ್ಣ ಪ್ರಾವೀಣ್ಯತೆ ಪಡೆದಿದೆ.

ಪ್ರಶ್ನೆ : ಅವರ ಸಂಗೀತದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಯುದ್ಧೋಚಿತವಾದುದಾಗಿದೆ. ಈ ಗುಣ ನಮ್ಮಲ್ಲಿ ಸಂಪೂರ್ಣವಾಗಿ ಲಯವಾಗಿದೆ.

ಸ್ವಾಮೀಜಿ : ಇಲ್ಲ ಇಲ್ಲ ನಮ್ಮಲ್ಲೂ ಅದು ಇದೆ. ವೀರರಸ ಸಂಗೀತ ಸಾಮರಸ್ಯದಲ್ಲಿ ತುಂಬಾ ಅವಶ್ಯಕ. ನಮ್ಮಲ್ಲಿ ಸಾಮರಸ್ಯವಿಲ್ಲದಿರುವುದು ಶೋಚನೀಯ. ಅದಕ್ಕೆ ಅದು ಹೆಚ್ಚಾಗಿ ಕಾಣುವುದಿಲ್ಲ. ನಮ್ಮ ಸಂಗೀತವು ಪರಿಶ್ರಮದಿಂದ ಅಭಿವೃದ್ಧಿ ಹೊಂದುತ್ತಿತ್ತು. ಆದರೆ ಮಹಮ್ಮದೀಯರು ಬಂದಾಗ ಅವರು ಅದನ್ನು ಎಷ್ಟರ ಮಟ್ಟಿಗೆ ತಮ್ಮ ವಶಪಡಿಸಿಕೊಂಡರೆಂದರೆ ಸಂಗೀತ ವೃಕ್ಷ ಇನ್ನೂ ಮುಂದಕ್ಕೆ ಬೆಳೆಯಲಾರದೆ ಹೋಯಿತು. ಪಾಶ್ಚಾತ್ಯರ ಸಂಗೀತದಲ್ಲಿ ಇರಬೇಕಾದ ದುಃಖ ಭಾವ ಮತ್ತು ವೀರಭಾವ ಎರಡೂ ಅಲ್ಲಿದೆ. ಆದರೆ ನಮ್ಮ ಪೂರ್ವದ ಸೋರೆಬುರುಡೆಯ ಸಂಗೀತದ ಉಪಕರಣ ಕೊಂಚವೂ ಬದಲಾಗಿಲ್ಲ.

(ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ.) □

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ